ಪುಸ್ತಕ ಪ್ರಪಂಚ

ಸಂಪುಟ ೫೧ ಸಂಚಿಕೆ ೧

ನವೆಂಬರ್ - ೨೦೦೦



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಪರಿವಿಡಿ

ರಕ್ಷಾಪುಟ- ವಿಶಾಲ ಕರ್ನಾಟಕ

PUSTAKA PRAPAṄCHA: Monthly

Published and printed by Karnataka State Adult Education Council,Mysore-6,
Price : Rupees Ten

ಬಿಡಿಪ್ರತಿ : ರೂ.೧೦

ವಾರ್ಷಿಕ ಚಂದಾ : ರೂ. ೧೦೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಮಾನವ ಹಕ್ಕುಗಳ ಸಂಘ ಶಿಕ್ಷಣದ ಹಕ್ಕನ್ನು ಕಡ್ಡಾಯಗೊಳಿಸಬೇಕು

ಗತ ಶತಮಾನದಲ್ಲಿ, ಇಪ್ಪತ್ತು ವರ್ಷಗಳ ಅಂತರದಲ್ಲಿ, ಎರಡು ಮಹಾಯುದ್ಧಗಳು ಜರುಗಿ, ಪ್ರಾಣಹಾನಿ, ಆಸ್ತಿಹಾನಿ ಅಪಾರ ಪ್ರಮಾಣದಲ್ಲಿ ನಡೆದದ್ದುಂಟು. ಸುಮಾರು ಆರುದಶಕಗಳಿಂದ ಮತ್ತೊಂದು ಮಹಾಯುದ್ಧ ನಡೆಯದಿದ್ದರೂ, ಇರಾಖ್, ಕೊಸೊವೊ, ವಿಯಟ್‌ನಾಮ್‌ನಂಥ ದೇಶಗಳಲ್ಲಿ ಇನ್ನೂರು ಯುದ್ಧಗಳು ನಡೆದು, ಜಾಗತಿಕ ಶಾಂತಿಗೆ ಭಂಗ ಬಂದಿದೆಯೆಂಬುದಂತು ನಿಜ. ಶಾಂತಿ ಸ್ಥಾಪನೆಯ ಕಾರ್ಯದಲ್ಲಿ ಪ್ರಪಂಚ ಸಂಸ್ಥೆ ಸಾಕಷ್ಟು ಮುತುವರ್ಜಿ ವಹಿಸಿದರೂ, ಕೆಲವು ರಾಷ್ಟ್ರಗಳ ಅಹಂಕಾರ ಹಾಗೂ ಮೊಂಡುತನದಿಂದಾಗಿ ಹಲವು ದುರ್ಘಟನೆಗಳು ಸಂಭವಿಸಿವೆ. ಸಂಸ್ಥೆಯ ಸದಸ್ಯ ಸಂಖ್ಯೆಗನುಗುಣವಾಗಿ ಭದ್ರತಾಸಮಿತಿ ವಿಸ್ತಾರವಾಗಿಲ್ಲದಿರುವುದರಿಂದ ವೀಟೋ ಅಧಿಕಾರದಿಂದ ಆ ಸಂಸ್ಥೆ ಪ್ರಜಾಪ್ರಭುತ್ವ ತತ್ವದಿಂದ ದೂರ ಉಳಿದಿದೆ. ಸೋವಿಯಟ್ ಒಕ್ಕೂಟದ ಒಡಕಿನಿಂದಾಗಿ, ಅಮೆರಿಕಾ ಇಡೀ ಜಗತ್ತಿನ ಗೌಡಿಕೆಯನ್ನು ವಹಿಸಿಕೊಂಡಂತಿದೆ. ಪ್ರಪಂಚ ಸಂಸ್ಥೆಯ ಮಂಜೂರಾತಿ ಇಲ್ಲದೆ ಇರಾಖ್ ಮತ್ತು ಕೊಸೊವ್‌ಗಳಲ್ಲಿ ಅದು ಯುದ್ಧ ನಡಸಿತೆಂಬುದು ಅನೇಕ ನಾಯಕರ ಕಣ್ಣು ತೆರೆಸಿದೆ. ಸುಮಾರು ಎರಡು ಬಿಲಿಯದಷ್ಟು ಬಾಕಿಯನ್ನದು ಪ್ರಪಂಚದ ಸಂಸ್ಥೆಗೆ ತುಂಬಿಲ್ಲ. ತಾನು ಅಣು ಪ್ರಯೋಗವನ್ನು ನಿಲ್ಲಿಸದಿದ್ದರೂ, ಇತರ ರಾಷ್ಟ್ರಗಳು ನಿಲ್ಲಿಸಬೇಕೆಂದು ನಾನಾ ರೀತಿಯ ಒತ್ತಡಗಳನ್ನು ಹೇರುತ್ತಿದೆ. ಇಷ್ಟಾದರೂ ಇತ್ತೀಚೆಗೆ ಸೇರಿದ ಪ್ರಪಂಚ ಸಂಸ್ಥೆಯ ಹೊಸ ಸಹಸ್ರಮಾನದ ಅಧಿವೇಶನ ಯುದ್ಧದ, ದಾರಿದ್ರ್ಯದ ಮತ್ತು ರೋಗರುಜಿನಗಳ ಪೀಡೆಯನ್ನು ಪರಿಹರಿಸಲು ಸದಾ ಸನ್ನದ್ಧವಾಗಿರಬೇಕೆಂದು ಸಂಸ್ಥೆಗೆ ಮತ್ತು ಸದಸ್ಯರಿಗೆ ಕರೆಕೊಟ್ಟಿದೆ. ಜಾಗತೀಕರಣದ ದೆಸೆಯಿಂದಾಗಿ ಎಲ್ಲ ರಾಷ್ಟ್ರಗಳಲ್ಲಿ ಸಮಾನ ಆರ್ಥಿಕ ಮತ್ತು ತಾಂತ್ರಿಕ ಪ್ರಗತಿಯನ್ನು ಸಾಧಿಸಬೇಕೆಂಬ ಆಶೆಯನ್ನದು ವ್ಯಕ್ತಪಡಿಸಿದೆ. ಇದು ಸಾಧ್ಯವೆ?

ಈ ಅಧಿವೇಶನಕ್ಕೆ ಮುಂಚೆ ಜಾಗತಿಕ ಶಾಂತಿ ಸಮ್ಮೇಲನ ನಡೆಯುತ್ತದೆ. ಎಲ್ಲ ಮತಪಂಥ ಉಪಾಸನೆಗಳಿಗೆ ಸೇರಿದ ಸಾವಿರ ಪ್ರತಿನಿಧಿಗಳು ಅಲ್ಲಿ ಜಮಾಯಿಸಿ, ಚರ್ಚೆ ನಡಸಿ, ಎಲ್ಲ ಮತಗಳು ಸಮಾನವೆಂದು ಸಮರ್ಥಿಸಿ, ಮತದ ಹೆಸರಿನಲ್ಲಿ ನಡೆಯುವ ಹಿಂಸೆಯನ್ನು ಖಂಡಿಸುತ್ತಾರೆ. ಆದರೆ ದುರದೃಷ್ಟವಶಾತ್ ಪೋಪ್ ಜಗದ್ಗುರುಗಳು ಕ್ಯಾಥಲಿಕ್ ಮತವೇ ಸರ್ವಶ್ರೇಷ್ಠವಾದದ್ದೆಂದು ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ('ಹಿಂದೂ ೧೦.೧೦.೨೦೦೦.') ಅವರೇನೇ ಹೇಳಲಿ, ಜಗತ್ತಿನ ವಿವೇಕಿಗಳು, ಬುದ್ಧಿಜೀವಿಗಳು, ತತ್ತ್ವಜ್ಞಾನಿಗಳು, ಸಾಧಕರು, ತಪಸ್ವಿಗಳು, ಸಂತರು, ಮತೀಯ ಸಮಾನತೆಯನ್ನು ಎತ್ತಿಹಿಡಿದು ಮೂಲಭೂತವಾದಿಗಳನ್ನು ತಿರಸ್ಕರಿಸಬೇಕು.

ಸಾಮಾನ್ಯವಾಗಿ ಯುದ್ಧಗಳು ಬೆರಳೆಣಿಕೆಯ ನಾಯಕರ ಮನಸ್ಸಿನಲ್ಲಿ ಮೊಳೆದೋರುತ್ತವೆ. ಸ್ವಪ್ರತಿಷ್ಠೆ ಅಹಂಕಾರ ಸ್ವಾಭಿಮಾನ ಮತ್ತು ಪ್ರತೀಕಾರ ಬುದ್ಧಿಗಳು ಅವುಗಳ ಹುಟ್ಟಿಗೆ ಕಾರಣವಾಗುತ್ತವೆ. ಯುದ್ಧಮಾರಿಗೆ ಸಾಮಾನ್ಯಜನ ನಿರ್ವಾಹವಿಲ್ಲದೆ ಬಲಿಯಾಗುತ್ತಾರೆ.

ಪ್ರಪಂಚ ಸಂಸ್ಥೆಯ ಅಸ್ತಿತ್ವ ಸಾರ್ಥಕವಾಗಬೇಕಾದರೆ, ಅದು ಪ್ರಬಲವಾಗಬೇಕಾದರೆ, ಅದರ ಪ್ರಜಾಪ್ರಭುತ್ವೀಕರಣ ಅತ್ಯಗತ್ಯ. ಹೊಸಯುಗಧರ್ಮಕ್ಕನುಕೂಲವಾಗುವಂತೆ ಅದರ ಸಂವಿಧಾನವನ್ನು ಪುನರ್‌ರಚಿಸಬೇಕು. ಅಹಿಂಸೆ ಸತ್ಯದ ಭಾಗವೆಂದು ನಂಬಿರುವ, ಜಗತ್ತಿನ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತ ಭದ್ರತಾ ಸಮಿತಿಯ ಖಾಯಂ ಸದಸ್ಯತ್ವವನ್ನು ಪಡೆಯಬೇಕು.

ಅಣುಬಾಂಬು, ತಲಿಬನೀಕರಣ, ಉಗ್ರಗಾಮಿ ಪ್ರಾಬಲ್ಯ ಮತ್ತು ಮತೀಯ ಮೂಲಭೂತ

ವಾದ ಜಗತ್ತಿನ ಮುಂದಿರುವ ಸಮಸ್ಯೆಗಳಾಗಿವೆ. ತಲಿಬಾನರ ಮತ್ತು ಉಗ್ರಗಾಮಿಗಳ ಬಿಸಿ ಇದೆತಾನೆ ಜಗತ್ತಿನ ಪ್ರಬಲತಮ ರಾಷ್ಟ್ರವಾದ ಅಮೆರಿಕೆಯನ್ನು ತಟ್ಟಿದಂತಿದೆ. ಈ ಮೊದಲು ಉಗ್ರಗಾಮಿಗಳ ವಿರುದ್ಧವಾಗಿ ಭಾರತ ಎಷ್ಟು ಕೂಗು ಹಾಕಿದರೂ ಅದಕ್ಕೆ ಕೇಳಿಸುತ್ತಿರಲಿಲ್ಲ. ಚೆಚನ್ಯದಲ್ಲಿ ರಷ್ಯಾ ಉಗ್ರಗಾಮಿಗಳಿಂದ ಪಾಠ ಕಲಿತದ್ದಲ್ಲದೆ, ಅವರಿಗೆ ಹಿಂದಿರುಗಿ ಪಾಠ ಕಲಿಸಿದೆ. ಅಮೆರಿಕಾ ರಷ್ಯಾಗಳು ತಮಗೀಗ ಸಂಕಟ ಒಕ್ಕರಿಸಲಾಗಿ, ಸಿಡಿದೆದ್ದಿವೆ. ಇಂಥ ಕ್ಲಿಷ್ಟ ಸಂದರ್ಭದಲ್ಲಿ ನಾಯಕ ಸ್ಥಾನವನ್ನಾಕ್ರಮಿಸಿಕೊಂಡಿರುವ ಜನ ಸ್ವಾರ್ಥಾಭಿಲಾಶೆಯಿಂದಲೋ, ಅಧೈರ್ಯದಿಂದಲೋ, ಆಲಸಿಕೆಯಿಂದಲೋ, ಬುದ್ಧಿಭ್ರಮಣೆಯಿಂದಲೋ ಅನ್ಯಾಯದ ವಿರುದ್ಧ ಬಂಡಣ ಹೂಡದಿದ್ದಾಗ, ಸಾಮಾನ್ಯಜನ ದಂಗೆಯೇಳ ಬೇಕಾಗುತ್ತದೆ. ಹೊಸ ಸಹಸ್ರಮಾನದಲ್ಲಿ ಮತೀಯ ಯುದ್ಧಗಳು ಅಪಾರ ಪ್ರಾಣಹಾನಿಗೆ, ನಾಗರಿಕತೆಗಳ ಅಳಿವಿಗೆ ಕಾರಣವಾಗಬಹುದೆಂದು ತೋರುತ್ತದೆ. ಹಿಂದೂ ಮುಸ್ಲಿಮರ ನಡುವಣ ಸಂಘರ್ಷಗಳಿಗಿಂತ ಮುಸ್ಲಿಮ್ ಕ್ರಿಶ್ಚಿಯನ್ನರ ನಡುವಣ ಸಂಘರ್ಷಗಳು ಘೋರ ರೂಪವನ್ನು ತಾಳುವಂತೆ ತೋರುತ್ತದೆ. ಇಂಡೋನೇಷಿಯಾದ ದ್ವೀಪವೊಂದರಲ್ಲಿ ಇತ್ತೀಚೆಗೆ ನಡೆದ ಮುಸ್ಲಿಮ್ ಕ್ರಿಶ್ಚಿಯನ್ ಸಂಘರ್ಷವೇ ಇದಕ್ಕೆ ಸಾಕ್ಷಿಯಾಗಿದೆ.

ಪ್ರಜಾಪ್ರಭುತ್ವ ಸದ್ಯದ ಶ್ರೇಷ್ಠತಮ ರಾಜಕೀಯ ಸಿದ್ಧಾಂತವಾದರೂ, ಪಶುಬಲ ಧನಬಲದಿಂದಾಗಿ, ಭ್ರಷ್ಟಾಚಾರದ ಉಲ್ಬಣದಿಂದಾಗಿ, ರಾಜಕೀಯ ಅಪರಾಧೀಕರಣದಿಂದಾಗಿ, ಶಾಸಕರ ಮಂತ್ರಿಗಳ ಶಾಸನೋಲ್ಲಂಘನೆಯಿಂದಾಗಿ ಅಧಿಕಾರ ಕೇಂದ್ರೀಕರಣದಿಂದಾಗಿ ಅದೊಂದು ಅಣಕವಾಗಿದೆ. ಆರ್ಥಿಕ ವ್ಯವಸ್ಥೆಯಲ್ಲಿ ಮಾರುಕಟ್ಟೆ ಬಂಡವಾಳಷಾಹಿಯದೇ ಗರ್ಜನೆಯಾಗಿ ಶ್ರೀಸಾಮಾನ್ಯರ ಹಾಗೂ ಗ್ರಾಮೀಣ ಜನರ ಗಂಟಲ ಗಾಳವಾಗತೊಡಗಿದೆ. ಈ ವ್ಯವಸ್ಥೆಯಲ್ಲಿ ಶ್ರೀಮಂತ ಅಧಿಕ ಶ್ರೀಮಂತನಾಗಿ, ಬಡವ ಕಡುಬಡವನಾಗುವ ಸಂಭವವಿದೆ. ತುಲಸಿಬೇವುಗಳ ಮೇಲೆ ದೇಶೀಯ ಕಂಪೆನಿಗಳು ಹಕ್ಕು ಸಾಧಿಸಿದಾಗಲೇ ಅಭಿವೃದ್ಧಿಶೀಲ ರಾಷ್ಟ್ರಗಳ ಭವಿಷ್ಯ ತೂಗುಯ್ಯಾಲೆಯಾಗಿದೆಯೆಂದು ಯಾರಿಗಾದರೂ ಅನಿಸದಿರದು. ಈಗಿನ ಪರಿಸ್ಥಿತಿಯನ್ನು ನೋಡಿದಾಗ ವಿನೂತನ ರೀತಿಯ ಸಾಮ್ರಾಜ್ಯಷಾಹಿ ಜಗತ್ತಿನಲ್ಲೆಲ್ಲ ತನ್ನ ಬಾಹುಗಳನ್ನು ಚಾಚುತ್ತಿರುವುದು ಸ್ಪಷ್ಟವಾಗುತ್ತಿದೆ. ಈ ದೃಷ್ಟಿಯಿಂದಾದರೂ ಪ್ರಬಲವಾದ ಪ್ರಪಂಚ ಸಂಸ್ಥೆಯ ಅಗತ್ಯವಿದೆ. ಮಾನವಹಕ್ಕುಗಳ ಸಂಘ ನಿಷ್ಕ್ರಿಯೆಯನ್ನು ತೊರೆದು ಜಗತ್ತಿನಲ್ಲಿ ತನ್ನ ನೈತಿಕ ಪ್ರಭಾವವನ್ನು ಬೀರಬೇಕಾಗಿದೆ.

ಇದು ಒಂದು ರಾಷ್ಟ್ರದ ಬಾಹ್ಯ ಪರಿಸ್ಥಿತಿಯಾದರೆ, ಅದರ ಅಂತರಿಕ ಪರಿಸ್ಥಿತಿ ಇನ್ನೂ ಉಗ್ರವಾಗಿದೆ. ಸರ್ಕಾರದ ಮೈಯೆಲ್ಲ, ಬೇರಿನಿಂದ ತುದಿಯವರೆಗೆ ಭ್ರಷ್ಟಾಚಾರದಿಂದ ವಿಷಪೂರಿತವಾಗಿದೆ. ಎಷ್ಟು ಕಾನೂನುಗಳನ್ನು ರಚಿಸಿದರೂ, ಅವುಗಳಿಂದ ಪಾರಾಗುವ ಜಾಣ್ಮೆ ಅಪರಾಧಿಗಳಿಗಿದೆ. ಇಂಥ ಅಪರಾಧಗಳಿಗೆ ನೊಬೆಲ್ ಪ್ರಶಸ್ತಿ ಇರುವುದಾದರೆ ಅದು ಇಂಡಿಯಾಕ್ಕೆ ಸಲ್ಲಬೇಕಾಗುತ್ತದೆ. ಆದರೆ ಗಾಂಧಿಯಂಥ ಹೆಸರಿನ ಸಂಪರ್ಕದಿಂದಾಗಿ, ಭಾರತದ ಕೀರ್ತಿ ಅಷ್ಟೋ ಇಷ್ಟೋ ಉಳಿದಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕು ಸಂಸ್ಥೆಗಳು ಸಂಸ್ಥಾಪನೆಗೊಂಡಿವೆಯಷ್ಟೆ. ಸಾಮಾನ್ಯರಿಗೆ ಅಂಥ ಸಂಸ್ಥೆಗಳಿಂದ ಕಿಂಚಿತ್ತಾದರೂ ಪ್ರಯೋಜನವಾಗುವುದಿಲ್ಲ. ಅವುಗಳ ಸಂರಕ್ಷಣೆಯ ಖರ್ಚಿನ ಭಾರವನ್ನು ಸಾಮಾನ್ಯರು ಹೊರುತ್ತಿದ್ದರೂ, ಅವರಿಗೆ ಅವುಗಳಿಂದ

ಲವಲೇಶವೂ ಲಾಭವಿಲ್ಲವೆಂಬುದನ್ನರಿಯಬೇಕು. ಅದೂ ಇರಲಿ, ಉಗ್ರಗಾಮಿಗಳನ್ನು ತಹಬಂದಿಗೆ ತರುವ ಶಕ್ತಿ ಈ ಅಂತರರಾಷ್ಟ್ರೀಯ ಸಂಸ್ಥೆಗಳಿಗಿದೆಯೆ? ಬಡವರನ್ನು ಅಮಾಯಕರನ್ನು ಸುಲಿಗೆ ಕೊಲೆಗಳಿಂದ ಪಾರುಮಾಡಲು ಸಾಧ್ಯವಾಗಿದೆಯೆ? ಯೋಗ್ಯ ವಿದ್ಯಾಪ್ರಸಾರದಿಂದ ಮಾತ್ರ ಜನ ಅನೇಕ ಪೀಡೆಗಳನ್ನು ಮೆಟ್ಟಿನಿಲ್ಲಬಹುದಾಗಿದೆ. ಆದ್ದರಿಂದ ಶಿಕ್ಷಣವೂ ಪ್ರಮುಖ ಮಾನವ ಹಕ್ಕುಗಳಲ್ಲೊಂದೆಂದು, ವಯಸ್ಕರ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಬೇಕೆಂದು ಅಂತರರಾಷ್ಟ್ರೀಯ ಸಂಸ್ಥೆಗಳು ಎಲ್ಲ ಸರ್ಕಾರಗಳ ಮೇಲೆ ಒತ್ತಡ ತರಬೇಕಾಗಿದೆ. ವಯಸ್ಕರ ಶಿಕ್ಷಣ ಗಾಂಧೀಜಿಯ ರಚನಾತ್ಮಕ ಚಟುವಟಿಕೆಗಳಲ್ಲೊಂದೆಂಬುದನ್ನು ಆಳುವ ಜನ ಅರಿಯಬೇಕಾಗಿದೆ.

ಭ್ರಷ್ಟಾಚಾರ ಇರದೆಡೆಯಿಲ್ಲ:

ಭಾರತದಲ್ಲಿರುವಷ್ಟು ಭ್ರಷ್ಟಾಚಾರ ಬೇರಾವ ದೇಶಗಳಲ್ಲಿಯೂ ಇದ್ದಂತಿಲ್ಲ. ಅದರ ಅವತಾರಗಳು ಅನಂತ. ಕಾನೂನುಗಳು ಹೆಚ್ಚಿದಂತೆಲ್ಲ ಭ್ರಷ್ಟಾಚಾರದ ಸಂತಾನ ಮಿತಿಯಿಲ್ಲದೆ ಬೆಳೆಯುತ್ತದೆ. ಉದಾಹರಣೆಗಾಗಿ ಮರಕಡಿತನಿಯಂತ್ರಣಕ್ಕೆ ಸಂಬಂಧಿಸಿದ ಅರಣ್ಯ ಶಾಸನವನ್ನೇ ತೆಗೆದುಕೊಳ್ಳಬಹುದು. ಶಾಸನದ ಧ್ಯೇಯೋದ್ದೇಶಗಳ ಪಾವಿತ್ರ್ಯದ ಬಗ್ಗೆ ಸಂದೇಹವಿಲ್ಲ. ಆದರದು ರೈತರ ಹಾಗೂ ಬಡವರ ಸುಲಿಗೆಗೆ ಅನುಕೂಲವಾದ ಶಾಸನ. ತನ್ನ ಹೊಲದಲ್ಲಿ ತಾನುನೆಟ್ಟು ಶ್ರಮವಹಿಸಿ ಬೆಳೆದ ಮರವನ್ನು ಕುಟುಂಬದ ಬಳಕೆಗಾಗಿ ರೈತ ಕಡಿದುಕೊಳ್ಳುವ ಸ್ವಾತಂತ್ರ್ಯವಿಲ್ಲದಿರುವಾಗ, ಸರ್ಕಾರದ ರೈತ ವಿರೋಧಿ ನೀತಿ ಮತ್ತು ಕ್ರೌರ್ಯ ವ್ಯಕ್ತವಾಗುತ್ತವೆ. ಅಡುಗೆಗೆ, ಹಬ್ಬಕ್ಕೊ, ಮದುವೆಗೊ, ಶವದಹನಕ್ಕೊ ಜರೂರಾಗಿ ಸೌದೆ ಬೇಕಾದಾಗ, ಮರವನ್ನು ಕಡಿದುಕೊಳ್ಳುವ ಹಕ್ಕು ಅವನಿಗಿಲ್ಲ. ಮಾನವ ಹಕ್ಕುಗಳ ವಿಧ್ವಂಸನ ಪ್ರಕ್ರಿಯೆ ಈ ಶಾಸನದ ಮೂಲದಲ್ಲಿದೆ. ಅರಣ್ಯಾಧಿಕಾರಿಗೆ ಗ್ರಾಮಸೇವಕನಿಗೊ ಮರಕಡಿಯುವ ಅನುಮತಿಗಾಗಿ ರೈತ ಅರ್ಜಿ ಗುಜರಾಯಿಸಿಕೊಳ್ಳಬೇಕು. ಅಧಿಕಾರಿ ಅಥವಾ ನೌಕರ ನಾಲ್ಕಾರುಸಾರಿ ರೈತನನ್ನು ಸುತ್ತಿಸುತ್ತಾನೆ. ಅವನು ಕೇಳಿದಷ್ಟು ಹಣ ಕೊಟ್ಟನಂತರವೇ ಪರವಾನಗಿ ದೊರೆಯುವಂಥದು.

ಇದು ನಾವು ಪ್ರತಿನಿತ್ಯ ಕಾಣುತ್ತಿರುವ ಸಾಮಾನ್ಯ ಸಂಗತಿ. ವರ್ಗಾವಣೆ, ನೇಮಕಾತಿ ಮತ್ತು ಲೈಸೆನ್ಸ್ ವಿತರಣೆ ಮೊದಲಾದ ಹಲವು ಉದ್ಯಮಗಳು ಲಂಚದ ಬೆಳೆಗೆ ಅತ್ಯಂತ ಫಲವತ್ತಾದ ಕ್ಷೇತ್ರಗಳು. ಶಿಕ್ಷಣ ಇಲಾಖೆ ವಿಶ್ವವಿದ್ಯಾನಿಲಯಗಳಲ್ಲಿಯೂ ಭ್ರಷ್ಟಾಚಾರ ತಪ್ಪಿದ್ದಲ್ಲ. ತಾನು ತೆತ್ತ ಲಂಚವನ್ನು ಚಕ್ರಬಡ್ಡಿ ಘನಬಡ್ಡಿ ಸಮೇತ ಮರಳಿ ಪಡೆಯಲು ತೆತ್ತವನು ತೆತ್ತಕ್ಷಣದಲ್ಲಿಯೇ ಸಂಕಲ್ಪಿಸಿಕೊಳ್ಳುತ್ತಾನೆ. ಅವನ ಗುರಿ ಜನಸೇವೆಯಲ್ಲ, ಕರ್ತವ್ಯ ಪಾಲನೆಯಲ್ಲ; ತೆತ್ತ ಹಣವನ್ನು ಮರಳಿ ಪಡೆಯಲು ಯಾವ ಯಾವ ಹೂಟ ಹೂಡಬೇಕೆಂದು ಯೋಚಿಸುವಲ್ಲಿ ಅವನ ಬದುಕು ಸವೆಯುತ್ತದೆ. ಹೀಗಾಗಿ ಅವನೊಬ್ಬ ಜಿಗಣೆಯಾಗುತ್ತಾನೆ. ಇದರ ಪರಿಣಾಮವಾಗಿ ಸರ್ಕಾರಿ ಕೆಲಸ ಕುಂಠಿತಗೊಳ್ಳುತ್ತದೆ; ಉತ್ಪತ್ತಿ ಮಾರ್ಗಗಳು ಮುಚ್ಚಿಕೊಳ್ಳುತ್ತವೆ.

ಸಭೆ ಸಮಾರಂಭಗಳಲ್ಲಿ ಮಾತಾಡುವಾಗ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಹರಿಶ್ಚಂದ್ರ ಧರ್ಮರಾಯರ ವಂಶಸ್ಥರೆಂಬಂತೆ, ಗಾಂಧಿಜಯಪ್ರಕಾಶರ ತುಂಡುಗಳೆಂಬಂತೆ ಲೀಲಾಜಾಲವಾಗಿ ಭ್ರಷ್ಟಾಚಾರ ನಿರ್ಮೂಲನದ ಬಗ್ಗೆ ಗಂಟಲು ಹರಿದುಕೊಳ್ಳುತ್ತಾರೆ; ಭ್ರಷ್ಟಾಚಾರವನ್ನು ತೊಡೆದು ಹಾಕುವುದಾಗಿ ಘೋಷಿಸುತ್ತಾರೆ. ಅವರ ಘೋಷಣೆಯನ್ನು ಕೇಳಿದ ಜನ ನಗುತ್ತಾರೆ. ಜನರ ಮೂಲಕ ದೇವರು ಸಹ ನಗುತ್ತಾನೆ. ಅವರೆಲ್ಲರೂ ಅಧರ್ಮಿಗಳು, ದೈವದ್ರೋಹಿಗಳೆಂದು

ಸಜ್ಜನರು ಹೀಯಾಳಿಸುತ್ತಾರೆ. ಆ ಭ್ರಷ್ಟಾಚಾರಿಗಳು ಕಾನೂನನ್ನೇ ವ್ಯರ್ಥಗೊಳಿಸುವ ಖದೀಮರು, ಅಪರಾಧಶೋಧಕರನ್ನು ಲೋಕಾಯುಕ್ತರನ್ನು ಆದಾಯ ತೆರಿಗೆ ಅಧಿಕಾರಿಗಳನ್ನು ನಿಭಾಯಿಸಬಲ್ಲ ಮಹಾಭಂಡರೆಂದರೂ ಸಲ್ಲುತ್ತದೆ. ಅನೇಕ ಏಜೆಂಟರ ಅಂದರೆ ತಲೆಹಿಡುಕರ ಮೂಲಕ ಅವರು ಲಂಚೋದ್ಯಮವನ್ನು ಸಲೀಸಾಗಿ ನಡಸುತ್ತಾರೆಂದು ಕೇಳಿದ್ದೇನೆ. ಈ ಏಜೆಂಟರೂ ಶಿಕ್ಷಾರ್ಹರೆಂದು ಘೋಷಿತವಾಗಬೇಕು.

ಶ್ರೀಮಂತರು, ಕೈಗಾರಿಕಾ ದೊರೆಗಳು, ಮೇರುನಟ ನಟಿಯರು, ಮಂತ್ರಿಗಳು ಮತ್ತು ವರ್ತಕರು ಸಾಮಾನ್ಯವಾಗಿ ಆದಾಯತೆರಿಗೆ ಇಲಾಖೆಗೆ ಪ್ರಾಮಾಣಿಕವಾಗಿ ಲೆಕ್ಕ ಕೊಡುವುದಿಲ್ಲ. ಲೆಕ್ಕ ಕೊಟ್ಟಿರುವವರಿಂದ ಇಲಾಖೆಗೆ ಬರಬೇಕಾದ ಬಾಕಿ ಲಕ್ಷಾಂತರ ಕೋಟಿ. ಬ್ಯಾಂಕುಗಳಿಂದ ಪಡೆದ ಸಾಲವನ್ನು ನುಂಗಿಬಿಡುವ ವಾಣಿಜ್ಯ ಪತಿಗಳ ದೊಡ್ಡ ವರ್ಗವೇ ಒಂದಿದೆ. ವಾಪಸು ಬರದ ಅಂಥ ಸಾಲದ ಮೊತ್ತವೂ ಲಕ್ಷಾಂತರ ಕೋಟಿ. ಅಧಿಕಾರಿಗಳು ಸಾಮಿಲಾಗದೆ ಈ ಮೋಸ ನಡೆಯುತ್ತದೆಯೆ? ಅನೇಕ ಸರ್ಕಾರಿ ಕಾರ್ಖಾನೆಗಳು ಮುಳುಗಲು ಅಧಿಕಾರಿಗಳ ಅದಕ್ಷತೆಯ ಜತೆಗೆ ಭ್ರಷ್ಟಾಚಾರವೂ ಕಾರಣ. ಇಂಥ ಪರಿಸ್ಥಿತಿಯಲ್ಲಿ ದೇಶ ಆರ್ಥಿಕವಾಗಿ ಮುಂದುವರಿಯಲು ಸಾಧ್ಯವೆ? ಭ್ರಷ್ಟಾಚಾರದಿಂದಾಗಿ ಸರ್ಕಾರದ ದಕ್ಷತೆ ಶೂನ್ಯವಾಗುತ್ತದೆ, ಹಿಂಸೆ ಅಪರಾಧಗಳು ಉಲ್ಬಣಿಸುತ್ತವೆ; ಕಾನೂನು ಭಂಗದಿಂದಾಗಿ ಅರಾಜಕತೆ ತಲೆದೋರುತ್ತದೆ ; ಪ್ರಜಾಪ್ರಭುತ್ವದ ತಳಹದಿಯೇ ಕುಸಿಯುತ್ತದೆ. ಸತ್ಯವಂತರು ಸಜ್ಜನರು ಮತ್ತು ಬಡವರು ತುಂಬ ಕಷ್ಟಕ್ಕೀಡಾಗುತ್ತಾರೆ.

ಕೊಟ್ಟವರು ತೆಗೆದುಕೊಂಡವರು ಏಜೆಂಟರು ಈ ಮೂವರೂ ಕಳ್ಳರೇ. ಮೂವರಿಗೂ ಶಿಕ್ಷೆಯಾಗಬೇಕು. ಹಾಗಾಗುವ ಪಕ್ಷಕ್ಕೆ ಲಂಚದ ಪ್ರಕರಣಗಳೇ ಹೊರಗೆ ಬರುವುದಿಲ್ಲವೆಂಬುದೂ ನಿಜವೇ. ಅದರಿಂದಾಗಿ ನೂರಕ್ಕೆ ತೊಂಬತ್ತು ಪ್ರಕರಣಗಳು ಬೆಳಕಿಗೆ ಬರುವುದಿಲ್ಲ. ಆಡಳಿತಾಧಿಕಾರಿಗಳು ಸತ್ಯನಿಷ್ಠರಾದರೆ, ಪ್ರಾಮಾಣಿಕರಾದರೆ, ಲಂಚದ ಪ್ರಕರಣಗಳನ್ನು ಪತ್ತೆ ಹಚ್ಚಲು ಕಷ್ಟವಾಗದು. ಅಪರಾಧಶೋಧನ ಇಲಾಖೆ ಮತ್ತು ಲೋಕಾಯುಕ್ತ ಲೋಕಪಾಲ ಸಂಸ್ಥೆಗಳು ಸ್ವಾಯತ್ತತಾ ವ್ಯವಸ್ಥೆಗಳಾದಾಗ, ಅಲ್ಲಿಯ ಅಧಿಕಾರಿಗಳು ಶುದ್ಧಹಸ್ತರಾದಾಗ ಮಾತ್ರ ಭ್ರಷ್ಟಾಚಾರವನ್ನು ತಡೆಗಟ್ಟಲು ಸಾಧ್ಯವಾಗಬಹುದು. ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸಿಕ್ಕಿಕೊಂಡ ಅಧಿಕಾರಿಗಳನ್ನು ಶಾಸಕರನ್ನು ಅಮಾನತ್ತಿನಲ್ಲಿಡಬೇಕು, ಮಂತ್ರಿಗಳಿಂದ ರಾಜೀನಾಮೆ ಪಡೆಯಬೇಕು ; ಅಷ್ಟೇ ಅಲ್ಲ, ಅಂಥವರು ಯಾವ ಚುನಾವಣೆಗೂ ನಿಲ್ಲದಂತೆ ತಡೆಯಬೇಕು. ಸರ್ಕಾರದ ವ್ಯವಹಾರಗಳು ಪಾರದರ್ಶಕವಾಗಿರಬೇಕು. ಮಾಹಿತಿ ಹಕ್ಕು ಎಲ್ಲರಿಗೂ ದೊರೆಯಬೇಕು. ರಾಷ್ಟ್ರಹಿತಾಸಕ್ತರೂ ಪ್ರಾಮಾಣಿಕರೂ ಸಜ್ಜನರೂ ಆದ ಜನ ಭ್ರಷ್ಟಾಚಾರಿಗಳ ಅಪರಾಧವನ್ನು ನಿರ್ಭಯವಾಗಿ ಜಗತ್ತಿಗೆ ತಿಳಿಸುವುದಾದರೆ, ಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ ಹೂಡುವುದಾದರೆ, ಅಪರಾಧಿಗಳನ್ನು ಬಹಿಷ್ಕರಿಸುವುದಾದರೆ, ಸಾರ್ವಜನಿಕ ನಿಂದೆಗೊಳಪಡಿಸುವುದಾದರೆ, ಭ್ರಷ್ಟಾಚಾರವನ್ನು ಯಶಸ್ವಿಯಾಗಿ ತಡೆಗಟ್ಟಬಹುದೆಂದು ತೋರುತ್ತದೆ.

-ದೇಜಗೌ

ಕನ್ನಡದ ಭಾಷಾ ಸಂಪತ್ತು

ಡಾ. ಬಿ. ಬಿ. ರಾಜಪುರೋಹಿತ
೭೧೬, ೧೬ನೆಯ ಮುಖ್ಯ ರಸ್ತೆ
ಸರಸ್ವತೀಪುರ, ಮೈಸೂರು-೯

ಭಾವೈಕ್ಯಕ್ಕಾಗಿ ಕನ್ನಡ ಭಾಷೆ ಒಂದೇ ಎಂದು ನಾವು ಹೇಳಿದರೂ ಕನ್ನಡ ಎಂಬುದು ಹಲವು ಉಪಭಾಷೆಗಳ ಸಂಗಮ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಹಳೆಯ ಮೈಸೂರು ಪ್ರಾಂತದಲ್ಲಿ ಒಂದು ಪ್ರಕಾರದ ಕನ್ನಡ ಬಳಕೆಯಲ್ಲಿದ್ದರೆ, ಧಾರವಾಡದ ಕಡೆಗೆ ಇನ್ನೊಂದು ಪ್ರಕಾರ ಬಳಕೆಯಲ್ಲಿದೆ. ಕಲಬುರ್ಗಿ, ಬಿದರೆಯ ಕಡೆಗೆ ಮತ್ತೊಂದು ಪ್ರಕಾರವಿದೆ. ವಿಸ್ತಾರವಾದ ಪ್ರದೇಶದಲ್ಲಿ ಹರಡಿಕೊಂಡಿರುವ ಭಾಷೆಗೆ ಉಪಭಾಷೆಗಳು ಇರುವದು ಸಹಜವಷ್ಟೇ ಅಲ್ಲ, ಭಾಷೆಯ ಜೀವಂತಿಕೆಯ ಲಕ್ಷಣವೂ ಕೂಡ ಅಹುದು. 'ಸತ್ತ' ಭಾಷೆಗೆ ಉಪಭಾಷೆಗಳು ಹುಟ್ಟಿಕೊಳ್ಳುವದು ಹೇಗೆ ಸಾಧ್ಯ?

ಹೀಗೆ ಪ್ರತಿಯೊಂದೂ ಉಪಭಾಷೆಯನ್ನಾಡುವವರಿಗೆ ತಮ್ಮ ಭಾಷೆಯೇ ಶುದ್ಧ ಭಾಷೆ, ಅದೇ ಮೇಲು, ಬೇರೆಯವರು ಆಡುವ ಭಾಷೆ ಶುದ್ಧವಲ್ಲ, ಎನ್ನುವ ಭಾವನೆಗಳೂ ಬರುತ್ತವೆ. ಅದರೊಡನೆ ಇತರರು ಆಡುವ ಭಾಷೆಯನ್ನು ಅವಹೇಳನ ಮಾಡುವ, ಅಪಹಾಸ್ಯ ಮಾಡಿ ನಗುವ ಪ್ರಸಂಗಗಳೂ ಸಾಮಾನ್ಯವಾಗುತ್ತವೆ. ಧಾರವಾಡದವರು ಬಳಸುವ 'ನಮ್ಮ ಯಜಮಾನರು ಮನ್ಯಾಗ ಇಲ್ಲ. ಹಿಂದಾಗಡೆ ಬರ್ರಿ' ಎನ್ನುವ ವಾಕ್ಯವನ್ನು ಮೈಸೂರಿನ ಗೃಹಸ್ಥರೊಬ್ಬರು ಕೇಳಿ 'ಈಕೆ ಎಂಥ ಹೆಂಗಸು! ಗಂಡ ಮನೆಯಲ್ಲಿಲ್ಲ ಎಂದಾಕ್ಷಣ ಬೇರೆಯವರನ್ನು ಹಿಂದಿನ ಬಾಗಿಲಿನಿಂದ ಬರಲು ಕರೆಯುತ್ತಿದ್ದಾಳೆ!!' ಎಂದು ಅರ್ಥ ಮಾಡಿಕೊಂಡರಂತೆ. 'ಹಿಂದಾಗಡೆ' ಎಂದರೆ 'ಆಮೇಲೆ' ಎಂಬ ಧಾರವಾಡ ಭಾಷೆಯಲ್ಲಿಯ ಅರ್ಥ ಅವರಿಗೆ ಗೊತ್ತಿರಲಿಲ್ಲ. ಹಾಗೆಯೇ ಮತ್ತೊಮ್ಮೆ ಧಾರವಾಡ ಕಡೆಯ ಗೃಹಸ್ಥರೊಬ್ಬರು ಮೈಸೂರಿನಲ್ಲಿ ಸ್ನೇಹಿತರ ಮನೆಗೆ ಬಂದಾಗ ಅವರು 'ಒಳಗೆ ಬನ್ನಿ' ಎಂದರಂತೆ. 'ಈಗೇನೂ ದಸರೆ ಅಲ್ಲವಲ್ಲ. ಈಗ್ಯಾಕ ಬನ್ನಿ?' ಎಂದು ಕೇಳಿದರಂತೆ. ಇವರಿಗೆ 'ಬನ್ನಿ' ಎಂದರೆ 'ಬರ್ರಿ' ಎಂದಂತೆ ಎಂಬುದು ಗೊತ್ತಿರಲಿಲ್ಲ. ಅದೇ ಗೃಹಸ್ಥ 'ನಿಮ್ಮಪ್ಪ ಒಳಗ ಇದ್ದಾರೇನಪಾ' ಎಂದು ಕಲಬುರ್ಗಿಯಲ್ಲಿ ಒಬ್ಬ ಹುಡುಗನಿಗೆ ಕೇಳಿದರೆ ಆ ಹುಡುಗ. 'ಹೌಂದು, ಒಳಗ ಹಾರ' ಅಂದನಂತೆ. 'ಏನು ಹಾರವೋ ತುರಾಯಿಯೋ' ಎಂದುಕೊಳ್ಳುತ್ತ ಒಳಗೆ ನಡೆದರಂತೆ.

ಈ ರೀತಿಯ 'ಮಾರ್ಗ ಭೇದಗಳನ್ನು' ನೃಪತುಂಗನೂ ತನ್ನ ಕವಿರಾಜ ಮಾರ್ಗದಲ್ಲಿ ಗುರುತಿಸಿದ್ದಾನೆ. ಉತ್ತರ, ದಕ್ಷಿಣ ಅಷ್ಟೇ ಅಲ್ಲದೇ ಪೂರ್ವ, ಪಶ್ಚಿಮ ಮಾರ್ಗಭೇದಗಳೂ ಕಾಣ ದೊರೆಯುತ್ತವೆ. ಅಲ್ಲದೆ ಕರಾವಳಿ ಪ್ರದೇಶ, ಕಾಸರಗೋಡಿನನಂಥ ಭೌಗೋಲಿಕವಾಗಿ ಹೆಚ್ಚು ಸಂಪರ್ಕ ಹೊಂದದ ಪ್ರದೇಶ ಮೊದಲಾದ ಕಡೆ ಭಾಷೆ ಭಿನ್ನವಾಗುವದು ಒಂದು ಸಹಜ ಪ್ರಕ್ರಿಯೆ.

ಕನ್ನಡ ಭಾಷೆಯ ಸರ್ವೇಕ್ಷಣ :

ಕಳೆದ ಶತಮಾನದ ಪ್ರಾರಂಭದಲ್ಲಿ ಜಾರ್ಜ್ ಗ್ರಿಯರ್ಸನ್ ಎಂಬ ವಿದ್ವಾಂಸ ಭಾರತದ ಎಲ್ಲ ಭಾಷೆಗಳ ಸರ್ವೇಕ್ಷಣವನ್ನು ನಡೆಸಿದರು. ತಮ್ಮ ಸಂಶೋಧನೆಗಳನ್ನು ಅನೇಕ ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಅವುಗಳಲ್ಲಿ ಸ್ಟೆನ್ ಕನೋವ್ ಎಂಬವರು ಸಂಪಾದಿಸಿದ ನಾಲ್ಕನೆಯ ಸಂಪುಟದಲ್ಲಿ ಕನ್ನಡ ಭಾಷೆಯ ಸರ್ವೇಕ್ಷಣ ಇದೆ. ಅಲ್ಲಿ 'ವಿಜಾಪುರದ ಭಾಷೆ' ಎಂದು ಕೆಲವು ಮಾದರಿಗಳನ್ನು ಪ್ರಕಟಿಸಿದ್ದಾರೆ. ಆ ಕಾಲದಲ್ಲೂ ಕೂಡ ವಿಜಾಪುರದಲ್ಲಿ ಪ್ರಚಾರದಲ್ಲಿದ್ದ ಕನ್ನಡ ಬೇರೆ ಪ್ರದೇಶದ ಕನ್ನಡಕ್ಕಿಂತ ಭಿನ್ನವೆಂದೆನಿ

ಸುವಂತೆ ಇತ್ತು. ಆ ಮಾದರಿಗಳಲ್ಲಿ ಉರ್ದು ಶಬ್ದಗಳ ಪ್ರಾಬಲ್ಯ ಕಂಡುಬರುತ್ತದೆ. ವಿಜಾಪುರದಲ್ಲಿ ಮುಸಲ್ಮಾನ ದೊರೆಗಳು ಆಳಿದ್ದರಿಂದ ಆ ಪ್ರದೇಶದ ಕನ್ನಡದಲ್ಲಿ ಉರ್ದು ಶಬ್ದಗಳು ಪ್ರವೇಶಗೊಂಡಿವೆ. ಅದೇ ರೀತಿ ಮೈಸೂರಲ್ಲಿಯೂ ಹೈದರಾಲಿ ಮತ್ತು ಟಿಪ್ಪು ಅವರು ಕೆಲವು ಕಾಲ ರಾಜ್ಯಭಾರ ಮಾಡಿದ್ದರಿಂದ ಇಲ್ಲಿಯ ಕನ್ನಡದಲ್ಲಿಯೂ ಕೆಲವಾದರೂ ಉರ್ದು ಶಬ್ದಗಳು ಪ್ರವೇಶಿಸಿವೆ. ಡಿ.ಸಿ. ಆಫೀಸಿಗೆ ಅಠಾರಾ ಕಚೇರಿ ಎಂದು ನಿರ್ದೇಶಿಸುವದನ್ನು ಒಂದು ಉದಾಹರಣೆಯಾಗಿ ನೋಡಬಹುದು.

ಗ್ರಿಯರ್ಸನ್ ಅವರು ನಡೆಸಿದ ಸರ್ವೇಕ್ಷಣದಲ್ಲಿ ತಜ್ಞರಾದ ಕೆಲವರಿಗೆ ಭಾಷಾವಿಜ್ಞಾನ ಮತ್ತು ಧ್ವನಿವಿಜ್ಞಾನದ ಕಲ್ಪನೆ ಇದ್ದರೂ ಅವರು ಕೆಲಸಕ್ಕೆ ನೇಮಿಸಿಕೊಂಡಿದ್ದ ಎಲ್ಲರಿಗೆ ಆ ಪರಿಜ್ಞಾನ ಇರಲಿಲ್ಲ. ಅದರಿಂದಾಗಿ ಅವರ ಸಂಶೋಧನೆಯಲ್ಲಿ ಕೆಲವು ನ್ಯೂನತೆಗಳು ಉಳಿದುಬಿಟ್ಟಿವೆ. ಆದರೂ ಸುಮಾರು ಒಂದು ನೂರು ವರ್ಷಗಳ ಹಿಂದೆ ಪ್ರಾದೇಶಿಕ ಭಾಷಾಭೇದಗಳನ್ನು ಕುರಿತು ಅದ್ಭುತವಾದ ಸಾಮಗ್ರಿಯನ್ನು ಒದಗಿಸಿದರು.

ಅದಾದ ಮೇಲೆ ಸುಮಾರು ೩೦-೩೫ ವರ್ಷಗಳ ಹಿಂದೆ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಯು.ಜಿ.ಸಿ.ಯ ನೆರವಿನಿಂದ ಡಿ.ಎನ್. ಶಂಕರ ಭಟ್ಟರ ನೇತೃತ್ವದಲ್ಲಿ ಕನ್ನಡ ಭಾಷೆಯ ಸರ್ವೇಕ್ಷಣ ನಡೆಯಿತು. 'ನಂಜನಗೂಡು ಕನ್ನಡ', 'ಗುಲ್ಬರ್ಗಾ ಕನ್ನಡ', 'ಬಾರಕೂರು ಕನ್ನಡ', ಎಂದು ಮೊದಲಾಗಿ ಬೇರೆ ಬೇರೆ ಪಂಡಿತರು ಬರೆದ ಅನೇಕ ಪುಸ್ತಕಗಳನ್ನು ಪ್ರಕಟಿಸಲಾಯಿತು. ಉಚ್ಚಾರದಲ್ಲಿ, ವ್ಯಾಕರಣ ಪ್ರಕ್ರಿಯೆಯಲ್ಲಿ, ವಾಕ್ಯರಚನೆಯಲ್ಲಿ ಪ್ರತಿಯೊಂದು ಪ್ರದೇಶದ ಭಾಷೆಯು ತನ್ನದೇ ಆದ ವೈಶಿಷ್ಟ್ಯವನ್ನು ಹಾಗೂ ಇತರ ಪ್ರದೇಶದ ಭಾಷೆಯಿಂದ ಭಿನ್ನತೆಯನ್ನು ಹೇಗೆ ತೋರುತ್ತಿದೆ ಎಂಬುದನ್ನು ಒಂದು ಪ್ರಕಾರ ದೊಡನೆ ಇನ್ನೊಂದು ಪ್ರಕಾರವನ್ನು ಹೋಲಿಸಿ ತೋರಿಸದೇ ಇದ್ದರೂ ಆಯಾ ಪ್ರದೇಶಗಳಲ್ಲಿ ಬಳಕೆಯಾಗುವ ಶಬ್ದಗಳನ್ನು, ಅವುಗಳ ಪ್ರಯೋಗಗಳನ್ನು ಯಶಸ್ವಿಯಾಗಿ ಸಂಗ್ರಹಿಸಿ ಕೊಟ್ಟಿತು. ಕನ್ನಡದ ಉಪಭಾಷಾ ಸರ್ವೇಕ್ಷಣ ಶಾಸ್ತ್ರೀಯವಾಗಿ ನಡೆಯಬೇಕಾದುದು ಬಹುಕಾಲದ ಅಗತ್ಯವಾಗಿದೆ. ಭಾಷಾವಿಜ್ಞಾನದ ಕಡೆಗೆ ಬುದ್ಧಿವಂತ ವಿದ್ಯಾರ್ಥಿಗಳ ಒಲವು ಕ್ಷೀಣಿಸಿದ ಈ ಕಾಲದಲ್ಲಂತೂ ಅಂಥ ಕಾರ್ಯವನ್ನು ನಿರೀಕ್ಷಿಸುವದೂ ಕೂಡ ಸಾಧ್ಯವಾಗುತ್ತಿಲ್ಲ. ಕೇವಲ ಕನ್ನಡದ ಕೆಲಸಕ್ಕೆಂದೇ ಟೊಂಕಕಟ್ಟಿ ನಿಂತ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಈ ಕೆಲಸವನ್ನು ಮಾಡಿದರೆ ಮಾಡಬೇಕಷ್ಟೇ.

ಕನ್ನಡನಾಡಿನಾದ್ಯಂತ ಗ್ರಂಥಸ್ಥ ಬರವಣಿಗೆ ಪ್ರಾದೇಶಿಕ ಶಬ್ದಗಳನ್ನು ಬಳಸುವದರಲ್ಲಿ ತನ್ನ ವೈಶಿಷ್ಟ್ಯವನ್ನು ತೋರುತ್ತಿದ್ದರೂ ಮೂಲಭೂತ ಶಬ್ದ ಭಾಂಡಾರ ಮತ್ತು ವಾಕ್ಯರಚನೆ ಹೆಚ್ಚು ವೈವಿಧ್ಯವನ್ನು ತೋರುವದಿಲ್ಲ. ಆದರೆ ಉಚ್ಚಾರದಲ್ಲಿ ಮಾತ್ರ ಈ ವೈವಿಧ್ಯ ಹೆಚ್ಚು ಸ್ಪಷ್ಟವಾಗಿ ತೋರಿ ಬರುತ್ತದೆ. ಸಾಮಾನ್ಯನ ಕಿವಿಗೆ ಈ ಉಚ್ಚಾರ ಭೇದಗಳು ಕೇಳಿಸದೇ ಇರಬಹುದು. ಎಲ್ಲವೂ ಒಂದೇ ಎನ್ನುವಂತೆ ಕೇಳಿಸುತ್ತಲೂ ಇರಬಹುದು. ಆದರೆ ಧ್ವನಿವೈಜ್ಞಾನಿಕವಾಗಿ ಪರೀಕ್ಷಿಸಿದಾಗ ಉಚ್ಚಾರ ಭೇದಗಳಿರುವದು ಗೋಚರಿಸುತ್ತದೆ. ಉದಾಹರಣೆಗೆ 'ಅ' ಕಾರದಲ್ಲಿ ಧಾರವಾಡದ ಕಡೆಗೆ ಎರಡು ಉಚ್ಚಾರಗಳಿವೆ. ಎಣ್ಣೆಯಲ್ಲಿ 'ಕರಿ' ಬೇರೆ, ಕೂಗು ಅರ್ಥದ 'ಕರಿ' ಬೇರೆ. ಸುಣ್ಣ ಮೊದಲಾದವುಗಳನ್ನು 'ಬಳಿ' ಬೇರೆ, ಹೆಂಗಸರು ಕೈಗೆ ತೊಡುವ 'ಬಳಿ' ಬೇರೆ. ತಿಳಿದುಕೊಳ್ಳು ಅರ್ಥದ 'ಅರಿ' ಬೇರೆ, ಚಟ್ನಿ ಮೊದಲಾದವುಗಳನ್ನು 'ಅರಿ' ಬೇರೆ. 'ಅ' ಕಾರದ ಈ ಉಚ್ಚಾರ ಭೇದ ಮೈಸೂರು ಕಡೆಗೂ ಇದೆ. ಕಲಿತುಕೊಳ್ಳು ಅರ್ಥದ 'ಕಲಿ' ಮತ್ತು ಸೇರಿಸಿಕೊಳ್ಳು ಅರ್ಥದ 'ಕಲಿ(ಹಾಕು)' ಶಬ್ದಗಳಲ್ಲಿ 'ಕ' ದ ಉಚ್ಚಾರವನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ ಈ ಭೇದ ಗೊತ್ತಾಗುತ್ತದೆ.

ಅದೇ ಪ್ರಕಾರ, ಧಾರವಾಡ ಕನ್ನಡದಲ್ಲಿ 'ಒ' ಕಾರದಲ್ಲಿಯೂ ಎರಡು ಉಚ್ಚಾರಗಳು ಸಿಗುತ್ತವೆ. ಬಟ್ಟೆಯನ್ನು 'ಹೊಲಿ'ಯ ಉಚ್ಚಾರ ಬೇರೆ, ಮೈಲಿಗೆ ಅರ್ಥದ 'ಹೊಲಿ' ಬೇರೆ. ಈ ವ್ಯತ್ಯಾಸ ಮೈಸೂರು ಕಡೆಗೂ ನೋಡಲು ಸಿಗುತ್ತದೆ. ಗೆಳತಿಯನ್ನು ಪೆನ್ನು 'ಕೊಡೆ' ಎಂದು ಕೇಳುವಾಗ 'ಕೊ' ದ ಉಚ್ಚಾರ ಬೇರೆ, ಆತಪತ್ರ ಅರ್ಥದ 'ಕೊಡೆ'ಯಲ್ಲಿ 'ಕೊ' ದ ಉಚ್ಚಾರ ಬೇರೆ. ಹೀಗೆ ಸೂಕ್ಷ್ಮವಾಗಿ ನೋಡುತ್ತ ಹೋದರೆ ಅನೇಕ ಕುತೂಹಲಕಾರಿ ವಿಷಯಗಳು ಹೊರಬರುತ್ತವೆ. 'ಈ ರೀತಿ ನೋಡುತ್ತ ಹೋಗುವದರಿಂದ ಬರುವ ಭಾಗ್ಯವೇನು? ಆಯಿತು, ವ್ಯತ್ಯಾಸಗಳಿವೆ ಎಂದು ಒಪ್ಪಿಕೊಂಡರೂ ಅವುಗಳಿಂದ ಪ್ರಯೋಜನವೇನು? ಎಂಬ ಪ್ರಶ್ನೆಯನ್ನು ಸಾಮಾನ್ಯನೊಬ್ಬ ಕೇಳಬಹುದು. 'ಭಾಷೆಯನ್ನು ಬಳಸುವವರು ಅದನ್ನು ಹೇಗೂ ಬಳಸುತ್ತಿರುತ್ತಾರೆ. ತಿಳಿದುಕೊಳ್ಳುವವರು ತಿಳಿದುಕೊಂಡೇ ತಿಳಿದುಕೊಳ್ಳುತ್ತಾರೆ. ಉಚ್ಚಾರಗಳಲ್ಲಿ ಇರುವ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನೆಲ್ಲ ತಿಳಿದುಕೊಂಡು ಅವನಿಗೇನೂ ಪ್ರಯೋಜನವಿಲ್ಲ' ಎಂದೆನ್ನಬಹುದು. ಆದರೆ ಕನ್ನಡದ ಬಗ್ಗೆ ತಿಳಿದುಕೊಳ್ಳಬೇಕೆನ್ನುವ ಜಗತ್ತಿನ ಭಾಷಾವಿದ್ವಾಂಸರಿಗೆ ಈ ರೀತಿಯ ವಿಷಯಗಳು ತುಂಬಾ ಉಪಯುಕ್ತ ವಿಷಯಗಳನ್ನು ಒದಗಿಸಬಲ್ಲವು.

ಪ್ರಾದೇಶಿಕ ಶಬ್ದ ಭಾಂಡಾರ:

ಕನ್ನಡ ನಾಡಿನಲ್ಲಿ ಪ್ರವಾಸ ಮಾಡಿ ನೋಡಿದರೆ ಸಕೃದ್ದರ್ಶನಕ್ಕೆ ಕಂಡು ಬರುವದು ಆಯಾ ಪ್ರದೇಶಗಳಲ್ಲಿ ಬಳಕೆಯಾಗುವ ವಿಶಿಷ್ಟ ಶಬ್ದಗಳು. ಒಂದೇ ವಸ್ತುವಿಗೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಶಬ್ದಗಳಿರುತ್ತವೆ. ನೋಡಿ, ಧಾರವಾಡದ ಕಡೆಗೆ 'ಪೇರಲ ಹಣ್ಣ'ಗೆ ಮೈಸೂರು ಕಡೆಗೆ 'ಸೀಬೆ ಹಣ್ಣು' ಎನ್ನುತ್ತಾರೆ. ಅಲ್ಲಿಯ 'ಮುಳಗಾಯಿಗೆ' ಇಲ್ಲಿ 'ಬದನೆ ಕಾಯಿ' ಎನ್ನುತ್ತಾರೆ. ಅಲ್ಲಿಯ 'ಚವಳೀಕಾಯಿ' ಇಲ್ಲಿಯ 'ಗೋರಿಕಾಯಿ'. ಅಲ್ಲಿಯ ಶಿರಾ' ಇಲ್ಲಿಯ 'ಕೇಸರಿ ಭಾತು'. ಅಲ್ಲಿಯ 'ಕೇಸರಿ ಭಾತು' ಅಂದರೆ ಕೇಸರಿ ಮತ್ತು ಸಕ್ಕರೆಯನ್ನು ಹಾಕಿ ಬೇಯಿಸಿದ ಅನ್ನ. ಇಲ್ಲಿ ಆ ರೀತಿಯ ಸಿಹಿ ಅನ್ನವನ್ನು ಮಾಡುವದಿಲ್ಲವಾದ್ದರಿಂದಲೋ ಏನೋ ಅದು ತನ್ನ ಅರ್ಥವನ್ನು ಬದಲಿಸಿಕೊಂಡಿರಬೇಕು. 'ಭಾತ್' ಅಂದರೆ ಅಕ್ಕಿಯಿಂದ ಮಾಡಿದ ಅನ್ನವೆಂಬುದನ್ನು 'ಬಿಸಿ ಬೇಳೆ ಭಾತ್' ನಲ್ಲೂ ನೋಡುತ್ತೇವೆ. ಅಂದ ಮೇಲೆ ರವೆಯಿಂದ ಮಾಡಿದ 'ಕೇಸರಿ ಭಾತ್' ಎಂದಿನಿಂದ 'ಭಾತ್' ಆಯಿತು ಎಂಬುದನ್ನು ಸಂಶೋಧಿಸಬೇಕು. ಅಲ್ಲದೆ 'ಭಾತ್' ಎಂಬುದು ಮರಾಠಿಯಿಂದ ಬಂದ ಶಬ್ದ. ಅಲ್ಲಿಯೂ ಅದಕ್ಕೆ ಅಕ್ಕಿಯಿಂದ ಮಾಡಿದ ಅನ್ನ ಎಂದೇ ಅರ್ಥವಿದೆ. 'ಕೇಸರಿ ಭಾತ್' ಅನ್ನು ಮಧು ಮೇಹಿಗಳು ಇಷ್ಟಪಡದೇ ಇದ್ದಾಗ 'ಟೊಮ್ಯಾಟೊ ಭಾತ್' ಅಂದರೆ ರವೆಯಿಂದಲೇ ಉಪ್ಪು, ಖಾರ, ಟೊಮ್ಯಾಟೋ ಹಾಕಿ ಮಾಡಿದ ಖಾದ್ಯ ಹುಟ್ಟಿಕೊಂಡಿರಬೇಕು.

ಧಾರವಾಡದ ಕಡೆಗೆ ಬಹಳ ಎಂಬ ಅರ್ಥಕ್ಕೆ 'ಅಗದಿ' ಅಥವಾ 'ಭಯಂಕರ' ಎಂಬ ಶಬ್ದಗಳಿವೆ. ಎಚ್ಚರ, ಎಚ್ಚರಿಕೆ ಎಂಬ ಅರ್ಥಕ್ಕೆ 'ಕಾಳಜಿ'; ಯಾವಾಗಲೂ ಎಂಬ ಅರ್ಥಕ್ಕೆ 'ಅಸರಂತ' ; ಛೀವಿ ಎಂಬ ಅರ್ಥಕ್ಕೆ 'ಡೌಲು' ಅಥವಾ 'ಯಮಕು' ಮೊದಲಾದ ಶಬ್ದಗಳು ಧಾರವಾಡದ ಕಡೆಗೆ ಪ್ರಯೋಗವಾಗುತ್ತವೆ. ಇವುಗಳಲ್ಲಿ ಮರಾಠಿ ಮೂಲದಿಂದ ಬಂದ 'ಕಾಳಜಿ' ಮಾತ್ರ ಬೇರೆ ಆಯಾಮಗಳೊಡನೆ ಸಾಹಿತ್ಯ ವಿಮರ್ಶೆಯಲ್ಲಿ ಪ್ರಯೋಗವಾಗುತ್ತಿದೆ.

ಉಡುಪಿಯ ಕಡೆಗೆ ಸಮುದ್ರದ ತೀರದ ಬಯಲು ಎಂಬುದಕ್ಕೆ 'ಅರಾಲು', ಅಲ್ಲಿಯ ಮರಳು ಎಂಬುದಕ್ಕೆ 'ಹೊಯಿಗೆ', ಒಂದು ಪ್ರಕಾರದ ಬದನೆಕಾಯಿಗೆ 'ಗುಳ್ಳ', ಎಲೆಯನ್ನು ಸುತ್ತಿ ಮಾಡುವ ಒಂದು ವಿಶೇಷ ಖಾದ್ಯಕ್ಕೆ 'ಪತ್ರೊಡೆ' ಮೊದಲಾದ ಶಬ್ದಗಳನ್ನು

ನೋಡುತ್ತೇವೆ. ಅದೇ ಪ್ರಕಾರ ರಾಯಚೂರು, ಕಲಬುರ್ಗಿ, ಬಿದಿರೆಯ ಕಡೆಗೆ ಅಲ್ಲಿಯ ವಿಶಿಷ್ಟ ಶಬ್ದಗಳು ದೊರೆಯುತ್ತವೆ.

ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' , 'ಬೆಟ್ಟದ ಜೀವ' ಮೊದಲಾದ ಕಾದಂಬರಿಗಳನ್ನು ಓದುವಾಗ ಇಂಥ ಅನೇಕ ಪ್ರಾದೇಶಿಕ ಶಬ್ದಗಳು ನಮಗೆ ಗೋಚರಿಸುತ್ತವೆ. ಕುವೆಂಪು ಅವರ 'ಮಲೆನಾಡಿನ ಚಿತ್ರಗಳು', 'ಕಾನೂರು ಹೆಗ್ಗಡತಿ', ವಿ.ಕೃ.ಗೋಕಾಕರ 'ಸಮರಸವೇ ಜೀವನ', ರಾವಬಹದ್ದೂರರ 'ಗ್ರಾಮಾಯಣ, ದೇವನೂರ ಮಹಾದೇವ ಅವರ 'ಒಡಲಾಳ' ಮೊದಲಾದ ಕೃತಿಗಳನ್ನು ಓದುವಾಗ ಲೇಖಕರು ಪ್ರತಿನಿಧಿಸುವ ಪ್ರದೇಶದ ಭಾಷೆಯ ಕಂಪು ಅಲ್ಲಿ ಬಳಕೆಯಾದ ಶಬ್ದ ಭಾಂಡಾರದಿಂದ ಸೂಸುತ್ತಿರುತ್ತದೆ. ಪ್ರತಿಭಾವಂತ ಲೇಖಕರೆಲ್ಲ ಇದನ್ನು ಮಾಡುತ್ತಲೇ ಇರುತ್ತಾರೆ. ಇಂಥ ಕೃತಿಗಳಿಂದಲೇ ಪ್ರಾದೇಶಿಕ ಶಬ್ದ ಭಾಂಡಾರ ಉಳಿದುಕೊಂಡು ಬೆಳೆದುಕೊಂಡು ಬರುತ್ತದೆ. ಕನ್ನಡ ಸಾಹಿತ್ಯ ಪರಿಷತ್ತು ಎಂಟು ಸಂಪುಟಗಳ ಬೃಹತ್ ನಿಘಂಟನ್ನು ತಯಾರಿಸುವಾಗ ಕನ್ನಡ ನಾಡಿನಾದ್ಯಂತ ವಿಷಯ ಸಂಗ್ರಾಹಕರಿಂದ ಇಂಥ ಎಷ್ಟೋ ಶಬ್ದಗಳನ್ನು ಕಲೆಹಾಕಿ ಆ ನಿಘಂಟಿನಲ್ಲಿ ಸೇರಿಸಿಕೊಳ್ಳಲಾಯಿತು. ಶಿವರಾಮ ಕಾರಂತರು 'ಸಿರಿಗನ್ನಡ ಅರ್ಥ ಕೋಶ' ವನ್ನು ತಯಾರಿಸುವಾಗ ಧಾರವಾಡ ಕಡೆಯ ಶಬ್ದಗಳ ಸಂಗ್ರಹ ಮತ್ತು ಅರ್ಥನಿರ್ಣಯಕ್ಕೆ ಹಾವೇರಿಯ ಹುಚ್ಚರಾವ್ ಬೆಂಗೇರಿ ಅವರ ಸಹಾಯ ಪಡೆದಿದ್ದರು.

ಪ್ರಾದೇಶಿಕ ಶಬ್ದ ಸಂಗ್ರಹದ ಈ ಪ್ರಯತ್ನಕ್ಕೆ ಮುಕ್ತಾಯವೆಂಬುದಿಲ್ಲ. ಏಕೆಂದರೆ ಇದುವರೆಗೂ ಕೈಗೆ ಸಿಗದೆ ಎಷ್ಟೋ ಶಬ್ದಗಳು ಉಳಿದುಕೊಂಡಿರುತ್ತವೆ. ಅವುಗಳನ್ನು ಸಂಗ್ರಹಿಸಿ ನಿಘಂಟಿನ 'ಅನುಬಂಧ ಸಂಪುಟ' ಗಳಲ್ಲಿ ಪ್ರಕಟಿಸುವ ಕೆಲಸವಾಗಬೇಕು. ಹೀಗೆ ಎಷ್ಟು ವಿಪುಲವಾದ ಸಾಮಗ್ರಿ ಸಿಗುತ್ತದೆಯೋ ಅಷ್ಟು 'ಕನ್ನಡ ಭಾಷೆಯ ಇತಿಹಾಸ' ಸಾಧಾರವಾಗಿ ಸಮರ್ಪಕವಾಗುತ್ತದೆ. ಅಲ್ಲದೆ 'ವೃತ್ತಿಪದ ಕೋಶ' ಗಳು ಕೂಡ ಸಿದ್ಧವಾಗಬೇಕು. ತೆಲುಗಿನಲ್ಲಿ ಭ.ಕೃಷ್ಣಮೂರ್ತಿಯವರು ಅಂಥ ಕೋಶ ಗಳನ್ನು ತಯಾರಿಸಿದ್ದಾರೆ.

ಕನ್ನಡಕ್ಕಾಗಿ ಕೆಲಸ ಮಾಡುವ ವಿಶ್ವವಿದ್ಯಾಲಯಗಳು, ಕಸಾಪದಂಥ ಸ್ವಾಯತ್ತ ಸಂಸ್ಥೆಗಳು, ಅಥವಾ ಊಹೆಯುಳ್ಳ, ಹಣವನ್ನು ಖರ್ಚು ಮಾಡಬಲ್ಲ ಖಾಸಗಿ ಸಂಸ್ಥೆಗಳು ಮುಂದೆ ಬಂದರೆ ಕನ್ನಡಕ್ಕೆ ಒಳ್ಳೆಯದಾಗಬಲ್ಲದು. ತಮಿಳು, ತೆಲುಗು, ಮಲಯಾಳಗಳಿಗೆ ಹೋಲಿಸಿದರೆ ಕನ್ನಡಕ್ಕಾಗಿ ಅಷ್ಟು ಕೆಲಸ ನಡೆದಿಲ್ಲ. ನಡೆಯಬೇಕಾದುದು ಅಗತ್ಯವಾಗಿದೆ. ರಾಜ್ಯೋತ್ಸವದಂತ ಶುಭ ಸಂದರ್ಭದಲ್ಲಿ ಇಂಥ ಮಹಾಕಾರ್ಯಕ್ಕೆ ನಾಂದಿ ಹಾಡ 'ಬೇಕಾದುದೂ ಅಗತ್ಯವಾಗಿದೆ.

ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ ;
ಹಸಿಗೋಡೆಯ ಹರಳಿನಂತೆ
ಹುಸಿ ಹೋಗದ ಕನ್ನಡ.

-ಚೆನ್ನವೀರ ಕಣವಿ

ವಯಸ್ಕರ ಶಿಕ್ಷಣ - ಒಂದು ಸಮೀಕ್ಷೆ*

ಡಾ.ಎ.ಆರ್.ಮಂಜುನಾಥ್
ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ
ಬೆಂಗಳೂರು-೫೬೦ ೦೦೧

೧. ಪೀಠಿಕೆ: ತನ್ನ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಹೆಚ್ಚು ಹೆಮ್ಮೆಯಿಂದ ಬೀಗುವ ಭಾರತ ದೇಶಕ್ಕೆ ಅನಕ್ಷರತೆ ಒಂದು ಅತ್ಯಂತ ನಾಚಿಕೆಯ ವಿಷಯ. ಗಾಂಧೀಜಿಯವರು ಇದನ್ನು ಒಂದು ದೊಡ್ಡ ಪಾಪ ಹಾಗೂ ಒಂದು ಶಾಪವೆಂದು ಕರೆದಿದ್ದಾರೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಮ್ಮ ಹಿರಿಯರು ಕನಸು ಕಂಡ ಅನಕ್ಷರಸ್ಥರಿಂದ ಮುಕ್ತವಾದ ಸ್ವಾತಂತ್ರ್ಯ ಭಾರತ ಇನ್ನೂ ಕನಸಾಗಿಯೇ ಉಳಿದಿದೆ. ಅತ್ಯಗತ್ಯ ಮಟ್ಟದ ಸಾಕ್ಷರತೆ-ಅಂದರೆ ಓದುವ, ಬರೆಯುವ, ಎಣಿಸುವ ಜ್ಞಾನವನ್ನು ನಮ್ಮ ಜನಸಂಖ್ಯೆಯ ಶೇ.೪೮ರಷ್ಟು ಕೂಡ ಸಾಧಿಸಲು ನಮ್ಮಿಂದ ಸಾಧ್ಯವಾಗಿಲ್ಲ.

ಇದರರ್ಥ ಏನೂ ಪ್ರಯತ್ನ ನಡೆದಿಲ್ಲವೆಂದಲ್ಲ, ಸರ್ಕಾರದ ಮಟ್ಟದಲ್ಲಿ ಸ್ವಯಂಸೇವಾ ಸಂಘಗಳ ಮಟ್ಟದಲ್ಲಿ ಸಾಕಷ್ಟು ಪ್ರಯತ್ನಗಳು ನಡೆಯುತ್ತಾ ಬಂದಿದೆ. ಹಾಗಿದ್ದಲ್ಲಿ , ನಾವೆಲ್ಲಿ ತಪ್ಪಿದ್ದೇವೆ ? ದೇಶದ ಎಲ್ಲೆಡೆ ಸಾಕ್ಷರತೆಯ ಪ್ರಚಾರದ ಬಗ್ಗೆ ಕಣ್ಣಿನ ಸೆಳೆಯುವ ಘೋಷಣೆಗಳನ್ನು ನಾವು ಕಾಣುತ್ತೇವೆ. ಪ್ರಚಾರಕ್ಕೆ ಕೊಟ್ಟಷ್ಟು ಆಸಕ್ತಿ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುವುದರಲ್ಲಿ ಕೊಟ್ಟಂತೆ ಕಾಣುವುದಿಲ್ಲ. ಕಾರ್ಯಕ್ರಮ ಹೇಗೆ ನಡೆಯುತ್ತಿದೆ, ಅದರ ಗುರಿ ಸಾಧನೆಯಲ್ಲಿ ಗಣನೀಯ ಪ್ರಗತಿ ಆಗಿದೆಯೇ ? ಇದಕ್ಕಾಗಿ ಒಂದು ನಿರ್ದಿಷ್ಟವಾದಂತಹ ಗುರಿಯನ್ನು ಇಟ್ಟು ಕೊಂಡು ಆ ಗುರಿಯ ಸಾಧನೆಗಾಗಿ ಅಗತ್ಯವಾಗಿ ಬೇಕಾದ ಯೋಜನೆಯನ್ನು ರೂಪಿಸಿ ಅದರಂತೆ ಅನಕ್ಷರಸ್ಥರನ್ನು ಗುರುತಿಸಿ, ಅವರ ಮನವೊಲಿಸಿ, ಅವರನ್ನು ಸಾಕ್ಷರಸ್ಥರನ್ನಾಗಿ ಮಾಡಲು ಬೇಕಾದ ಜನ ಮತ್ತು ಹಣವನ್ನು ಕ್ರೋಢೀಕರಿಸಿ, ಒಂದು ವ್ಯವಸ್ಥಿತ ಹಾಗೂ ಸಂಘಟಿತ ಮಾರ್ಗೋಪಾಯವನ್ನು ಕಂಡು ಹಿಡಿದು ತನ್ಮೂಲಕವಾಗಿ ಕಾರ್ಯಕ್ರಮದ ಅನುಷ್ಠಾನಗೊಳಿಸಬೇಕಾಗಿದೆ.

೨. ಇತಿಹಾಸ : ವಯಸ್ಕರ ಶಿಕ್ಷಣದ ಇತಿಹಾಸವನ್ನು ನೋಡಿದಾಗ ಇದರ ಹುಟ್ಟು ಸುಮಾರು ೨೦೦ ವರ್ಷಗಳ ಹಿಂದೆ ಆಗಿರುವಂತೆ ಕಂಡು ಬರುತ್ತದೆ. ಭಾರತದಲ್ಲಿ ಸುಮಾರು ೫೦-೬೦ ವರ್ಷಗಳ ಹಿಂದೆ ಇದು ಕಾಣಿಸಿಕೊಂಡಿದೆ. ಅನೌಪಚಾರಿಕವಾಗಿ ಇದು ಸಾಕ್ರೆಟೀಸ್, ಜೀಸಸ್ ಮತ್ತು ಬುದ್ಧನ ಕಾಲದಲ್ಲಿ ಅಸ್ತಿತ್ವದಲ್ಲಿ ಇರುವುದು ಕಂಡು ಬರುತ್ತದೆ. ಮೊದಲು ಮಹಾಯುದ್ಧದ ನಂತರ ಸಾಮಾಜಿಕ ಶಿಕ್ಷಣವಾಗಿ ಇದಕ್ಕೆ ಪ್ರಾಶಸ್ತ್ಯ ಸಿಕ್ಕಿತು. ಇದರ ಇತಿಹಾಸದ ಬೇರುಗಳನ್ನು ತಡಕಿದಾಗ ಇದನ್ನು ವ್ಯವಸ್ಥಿತವಾಗಿ ಹಾಗೂ ಗಂಭೀರವಾಗಿ ತೆಗೆದುಕೊಂಡದ್ದು ಎಲ್ಲೂ ಕಂಡು ಬರುವುದಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇದನ್ನು ಒಂದು ಮುಖ್ಯವಾದ ಕಾರ್ಯಕ್ರಮವೆಂದು ತೆಗೆದುಕೊಡಿದ್ದರೂ, ಜನ ಸಾಮಾನ್ಯರ ಅಸಡ್ಡೆಯಿಂದಾಗಿ ಇದಕ್ಕೆ ಹೆಚ್ಚು ಪ್ರಾಶಸ್ತ್ಯ ಲಭಿಸಿಲ್ಲ. ಭಾರತದಲ್ಲಿ ವಯಸ್ಕರ ಶಿಕ್ಷಣ ಶೇ.೧.೫ ಭಾಗವನ್ನು ದಾಟದಿರುವಾಗ ಸಾಮಾನ್ಯವಾಗಿ ''ವಯಸ್ಕರ ಶಿಕ್ಷಣ ಭಾರತದಲ್ಲಿ ಸೋತಿದೆ '' ಎನ್ನುವ ಮಾತು ಕೇಳಿ ಬರುತ್ತಿದೆ. ಈ ಮಾತನ್ನು ಕೇಳುವಾಗ ನಾವು ಇದಕ್ಕೆ ಸಾಕಷ್ಟು ಪ್ರಾಶಸ್ತ್ಯ ಕೊಟ್ಟಿದ್ದೇವೆಯೇ? ಆಡಳಿತಾತ್ಮಕವಾಗಿ, ಕಾನೂನಿನ ರೀತಿ

* ಈ ಲೇಖನ ಚಿನ್ನದ ಸಂಚಿಕೆಗೆಂದು ಸಕಾಲದಲ್ಲಿ ಬಂದಿತ್ತು. ನನ್ನ ಅಚಾತುರ್ಯದಿಂದಾಗಿ ಅದರಲ್ಲಿ ಅಚ್ಚಾಗಲಿಲ್ಲ. ಇದಕ್ಕಾಗಿ ನಾನು ಲೇಖಕರ ಮತ್ತು ಚಂದಾದಾರರ ಕ್ಷಮೆ ಯಾಚಿಸುತ್ತೇನೆ - ದೇಜಗೌ

ಬೇಕಾದ ಅಗತ್ಯಗಳನ್ನು ಪೂರೈಸಿದ್ದೇವೆಯೇ? ಎನ್ನುವ ಪ್ರಶ್ನೆ ಉದ್ಭವಿಸುತ್ತಿದೆ. ಇತ್ತೀಚಿನ ದಿನಗಳಲ್ಲಿ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಈ ಕಾರ್ಯಕ್ರಮಕ್ಕೆ ಪ್ರಾಶಸ್ತ್ಯ ಕಂಡು ಬರುತ್ತಿದೆ. ಯುನೆಸ್ಕೊದಿಂದ ಹಿಡಿದು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಈ ಬಗ್ಗೆ ಕಾಳಜಿ ವಹಿಸಲಾಗಿದೆ. ಈ ಕಾರ್ಯಕ್ರಮ ಅನುಷ್ಠಾನ ದಲ್ಲಿಯ ಸಮಸ್ಯೆಗಳನ್ನು ಗಣನೆಗೆ ತೆಗೆದು ಕೊಂಡಲ್ಲಿ ಇದಕ್ಕೆ ನಾವು ಹಾಕಿರುವ ನೆಲೆಗಟ್ಟು ಸಾಕಷ್ಟು ಭದ್ರವಾಗಿಲ್ಲ ವೆಂದೆನಿಸುತ್ತದೆ.

೩. **ಉದ್ದೇಶ :** ಸಾಕ್ಷರತೆ ವಯಸ್ಕರ ಶಿಕ್ಷಣದ ಒಂದು ಮುಖ್ಯ ಭಾಗ-ಓದಲು, ಬರೆಯಲು, ಹಾಗೂ ಎಣಿಸಲು ಅಗತ್ಯವಾಗಿ ಬೇಕಾದ ಜ್ಞಾನವನ್ನು ನೀಡುವುದೇ ಈ ಕ್ರಿಯಾತ್ಮಕ ಸಾಕ್ಷರತೆಯ ಮೂಲ ಉದ್ದೇಶ. ದೇಶವು ಅಭಿವೃದ್ಧಿ ಎಡೆಗೆ ದಾಪುಗಾಲನ್ನು ಇಟ್ಟು ಮುಂದುವರೆದಂತೆಲ್ಲಾ , ಸಾಕ್ಷರತೆಯ ಚೌಕಟ್ಟು ಕೂಡ ವಿಸ್ತಾರವಾಗುತ್ತಾ ಬಂದಿದೆ. ೧೯೫೦ರಲ್ಲಿ ''ಆರೋಗ್ಯ ಮತ್ತು ಸ್ವಾಸ್ಥ್ಯ'' ಸಾಕ್ಷರತೆಯ ಪ್ರಮುಖ ಉದ್ದೇಶವಾಗಿದ್ದರೆ, ನಂತರ ಜನಸಂಖ್ಯೆ ಸಮಸ್ಯೆ ಬಗ್ಗೆ ಪ್ರಜ್ಞೆ ಮೂಡಿಸುವುದು ಪ್ರಮುಖ ಭಾಗವಾಯಿತು. ಮೂರನೇ ವಿಶ್ವದ ದೇಶಗಳಾದ ಕ್ಯೂಬಾ, ನಿಕರಾಗುವ , ಬ್ರೆಜಿಲ್, ಪೆರು ಮತ್ತು ವಿಯಟ್ನಾಂಗಳಲ್ಲಿ ಆದ ರಾಜಕೀಯ ಹಾಗೂ ಸಾಮಾಜಿಕ ಬದಲಾವಣೆಗೆ ವಯಸ್ಕರ ಶಿಕ್ಷಣ ನಾಂದಿಯಾಯಿತು..ಸಾಮಾಜಿಕ, ರಾಜಕೀಯ, ಪರಿಸರ ಪ್ರಜ್ಞೆ ಹೀಗೆ ಅಗತ್ಯ ತಿಳುವಳಿಕೆ ನೀಡುವುದರ ಜೊತೆಗೆ ಉತ್ಪಾದನಾ ಹೆಚ್ಚಳದ ಬಗ್ಗೆ ಮಾಹಿತಿಯನ್ನು ವಯಸ್ಕರ ಶಿಕ್ಷಣ ಪಠ್ಯ ಕ್ರಮದಲ್ಲಿ ಸೇರಿಸಲಾಯಿತು. ವಯಸ್ಕರ ಶಿಕ್ಷಣವು ಅನಕ್ಷರಸ್ಥರನ್ನು ಮಾನವ ಸಂಪನ್ಮೂಲವಾಗಿ ಪರಿವರ್ತಿಸಿ, ಅವರನ್ನು ಕ್ರಿಯಾಶೀಲರ ನ್ನಾಗಿ ಮಾಡಿ ಉತ್ಪಾದನೆ ಹಾಗೂ ಆರ್ಥಿಕ ಅಭಿವೃದ್ಧಿಯಲ್ಲಿ ಹೆಚ್ಚಿನ ಪಾತ್ರವನ್ನು ವಹಿಸಲು ಸಹಾಯವಾಗುತ್ತಿದೆ. ಜನ ಅಕ್ಷರಸ್ಥರಾದಾಗ ಮಾತ್ರ ಸರ್ಕಾರದ ವಿಶೇಷ ಕಾರ್ಯಕ್ರಮಗಳಾದ ಪಂಚಾಯತ್ ರಾಜ್ ವ್ಯವಸ್ಥೆ ಅಥವಾ ಆಡಳಿತ ವಿಕೇಂದ್ರೀ ಕರಣ, ಚುಚ್ಚು ಮದ್ದು ಮತ್ತು ಪೌಷ್ಟಿಕ ಆಹಾರ ಕಾರ್ಯಕ್ರಮ, ತಾಯಿ ಮತ್ತು ಮಗುವಿನ ಆರೈಕೆ, ಮತೀಯ ಸೌಹಾರ್ದತೆ, ರಾಷ್ಟ್ರೀಯ ಭಾವೈಕ್ಯತೆ ಮುಂತಾದ ಕಾರ್ಯ ಕ್ರಮಗಳು ಹೆಚ್ಚು ಪರಿಣಾಮಕಾರಿಯಾಗುತ್ತಿದೆ.

೧೯೮೮ರ ರಾಷ್ಟ್ರೀಯ ಸಾಕ್ಷರತಾ ಮಿಷನ್, ಸಾಕ್ಷರತೆಯ ಉದ್ದೇಶವನ್ನು ಈ ಕೆಳಕಂಡಂತೆ ಸ್ಪಷ್ಟಪಡಿಸಿದೆ.

೧. ಸಾಕ್ಷರಸ್ಥನು ಅಕ್ಷರ ಮತ್ತು ಸಂಖ್ಯೆಗಳ ತಿಳುವಳಿಕೆಗಳಲ್ಲಿ ಸ್ವಾವಲಂಬಿಯಾಗುತ್ತಾನೆ.

೨. ಸೌಲತ್ತುಗಳು ತನಗೆ ಸಿಗದೆ ಇರುವು ದರ ಬಗ್ಗೆ ತಿಳುವಳಿಕೆ ಪಡೆದು ಅಭಿವೃದ್ಧಿ ಕಾರ್ಯಗಳಿಗಾಗಿ ನಡೆಯುವ ಸಾಮೂಹಿಕ ಪ್ರಯತ್ನಗಳಲ್ಲಿ ತನ್ನನ್ನು ತಾನು ತೊಡಗಿಸಿ ಕೊಳ್ಳುತ್ತಾನೆ.

೩. ತನ್ನ ಆರ್ಥಿಕ ಪರಿಸ್ಥಿತಿಯನ್ನು ಹಾಗೂ ಸಾಮಾನ್ಯ ಜನ ಜೀವನವನ್ನು ಉತ್ತಮ ಗೊಳಿಸಲು ಬೇಕಾದ ತಂತ್ರವನ್ನು ಬೆಳೆಸಿಕೊಳ್ಳು ತ್ತಾನೆ.

೪. ತನ್ನಲ್ಲಿ ರಾಷ್ಟ್ರೀಯ ಭಾವೈಕ್ಯತೆ , ಮತೀಯ ಸೌಹಾರ್ದತೆ, ಪರಿಸರ ಸಂರಕ್ಷಣೆ, ಮಹಿಳಾ ಸಮಾನತೆ, ಕುಟುಂಬ ಯೋಜನೆ ಮುಂತಾದ ರಾಷ್ಟ್ರೀಯ ಮೌಲ್ಯಗಳನ್ನು ಬೆಳೆಸಿ ಕೊಳ್ಳುತ್ತಾನೆ.

ವಯಸ್ಕರ ಶಿಕ್ಷಣದ ಉದ್ದೇಶವನ್ನು ಗಮನಿಸುವಾಗ ಅದನ್ನು ಕೇವಲ ಸಾಕ್ಷರತೆಗೆ ಮಾತ್ರ ಸೀಮಿತಗೊಳಿಸದೆ, ಅದಕ್ಕೆ ಇನ್ನೂ ಹೆಚ್ಚು ವ್ಯಾಪ್ತಿಯನ್ನು ನೀಡುವುದು ಅಗತ್ಯವಿದೆ. ಒಬ್ಬ ವ್ಯಕ್ತಿ ವೈಯಕ್ತಿಕವಾಗಿ, ಕುಟುಂಬದ ಸದಸ್ಯನಾಗಿ ಒಂದು ಗುಂಪು, ಒಂದು ಸಮುದಾಯ, ಒಂದು ಸಮಾಜ, ಒಂದು

ದೇಶ ಹಾಗೂ ವಿಶ್ವದ ಪ್ರಜೆಯಾಗಿ ತನ್ನ ಹಕ್ಕುಗಳನ್ನು ಚಲಾಯಿಸುವಲ್ಲಿ ಹಾಗೂ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅಳವಡಿಸಿಕೊಳ್ಳಬೇಕಾದ ಕಾರ್ಯ ವಿಧಾನದ ಬಗ್ಗೆ ಸ್ಪಷ್ಟ ತಿಳುವಳಿಕೆ ಪಡೆಯುವುದು ಇದರ ಮುಖ್ಯ ಉದ್ದೇಶವಾಗಿದೆ. ಸಮೂಹ ಮಾಧ್ಯಮಗಳ ಮೂಲಕ ಬದಲಾಗುತ್ತಿರುವ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಚಟುವಟಿಕೆಗಳ ಬಗ್ಗೆ ತಿಳುವಳಿಕೆ ಪಡೆದು ದೇಶದ ಆಗು-ಹೋಗುಗಳಲ್ಲಿ ಸಕ್ರಿಯ ಪಾತ್ರ ವಹಿಸುವುದು ವಯಸ್ಕರ ಶಿಕ್ಷಣದ ಘನ ಉದ್ದೇಶವಾಗಿದೆ. ಪ್ರಜಾಪ್ರಭುತ್ವ ಹೆಚ್ಚು ಪರಿಣಾಮಕಾರಿಯಾಗಲು ಸಾಕ್ಷರತೆ ಅತಿ ಮುಖ್ಯ. ಪ್ರಜಾಪ್ರಭುತ್ವ ಕೇವಲ ಒಂದು ಸರ್ಕಾರದ ರೂಪ ಮಾತ್ರವಲ್ಲ, ಅದೊಂದು ಪರಸ್ಪರ ವಿಚಾರ ವಿನಿಮಯ ಹಾಗೂ ಸಹಕಾರದಿಂದ ರೂಪುಗೊಂಡ ಸಾಮೂಹಿಕ ಬದುಕಿನ ಒಂದು ವ್ಯವಸ್ಥೆ. ವಯಸ್ಕರನ್ನು ಸಾಕ್ಷರರನ್ನಾಗಿ ಮಾಡುವುದು ಇಂತಹ ಪ್ರಜಾಪ್ರಭುತ್ವ ವ್ಯವಸ್ಥೆ ಸುವ್ಯವಸ್ಥಿತವಾಗಿ ನಡೆಯಲು ಅತ್ಯಾವಶ್ಯಕ. ಹಾಗಿದ್ದಲ್ಲಿ ಅವರು ತಮ್ಮ ಸಮಸ್ಯೆಗಳನ್ನು ಬಗೆಹರಿಸಲು ಕೇವಲ ಸರ್ಕಾರದ ಹೊರೆ ಹೊಕ್ಕುವುದನ್ನು ಬಿಟ್ಟು ತನ್ನ ಕಾಲ ಮೇಲೆ ತಾವು ನಿಲ್ಲುವುದನ್ನು ಕಲಿಯುತ್ತಾರೆ.

೫. ಕಾರ್ಯವಿಧಾನ : ಕೇರಳ ರಾಜ್ಯದ ಕೊಟ್ಟಾಯಂ ಮತ್ತು ಎರ್ನಾಕುಲಂ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ನಡೆಸಿದ ಸಮೂಹ ಸಾಕ್ಷರತಾ ಪ್ರಚಾರದಿಂದಾಗಿ ನೂರಕ್ಕೆ ನೂರು ಸಾಕ್ಷರತೆಯನ್ನು ಗಳಿಸುವಲ್ಲಿ ಆದ ಯಶಸ್ಸಿನಿಂದಾಗಿ ದೇಶದ ಎಲ್ಲೆಡೆ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಬಹಳ ಉತ್ಸಾಹ ಕಂಡು ಬರುತ್ತಿದೆ. ಈ ವಿಶೇಷ ಆಂದೋಲನ ಕಾರ್ಯಕ್ರಮದಲ್ಲಿ ೯ರಿಂದ ೩.೫ ವರ್ಷ ವಯಸ್ಸಿನ ಅನಕ್ಷರಸ್ಥರನ್ನು ಗುರುತಿಸಿ, ಅವರನ್ನು ಅಕ್ಷರಸ್ಥರನ್ನಾಗಿ ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕರ್ನಾಟಕದಲ್ಲಿ ದಕ್ಷಿಣ ಕನ್ನಡ, ಬಿಜಾಪುರ , ಮಂಡ್ಯ, ಶಿವಮೊಗ್ಗ, ರಾಯಚೂರು ಮುಂತಾದ ಅನೇಕ ಜಿಲ್ಲೆಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಕೈಗೆತ್ತಿ ಕೊಂಡಿದ್ದು, ಇದರಲ್ಲಿ ಗಣನೀಯ ಸಾಧನೆಯನ್ನು ಮಾಡಲಾಗಿದೆ. ಯೋಜನೆಯ ವಿಕೇಂದ್ರೀಕರಣ, ಸ್ವಯಂ ಸೇವೆಯ ಮೇಲಿನ ಪೂರ್ಣಾವಲಂಬನೆ, ವಿದ್ಯಾವಂತರನ್ನು ಹಾಗೂ ಜನಸಾಮಾನ್ಯರನ್ನು ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳುವುದು, ಪ್ರಾದೇಶಿಕತೆಗೆ ಹೊಂದಿಕೊಳ್ಳುವ ಹಾಗೂ ಬದಲಾವಣೆಗೆ ಅವಕಾಶವಿರುವ ಕಲಿಕೆ ವಸ್ತುಗಳ ಉಪಯೋಗ ಮತ್ತು ಕಡಿಮೆ ವೆಚ್ಚ -ಇವು ಈ ವಿಶೇಷ ಆಂದೋಲನ ಕಾರ್ಯಕ್ರಮಗಳ ಮುಖ್ಯ ಲಕ್ಷಣಗಳು. ಸಾಕ್ಷರತಾ ಕೇಂದ್ರಗಳ ಮೂಲಕ ನಡೆಸುವ ಕಾರ್ಯ ಕ್ರಮಗಳು ಕಡಿಮೆ ವ್ಯಾಪ್ತಿಯನ್ನು ಹೊಂದಿದ್ದು ಮತ್ತು ಸಂಪ್ರದಾಯಬದ್ಧವಾಗಿದ್ದು, ಹೆಚ್ಚು ಸಮಯವನ್ನು ತೆಗೆದುಕೊಳ್ಳುವ ಒಂದು ಕಾರ್ಯ ವಿಧಾನ; ಅಲ್ಲದೆ, ಇವುಗಳು ನೀಡುವ ಫಲಿತಾಂಶದ ದೃಷ್ಟಿಯಿಂದ ಹಾಗೂ ಇವುಗಳನ್ನು ನಡೆಸಲು ಆಗುವ ತೊಂದರೆಯ ದೃಷ್ಟಿಯಿಂದ ಇವು ಹೆಚ್ಚು ಜನ ಮನ್ನಣೆಯನ್ನು ಪಡೆದಿಲ್ಲ. ಹಾಗಾಗಿ ಇಂತಹ ಕೇಂದ್ರಗಳಿಗೆ ಬದಲಾಗಿ ಸಾಮೂಹಿಕ ಆಂದೋಲನಗಳು ಹೆಚ್ಚು ಜನ ಜನಪ್ರಿಯ ಹಾಗೂ ಫಲಪ್ರದವಾಗುತ್ತಿವೆ. ಅಂದ ಮಾತ್ರಕ್ಕೆ ಈ ಆಂದೋಲನ ಕಾರ್ಯಕ್ರಮದಲ್ಲಿ ಲೋಪದೋಷಗಳಿಲ್ಲವೆಂದಲ್ಲ, ಕೆಲವು ಸಾರಿ ಪ್ರಚಾರಕ್ಕೆ ಹೆಚ್ಚು ಆದ್ಯತೆ ಸಿಕ್ಕಿ, ಕಾರ್ಯಕ್ರಮವನ್ನು ನಿಜವಾಗಿ ಜಾರಿಗೊಳಿಸುವಲ್ಲಿ ಹೆಚ್ಚು ಶ್ರದ್ಧೆ ಕಂಡು ಬರುತ್ತಿಲ್ಲ. ಅಲ್ಲದೆ ಸ್ವಯಂಸೇವಕರ ಮೇಲೆ ಹೆಚ್ಚು ಅವಲಂಬನೆಯಿಂದಾಗಿ ನಿಗದಿತ ಗುರಿ ಮುಟ್ಟುವಲ್ಲಿ ಸಫಲತೆ ಕಾಣದೆ ಹೋಗಬಹುದು. ಇದೆಲ್ಲ ಕುಂದುಕೊರತೆ ಇದ್ದಾಗ್ಯೂ, ಸಧ್ಯದ ಮಟ್ಟಿಗೆ

ವಿಶೇಷ ಪ್ರಚಾರ ಆಂದೋಲನ ಹೆಚ್ಚಿನ ಸಾಧನೆ ಮಾಡಿದೆ.

೬. ರಾಷ್ಟ್ರೀಯ ಸಾಕ್ಷರತಾ ಮಿಷನ್ : ೧೯೮೮ರ ಮೇ ೫ ರಂದು ರಾಷ್ಟ್ರೀಯ ಸಾಕ್ಷರತಾ ಮಿಷನ್ (ಎನ್.ಎಲ್.ಎಂ.)ನ್ನು ಪ್ರಾರಂಭಿಸಲಾಯಿತು. ಈ ರಾಷ್ಟ್ರೀಯ ಸಾಕ್ಷರತಾ ಮಿಷನ್‌ನ ಮುಖ್ಯ ಉದ್ದೇಶವೆಂದರೆ; ೧೫ ರಿಂದ ೩೫ ವರ್ಷದ ವಯೋಮಿತಿಯ ಒಳಗಿರುವ ದೇಶದ ೮೦ ಮಿಲಿಯ ಅನಕ್ಷರಸ್ಥರನ್ನು ಕ್ರಿಯಾತ್ಮಕ ಸಾಕ್ಷರತಾ ಯೋಜನೆಯಲ್ಲಿ ಅಳವಡಿಸುವುದು. ಇದಕ್ಕಾಗಿ ೨ ಹಂತದಲ್ಲಿ ಗುರಿಯನ್ನು ಇಟ್ಟಿದ್ದು, ೧೯೯೦ರ ಒಳಗೆ ೩೦ ಮಿಲಿಯ ಅನಕ್ಷರಸ್ಥರನ್ನು ಹಾಗೂ ೧೯೯೫ರ ಒಳಗೆ ಉಳಿದ ೫೦ ಮಿಲಿಯ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸುವುದು.

ಅ) ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕಾಗಿ ಮೀಸಲಾಗಿರುವ ಹಣಕಾಸಿನ ವ್ಯವಸ್ಥೆ ಹಾಗೂ ರಾಜ್ಯ ಮತ್ತು ದೇಶದಲ್ಲಿ ಅನಕ್ಷರಸ್ಥರ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡಾಗ ಈಗ ಕೈಗೆತ್ತಿಕೊಂಡಿರುವ ಸಮೂಹ ಸಾಕ್ಷರತಾ ಕಾರ್ಯಕ್ರಮ ಎಲ್ಲೋ ಒಂದು ಮೂಲೆಯನ್ನು ಮಾತ್ರ ಮುಟ್ಟಬಲ್ಲದ್ದಾಗಿದೆ. ಉದಾ: ಕಳೆದ ೧೦ ವರ್ಷಗಳಲ್ಲಿ ರಾಜ್ಯದಲ್ಲಿ ಶಿಕ್ಷಣಕ್ಕಾಗಿ ಮೀಸಲಿಟ್ಟ ಆಯವ್ಯಯದ ಶೇ.೧ರಷ್ಟನ್ನು ಮಾತ್ರ ವಯಸ್ಕರ ಶಿಕ್ಷಣಕ್ಕಾಗಿ ನೀಡಲಾಗಿದೆ. ಅದೇ ರೀತಿ ೧೯೮೧ರ ಈಚೆಗೆ ಪ್ರತಿ ವರ್ಷ ಶೇ.೫ರಷ್ಟು ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿಸಲು ಕೂಡ ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ವಯಸ್ಕರ ಶಿಕ್ಷಣವಿನ್ನೂ ತನ್ನ ಗುರಿ ಸಾಧಿಸಲು ಅನೇಕ ವರ್ಷಗಳೇ ಬೇಕಾಗಬಹುದು. ಅಲ್ಲದೆ, ರಾಷ್ಟ್ರೀಯ ಸೇವಾ ಯೋಜನೆಯ ಮೂಲಕವಾಗಿ ಅನುಷ್ಠಾನಗೊಳಿಸುತ್ತಿರುವ ಸಾಮೂಹಿಕ ಕ್ರಿಯಾತ್ಮಕ ಸಾಕ್ಷರತಾ ಯೋಜನೆಯನ್ನಾಗಲೀ ಅಥವಾ ಸ್ವಯಂ ಸೇವಾ ಸಂಸ್ಥೆಗಳ ಮೂಲಕವಾಗಿ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳಾಗಲೀ, ಇವ್ಯಾವುಗಳಿಂದಲೂ ನಿಗದಿತ ೫-೧೦ ವರ್ಷಗಳಲ್ಲಿ ಸಂಪೂರ್ಣ ಸಾಕ್ಷರತೆಯನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ, ಸಮಸ್ಯೆಯ ಆಳವನ್ನು ಅರ್ಥ ಮಾಡಿಕೊಂಡು ಒಂದು ನಿಗದಿತ ಅವಧಿಯಲ್ಲಿ ಗುರಿ ಸಾಧಿಸಲು ಬೇಕಾದ ಬೇರೆ ಮಾರ್ಗೋಪಾಯವನ್ನು ಹುಡುಕುವುದು ಅಗತ್ಯ. ಇದಕ್ಕೆ ಸಮೂಹ ಆಂದೋಲನ ಕಾರ್ಯಕ್ರಮ ಒಂದು ಉತ್ತರವಾಗಬಹುದು. ಸಮಾಜದ ಎಲ್ಲಾ ಶಕ್ತಿಗಳನ್ನು ಕ್ರೋಢೀಕರಿಸಿ, ಒಂದು ಹೋರಾಟವಾಗಿ ಇದನ್ನು ಕೈಗೆತ್ತಿಕೊಂಡು ಆ ದೆಸೆಯಲ್ಲಿ ಮುನ್ನುಗ್ಗಿದಾಗ ಮಾತ್ರ ಗುರಿ ಸಾಧನೆ ಸಾಧ್ಯ.

ಆ) ರಾಷ್ಟ್ರೀಯ ಸಾಕ್ಷರತಾ ಮಿಷನ್‌ನಿನ ದಾಖಲೆಗಳ ಮೂಲಕ ತಿಳಿಯುವುದೇನೆಂದರೆ, ಪ್ರಾಥಮಿಕ ಶಿಕ್ಷಣದ ಗುರಿಯನ್ನು ಮುಟ್ಟುವವರೆಗೆ ಅಂದರೆ, ೧೪ ವರ್ಷ ವಯಸ್ಸಿನ ಒಳಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಕಾರ್ಯಕ್ರಮ ಸಫಲವಾಗುವವರೆಗೂ ೧೫ ರಿಂದ ೩೫ ವರ್ಷ ವಯೋಮಿತಿಯ ಅನಕ್ಷರಸ್ಥರ ಪಟ್ಟಿಗೆ ಹೊಸ ಅನಕ್ಷರಸ್ಥರು ಬಂದು ಸೇರುವುದನ್ನು ತಪ್ಪಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ, ಕಡ್ಡಾಯ ಶಿಕ್ಷಣ ಕಾರ್ಯಕ್ರಮವನ್ನು ಹೆಚ್ಚು ಶ್ರದ್ಧೆಯಿಂದ ಅನುಷ್ಠಾನಗೊಳಿಸುವುದು ಈ ದೃಷ್ಟಿಯಿಂದ ಅಗತ್ಯ. ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ನೀಡಿದ್ದಾಗ್ಯೂ ಪ್ರಾಥಮಿಕ ಹಂತದಲ್ಲಿ (ಕರ್ನಾಟಕದಲ್ಲಿ ೧ ರಿಂದ ೯ನೇ ತರಗತಿಯವರೆಗೆ ಹಾಜರಾತಿ ಹೆಚ್ಚು ಉತ್ತೇಜನಕಾರಿಯಾಗಿಲ್ಲ) ವಿವಿಧ ಹಂತದಲ್ಲಿ ನಡೆದ ಅಧ್ಯಯನದ ಪ್ರಕಾರ ಪ್ರಾಥಮಿಕ ಮಟ್ಟದಲ್ಲಿ ಹಾಜರಾತಿ ಇನ್ನೂ ಶೇ. ೮೫ರ ಮಟ್ಟವನ್ನು ದಾಟಿಲ್ಲ. ಹಾಗೂ ನಡುಮಧ್ಯದಲ್ಲಿ ಶಾಲೆಯನ್ನು ಬಿಡುವವರ ಸಂಖ್ಯೆ ಗಣನೀಯವಾಗಿ ಹೆಚ್ಚಿತು.

ಈ ಹಂತದಲ್ಲಿ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸಲು ಅಗತ್ಯವಾದಂತಹ ಸಿಬ್ಬಂದಿ ಸಲಕರಣೆ ಮುಂತಾದುವನ್ನು ಹೆಚ್ಚಿಸಿದ್ದಾಗ್ಯೂ ಪ್ರಯತ್ನ ಸಫಲವಾಗದೆ ಇರುವುದು ಕಂಡು ಬರುತ್ತದೆ. ಸಾಕ್ಷರರ ಸಂಖ್ಯೆ ಹೆಚ್ಚಿದಂತೆಲ್ಲ ಅನಕ್ಷರಸ್ಥರ ಪಟ್ಟಿಯೂ ಬೆಳೆಯುತ್ತಿದೆ. ಹಾಗಾಗಿ ೧೫-೩೫ ರ ವಯೋಮಿತಿಯ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿಸಲು ಎಷ್ಟೇ ಪ್ರಯತ್ನ ಮಾಡಿದ್ದಾಗ್ಯೂ, ಆ ಪಟ್ಟಿಗೆ ಹೊಸದಾಗಿ ಸೇರುವವರಿಂದಾಗಿ ಪ್ರಯತ್ನ ಫಲಕಾರಿಯಾಗುತ್ತಿಲ್ಲ.

ಇ) ಔಪಚಾರಿಕ ಶಿಕ್ಷಣ ಪದ್ಧತಿಯಲ್ಲಿ ಶಿಕ್ಷಣದ ಗುಣಮಟ್ಟವನ್ನು ವೃದ್ಧಿಸಿ, ಬಲಪಡಿಸುವುದು ಅಪೇಕ್ಷಣೀಯವೇ ಹೊರತು ಅದನ್ನು ಇನ್ನು ಹೆಚ್ಚು ವಿಸ್ತಾರಗೊಳಿಸುವುದಲ್ಲ. ಅಲ್ಲದೆ, ರಾಷ್ಟ್ರೀಯ ಶಿಕ್ಷಣ ನೀತಿಯು ಒಳ್ಳೆಯ ಯೋಜನಾ ಬದ್ಧವಾದ ಅನೌಪಚಾರಿಕ ಶಿಕ್ಷಣ ಕ್ರಮಕ್ಕೆ ಒತ್ತಾಸೆ ನೀಡುತ್ತದೆ. ಇದು ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳಿಗೆ ಹಾಗೂ ಶಾಲೆಗೆ ದಾಖಲಾಗದೆ ಇರುವ ಮಕ್ಕಳು ಅದರಲ್ಲೂ ಮುಖ್ಯವಾಗಿ ಹುಡುಗಿಯರ ಹಾಗೂ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಕ್ಕಳಿಗೆ ಅಗತ್ಯವಾದ ಶಿಕ್ಷಣವನ್ನು ನೀಡುವುದರ ಬಗ್ಗೆ ಒತ್ತಿ ಹೇಳುತ್ತದೆ. ಇದಕ್ಕೆ ಸಂಬಂಧಿಸಿದ ಶಿಕ್ಷಣ ಕಾರ್ಯಕ್ರಮ ಹೆಚ್ಚು ಗಮನ ಹರಿಸಿದಂತಿಲ್ಲ. ೧೪ ವರ್ಷ ಒಳಗಿನ ಮಕ್ಕಳಿಗೆ (ಔಪಚಾರಿಕ ಶಿಕ್ಷಣದಿಂದ ವಂಚಿತರಾಗಿರುವವರಿಗೆ) ಯೋಜನಾ ಬದ್ಧವಾದ ಹಾಗೂ ಹೆಚ್ಚು ಸತ್ವಯುತವಾದ ಅನೌಪಚಾರಿಕ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರದೆ ಇದ್ದಲ್ಲಿ, ವಯಸ್ಕರ ಶಿಕ್ಷಣ ಹೆಚ್ಚು ಪರಿಣಾಮಕಾರಿಯಾಗಲಾರದು.

ಈ) ರಾಷ್ಟ್ರೀಯ ಸಾಕ್ಷರತಾ ಮಿಷನ್ ಒಂದು ಸಾಮಾಜಿಕ ಕಾರ್ಯಕ್ರಮ. ಇದರ ಅನುಷ್ಠಾನದಲ್ಲಿ ಎಲ್ಲಾ ಹಂತದಲ್ಲೂ ರಾಜಕೀಯ ಇಚ್ಛಾಶಕ್ತಿ ಅಗತ್ಯ. ಸಾಮಾಜಿಕ ಶಕ್ತಿಗಳನ್ನು ಕ್ರೋಢೀಕರಿಸಿ, ಈ ಬಗ್ಗೆ ಕಾರ್ಯಪ್ರವೃತ್ತರಾಗುವಂತೆ ಒಂದು ರೀತಿಯ ರಾಷ್ಟ್ರೀಯ ಸದಭಿಪ್ರಾಯವನ್ನು ಮೂಡಿಸಬೇಕಾದುದು ಅಗತ್ಯ. ಸಾಕ್ಷರತೆ ಜನರ ಬದುಕಿನಲ್ಲಿ ಹಾಗೂ ಕಾರ್ಯವಿಧಾನದಲ್ಲಿ ಗುಣಾತ್ಮಕ ಬದಲಾವಣೆಯನ್ನು ಮೂಡಿಸುವಂತಾಗಬೇಕು. ರಾಜಕೀಯ ಇಚ್ಛಾಶಕ್ತಿ ಬೇಕು ಅಂದಾಗ ಕೇವಲ ಆಗೊಮ್ಮೆ ಈಗೊಮ್ಮೆ ಸಾಕ್ಷರತೆಯ ಬಗ್ಗೆ ಹೇಳಿಕೆ ನೀಡಿದರೆ ಮಾತ್ರ ಸಾಲದು. ಎಲ್ಲ ರಾಜಕೀಯ ಶಕ್ತಿಗಳ ಕ್ರೋಢೀಕೃತ ಪ್ರಯತ್ನ ಅಗತ್ಯ. ಈ ವಿವಿಧೋದ್ದೇಶ ಸಾಕ್ಷರತಾ ಮಿಷನ್‌ಗೆ ಚುರುಕಾದ ಹಾಗೂ ಪ್ರಬಲವಾದ ಕ್ರಿಯಾ ಶಕ್ತಿಯ ಅಗತ್ಯ ಇದೆ. ರಾಜಕೀಯ ನಾಯಕತ್ವ ಇದನ್ನು ಗಣನೆಗೆ ತೆಗೆದುಕೊಂಡು ತಮ್ಮ ಆದ್ಯತೆಗಳನ್ನು ಸ್ಪಷ್ಟವಾಗಿ ನಿರೂಪಿಸಬೇಕು. ನಮ್ಮ ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಗೆ ಮೂಲ ಕಾರಣ ಅನಕ್ಷರತೆಯಲ್ಲಿ ಅಡಗಿದೆ ಎಂಬ ಅರಿವು ಮೂಡುವವರೆಗೂ ಸರ್ಕಾರದ ಆದ್ಯತೆ ಬಗ್ಗೆ ಸ್ಪಷ್ಟ ಅಭಿಪ್ರಾಯ ಮೂಡುವುದಿಲ್ಲ. ಆರ್ಥಿಕ ಮತ್ತು ಸಾಮಾಜಿಕ ಏರುಪೇರುಗಳು ಎದ್ದು ಕಾಣುವ ಭಾರತದಂತಹ ದೇಶದಲ್ಲಿ ಈ ಬಗ್ಗೆ ಚರ್ಚೆ ದೀರ್ಘವಾಗಿ ಆಗಬೇಕಾದ ಅಗತ್ಯ ಇದೆ.

ಉ) ಪರಿಸರ, ಆಡಳಿತ, ತರಬೇತಿ, ಮೌಲ್ಯಮಾಪನ, ಬೋಧನೆ, ನಿಯಂತ್ರಣ ಮುಂತಾದ ಕ್ಷೇತ್ರದಲ್ಲಿ ವಯಸ್ಕರ ಶಿಕ್ಷಣದಲ್ಲಿ ಕೆಲವೊಂದು ತೊಡಕುಗಳು ಇದ್ದು, ಇವುಗಳ ನಿವಾರಣೆಗೆ ಪ್ರಸುತ್ತ ಇರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಕಾರ್ಯಕ್ರಮವನ್ನು ಮುಂದುವರೆಸಿಕೊಂಡು ಹೋದಂತೆಲ್ಲಾ ಹೊಸ ಹೊಸ ದಾರಿ ಗೋಚರಿಸುತ್ತಾ ಹೋಗುತ್ತದೆ. ರಾಷ್ಟ್ರೀಯ ಸಾಕ್ಷರತಾ ಮಿಷನ್ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಉದ್ದೇಶ

ಹಾಗೂ ಸಾಧನಾ ಕ್ರಮವನ್ನು ಸ್ಪಷ್ಟಪಡಿಸಿದ್ದಾಗ್ಯೂ ಅದರ ಗುರಿ ತಲುಪಲು ಹಿಂದಿನದನ್ನು ಮುಂದುವರಿಸಿಕೊಂಡು ಹೋಗುವ ಅಗತ್ಯವೂ ಇದೆ. ರಾಷ್ಟ್ರೀಯ ಸಾಕ್ಷರತಾ ಮಿಷನ್ ಕೆಲವೊಂದು ತೊಡಕುಗಳನ್ನು ತಿದ್ದಿ ಅದರಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ಹೋಗುವ ಮಾರ್ಗ ತೋರಿದ್ದಾಗ್ಯೂ ಕೂಡ ಈ ಚಳುವಳಿ ಬಗ್ಗೆ ಸ್ವಾತಂತ್ರ್ಯ ಚಳುವಳಿಗೆ ಸಿಕ್ಕಿದ ಬೆಂಬಲದ ರೀತಿ ಜನ ಬೆಂಬಲ ಇನ್ನೂ ಕೆಲವು ಇದನ್ನು ಸಂಪೂರ್ಣವಾಗಿ ತಿರಸ್ಕರಿಸಿವೆ. ಈ ರೀತಿಯ ಪ್ರವೃತ್ತಿಯನ್ನು ಆಶಾದಾಯಕವಾಗಿ ಬದಲಾಯಿಸುವುದು ಹೇಗೆ ಎನ್ನುವುದು ಮುಖ್ಯ ಪ್ರಶ್ನೆ.

ಊ) ವಯಸ್ಕರ ಶಿಕ್ಷಣದ ಕಾರ್ಯಕ್ರಮ ಅನುಷ್ಠಾನ ಮಾಡಿದಾಗ ಕಂಡು ಬಂದ ಕೆಲವೊಂದು ವಿಚಾರಗಳು ಹೀಗಿವೆ:

ಕ) ವಯಸ್ಕರ ಶಿಕ್ಷಣ ಕಾರ್ಯಕ್ರಮ ಅನುಷ್ಠಾನಕ್ಕೆ ರಾಜ್ಯ ಮಟ್ಟದಿಂದ ಹಳ್ಳಿಯ ಮಟ್ಟದವರೆಗೆ ಆದೇಶ ಜಾರಿಗೆ ಅಗತ್ಯ ಆಡಳಿತ ವ್ಯವಸ್ಥೆ ಇರಬೇಕು. ಹಳ್ಳಿಯಲ್ಲಿ ಈ ಕಾರ್ಯಕ್ರಮದ ಅಗತ್ಯದ ಅರಿವಿನ ಮೇರೆಗೆ ಸ್ಥಳೀಯ ವ್ಯವಸ್ಥೆ ಹುಟ್ಟಿಕೊಂಡಾಗ್ಯೂ, ಕಾರ್ಯಕ್ರಮವನ್ನು ಸುವ್ಯವಸ್ಥಿತವಾಗಿ ಜಾರಿಗೊಳಿಸಲು ಆಡಳಿತ ವ್ಯವಸ್ಥೆ ಅಗತ್ಯ. ರಾಷ್ಟ್ರೀಯ ಸಾಕ್ಷರತಾ ಮಿಷನ್‌ನಲ್ಲಿ ರಾಜ್ಯ ಸಾಕ್ಷರತಾ ಮಿಷನ್ ರಚನೆ ಬಗ್ಗೆ ಮತ್ತು ಅದಕ್ಕೆ ಅಗತ್ಯ ಆರ್ಥಿಕ ಮತ್ತು ಕಾರ್ಯನಿರ್ವಾಹಕ ಅಧಿಕಾರ ಕೊಟ್ಟಾಗ್ಯೂ ಕೂಡ ಅನೇಕ ರಾಜ್ಯಗಳು ಇನ್ನೂ ಅದನ್ನು ಸ್ಥಾಪನೆ ಮಾಡಿಲ್ಲ. ರಾಜ್ಯ ಮಟ್ಟದಲ್ಲಿ ಇಂತಹ ಒಂದು ಕಾರ್ಯಭಾರದ ಅಗತ್ಯವಿದೆ. ಏಕೆಂದರೆ, ಪ್ರಮುಖ ತೀರ್ಮಾನಗಳನ್ನು ಇತರ ಅಭಿವೃದ್ಧಿ ಕಾರ್ಯಗಳ ಜೊತೆ ಹೊಂದಿಕೊಳ್ಳುವಂತೆ ತೆಗೆದುಕೊಂಡು ಕಾರ್ಯಕ್ರಮವನ್ನು ಶೀಘ್ರವಾಗಿ ಅನುಷ್ಠಾನಗೊಳಿಸಬಹುದಾಗಿದೆ.

ಖ) ವಯಸ್ಕರ ಶಿಕ್ಷಣದ ಕಾರ್ಯಕ್ರಮ ಕೆಲಸ ಮಾಡುವ ಸಿಬ್ಬಂದಿಯನ್ನು ಕಾರ್ಯಕ್ರಮಗಳಿಗೆ ನಿಯುಕ್ತಿಗೊಳಿಸುವಾಗ ಅವರ ಅರ್ಹತೆಯ ಬಗ್ಗೆ ಪರಿಶೀಲನೆ ಅಗತ್ಯ. ನಿರ್ದೇಶನಾಲಯದಲ್ಲಿರುವ ಹಿರಿಯ ಅಧಿಕಾರಿಗಳು, ಜಿಲ್ಲಾ ವಯಸ್ಕರ ಶಿಕ್ಷಣ ಅಧಿಕಾರಿಗಳು, ಯೋಜನಾ ಅಧಿಕಾರಿಗಳು, ಸಹಾಯಕ ಯೋಜನಾ ಅಧಿಕಾರಿಗಳು ಇವರುಗಳ ನೇಮಕಾತಿಯ ಸಂದರ್ಭಗಳಲ್ಲಿ, ಅವರಲ್ಲಿ ಈ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಇರಬೇಕಾದ ಕಾಳಜಿ, ಶ್ರದ್ಧೆ ಮತ್ತು ಪ್ರತಿಭೆ ಇದೆಯೇ ಎಂದು ನೋಡುವುದು ಅಗತ್ಯ. ಹಾಗಿದ್ದಲ್ಲಿ ಮಾತ್ರ ಕಾರ್ಯಕ್ರಮ ಹೆಚ್ಚು ಶ್ರದ್ಧಾಪೂರ್ವಕವಾಗಿ ಅನುಷ್ಠಾನಗೊಳ್ಳುವುದು.

ಗ) ವಯಸ್ಕರ ಶಿಕ್ಷಣದ ಮುಂದುವರಿಕೆಗಾಗಿ ಜನ ಶಿಕ್ಷಣ ನಿಲಯಗಳನ್ನು ಸ್ಥಾಪಿಸಿದ್ದರೂ ಕೂಡ ಇವು ಇನ್ನೂ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಹಾಗೂ ಅನೇಕ ರಾಜ್ಯಗಳಲ್ಲಿ ಇವು ಅಸ್ತಿತ್ವಕ್ಕೆ ಬಂದಿಲ್ಲ. ಈ ಬಗ್ಗೆ ಜನ ಶಿಕ್ಷಣ ನಿಲಯಗಳು ವಯಸ್ಕರ ಶಿಕ್ಷಣ ಕಾರ್ಯಕ್ರಮದ ಉತ್ತರಾಧಿಕಾರಿಯಾಗಿ ಕಾರ್ಯನಿರ್ವಹಿಸುವುದಲ್ಲದೆ, ಗ್ರಾಮೀಣ ಪ್ರದೇಶದ ಸಮಸ್ತ ಬಡ ಜನರ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಪ್ರಮುಖ ಪಾತ್ರವಹಿಸುವಂತೆ ನೋಡಿಕೊಳ್ಳುವ ಪ್ರಯತ್ನ ನಡೆಯುತ್ತಿದೆ.

ಘ) ವಯಸ್ಕರ ಶಿಕ್ಷಣ ಕಾರ್ಯಕ್ರಮದ ಕಾರ್ಯನಿರ್ವಾಹಕರಿಗೆ ಆಗಿಂದಾಗ್ಗೆ ತರಬೇತಿ ನೀಡುವುದು ಅಗತ್ಯ. ಈ ತರಬೇತಿ ವ್ಯವಸ್ಥೆಯನ್ನು ವಿಕೇಂದ್ರೀಗೊಳಿಸಬೇಕು. ಹಳ್ಳಿ, ಮಂಡಲ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಉತ್ತಮ ತರಬೇತಿ ನೀಡುವ ಸಂಸ್ಥೆಗಳನ್ನು ಹಾಗೂ ವ್ಯಕ್ತಿಗಳನ್ನು ಗುರುತಿಸಿ ಇವುಗಳು ರಾಜ್ಯ ಸಂಪನ್ಮೂಲ ಕೇಂದ್ರದ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುವಂತೆ ನೋಡಿಕೊಳ್ಳುವುದು ಅಗತ್ಯ. ತರಬೇತಿಯನ್ನು ನೀಡುವಾಗ ಇತರ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವ ವಿಚಾರವನ್ನು ಕೂಡ ಅಳವಡಿಸಬೇಕು.

ಚ) ಸಾಕ್ಷರತಾ ಮಿಷನ್ ಸ್ವಯಂ ಸೇವಾ ಸಂಸ್ಥೆಗಳ ಪಾತ್ರಗಳ ಬಗ್ಗೆ ಹೆಚ್ಚು ಒತ್ತು

ನೀಡಿದ್ದರೂ ಕೂಡ, ಸಾಮಾಜಿಕ ಬದಲಾವಣೆಯಲ್ಲಿ ಸಾಕ್ಷರತೆಯು ವಹಿಸುವ ಪ್ರಮುಖ ಪಾತ್ರದ ಬಗ್ಗೆ ಇವುಗಳು ಮನಗೊಂಡು ಆ ಬಗ್ಗೆ ಹೆಚ್ಚು ಒತ್ತಾಸೆಯನ್ನು ನೀಡುವುದು ಅಗತ್ಯ. ಇಂತಹ ಸಂಸ್ಥೆಗಳಿಗೆ ಅವರು ಮಾಡಿರುವ ಕೆಲಸದ ಆಧಾರದ ಮೇಲೆ ಅಗತ್ಯ ಮನ್ನಣೆ ನೀಡಬೇಕು ಹಾಗೂ ಜಿಲ್ಲಾ ಮತ್ತು ರಾಜ್ಯ ಕಾರ್ಯನಿರ್ವಾಹಕ ಸಮಿತಿಗಳಲ್ಲಿ ಇವರುಗಳು ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು.

ಛ) ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ಇತರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸೇರಿಸಿಕೊಂಡು, ಬೇರೆ ಅಭಿವೃದ್ಧಿ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳು, ಈ ಕಾರ್ಯಕ್ರಮದ ಬಗ್ಗೆಯೂ ಒಂದು ಉತ್ತಮ ಅಭಿಪ್ರಾಯವನ್ನು ಹೊಂದಿರುವಂತೆ ನೋಡಿಕೊಳ್ಳುವುದು ಅಗತ್ಯ. ಫಲಿತಾಂಶ ಆಧಾರಿತ ಪ್ರಯತ್ನ ಎಲ್ಲಾ ಅಭಿವೃದ್ಧಿ ಕ್ಷೇತ್ರಗಳಲ್ಲೂ ಮೂಡಿ ಬರಬೇಕು.

ರಾಷ್ಟ್ರೀಯ ಸಾಕ್ಷರತಾ ಮಿಷನ್ನ ಸ್ಥಾಪನೆಯ ನಂತರ ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕೆ ಒಂದು ಹೊಸ ಆಯಾಮ ನೀಡಿದಂತಾಗಿದೆ. ಈ ಬಗ್ಗೆ ಈಗಿರುವ ಹುರುಪು ಹಾಗೂ ಇಟ್ಟಿರುವ ದಿಟ್ಟ ಹೆಜ್ಜೆ ಹೀಗೆಯೇ ಮುಂದುವರೆದುಕೊಂಡು ಹೋಗಬೇಕು. ರಾಷ್ಟ್ರೀಯ ಸಾಕ್ಷರತಾ ಮಿಷನ್ ಇಟ್ಟುಕೊಂಡಿರುವ ವಿಸ್ತಾರವಾದ ಕ್ಷೇತ್ರ ಹಾಗೂ ನಿಗದಿತ ಗುರಿಯನ್ನು ಮುಟ್ಟಲು ಆಯಾ ಪ್ರದೇಶಗಳಿಗೆ ಹೊಂದಿಕೊಳ್ಳುವಂತೆ ಅಗತ್ಯ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕು. ಇಷ್ಟೆಲ್ಲ ಹೇಳಿದ ನಂತರ ವಯಸ್ಕರ ಶಿಕ್ಷಣದ ದೊಡ್ಡ ತತ್ವಜ್ಞಾನಿಯಾದ ಎಡ್ವರ್ಡ್ ಲಿಂಡ್ ಮ್ಯಾನ್‌ರವರ ಮಾತುಗಳನ್ನು ಉದ್ಧರಿಸುವುದು ಸೂಕ್ತ ಎನಿಸುತ್ತದೆ. ''ನಾವು ಕಲಿಯುವಿಕೆಯ ಹಾದಿಯಲ್ಲಿ ಮುಂದುವರಿಯುವುದು ಕೇವಲ ನಮ್ಮ ವರ್ತನೆಯನ್ನು ಅಭಿವೃದ್ಧಿಗೊಳಿಸಲು ಬೇಕಾದ ಹೆಚ್ಚು ಜ್ಞಾನ ಸಂಪಾದನೆ ಮಾತ್ರವಲ್ಲ, ವರ್ತನೆಯ ಬಗ್ಗೆ ತಿಳಿದುಕೊಳ್ಳುವುದು ಅಂದರೆ, ಜ್ಞಾನ ಸಂಪಾದನೆ ಇದು ಸಾಮಾಜಿಕವಾಗಿ ಎರಡು ದಿಕ್ಕಿನಲ್ಲಿ ಹರಿಯುತ್ತದೆ. ಬೇರೆಯವರನ್ನು ಗಣನೆಗೆ ತೆಗೆದುಕೊಳ್ಳುವುದು ಹಾಗೂ ಬೇರೆಯವರಿಂದ ಹೆಚ್ಚು ಬುದ್ಧಿವಂತಿಕೆಯ ಉತ್ತರವನ್ನು ನಿರೀಕ್ಷಿಸುವುದು ಹಾಗಿದ್ದಲ್ಲಿ ಕಲಿಕೆಯಲ್ಲಿರುವ ವಯಸ್ಕರು ತಮ್ಮ ಬುದ್ಧಿವಂತಿಕೆ (ಶಕ್ತಿಯುತವಾದ, ಕ್ರಿಯಾಶೀಲವಾದ, ಸ್ವತಂತ್ರವಾದ ವಿಚಾರಧಾರೆಗಳು) ಬೆಳೆಯುವ ಸಾಮಾಜಿಕ ಪರಿಸರದಲ್ಲಿ ಬದುಕಲು ಬಯಸುತ್ತದೆ. ತಮ್ಮ ವೈಯಕ್ತಿಕ ಬೆಳವಣಿಗೆಯ ಜೊತೆಗೆ ಸಾಮಾಜಿಕ ಬೆಳವಣಿಗೆಯ ಬಗ್ಗೆಯೂ ಚಿಂತಿಸುತ್ತಾರೆ. ಸಂಪ್ರದಾಯ ಬದ್ಧ ಶಿಕ್ಷಣ ಬದುಕಿಗೆ ತಯಾರಿ ನೀಡುತ್ತದೆ. ಆದರೆ, ವಯಸ್ಕರ ಶಿಕ್ಷಣ ಬದುಕನ್ನು ಬದಲಾಯಿಸಲು ಬೇಕಾದ ಅಗತ್ಯ ಶಿಕ್ಷಣವನ್ನು ನೀಡುತ್ತದೆ. ವಯಸ್ಕರ ಶಿಕ್ಷಣವು ವ್ಯಕ್ತಿಯ ವೈಯಕ್ತಿಕ ಅಭಿವೃದ್ಧಿಯನ್ನು ಮೂಲವಾಗಿಟ್ಟುಕೊಂಡು ಸಾಮಾಜಿಕ ಬದಲಾವಣೆಯ ಹೆಗ್ಗುರಿ ಹೊಂದಿದೆ. ಇದರ ಮುಖ್ಯ ಉದ್ದೇಶ ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಗೆ ವ್ಯಕ್ತಿಯನ್ನು ಬದಲಾಯಿಸಿ ಇದಕ್ಕೆ ಹೊಂದಿಕೊಳ್ಳುವಂತೆ ನೋಡಿಕೊಳ್ಳುವುದು.

೬. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ - ಕಾಯಕಲ್ಪ: ೧೯೬೧ರಲ್ಲಿ ಸ್ಥಾಪಿಸಲ್ಪಟ್ಟ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ರಾತ್ರಿ ಶಾಲೆಗಳನ್ನು ನಡೆಸುವುದರ ಮೂಲಕ ಸಾಕ್ಷರತಾ ಕಾರ್ಯಕ್ರಮವನ್ನು ರಾಜ್ಯದಾದ್ಯಂತ ಹಮ್ಮಿಕೊಂಡು ತನ್ನ ೧೭ ವಿದ್ಯಾಪೀಠಗಳ ಮೂಲಕವಾಗಿ ಗ್ರಾಮೀಣ ಜನರಿಗೆ ಶಿಕ್ಷಣ, ಕೃಷಿ, ತೋಟಗಾರಿಕೆ, ರೇಷ್ಮೆ,ಕೃಷಿ, ಪಶು ಸಂಗೋಪನೆ, ಯಂತ್ರಗಳ ರಿಪೇರಿ, ಹೊಲಿಗೆ ಮುಂತಾದ ತರಬೇತಿ ಕಾರ್ಯಕ್ರಮಗಳನ್ನು

ಹಮ್ಮಿಕೊಂಡು ನಡೆದು ಬರುತ್ತಿದೆ. ಈ ಕಾರ್ಯವನ್ನು ಮೆಚ್ಚಿ ಡೇನಿಶ್ ಸರ್ಕಾರ ಸಹಾಯಧನವನ್ನು ನೀಡಿತ್ತು.

ರಾಷ್ಟ್ರಮಟ್ಟದಲ್ಲಿ ರಾಷ್ಟ್ರೀಯ ಸಾಕ್ಷರತಾ ಮಿಷನ್‌ಅನ್ನು ಸ್ಥಾಪಿಸುವ ಮೂಲಕ ಸಂಪೂರ್ಣ ಸಾಕ್ಷರತಾ ಆಂದೋಲನ ಜಾರಿಗೆ ಬಂದ ನಂತರ ವಯಸ್ಕರ ಶಿಕ್ಷಣ ಕಾರ್ಯಕ್ರಮ ಕೇವಲ ರಾತ್ರಿ ಶಾಲೆಗಳಿಗೆ ಸೀಮಿತವಾಗದೆ ಒಂದು ಆಂದೋಲನವಾಗಿ ಎಲ್ಲ ಸರ್ಕಾರಿ ಯಂತ್ರ ಗಳನ್ನು ಸರ್ಕಾರೇತರ ಸಂಘ ಸಂಸ್ಥೆಗಳಲ್ಲಿ, ಸಾರ್ವಜನಿಕರನ್ನೊಳಗೊಂಡಂತೆ ಒಂದು ಕಾಲಮಿತಿಯಲ್ಲಿ ಸಾಧನೆಯ ಗುರಿ ಮುಟ್ಟಲು ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ನಡೆಸಿಕೊಂಡು ಬರುತ್ತಿರುವುದರಿಂದ, ವಯಸ್ಕರ ಶಿಕ್ಷಣ ಸಮಿತಿಯ ಉಪಯೋಗ ಈಗ ಅಷ್ಟಾಗಿ ಆಗುತ್ತಿಲ್ಲ. ಇದರಿಂದಾಗಿ ಈ ಸಮಿತಿಗೆ ಹೊಸ ಸ್ವರೂಪವೊಂದನ್ನು ನೀಡಬೇಕಾಗಿದೆ.

ಪ್ರಸ್ತುತ ವಯಸ್ಕರ ಶಿಕ್ಷಣ ಸಮಿತಿಯನ್ನು ಸಂಪೂರ್ಣವಾಗಿ ಸರ್ಕಾರ ನೀಡುವ ಅನುದಾನದ ಮೇಲೆ ನಿರ್ವಹಿಸಲಾಗುತ್ತಿದೆ. ಸರ್ಕಾರ ಏನೂ ಮಹತ್ತರ ಕಾರ್ಯ ನಿರ್ವಹಿಸದ ಈ ಸಮಿತಿಗೆ ಹೆಚ್ಚಿನ ಅನುದಾನ ನೀಡಲು ಒಪ್ಪುತ್ತಿಲ್ಲ. ವಿದ್ಯಾಪೀಠಗಳು ಉತ್ತಮ ಜಮೀನನ್ನು ಹೊಂದಿದ್ದರೂ ಉತ್ಪತ್ತಿ ನಿರೀಕ್ಷಿತ ಮಟ್ಟದಲ್ಲಿಲ್ಲ. ಹೀಗಾಗಿ ಈ ಸಮಿತಿಯನ್ನು ಮುಂದುವರೆಸಿಕೊಂಡು ಹೋಗುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಈ ನಿಟ್ಟಿನಲ್ಲಿ ಕೆಳಕಂಡಂತೆ ಸಲಹೆ ನೀಡಲಾಗಿದೆ.

ವಯಸ್ಕರ ಶಿಕ್ಷಣ ಸಮಿತಿಯನ್ನು ಅನೌಪಚಾರಿಕ ಶಿಕ್ಷಣ ವಿಶ್ವವಿದ್ಯಾಲಯವಾಗಿ ಮಾರ್ಪಡಿಸುವುದು

ಅನೌಪಚಾರಿಕ ಶಿಕ್ಷಣ ವಿಶ್ವವಿದ್ಯಾಲಯದ ಉದ್ದೇಶ:

ಇಡೀ ರಾಜ್ಯ ಸಂಪೂರ್ಣ ಸಾಕ್ಷರ ರಾಜ್ಯವಾದಾಗ ಸುಮಾರು ೧.೬೫ ಕೋಟಿ ಅನಕ್ಷರಸ್ಥರು ನವ ಸಾಕ್ಷರರಾಗುತ್ತಾರೆ. ಇವರಿಗೆ ತಮ್ಮ ಬದುಕಿಗೆ ಅಗತ್ಯವಾದ ಶಿಕ್ಷಣ ನೀಡುವುದು ನಮ್ಮ ಕರ್ತವ್ಯವಾಗಿದೆ. ಈ ದಿಸೆಯಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯ ಹೆಚ್ಚು ಮಹತ್ವ ಪಡೆಯುತ್ತದೆ. ಸಮಿತಿಯು ಈಗಿರುವ ಇತಿಮಿತಿಗಳಲ್ಲಿ ಇಂತಹ ಹೆಚ್ಚಿನ ಜವಾಬ್ದಾರಿ ಹೊರಲು ಸಾಧ್ಯವಾಗಲಿಕ್ಕಿಲ್ಲ. ಆದ್ದರಿಂದ ಇದಕ್ಕೆ ಕಾಯಕಲ್ಪ ನೀಡಿ ಇದನ್ನು ಅನೌಪಚಾರಿಕ ಶಿಕ್ಷಣ ವಿಶ್ವವಿದ್ಯಾಲಯವಾಗಿ ಪರಿವರ್ತಿಸಬೇಕಾಗುತ್ತದೆ. ಈ ವಿಶ್ವವಿದ್ಯಾಲಯ ಉಳಿದೆಲ್ಲಾ ವಿಶ್ವವಿದ್ಯಾಲಯಗಳಿಗಿಂತ ಭಿನ್ನವಾಗಿದ್ದು, ನವಸಾಕ್ಷರರ ಬೇಕು ಬೇಡಗಳ ಬಗ್ಗೆ ಗಮನ ಹರಿಸುತ್ತದೆ. ಈ ನವಸಾಕ್ಷರರಿಗೆ ಅನೌಪಚಾರಿಕ ಶಿಕ್ಷಣಕ್ಕಾಗಿ ಕೇಂದ್ರ ಸರ್ಕಾರವು ಈಗಾಗಲೇ ಒಂದು ಯೋಜನೆಯನ್ನು ತಯಾರಿಸಿ ಈ ಕುರಿತು ರಾಜ್ಯ ಸರ್ಕಾರಕ್ಕೆ ಧನಸಹಾಯವನ್ನು ನೀಡಲಿದೆ. ಈ ಧನ ಸಹಾಯವನ್ನು ಉಪಯೋಗಿಸಿಕೊಂಡು ಜಿಲ್ಲೆಗಳಲ್ಲಿ ಈಗಿರುವ ೧೬ ವಿದ್ಯಾಪೀಠಗಳಲ್ಲದೆ ಉಳಿದ ಎಲ್ಲಾ ಜಿಲ್ಲೆಗಳಲ್ಲೂ ಹೊಸದಾಗಿ ವಿದ್ಯಾಪೀಠಗಳನ್ನು ಪ್ರಾರಂಭಿಸಿ ಅವುಗಳನ್ನು ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನಾಗಿ ಪರಿವರ್ತಿಸಿ ಕಾರ್ಯನಿರ್ವಹಿಸುವಂತೆ ಮಾಡುವುದು ಈ ಯೋಜನೆಯ ಉದ್ದೇಶ.

ಔಪಚಾರಿಕ ಶಿಕ್ಷಣಕ್ಕೂ ಅನೌಪಚಾರಿಕ ಶಿಕ್ಷಣಕ್ಕೂ ಬಹಳ ವ್ಯತ್ಯಾಸವಿದೆ. ಔಪಚಾರಿಕ ಶಿಕ್ಷಣವನ್ನು ನೀಡುವ ವಿಶ್ವವಿದ್ಯಾಲಯ ಗಳಲ್ಲಿ ಕಲಿಯುವುದಕ್ಕೆ ಬರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಬದುಕನ್ನು ಕಾಣದವರು. ಶಿಕ್ಷಣ ಪಡೆದು ಬದುಕನ್ನು ಸವಿಯಲು ಹೋಗುವವರು. ಇವರಿಗೆ ಶಿಕ್ಷಣ ಮೊದಲು-ಅನುಭವ ನಂತರ. ಆದರೆ, ಅನೌಪಚಾರಿಕ ಶಿಕ್ಷಣ ವಿದ್ಯಾಲಯಕ್ಕೆ ಬರುವವರು ನವಸಾಕ್ಷರರು. ಇವರಿಗೆ ಕಲಿಯಬೇಕಾದ ವಿಷಯಗಳೇ ಬೇರೆ. ಇವರ ಮನಸ್ಸು ಉಳಿದ

ಶಿಕ್ಷಿತ ಜನರಂತೆ ಕಲುಷಿತವಾಗಿರುವುದಿಲ್ಲ. ಬದುಕಿನ ಬೇಗುದಿಯಲ್ಲಿ ಬೆಂದ ಇವರು ಹೊಸತನ್ನು ವಿಶೇಷವಾಗಿ ಸ್ವೀಕರಿಸುವ ಮನಸ್ಸುಳ್ಳವರು. ಆದ್ದರಿಂದ, ಇವರಿಗೆ ನೀಡ ಬೇಕಾದುದು ಅಗತ್ಯತೆಯ ಹಿನ್ನಲೆಯ ಶಿಕ್ಷಣ(ನೀಡ್ ಬೇಸ್ಡ್ ಎಜುಕೇಶನ್).

ಅನೌಪಚಾರಿಕ ಶಿಕ್ಷಣ ವಿಶ್ವವಿದ್ಯಾಲಯವು ಎಲ್ಲಾ ಜಿಲ್ಲೆಗಳಲ್ಲಿರುವ ತನ್ನ ವಿದ್ಯಾಪೀಠಗಳ ಮೂಲಕವಾಗಿ ಆಯಾ ಜಿಲ್ಲೆಗಳ ನವಸಾಕ್ಷರರನ್ನು ಕರೆಸಿಕೊಂಡು ಅವರಿಗೆ ವೃತ್ತಿ ಶಿಕ್ಷಣ, ಕೃಷಿ, ತೋಟಗಾರಿಕೆ, ಯಂತ್ರ ರಿಪೇರಿ, ಹೊಲಿಗೆ ಪಂಚಾಯತ್ ರಾಜ್ ವ್ಯವಸ್ಥೆ ಮತ್ತಿತರ ಅಗತ್ಯ ವಿಚಾರಗಳ ಬಗ್ಗೆ ಶಿಕ್ಷಣ ನೀಡುವ ವ್ಯವಸ್ಥೆ ಮಾಡಬಹುದಾಗಿದೆ.

ಇದೊಂದು ಕ್ರಾಂತಿಕಾರಕ ವ್ಯವಸ್ಥೆ, ಡೆನ್ಮಾರ್ಕನಲ್ಲಿ ''ಫೋಕ್ ಹೈಸ್ಕೂಲ್''ಗಳನ್ನು ದೇಶದಾದ್ಯಂತ ಸ್ಥಾಪಿಸಲ್ಪಟ್ಟದ್ದು ಗ್ರಾಮೀಣ ಜನರ ಜೀವನಕ್ಕೆ ಇವು ಆಶಾಜ್ಯೋತಿಯಾಗಿವೆ. ಅಂತೆಯೇ, ಈ ಅನೌಪಚಾರಿಕ ಶಿಕ್ಷಣ ವಿಶ್ವ ವಿದ್ಯಾಲಯವು ದೇಶದಲ್ಲೇ ಏಕೆ ಪ್ರಪಂಚದಲ್ಲೇ ಪ್ರಪ್ರಥಮ. ಇಂತಹ ಒಂದು ವಿಶ್ವವಿದ್ಯಾಲಯ ಬೇರೆಯವರಿಗೆ ಮಾರ್ಗ ದರ್ಶಿಯಾಗುತ್ತದೆ. ಅಲ್ಲದೆ, ಇದಕ್ಕಾಗಿ ಸರ್ಕಾರ ಹೆಚ್ಚಿನ ಖರ್ಚನ್ನೇನೂ ಮಾಡಬೇಕಾಗಿಲ್ಲ. ಕೇವಲ ಕಾಯಕಲ್ಪವಾಗಬೇಕಾಗಿದೆ. ಲಕ್ಷಾಂತರ ರೂಪಾಯಿ ಆಸ್ತಿ ಹೊಂದಿರುವ ಈ ವಿದ್ಯಾಪೀಠಗಳನ್ನು ಮಾರ್ಪಡಿಸಬೇಕಾಗಿದೆ. ಅವು ತನ್ನ ಕಾಲ ಮೇಲೆ ನಿಲ್ಲುವಂತೆ ಮಾಡಬೇಕಾಗಿದೆ. ಪ್ರಾರಂಭದಲ್ಲಿ ಸರ್ಕಾರ ಸ್ವಲ್ಪ ಖರ್ಚು ಮಾಡಿದಲ್ಲಿ ನಂತರ ಈ ವಿಶ್ವವಿದ್ಯಾಲಯ ತನ್ನ ಕಾರ್ಯವನ್ನು ತಾನೇ ನಡೆಸಿಕೊಂಡು ಹೋಗುವ ಸಾಮರ್ಥ್ಯ ಪಡೆಯುವುದು. ಈ ಬಗ್ಗೆ ಸರ್ಕಾರ ವಿಶೇಷವಾಗಿ ಗಮನ ಹರಿಸಬೇಕಾಗಿದೆ.

೭. ವಯಸ್ಕರ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ : ಗ್ರಾಮೀಣ ಅಭಿವೃದ್ಧಿಯಲ್ಲಿ ವಯಸ್ಕರ ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತದೆ. ಅದು ಕೂಡ ಆಡಳಿತ ವಿಕೇಂದ್ರಿಕರಣ ವಾದ ಮೇಲೆ ಪಂಚಾಯತ್ ರಾಜ್ ವ್ಯವಸ್ಥೆ ಬಂದ ಮೇಲೆ ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಜಿಲ್ಲಾ ಪಂಚಾಯ್ತಿಗಳಿಗೆ ಹೆಚ್ಚು ಅಧಿಕಾರ ನೀಡಲಾಗಿದ್ದು ಈ ಸಂಸ್ಥೆಗಳಿಗೆ ಆರಿಸಿ ಬರುತ್ತಿರುವ ಜನ ಪ್ರತಿನಿಧಿ ಗಳಿಗೆ ವಿದ್ಯಾಭ್ಯಾಸದ ಹಿನ್ನೆಲೆ ಇರುವ ಅವಶ್ಯಕತೆ ಇದೆ. ಅದರಲ್ಲೂ ಮುಖ್ಯವಾಗಿ ಮಹಿಳೆಯರಿಗೆ ಹಾಗೂ ಹಿಂದುಳಿದ ವರ್ಗ ಗಳಿಗೆ ಮೀಸಲಾತಿ ಇರುವುದರಿಂದ ಆ ವರ್ಗದ ಜನಪ್ರತಿನಿಧಿ ಗಳಿಗೆ ಅಕ್ಷರ ಜ್ಞಾನವಿರಬೇಕಾಗುತ್ತದೆ. ಸಾಕ್ಷರತಾ ಆಂದೋಲನದ ಮೂಲಕವಾಗಿ ಅಥವಾ ವಯಸ್ಕರ ಶಿಕ್ಷಣದ ರಾತ್ರಿ ಶಾಲೆಗಳಲ್ಲಿ ಕಲಿತವರು ಇಂದು ಈ ಪಂಚಾಯ್ತಿಗಳಲ್ಲಿ ಪ್ರತಿನಿಧಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಾಮಾಜಿಕ ಪಿಡುಗುಗಳ ನಿವಾರಣೆಯಲ್ಲಿ ವಯಸ್ಕರ ಶಿಕ್ಷಣ ಇಂದು ಗ್ರಾಮಾಂತರ ಪ್ರದೇಶ ಗಳಲ್ಲಿ ಪ್ರಮುಖ ಅಸ್ತ್ರವಾಗಿದೆ. ಸಾಕ್ಷರತಾ ಆಂದೋಲನಗಳ ಪ್ರಾರಂಭದ ಹಂತದಲ್ಲಿ ನಡೆಯುವ ಕಲಾ ಜಾಥಾಗಳು ಗ್ರಾಮೀಣ ಜನರ ಬದುಕಿನಲ್ಲಿ ಹೊಸ ಕ್ರಾಂತಿಯನ್ನೇ ಎಬ್ಬಿಸಿವೆ. ಪ್ರತಿನಿತ್ಯ ಕುಡಿದು ಬರುವ ಗಂಡಸರ ವಿರುದ್ಧ ಸಂಘಟಿತರಾಗಿ ಹೋರಾಡುವ ಫಲವನ್ನು ಮಹಿಳೆಯರು ತೋರಿದ್ದಾರೆ. ಗ್ರಾಮ ಮತ್ತು ತಾಲ್ಲೂಕು ಕಛೇರಿಗಳಲ್ಲಿ ನಡೆಯುವ ಲಂಚ, ರುಷು ವತ್ತುಗಳ ವಿರುದ್ಧ ಧ್ವನಿ ಎತ್ತುವ ಎದೆಗಾರಿಕೆಯನ್ನು ನವಸಾಕ್ಷರರು ಇಂದು ತೋರಿದ್ದಾರೆ. ಸಾಕ್ಷರತಾ ಆಂದೋಲನ ಕೇವಲ ಅಕ್ಷರ ಆಂದೋಲನ ಮಾತ್ರವಾಗಿದೆ; ಒಂದು ರೀತಿಯ ಸಾಮಾಜಿಕ ಆಂದೋಲನ ಅಥವಾ ಗ್ರಾಮೀಣ ಕ್ರಾಂತಿ ಮಾಡಿದೆ.

ವಯಸ್ಕರ ಶಿಕ್ಷಣ ಕೇವಲ ಅಕ್ಷರ ಶಿಕ್ಷಣ

ವಾಗಿರದೆ ಗ್ರಾಮೀಣ ಜನ ಜಾಗೃತಿ ಶಿಕ್ಷಣ ವಾಗಿದೆ. ಹಳ್ಳಿಯ ಜನರು ನೈರ್ಮಲ್ಯೀಕರಣದ ಬಗ್ಗೆ, ಶುದ್ಧ ಕುಡಿಯುವ ನೀರಿನ ಬಗ್ಗೆ, ರಸ್ತೆ, ವಿದ್ಯುತ್, ಸಂಚಾರ ಮುಂತಾದ ವಿಚಾರಗಳ ಬಗ್ಗೆ ಜನ ಜಾಗೃತಿ ಮೂಡಿದ್ದು, ಈ ಸವಲತ್ತುಗಳು ಸುಗಮವಾಗಿ ದೊರಕುವಂತೆ ಜನ ಒತ್ತಡ ತರುತ್ತಿದ್ದಾರೆ. ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ನಡೆಯುವ ಗ್ರಾಮ ಸಭೆಗಳಲ್ಲಿ ಜನರು ತಮ್ಮ ಹಕ್ಕಿನ ಬಗ್ಗೆ ಮತ್ತು ತಮ್ಮ ಕರ್ತವ್ಯದ ಬಗ್ಗೆ ಬಿಚ್ಚು ಮನಸ್ಸಿನಿಂದ ಮಾತನಾಡುವಂತಾಗಿದೆ. ಇದು ವರೆಗೆ ಇದ್ದ ಅಧಿಕಾರ ರಾಜ್ಯ ಹೋಗಿ ಗ್ರಾಮ ರಾಜ್ಯ ಬರಲು ಅನುವು ಮಾಡಿಕೊಟ್ಟಿದೆ. ಒಟ್ಟಿನಲ್ಲಿ ವಯಸ್ಕರ ಶಿಕ್ಷಣ ಕರ್ನಾಟಕದಲ್ಲಿ ಗ್ರಾಮ ಸ್ವರಾಜ್ಯ ತರಲು ಹಾಗೂ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಿದೆ.

ಸಮಾರೋಪ: ವಯಸ್ಕರ ಶಿಕ್ಷಣ ಒಂದು ಪ್ರಮುಖವಾದ ಮಾನವ ಹಕ್ಕು. ಇದು ಸಮಾಜ ಮಾನವನಿಗೆ ಒದಗಿಸಿದ ಒಂದು ಅವಕಾಶ. ಅಕ್ಷರ ಮತ್ತು ಅಂಕಿಗಳ ತಿಳುವಳಿಕೆಯ ಮೂಲಕ ಪ್ರಾರಂಭವಾಗಿ, ತನ್ನ ವ್ಯಾಪ್ತಿಯನ್ನು ವಿಸ್ತಾರಗೊಳಿಸುತ್ತಾ, ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನ ಸಮಸ್ಯೆಗಳ ಬಗ್ಗೆ ತಿಳುವಳಿಕೆಗಳನ್ನು ಮೂಡಿಸಿಕೊಂಡು ದೇಶದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಕ್ರಿಯ ಪಾತ್ರವಹಿಸಲು ಇದು ಅನುವು ಮಾಡಿಕೊಡುತ್ತದೆ. ಈ ಕಾರ್ಯಕ್ರಮ ಬಹಳಷ್ಟು ರೂಪಾಂತರಗೊಂಡು ಕೇಂದ್ರ ಮಟ್ಟದಲ್ಲಿನ ತರಬೇತಿಯಿಂದ ವಿಶೇಷ ಪ್ರಚಾರ ಆಂದೋಲನ ಮಟ್ಟಕ್ಕೆ ಇಂದು ಹರಿದು ಬಂದಿಲ್ಲ. ಇದಕ್ಕೆ ಹೆಚ್ಚು ಜನ ಮನ್ನಣೆ ದೊರೆಯಬೇಕಾಗಿದೆ. ಇದು ಕೇವಲ ಕಲಿತವರು, ಕಲಿಯದವರಿಗೆ ಕಲಿಸುವ ಕಾರ್ಯಕ್ರಮ ಮಾತ್ರ ಅಲ್ಲ. ಇದು ಸಮಾಜದ ಸದಸ್ಯರು ಪರಸ್ಪರ ಬಾಧ್ಯರಾಗಿದ್ದು ಈ ಬಾಧ್ಯತೆಯನ್ನು ಕಲಿಯುವಿಕೆ, ಭಾಗ ವಹಿಸುವಿಕೆ, ಚರ್ಚೆ ಮತ್ತು ವಿಚಾರ ವಿನಿಮಯ ಹಾಗೂ ಸಮೂಹ ಕ್ರಿಯೆ ಇವುಗಳ ಮೂಲಕವಾಗಿ ಸಾಮಾಜಿಕ ಕರ್ತವ್ಯವನ್ನು ನಿರ್ವಹಿಸುವ ಒಂದು ಸಾಧನ.

ಕನ್ನಡದ ನಾಡ ಜನವೆಲ್ಲವೂ ನನ್ನವರು
ಬಡಗ ತೆಂಕಣ ಮೂಡ ಕೊಡಗ ತೌಳವ ತೋಡ
ಇನ್ನೆಲ್ಲ ಕನ್ನಡಿಗರೆನ್ನವರು ಎನ್ನುಸಿರು,
ನಾವೆಲ್ಲ ಒಂದು ಮನೆಯವರಣ್ಣ ತಮ್ಮದಿರು
ನಮ್ಮೆಲ್ಲರನು ಪಡೆದುದೊಂದೆ ನಾಡಿನ ಬಸಿರು
ಎಂದು ನಾವರಿದೆವೇ ನಮಗೆ ಇನ್ನಾರೆದುರು!
ಹಾ ನನ್ನ ಸೋದರರೆ ಬನ್ನಿ ಒಂದಾಗಿ
ಜನವಧುವ ನಿಮ್ಮ ತೋಳಸೊಳಟ್ಟು ತೂಗಿ

-ಶ್ರೀನಿವಾಸ (ಮಾಸ್ತಿ ವೆಂಕಟೇಶ ಅಯ್ಯಂಗಾರ್)

ನೊಬೆಲ್ ಬಹುಮಾನದ ಕಥೆ

ಪ್ರೊ. ಸಿ. ನಾಗಣ್ಣ
ನಂ. ೩೧೯೫, ೨೧/ಸಿ. ಮೆಯಿನ್,
ವಿಜಯನಗರ, ೨ನೇ ಹಂತ,
ಮೈಸೂರು.

[ಸಂ: ಇದು ನೊಬೆಲ್ ಬಹುಮಾನಗಳ ಋತುಕಾಲ. ಈ ಕಾಲ ಬಂತೆಂದರೆ ಆಕಾಂಕ್ಷಿಗಳು ಸ್ವೀಡನ್‌ನಿಂದ ಬರಬಹುದಾದ ದೂರವಾಣಿ ಕರೆಗಾಗಿ ಕಾಯುತ್ತಾರೆ. ಇವರು ನೊಬೆಲ್ ಗೆದ್ದೇ ಗೆಲ್ಲುತ್ತಾರೆ ಎಂಬ ನಿರೀಕ್ಷೆ ಕೆಲವರ ವಿಷಯದಲ್ಲಿ ನಿಜವಾಗಿರುವುದೂ ಉಂಟು. ವಿಶೇಷವಾಗಿ ವಿಜ್ಞಾನಿಗಳ ಸಾಧನೆಯ ಆಧಾರದ ಮೇಲೆ ಈ ತರಹದ ಪೂರ್ವ ನಿರ್ಧಾರ ಸಾಧ್ಯವಾಗುತ್ತದೆ. ಮಾನವಿಕಗಳ ವಿಷಯದಲ್ಲಿ ಹಾಗಾಗುವುದು ಅಪರೂಪ. ಸಾಹಿತ್ಯ ಕ್ಷೇತ್ರದಲ್ಲಿ ಅನೇಕರಿಗೆ ನೊಬೆಲ್ ದಕ್ಕಲಿಲ್ಲ. ಲೇಖಕರು ನಂಬಿದ ರಾಜಕೀಯ ಸಿದ್ಧಾಂತವೂ ಕೂಡ ಅನೇಕ ವೇಳೆ ಪಾರಿತೋಷಕಕ್ಕೆ ಅಡ್ಡಿಯಾಗುವುದುಂಟು. ಕನ್ನಡದ ಮಟ್ಟಿಗೆ ಹೇಳುವುದಾದರೆ, ಮಹಾಕವಿ ಕುವೆಂಪು ಅವರು ನೊಬೆಲ್ ಗೆಲ್ಲಲು ಸಮರ್ಥರಾಗಿದ್ದರೆಂದು ನಾವು ನಂಬುವುದು ಸಹಜವಾಗೇ ಇದೆ. ಆದರೆ ಸಕಾಲದಲ್ಲಿ ಕುವೆಂಪು ಅವರ ಕೃತಿಗಳು ಇಂಗ್ಲಿಷಿಗೆ ಅನುವಾದವಾಗಲಿಲ್ಲವೆಂಬ ಕೊರಗು ನಮ್ಮನ್ನು ಬಾಧಿಸುತ್ತದೆ. ಈ ಎಲ್ಲ ಆಲೋಚನೆಗಳು ನಮ್ಮ ಮನಸ್ಸಿನಲ್ಲಿ ಮೂಡುವಾಗ ಈ ವಿಶಾಲ ಜಗತ್ತಿಗೆ ಒಂದೆ ನೊಬೆಲ್ ಸಾಕೆ ಅಥವಾ ನೊಬೆಲ್ ಮಾನದಂಡಗಳು ನಿರ್ದುಷ್ಟವಲ್ಲವೆಂದು ತಿಳಿದ ಬಳಿಕವೂ ಅದಕ್ಕಾಗಿ ತಲೆಕೊಡಿಸಬೇಕೆ ಎಂಬ ಪ್ರಶ್ನೆ ಏಳುತ್ತದೆ. ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಪರ್ಯಾಯ ನೊಬೆಲ್ ಪಾರಿತೋಷಕಗಳು ಸ್ಥಾಪನೆಯಾಗುವುದರಿಂದ ಮಾತ್ರ ಸ್ವೀಡನ್ನಿನ ಕಡೆ ಈ ಸೀಸನ್‌ನಲ್ಲಿ ಮುಖ ಮಾಡುವುದನ್ನು ತಪ್ಪಿಸಬಹುದು]

'ನೊಬೆಲ್ ಪಾರಿತೋಷಕಗಳು' ಸ್ಥಾಪನೆಯಾಗಿ ೨೦೦೦ನೇ ಇಸವಿಗೆ ಸರಿಯಾಗಿ ಒಂದು ವರ್ಷವಾಯಿತು. ಈ ಪಾರಿತೋಷಕಗಳನ್ನು ಸ್ಥಾಪಿಸಿದ ಮಹಾಶಯ ಸ್ವೀಡನ್ನಿನ ಉದ್ಯಮಿ, ರಸಾಯನಶಾಸ್ತ್ರಜ್ಞ ಹಾಗೂ ಆವಿಷ್ಕಾರಕ ಸರ್ ಆಲ್ಫ್ರೆಡ್ ನೊಬೆಲ್ (೧೮೩೩-೧೮೬೬). ಸ್ವೀಡನ್ನಿನ ಸ್ಟಾಕ್ ಹೋಮಿನಲ್ಲಿ ಅಕ್ಟೋಬರ್ ೨೧,೧೮೩೩ರಲ್ಲಿ ಜನಿಸಿದ ಆಲ್‌ಫ್ರೆಡ್ ಅವರ ಶಿಕ್ಷಣ ಮಿಶ್ರ ಮಾದರಿಯಲ್ಲಿ ನಡೆಯಿತು; ಹಾಗಾಗಿ, ಔಪಚಾರಿಕ ಶಿಕ್ಷಣದ ಜೊತೆಗೆ ಅವರಿಗೆ ಮನೆಪಾಠದವರಿಂದಲೂ ಬೋಧನೆಯಾಯಿತು. ೧೮೪೨ರಲ್ಲಿ ತಮ್ಮ ಕುಟುಂಬದವರೊಂದಿಗೆ ಅವರು ಸೇಂಟ್ ಪೀಟರ್ಸ್ ಬರ್ಗ್‌ಗೆ (ನಂತರ ಲೆನಿನ್‌ಗ್ರಾಡ್ ಆಗಿದೆ) ಪ್ರಯಾಣ ಬೆಳೆಸಿದರು; ಅಲ್ಲಿ ಅವರ ತಂದೆ ಯುದ್ಧ ಸಾಮಗ್ರಿಗಳಲ್ಲಿ ಬಳಸುವ ವಸ್ತುಗಳ ತಯಾರಿಕೆಯಲ್ಲಿ ಒಂದು ಕಾರ್ಯಾಗಾರ ನಡೆಸುತ್ತಿದ್ದರು.

ತಾನೂ ಒಬ್ಬ ಎಂಜನಿಯರ್ ಆಗಬೇಕೆಂದು ತಮ್ಮ ಹದಿನೇಳನೇ ವಯಸ್ಸಿನಿಂದಲೂ ಆಲ್‌ಫ್ರೆಡ್ ನಾನಾ ಕಡೆ ಪ್ರವಾಸ ಕೈಗೊಂಡರು. ಒಂದು ವರ್ಷ ಕಾಲ ಅಮೆರಿಕೆಯಲ್ಲಿ ವಾಸಿಸಿದ ಬಳಿಕ ೧೮೬೩ರಲ್ಲಿ ತಮ್ಮ ಕುಟುಂಬದ ವ್ಯವಹಾರವನ್ನು ಅಭಿವೃದ್ಧಿಗೊಳಿಸುವಲ್ಲಿ ತಂದೆಗೆ ಸಹಾಯ ಮಾಡಲು ಅವರು ಸೇಂಟ್ ಪೀಟರ್ಸ್ ಬರ್ಗ್‌ಗೆ ವಾಪಸಾದರು. ಈ ಸಂದರ್ಭದಲ್ಲೇ ಅತ್ಯಂತ ಪರಿಣಾಮಕಾರಿ ಸ್ಫೋಟಕಗಳಾದ ನೈಟ್ರೋಗ್ಲಿಸರೀನ್ ಹಾಗೂ ಸಿಡಿಮದ್ದಿನ ತಯಾರಿಕೆಯಲ್ಲಿ ಅವರ ಉದ್ದಿಮೆ ನಿರತವಾಗಿದ್ದದ್ದು. ಒಮ್ಮೆ ಒಂದು ಸ್ಫೋಟ ಸಂಭವಿಸಿತು; ತರುವಾಯ ಅನೇಕ ಸ್ಫೋಟಗಳಾಗಿ ಬಹಳ ಮಂದಿ ಉದ್ಯೋಗಿಗಳು ಪ್ರಾಣ ನೀಗಿದರು. ಇದರಿಂದ ಧೃತಿಗೆಡದ ಆಲ್‌ಫ್ರೆಡ್ ಹೆಚ್ಚು ಸುರಕ್ಷಿತವಾದ ಸ್ಫೋಟಕ ತಯಾರಿಕೆಯ ದಿಶೆಯಲ್ಲಿ ತಾವು ಕೈಗೊಂಡಿದ್ದ ಪ್ರಯೋಗವನ್ನು ಮುಂದುವರಿಸಿದರು.

ಅಂತಿಮವಾಗಿ ೧೮೬೬ರಲ್ಲಿ ನೈಟ್ರೊಗ್ಲಿಸರೀನ್ ಮತ್ತು ಕೀಸಿಗುರ್‌ನ ಸಂಯೋಗವನ್ನು ಪೂರ್ಣಗೊಳಿಸಿ 'ಡೈನಮೈಟ್' ಅನ್ನು ಕಂಡು ಹಿಡಿದರು. ೧೮೬೮ರಲ್ಲಿ ಬ್ರಿಟಿಷ್ ಪೇಟೆಂಟ್‌ನ್ನು ೧೮೬೮ರಲ್ಲಿ ಅಮೆರಿಕನ್ ಪೇಟೆಂಟನ್ನೂ ಪಡೆದುಕೊಂಡರು. ಇದೇ ಪ್ರಕಾರ ಆಲ್‌ಫ್ರೆಡ್ 'ಗಿಲ್ಯಾಟಿನ್' ಮತ್ತು 'ಗನ್‌ಕಾಟನ್' ಅನ್ನು ಕಂಡು ಹಿಡಿದರು.

ಆಲ್‌ಫ್ರೆಡ್ ನೊಬೆಲ್ ಸ್ಫೋಟಕಗಳು ಮತ್ತು ತೈಲ ನಿಕ್ಷೇಪದ ಶೋಧನೆ ಎರಡು ವ್ಯವಹಾರದಲ್ಲೂ ಅಪಾರವಾಗಿ ಹಣ ಸಂಪಾದಿಸಿದರು.

ಇಳಿವಯಸ್ಸಿಗೆ ಕಾಲಿಡುತ್ತಿದ್ದಂತೆಯೇ,

ಮೂಲ: ಎಂ. ಆರ್. ಲಕ್ಷ್ಮೀನಾರಾಯಣ

ಒಂಟಿತನ ಹಾಗೂ ಅನಾರೋಗ್ಯದ ಕಾರಣ ನೊಬೆಲ್ ನಿರಾಶಾವಾದದ ಕಡೆಗೆ ವಾಲತೊಡಗಿದರು. ಆದಾಗ್ಯೂ ಮನುಕುಲವು ಉತ್ತಮವಾದದ್ದನ್ನು ಹೊಂದಲು ಯೋಗ್ಯವಾಗಿರುವುದಾಗಿ ನಂಬುವುದರ ಜೊತೆಗೆ ಭವಿಷ್ಯದ ಬಗೆಗೆ ಚಿಂತಿಸತೊಡಗಿದರು. ತನ್ನ ಭಾವನೆಗಳನ್ನು ಕಾರ್ಯರೂಪಕ್ಕಿಳಿಸುವ ದೃಷ್ಟಿಯಿಂದ ತನ್ನ ಅಪಾರವಾದ ಧನಸಂಪತ್ತಿನ ಒಂದು ಭಾಗವನ್ನು ಜನರಿಗೇ ವಾಪಸ್ಸು ನೀಡುವ ಒಂದು ಯೋಜನೆ ಆಲ್‌ಫ್ರೆಡ್‌ರ ಮನಸ್ಸಿನಲ್ಲಿ ಹೊಳೆಯಿತು. ಪ್ರತಿಯೊಬ್ಬ ವ್ಯಕ್ತಿಯೂ ಒಂದಿಲ್ಲೊಂದು ವಿಧದಲ್ಲಿ ತನ್ನ ಸಮಾಜಕ್ಕೆ ಸಹಾಯ ಮಾಡಬೇಕಾಗಿರುವುದು ಅತ್ಯಗತ್ಯವೆಂಬ ಸತ್ಯ ಆತನಿಗೆ ಮನವರಿಕೆಯಾಗಿರಬೇಕು.

ತಮ್ಮ ಮನಸ್ಸಿನ ಆಲೋಚನೆಗಳನ್ನು ೧೮೮೯ ಮತ್ತು ೧೮೯೩ರಲ್ಲಿ ಮಾಡಿದ ಎರಡು ಉಯಿಲುಗಳಲ್ಲಿ ಅವರು ದಾಖಲಿಸಿದ್ದಾರೆ; ೧೮೯೫ರಲ್ಲಿ ಮಾಡಿದ ಉಯಿಲು ಮೊದಲೆರಡು ಉಯಿಲುಗಳ ವಕ್ಕಣೆಯನ್ನು ಪೂರ್ತಿಯಾಗಿ ಬದಲಾಯಿಸಿದ್ದಂತೆ ತೋರುತ್ತದೆ. ಈ ಉಯಿಲಿನ ಪ್ರಕಾರ ತಮ್ಮ ಆಸ್ತಿಯಲ್ಲಿ ಬರುವ ಆದಾಯವನ್ನು ಐದು ಭಾಗವಾಗಿ ಮಾಡಿ ಆಯಾ ವರ್ಷ ಮನುಕುಲಕ್ಕೆ ಹೆಚ್ಚು ಉಪಕಾರ (ತಮ್ಮ ಜ್ಞಾನದಿಂದ)ಮಾಡಿರುವವರಿಗೆ ಬಹುಮಾನಗಳ ರೂಪದಲ್ಲಿ ನೀಡಬೇಕೆಂದು ಸೂಚಿಸಿದ್ದಾರೆ. 'ನೊಬೆಲ್ ಪಾರಿತೋಷಕ' ಆರಂಭವಾದದ್ದು ಹೀಗೆ.

೧೮೯೬ನೇ ಇಸವಿ ಡಿಸೆಂಬರ್ ೧೦ನೇ ತಾರೀಖು ಆಲ್‌ಫ್ರೆಡ್‌ರು ನಿಧನರಾದ ಬಳಿಕ ಉಯಿಲಿನಲ್ಲಿದ್ದ ಪ್ರಕಾರ ''ನೊಬೆಲ್ ಫೌಂಡೇಶನ್'' ಅಸ್ತಿತ್ವಕ್ಕೆ ಬಂದಿತು. ಟ್ರಸ್ಟಿಗಳು ಚುನಾಯಿಸಿದ ನಿರ್ದೇಶಕರ ಮಂಡಳಿಯು ನಿಧಿಯನ್ನು ನೋಡಿಕೊಳ್ಳುತ್ತದೆ; ಮಂಡಳಿಯ ಅಧ್ಯಕ್ಷರನ್ನು ಸ್ವೀಡನ್ನಿನ ಸರ್ಕಾರ ನೇಮಿಸುತ್ತದೆ.

ನೊಬೆಲ್ ಶಾಂತಿ ಪಾರಿತೋಷಕವನ್ನು ವ್ಯಕ್ತಿಗಳಿಗೆ, ಸಂಘಟನೆಗಳಿಗೆ ಅಥವಾ ಸಮುದಾಯ ಚಳವಳಿಗೆ ಕೊಡಲಾಗುತ್ತದೆ. ಭಯೋತ್ಪಾದನೆ, ಅನ್ಯಾಯ ಹಾಗೂ ಶೋಷಣೆಗಳ ಬಗ್ಗೆ ನೊಬೆಲ್ ಮೊದಲೇ ಊಹಿಸಿದ್ದರೆ? ಊಹಿಸಿದ್ದರೆಂದು ತೋರುತ್ತದೆ; ಹಾಗಾಗಿ ಇಂಥ ಅನಿಷ್ಟಗಳನ್ನು ತೊಡೆದು ಹಾಕಲು ವ್ಯಕ್ತಿಗಳ ದೃಢತೆಯಂತೆಯೇ ಸಾಮೂಹಿಕ ಚಳುವಳಿಗಳ ಅಗತ್ಯವಿರುತ್ತದೆಯೆಂದು ಅವರು ಮನಗಂಡಿದ್ದರು. ತಮ್ಮ ಉಯಿಲಿನಲ್ಲಿ ಅವರು ಸ್ಪಷ್ಟವಾಗಿ ತಿಳಿಸಿದ್ದಾರೆ. ''ಜಾಗತಿಕ ಶಾಂತಿಯನ್ನು ಕಾಪಾಡುವ ವ್ಯವಸ್ಥೆಗೆ ನೊಬೆಲ್ ಶಾಂತಿ ಪಾರಿತೋಷಕವನ್ನು ನೀಡುವುದು.''

ಆಲ್‌ಫ್ರೆಡ್ ನೊಬೆಲ್ ೧೮೯೫ರಲ್ಲಿ ಬರೆದಿಟ್ಟ ತಮ್ಮ ಅಂತಿಮ ಉಯಿಲಿನಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ವೈದ್ಯಕೀಯ ಶಾಸ್ತ್ರ, ಸಾಹಿತ್ಯ ಮತ್ತು ಶಾಂತಿಗಾಗಿ ಐದು ಪಾರಿತೋಷಕಗಳನ್ನು ಘೋಷಿಸಿದರು. ೧೯೬೮ರಲ್ಲಿ ''ಬ್ಯಾಂಕ್ ಆಫ್ ಸ್ವೀಡನ್'' ತನ್ನ ತ್ರಿಶತಮಾನೋತ್ಸವದ ನೆನಪಿಗಾಗಿ ಅರ್ಥಶಾಸ್ತ್ರ ವಿಭಾಗಕ್ಕೆ ಒಂದು ಪಾರಿತೋಷಕವನ್ನು ಘೋಷಿಸಿ ''ನೊಬೆಲ್ ಸ್ಮಾರಕ ಪಾರಿತೋಷಕ''ವೆಂದು ಕರೆಯಿತು. ಜನರು ಇದೂ ಕೂಡ ನೊಬೆಲ್ ಪಾರಿತೋಷಕ ಎಂದು ತಿಳಿಯುತ್ತಾರೆ. ಆದರೆ ನೊಬೆಲ್ ಪಾರಿತೋಷಕಕ್ಕೆ 'ಸಮವಾದ' ಬಹುಮಾನ ಇದು ಎಂಬುದನ್ನು ನಾವು ನೆನಪಿಡಬೇಕು. ನೊಬೆಲ್ ಪಾರಿತೋಷಕಗಳಿಗೆ ಆಯ್ಕೆ ಮಾಡುವ ರೀತಿಯಲ್ಲೇ ವ್ಯಕ್ತಿಗಳನ್ನು ಆಯ್ಕೆ ಮಾಡಿ ''ನೊಬೆಲ್ ಸ್ಮಾರಕ ಬಹುಮಾನ''ವನ್ನು ವಿತರಿಸಬೇಕೆಂದು ''ಬ್ಯಾಂಕ್ ಆಫ್ ಸ್ವೀಡನ್'' ನೊಬೆಲ್ ಫೌಂಡೇಶನ್‌ನವರಿಗೆ ಇಂತಿಷ್ಟು ಹಣವನ್ನು ಒಪ್ಪಿಸಿದೆ.

ಮನುಕುಲಕ್ಕೆ ಉಪಕಾರ ಮಾಡುವ ರೀತಿಯಲ್ಲಿ ವ್ಯಕ್ತಿಗಳು ತಮ್ಮ ಜ್ಞಾನ ಕ್ಷೇತ್ರದಲ್ಲಿ ನಿರಂತರವಾಗಿ ಪ್ರಯೋಗ ಮಾಡಿ ಹೊಸ ಆವಿಷ್ಕಾರಕ್ಕೆ ಕಾರಣವಾಗುವ ಕ್ರಮವನ್ನು ನೊಬೆಲ್ ಪಾರಿತೋಷಕ ಸೂಚಿಸುತ್ತದೆ. 'ಪೇಟೆಂಟ್' ಅಥವಾ 'ಬೌದ್ಧಿಕ ಆಸ್ತಿ ಹಕ್ಕು' ಇತ್ಯಾದಿ ವಾಣಿಜ್ಯೀಯ ಆಧಾರವನ್ನು ಬದಿಗೊತ್ತಿ ಕೇವಲ ಮನುಕುಲದ ಒಳಿತನ್ನೇ ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ ಆವಿಷ್ಕಾರಗಳಿಗೆ ಮಾತ್ರ ನೊಬೆಲ್ ಪಾರಿತೋಷಕದ

ಮನ್ನಣೆ ಎಂಬುದು ಮುಖ್ಯವಾದ ಸಂಗತಿ.

ನೊಬೆಲ್ ಬಹುಮಾನಕ್ಕೆ ಯಾವುದೇ ರಾಷ್ಟ್ರದ ಪ್ರಜೆ, ಧರ್ಮ, ಜಾತಿ,ವರ್ಗ, ಜನಾಂಗ, ಸಿದ್ಧಾಂತ , ಹಾಗೂ ಲಿಂಗಭೇದವಿಲ್ಲದೆ ಅರ್ಹರಾಗುತ್ತಾರೆ. ವ್ಯಕ್ತಿ ಅಥವಾ ಸಂಘಟನೆ ಒಂದಕ್ಕಿಂತ ಹೆಚ್ಚು ಬಾರಿ ಪಾರಿತೋಷಕವನ್ನು ಗೆಲ್ಲಬಹುದು. ಸಂಘಟನೆಗಳು ಶಾಂತಿ ಪಾರಿತೋಷಕಕ್ಕೆ ಅರ್ಹತೆ ಪಡೆಯುತ್ತವೆ; ವ್ಯಕ್ತಿಗಳಿಗೆ ಭೌತಶಾಸ್ತ್ರ, ರಸಾಯನಶಾಸ್ತ್ರ, ವೈದ್ಯಕೀಯ ಮತ್ತು ಸಾಹಿತ್ಯ ಕ್ಷೇತ್ರಗಳು ಇದ್ದೇ ಇದೆ. ನೊಬೆಲ್ ಬಹುಮಾನವನ್ನು ಹೆಚ್ಚೆಂದರೆ ಒಂದು ಕ್ಷೇತ್ರದ ಮೂರು ಜನರು ಹಂಚಿ ಕೊಳ್ಳಬಹುದು. ಯಾವುದೇ ವರ್ಷ ಬಹುಮಾನ ವಿತರಣೆಯಾಗದ ಪಕ್ಷದಲ್ಲಿ - ಮಹಾಯುದ್ಧಗಳ ಕಾಲದಲ್ಲಿ ಆದಂತೆ - ಹಣವು ಸ್ಮಾರಕ ನಿಧಿಗೇ ವಾಪಸ್ಸಾಗುತ್ತದೆ. ಬಹುಮಾನವನ್ನು ವ್ಯಕ್ತಿಗಳು ನಿರಾಕರಿಸಿದಾಗ, ಅಥವಾ ಸ್ವೀಕರಿಸಬಾರದೆಂದು ನಿರ್ಬಂಧವುಂಟಾದ (೧೯೩೭ರಲ್ಲಿ ಹಿಟ್ಲರ್‌ನ ಆಜ್ಞೆಯ ಮೇರೆಗೆ ಜರ್ಮನ್ನರು ಸ್ವೀಕರಿಸಲಿಲ್ಲ) ಈ ಸಂದರ್ಭಗಳಲ್ಲೂ ಕೂಡ ಹಣ ವಾಪಸ್ಸಾಗುತ್ತದೆ. ಆದಾಗ್ಯೂ ಒಮ್ಮೆ ಬಹುಮಾನವನ್ನು ತಿರಸ್ಕರಿಸಿದಂಥ ವ್ಯಕ್ತಿ ಮುಂದೊಮ್ಮೆ ತಾವು ಹಿಂದೆ ಯಾವ ಕಾರಣದಿಂದ ಬಹುಮಾನವನ್ನು ಸ್ವೀಕರಿಸಲಾಗದಂಥ ಸಂದರ್ಭವೇರ್ಪಟ್ಟಿತು ಎಂಬುದನ್ನು ವಿಶದವಾಗಿ ವಿವರಿಸಿ ಮತ್ತೆ ಬಹುಮಾನಕ್ಕೆ ಅರ್ಜಿ ಸಲ್ಲಿಸಿದ ಪಕ್ಷದಲ್ಲಿ ತತ್ಸಂಬಂಧವಾದ ಪದಕವನ್ನು ಸ್ವೀಕರಿಸಬಹುದಾಗಿರುತ್ತದೆ; ಬಹುಮಾನದ ಹಣ ದೊರೆಯುವುದಿಲ್ಲ.

ನೊಬೆಲ್ ಪಾರಿತೋಷಕ ಒಂದು ಚಿನ್ನದ ಪದಕ, ಒಂದು ಬಿನ್ನವತ್ತಳೆ(ಇದನ್ನು ಡಿಪ್ಲೊಮಾ ಎಂದೂ ಕರೆಯಲಾಗುತ್ತದೆ) ಮತ್ತು ಸುಮಾರು ಹತ್ತು ಲಕ್ಷ ಅಮೆರಿಕನ್ ಡಾಲರ್ ಹಣವನ್ನು ಒಳಗೊಂಡಿರುತ್ತದೆ. ಪ್ರತಿವರ್ಷ ನೊಬೆಲ್ ಪ್ರಶಸ್ತಿ ಗೆಲ್ಲಬಲ್ಲ ಸಾಧನೆ ಮಾಡಿರುವವರನ್ನು ಸೂಚಿಸುವಂತೆ ಆ ಮಟ್ಟದ ವ್ಯಕ್ತಿಗಳನ್ನು ಕೋರಿಕೊಳ್ಳಲಾಗುವುದು. (ಪಾರಿತೋಷಕದ ಸಂಸ್ಥೆಗಳೆಂದರೆ: ದ ರಾಯಲ್ ಸ್ವೀಡಿಷ್ ಅಕಾಡೆಮಿ, ದ ರಾಯಲ್ ಕ್ಯಾರೊಲಿನ್ ಮೆಡಿಕೊ ಶಿರುಜಿಕಲ್ ಇನ್ಸ್ಟಿಟ್ಯೂಟ್, ದ ಸ್ವೀಡಿಷ್ ಅಕಾಡೆಮಿ ಆಫ್ ಲಿಟರೇಚರ್ ಹಾಗೂ ನಾರ್ವೇಜಿಯನ್ ನೊಬೆಲ್ ಕಮಿಟಿ). ವಿಶ್ವಮಟ್ಟದ ಮಾನ್ಯತೆ ಇರುವ ವ್ಯಕ್ತಿಗಳು ಈ ಪಾರಿತೋಷಕಗಳಿಗೆ ಅರ್ಹರಾಗುತ್ತಾರೆ. ತಮಗೆ ತಾವೇ ಅಭ್ಯರ್ಥಿತನವನ್ನು ಮುಂದೊಡ್ಡುವವರನ್ನು ಕೂಡಲೇ ಅನರ್ಹಗೊಳಿಸಲಾಗುವುದು. ಆಯಾ ವರ್ಷ ಫೆಬ್ರವರಿ ಮಾಹೆಯ ಹೊತ್ತಿಗೆ ಸೂಚನೆಗಳು ಲಿಖಿತರೂಪದಲ್ಲಿ ನೊಬೆಲ್ ಸಮಿತಿಯನ್ನು ತಲುಪಬೇಕು. ಮರಣೋತ್ತರವಾದ ಸೂಚನೆಗಳನ್ನು ಸ್ವೀಕರಿಸಲಾಗುವುದಿಲ್ಲ. ಆದರೆ ಒಮ್ಮೆ ಬಹುಮಾನವನ್ನು ಘೋಷಿಸಿದರೆ ಮರಣೋತ್ತರವಾಗಿ ಬಹುಮಾನವನ್ನು ವಿತರಿಸಲು ಅಡ್ಡಿಯಿಲ್ಲ. ಆಯಾ ಕ್ಷೇತ್ರದಲ್ಲಿನ ತಜ್ಞರ ಅಭಿಪ್ರಾಯವನ್ನು ತಿಳಿದುಕೊಳ್ಳಲು ಸಮಿತಿಗೆ ಹಕ್ಕಿದೆ. ಅತ್ಯಂತ ರಹಸ್ಯವಾದ ರೀತಿಯಲ್ಲಿ ಪ್ರತೀವರ್ಷ ಸೆಪ್ಟಂಬರ್ ತಿಂಗಳು ಆಖೈರಾಗುವುದರೊಳಗೆ ಪಾರಿತೋಷಕಗಳ ನಿರ್ಧಾರವಾಗಿಬಿಡುತ್ತದೆ.

ಅಕ್ಟೋಬರ್ ಆರಂಭಕ್ಕೆ ಪಾರಿತೋಷಕಗಳ ಘೋಷಣೆಯಾಗುತ್ತದೆ. ಮುಂಜಾನೆಯ ದೂರವಾಣಿ ಕರೆಯ ಮೂಲಕ ಬಹುಮಾನ ವಿಜೇತರಿಗೆ ಮೊದಲು ತಿಳಿಸಲಾಗುವುದು; ನಂತರ ಪತ್ರಿಕೆಗಳು ಹಾಗೂ ವಿದ್ಯುನ್ಮಾನ ಮಾಧ್ಯಮಗಳಿಗೆ ತಿಳಿಸಲಾಗುವುದು.

ಭೌತಶಾಸ್ತ್ರ,ರಾಸಯನಶಾಸ್ತ್ರ, ವೈದ್ಯಕೀಯ ಶಾಸ್ತ್ರ, ಸಾಹಿತ್ಯದ ಬಹುಮಾನಗಳ ಜೊತೆಗೆ ಅರ್ಥಶಾಸ್ತ್ರಕ್ಕೆ 'ನೊಬೆಲ್ ಸ್ಮಾರಕ ಬಹುಮಾನವನ್ನೂ ಸಹ ಡಿಸೆಂಬರ್ ೧೦ನೇ ತಾರೀಖು ಸ್ವೀಡನ್ನಿನ ಸ್ಟಾಕ್‌ಹೋಮ್‌ನಲ್ಲಿ ದೊರೆ ಹಾಗೂ ರಾಣಿಯವರ ಸಮ್ಮುಖದಲ್ಲಿ ವೈಭವೋಪಕ ಸಮಾರಂಭದಲ್ಲಿ ವಿತರಿಸಲಾಗುವುದು. ಡಿಸೆಂಬರ್ ೧೦ ಈ ಬಹುಮಾನಗಳ ಸ್ಥಾಪಕರಾದ ಆಲ್‌ಫರ್ಡ್ ನೊಬೆಲ್ಲರ ಪುಣ್ಯತಿಥಿಯ ದಿನವಾಗಿರುತ್ತದೆ. ನೊಬೆಲ್ ಶಾಂತಿ ಪಾರಿತೋಷಕವನ್ನು ಅದೇ ದಿನ ಆಸ್ಲಾನಗರದಲ್ಲಿ ದೊರೆ ಹಾಗೂ ಫಿನ್‌ಲ್ಯಾಂಡಿನ

ರಾಣಿಯವರ ಸಮ್ಮುಖದಲ್ಲಿ ಅಷ್ಟೇ ವೈಭವದ ಸಮಾರಂಭದಲ್ಲಿ ವಿತರಿಸ ಲಾಗುವುದು.

ನೊಬೆಲ್ ಪ್ರಶಸ್ತಿಗಳ ಉದ್ಘಾಟನಾ ಸಮಾರಂಭ ೧೯೦೧ರ ಡಿಸೆಂಬರ್ ೧೦ನೇ ತಾರೀಖು, ಆಲ್‌ಫ್ರೆಡ್ ನೊಬೆಲ್ಲರ ಐದನೇ ಪುಣ್ಯತಿಥಿಯಂದು ಜರುಗಿತು. ಗೆದ್ದವರು ತಾವೇ ವ್ಯಕ್ತಿಶಃ ಬಂದು ಪ್ರಶಸ್ತಿಯನ್ನು ಸಾಂಪ್ರದಾಯಿಕವಾಗಿ ಸ್ವೀಕರಿಸಬೇಕು. ಉಡುಗೆ ತೊಡಿಗೆಯ ಕ್ರಮ ಬಹಳ ಕಟ್ಟುನಿಟ್ಟಿನದಾಗಿರುತ್ತದೆ. ಬಾಲದ ಕೋಟನ್ನು ಒಳಗೊಂಡ ದಟ್ಟಬಣ್ಣದ ಸೂಟು ಧರಿಸಬೇಕಾಗಿರುವುದು ನಿಯಮವಾಗಿದೆ.

೨೦೦೦ನೇ ಇಸವಿಯ ನೊಬೆಲ್ ಬಹುಮಾನಗಳ ಘೋಷಣೆಯಿಂದ ಈ ಪಾರಿತೋಷಕಗಳು ಸ್ಥಾಪನೆಯಾಗಿ ಒಂದು ನೂರು ವರ್ಷ ಮುಗಿದಂತಾಗಿದೆ. ಇದುವರೆಗೆ ನೊಬೆಲ್ ಪ್ರಶಸ್ತಿಗೆದ್ದವರಲ್ಲಿ ೬೮೦ ಮಂದಿ ವ್ಯಕ್ತಿಗಳು, ೧೬ ಅಂತರರಾಷ್ಟ್ರೀಯ ಸಂಘಟನೆಗಳು ಸೇರಿವೆ. ಇದುವರೆಗೆ ೭೦೨ ಪ್ರಶಸ್ತಿಗಳ ಘೋಷಣೆಯಾಗಿದೆ.

ನಾಲ್ಕು ಮಂದಿ ವಯಕ್ತಿಕವಾಗಿ ಹಾಗೂ ಎರಡು ಅಂತರರಾಷ್ಟ್ರೀಯ ಸಂಘಟನೆಗಳು ಎರಡು ಬಾರಿ ನೊಬೆಲ್ ಬಹುಮಾನವನ್ನು ಗೆದ್ದಿದ್ದಾರೆ. ವೈದ್ಯಶಾಸ್ತ್ರದಲ್ಲಿ ಅತಿಹೆಚ್ಚು ಪ್ರಶಸ್ತಿಗಳು, ಅಂದರೆ ೧೬೯ ಬಹುಮಾನಗಳು ವಿತರಣೆಯಾಗಿದ್ದರೆ, ಎರಡನೆಯ ಸ್ಥಾನ ಭೌತಶಾಸ್ತ್ರಕ್ಕೆ - ೧೫೮, ಹೋಗಿದೆ; ರಸಾಯನ ಶಾಸ್ತ್ರಕ್ಕೆ ೧೩೧, ೯೯ ಸಾಹಿತ್ಯ ಕ್ಷೇತ್ರಕ್ಕೆ ಹೋಗಿವೆ. ನೊಬೆಲ್ ಶಾಂತಿ ಪಾರಿತೋಷಕವು ೮೭ ಬಾರಿ ವ್ಯಕ್ತಿಗಳಿಗೆ ಹಾಗೂ ೧೬ ಬಾರಿ ಅಂತರ ರಾಷ್ಟ್ರೀಯ ಸಂಘಟನೆಗಳಿಗೆ ಹೋಗಿದೆ. ಅರ್ಥಶಾಸ್ತ್ರಕ್ಕಾಗಿ ನೊಬೆಲ್ ಸ್ಮಾರಕ ಬಹು ಮಾನ ೪೩ ಬಾರಿ ವಿತರಣೆಯಾಗಿದೆ.

ಮೇರಿಕ್ಯೂರಿ ಭೌತಶಾಸ್ತ್ರಕ್ಕೆ ೧೯೦೩ರಲ್ಲಿ ಹಾಗೂ ರಸಾಯನಶಾಸ್ತ್ರಕ್ಕೆ ೧೯೧೧ರಲ್ಲಿ (೮ ವರ್ಷದ ಅವಧಿಯಲ್ಲಿ) ಎರಡು ಬಾರಿ ಪ್ರಶಸ್ತಿ ಗೆದ್ದರು. ಮೇರಿಕ್ಯೂರಿ ಕಡೆಯ ತನಕ ಒಬ್ಬ ತಾಯಿಯಾಗಿ, ಪತ್ನಿಯಾಗಿ, ವಿಜ್ಞಾನಿಯಾಗಿ ಇದ್ದರೆಂಬುದನ್ನು ನಾವು ಮರೆಯುವಂತಿಲ್ಲ. ಮೇರಿಕ್ಯೂರಿಯವರಂತೆಯೇ ಎರಡು ಬೇರೆ ಬೇರೆ ಕ್ಷೇತ್ರಗಳಲ್ಲಿ ೮ ವರ್ಷದ ಅವಧಿಯಲ್ಲಿ ಲೈನಸ್ ಪಾಲಿಂಗ್ ನೊಬೆಲ್ ಪ್ರಶಸ್ತಿ ಗಳಿಸಿದರು. ರಸಾಯನಶಾಸ್ತ್ರಕ್ಕೆ ೧೯೫೪ ರಲ್ಲಿ ಮತ್ತೆ ೧೯೬೨ರಲ್ಲಿ ಶಾಂತಿ ನೊಬೆಲ್ ಪ್ರಶಸ್ತಿ ಗೆದ್ದರು.

ಕ್ಯೂರಿ ಮತ್ತು ಪಾಲಿಂಗ್ ಎರಡು ಬಾರಿ ನೊಬೆಲ್ ಪ್ರಶಸ್ತಿಗೆದ್ದವರು. ೧೯೧೧ರಲ್ಲಿ ಮೇರಿಕ್ಯೂರಿ ಒಬ್ಬರೇ ರಸಾಯನಶಾಸ್ತ್ರದ ಬಹುಮಾನ ಗೆದ್ದರೆ ೧೯೦೩.ರಲ್ಲಿ ಭೌತಶಾಸ್ತ್ರದ ಬಹುಮಾನವನ್ನು ಎ.ಎಚ್. ಬೆಕೆರಲ್ ಹಾಗೂ ತಮ್ಮ ಪತಿ ಪಿಯರೆ ಕ್ಯೂರಿ ಅವರೊಡನೆ ಹಂಚಿಕೊಂಡರು. ಲೈನಸ್ ಪಾಲಿಂಗ್ ಮಾತ್ರ ಎರಡು ಬಾರಿ ನೊಬೆಲ್ ಪ್ರಶಸ್ತಿ ಗೆದ್ದಾಗಲೂ (೧೯೫೪ ಮತ್ತು ೧೯೬೨) ಯಾರೊಡನೆಯೂ ಹಂಚಿಕೊಳ್ಳಬೇಕಾದ ಪ್ರಸಂಗ ಒದಗಲಿಲ್ಲ.

ಕ್ಷ-ಕಿರಣವನ್ನು ಕಂಡು ಹಿಡಿದದ್ದು ಶತಮಾನದ ಅದ್ಭುತವಾದ ಒಂದು ಆವಿಷ್ಕಾರವಾಗಿದ್ದು "ಮೊದಲ ನೊಬೆಲ್ ಪ್ರಶಸ್ತಿ"ಯನ್ನು ಗೆದ್ದುಕೊಟ್ಟ ಹೆಗ್ಗಳಿಕೆಗೆ ಪಾತ್ರವಾಯಿತು. ತರುವಾಯ ಭೌತಶಾಸ್ತ್ರ ವೈದ್ಯಕೀಯ ಮತ್ತು ರಸಾಯನಶಾಸ್ತ್ರದ ಕ್ಷೇತ್ರಗಳಲ್ಲಿ ಆಗಿರುವ ಆವಿಷ್ಕಾರಗಳಲ್ಲಿ ಪ್ರಧಾನ ಪಾತ್ರ ವಹಿಸುವುದರ ಮೂಲಕ ಕ್ಷ-ಕಿರಣ ಹಲವು ನೊಬೆಲ್ ಬಹುಮಾನಗಳಿಗೆ ಕಾರಣವಾಗಿರುವುದು ಗಮನಾರ್ಹ. ಸುಮಾರು ಹದಿನೇಳು ಮಂದಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಕ್ಷ-ಕಿರಣವನ್ನು ಉಪಯೋಗಿಸಿ ನೊಬೆಲ್ ಬಹುಮಾನವನ್ನು ಗೆದ್ದಿದ್ದಾರೆ.

ನಮ್ಮ ಕಡೆಗೆ ನಾವು ಕ್ಯಾಮರಾವನ್ನು ಈಗ ತಿರುಗಿಸಿ ನೋಡಿಕೊಳ್ಳಬೇಕಾಗಿರುವುದು ಅನಿವಾರ್ಯ. ನಮ್ಮಲ್ಲಿ ಮೂರು ಮಂದಿ ನೊಬೆಲ್ ಪ್ರಶಸ್ತಿ ಗಳಿಸಿದ್ದಾರೆ; ಭೌತಶಾಸ್ತ್ರಕ್ಕೆ (ಸರ್ ಸಿ.ವಿ. ರಾಮನ್), ಸಾಹಿತ್ಯಕ್ಕೆ (ರವೀಂದ್ರನಾಥ ಟ್ಯಾಗೋರ್) ಹಾಗೂ ಶಾಂತಿಗಾಗಿ (ಮದರ್ ಥೆರೆಸಾ), ಭಾರತದಲ್ಲಿ ವಾಸಿಸದಿದ್ದರೂ ಭಾರತ ಮೂಲದವರಾದ ಇನ್ನು ಮೂರು ಮಂದಿ ನೊಬೆಲ್ ಬಹುಮಾನ ಗೆದ್ದಿದ್ದಾರೆ ; ಭೌತಶಾಸ್ತ್ರದಲ್ಲಿ (ಪ್ರೊ. ಎಸ್. ಚಂದ್ರಶೇಖರ್), ವೈದ್ಯಕೀಯದಲ್ಲಿ (ಪ್ರೊ. ಹರಗೋವಿಂದ್ ಖುರಾನಾ) ಹಾಗೂ ಅರ್ಥಶಾಸ್ತ್ರದಲ್ಲಿ ಪ್ರೊ. ಅಮರ್ತ್ಯಸೇನ್).

ವೈದ್ಯಕೀಯದಲ್ಲಿ ಉಪಮೆಗಳು

ಡಾ. ಸ.ಜ. ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬ.ವಿ.ವ. ಸಂಘ
ಬಾಗಲಕೋಟೆ-೫೮೭ ೧೦೧

ದೇಹದ ಅಂಗೋಪಾಂಗಾದಿಗಳನ್ನು ನೇರವಾಗಿ ನೋಡುವುದು, ಅವುಗಳ ಸ್ಥಿತಿಗತಿಗಳನ್ನು ವಿವರಿಸುವುದು, ರೋಗಲಕ್ಷಣಗಳನ್ನು ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಗಮನಿಸಿ ತಪಾಸಿಸುವುದು ಮುಂತಾದವು ರೋಗನಿದಾನ ಕ್ರಮದಲ್ಲಿ ಬಳಕೆಯಲ್ಲಿರುವ ಅನುಭವಜನ್ಯ ತಂತ್ರಗಳು. ಆಗ ಒದಗುವ ಅನುಭವಕ್ಕೆ ನುಡಿಯೊಡಲು ಕೊಡುವಾಗ ವೈದ್ಯರು (ಇವರು ಸಾಹಿತ್ಯ ಕೋವಿದರಲ್ಲ, ಉಪಮೆ ಬಳಸುವುದರಲ್ಲಿ ಕವಿಗಳೂ ಅಲ್ಲ) ತೀರ ಸಹಜವಾಗಿ ಪ್ರಯೋಗಿಸುವ ಪದಗಳಲ್ಲಿ ಜೀವನಾನುಭವವೂ ಸಾಹಿತ್ಯ ಸಂಸ್ಪರ್ಶವೂ ಹೇಗೆ ಅನ್ಯೋನ್ಯವಾಗಿ ಬೆಸುಗೆಗೊಂಡು ವೈದ್ಯಕೀಯ ವಾಙ್ಮಯವನ್ನು ಸಮೃದ್ಧಗೊಳಿಸಿವೆ, ಸಾಹಿತ್ಯದ ವ್ಯಾಪ್ತಿಯನ್ನು ವಿಸ್ತರಿಸಿವೆ ಎಂಬ ಸಂಗತಿಗಳನ್ನು ಪ್ರಸಕ್ತ ವೈದ್ಯಕೀಯ ಅನುಭವ ದೀಪ್ತ ಸಾಹಿತ್ಯಾತ್ಮಕ ಲೇಖನದಲ್ಲಿ ಕಾಣಬಹುದು.

ವೈದ್ಯಶಾಸ್ತ್ರದಲ್ಲಿ ಬಳಸುವ ಉಪಮೆಗಳನ್ನು ಮುಖ್ಯವಾಗಿ ಎರಡು ಗುಂಪುಗಳಲ್ಲಿ ವಿಂಗಡಿಸಲು ಸಾಧ್ಯ. ಒಂದು ಗುಂಪಿನ ಪದಗಳು ಅಂಗಾಂಶ ಆಕಾರಗಳನ್ನು ನೋಡಿ ಅವು ಯಾವ ವಸ್ತುವಿಗೆ ಹೋಲುತ್ತವೆಯೋ ಅಂಥ ವಸ್ತುಗಳ ಹೆಸರು ಬಳಸಿ ಆ ಅಂಗಾಂಶವನ್ನು ವರ್ಣಿಸುವರು. ಎರಡನೇ ಗುಂಪುನಲ್ಲಿ ನಾವು ನಿತ್ಯ ಬಳಸುವ ಆಹಾರ ಪದಾರ್ಥಗಳ ಹೆಸರು ಬಳಸಿ ಅಂಗಾಂಶ ವರ್ಣನೆ ಮಾಡುವರು. ಒಂದೊಂದೇ ಗುಂಪುಗಳಲ್ಲಿ ಬರುವ ಪದಗಳನ್ನು ಯಾದಿ ಮಾಡಿ ಅವುಗಳ ಅರ್ಥ ಗ್ರಹಿಸುವುದು ಒಳ್ಳೆಯದೆನಿಸುತ್ತದೆ.

ಮೊದಲನೆಯ ಗುಂಪು (ಆಕಾರಾದಿಯಾಗಿ):
೧. ಆನೆಬಾವು- ಆನೆಕಾಲು, ಆನೆಕೈ, ಆನೆ ತರಡು, ಆನೆ ಮೊಲೆ, ಇತ್ಯಾದಿ.
೨. ಕೊಕ್ಕೆ ಹುಳು ೩. ಲಾಡಿ ಹುಳು ೪. ಸಿಂಹ ಮುಖ ೫. ಚಂದ್ರ ಮುಖ ೬. ಕುಡುಗೋಲ ಜೀವಕೋಶ ರಕ್ತಕೊರೆ ೭. ಪಾದ ವಾಲ್ಮೀಕ ೮. ಕಡಲೆ ಮೊಳೆ ಯಕೃತ್ ೯. ಕಾಫಿ ಬೀಜ ನಬ್ಬೀಜಕ ೧೦. ಮೀನು ಬಾಯಿ ೧೧. ಗುಡಿಯ ಕಾಜು ೧೨. ಚಮಚೆ ಉಗುರು ೧೩. ಬ್ಯಾರೆಲ್ ಎದೆ ೧೪. ಮಂಗೋಲಿ ಮುಖ.

೧.೧ ಆನೆ ಬಾವು: ದೇಹದ ಒಂದು ಭಾಗದಲ್ಲಿ ಬಾವು ಕಾಣುವುದು, ಹೆಚ್ಚಾಗುತ್ತ ಹೋಗಿ ಅತಿ ಆಗುವುದು. ಆಗ ಆ ಭಾಗವು ಆನೆಯ ಗಾತ್ರದಷ್ಟು ದೊಡ್ಡದಾಗುವುದು. ಇಂಥ ಬಾವನ್ನು ನಾವು ಆನೆ ಬಾವು ರೋಗ ಎನ್ನುತ್ತೇವೆ. ಆಂಗ್ಲಭಾಷೆಯಲ್ಲಿ 'ಎಲಿಫಂಟಿಸಿಯಾಸಿಸ್' ಎನ್ನುವರು. ಕಾರಣ ಆನೆಕಾಲು, ಆನೆ ಕೈ, ಆನೆ ತರಡು, ಮೊಲೆ ಎಂಬ ಹೆಸರುಗಳು ಬಂದಿವೆ.

ಇದಕ್ಕೆ ಫೈಲೇರಿಯಾ ಎಂಬ ಹುಳು ಹಾಗೂ ಕ್ಯಾನ್ಸರ್ ಕಾರಣವಾಗಲು ಸಾಧ್ಯ.

೧.೨ ಕೊಕ್ಕೆಹುಳು : ಇದೊಂದು ದುಂಡು ಹುಳು. ಇದರ ದೇಹದ ಮುಂಭಾಗವು ಕೊಕ್ಕೆಯಂತೆ ಮಣಿದಿರುತ್ತದೆ. ಈ ಕೊಕ್ಕೆ ಆಕಾರವು ಹುಳು ರಕ್ತ ಹೀರಲು ಅನುಕೂಲವಾಗುವುದು. ಹುಳುವು ಎಷ್ಟು ರಕ್ತ ಹೀರುವುದೆಂದರೆ ರೋಗಿಯನ್ನು ಅಲ್ಪಕಾಲದಲ್ಲಿ ಕೊಂದು ಹಾಕುವುದು. ಕಾರಣ ಈ ಹುಳದ ಇನ್ನೊಂದು ಹೆಸರು ''ನೆಕೆಟಾರ್ ಅಮೆರಿಕಾನ್'' ಎಂದು ನೆಕೆಟಾರ್ ಎಂದರೆ ಕೊಲೆಗಡುಕ ಎಂದೇ ಅರ್ಥ.

೧.೩ ಲಾಡಿ ಹುಳು: ಲಾಡಿ ಎಂದರೆ ಎಲ್ಲರಿಗೂ ತಕ್ಷಣ ಗೊತ್ತಾಗುವುದು. ಇದು ಚಪ್ಪಟೆಯಾದ ಅರಿವೆಯ ದಾರ. ಮಾನವನನ್ನು ಪೀಡಿಸುವ ಹಲವಾರು ಹುಳುಗಳಲ್ಲಿ ಇದೂ ಒಂದು. ಕೆಲವು ಸಲ ಈ ಹುಳು ೧೦ ರಿಂದ ೧೫ ಅಡಿ ಉದ್ದವಿರುತ್ತದೆ. ಇದನ್ನು ನೋಡಿದರೆ ಲಾಡಿಯನ್ನು ನೋಡಿದಂತೆ ಅನಿಸುವುದು.

೧.೪ ಸಿಂಹ ಮುಖ: ಕೇಳಲು ಇದು ಒಳ್ಳೆಯದೆನಿಸಬಹುದು. ನನ್ನ ಮುಖವು ಸಿಂಹದಂತೆ ಇದೆ ಎಂದು ಅನ್ನಬಹುದು. ಆದರೆ ವೈದ್ಯಕೀಯವಾಗಿ ಇದೊಂದು ಅನಾಹುತ. ಅತಿ ತೀವ್ರತರ ಕುಷ್ಠರೋಗಿಯ ಮುಖವನ್ನು ಸಿಂಹಮುಖ

ಎಂದು ವರ್ಣಿಸುವರು. ಈ ವ್ಯಕ್ತಿಯ ಮುಖದ ವೈಶಿಷ್ಟ್ಯವೇನೆಂದರೆ ಮುಖದ ಮೇಲೆ ಗಂಟುಗಳು ಇರುತ್ತವೆ. ಮೂಗು ಕುಸಿದು ಚಪ್ಪಟೆಯಾಗಿರುವುದು. ಮೀಸೆ, ಗಡ್ಡ, ಕಣ್ಣಿನ ಹುಬ್ಬು, ಕಣ್ಣೆವೆಗಳು ಉದುರಿ ಹೋಗಿರುತ್ತದೆ.

೧.೫ ಚಂದ್ರಮುಖ : ಇದೇ ಮಾತನ್ನು ಒಬ್ಬ ಕವಿ ಅಥವಾ ಸಾಹಿತಿ ಓರ್ವ ಸ್ತ್ರೀಗೆ ಹೇಳಿದರೆ ಆಕೆ ಸಂತೋಷಪಡುವಳು. ತಾನು ಸುಂದರಿ ಎಂಬ ಹೆಮ್ಮೆ ಇರುತ್ತದೆ. ಆದರೆ ಚಂದ್ರಮುಖ ಎಂಬ ಪದವನ್ನು ಒಬ್ಬ ವೈದ್ಯ ಓರ್ವ ಸ್ತ್ರೀಗೆ ಉಪಯೋಗಿಸಿದರೆ ಅನಾಹುತ. ಅದರ ಅರ್ಥವೆಂದರೆ ಕಾರ್ಟಿಸೋನ್ ಎಂಬ ಮದ್ದನ್ನು ಅತಿಯಾಗಿ ಕೊಟ್ಟಿರುವರು. ಆದರಿಂದ ಆ ಸ್ತ್ರೀಯ ಮುಖವು ನೀರು ತುಂಬಿ ದುಂಡಗೆ ಚಂದ್ರನಂತೆ ಕಾಣುವುದು. ಇದು ಅತಿ ಉಪಚಾರದ ಪ್ರಭಾವ. ಮುಖದೊಡನೆ ವ್ಯಕ್ತಿಯಲ್ಲಿ ಮೊಲೆಗಳು, ಗಡ್ಡ-ಮೀಸೆಗಳು ಅಂಗಾಂಗಗಳು ಎಲವುಗಳು ಬದಲಾವಣೆ ತೋರಿ ವ್ಯಕ್ತಿಯ ಜೀವನವನ್ನು ಹಾಳು ಮಾಡಿರುತ್ತವೆ.

೧.೬ ಕುಡುಗೋಲ ಜೀವಕೋಶ ರಕ್ತಕೊರೆ: ಇದೊಂದು ಪ್ರಕಾರ ರಕ್ತ ಕೊರೆ. ಇದರಲ್ಲಿ ರಕ್ತ ಕೆಂಪು ಗೋಲಕಗಳು ದುಂಡಾಗಿರದೆ ಕುಡುಗೋಲಿನ ಆಕಾರ ಪಡೆಯುತ್ತವೆ. ಇಂಥ ಗೋಲಕಗಳು ಕೇಶವಾಹಿನಿಗಳಲ್ಲಿ ಗಂಟುಗಳಾಗಿ ರಕ್ತ ಪ್ರವಾಹವನ್ನೇ ತಡೆಯುತ್ತವೆ. ಆಗ ರೋಗಿಯು ಹಲವು ತೊಂದರೆಗಳಿಂದ ಬಳಲಬೇಕಾಗುವುದು. ನಿಗ್ರೋ ಜನಾಂಗದವರಲ್ಲಿ ಇದು ಹೆಚ್ಚು . ಹಿಮ್ಮಡದ ಹತ್ತಿರ ಹುಣ್ಣುಗಳು ಹುಟ್ಟು ಮಾಯುವುದಿಲ್ಲ.

೧.೭ ಪಾದವಾಲ್ಮಿಕ: ಇದರ ಸರಳ ಅರ್ಥ ಪಾದವು ಹಾವಿನ ಹುತ್ತದಂತೆ ಇರುವದು. ಅದು ಹೇಗೆ? ವ್ಯಕ್ತಿಯು ಮುಳ್ಳು ತುಳಿದಿರುತ್ತಾನೆ. ಮುಳ್ಳಿನ ಮೈಮೇಲೆ ಒಂದು ಜಾತಿಯ ಬೂರಸು ಬೆಳೆದಿರುತ್ತದೆ. ಈ ಬೂರಸು ಚರ್ಮದ ತಳದಲ್ಲಿ ಸೇರಿ ಬೆಳೆಯುವದು. ಅಲ್ಲಿ ಗಂಟುಗಳಾಗುವುವು. ಗಂಟು ಉಬ್ಬುವುವು. ಅನಂತರ ಗಂಟುಗಳು ಒಡೆಯುವುವು. ಅವು ಒಡೆದಲ್ಲಿ ರಂಧ್ರಗಳು ಬೀಳುವುವು. ರಂಧ್ರಗಳಿಂದ ನುಚ್ಚಿನಂಥ ಹರಳು ಹೊರ ಬೀಳುವುವು. ಹಲವಾರು ರಂಧ್ರಗಳು ಗಂಟುಗಳು ಕೂಡಿ ಪಾದವು ಹುತ್ತದಂತೆ ಬೆಳೆದಿರುತ್ತದೆ.

೧.೮ ಕಡಲೆ ಮೊಳೆ ಯಕೃತ : ಕೆಲ ವರ್ಷಗಳ ಹಿಂದೆ ಹಳ್ಳಿಗಳಲ್ಲಿ ತೊಗಲಿನ ಚಪ್ಪಲ್ಲು ಹಾಗೂ ಕೆರವು ಮಾಡುತ್ತಿದ್ದರು. ಇವುಗಳ ತಳವು ಬೇಗನೇ ಸವೆದು ಹೋಗಬಾರದೆಂದು ಕಬ್ಬಿಣದ ಮೊಳೆಗಳನ್ನು ಹೊಡೆಯುತ್ತಿದ್ದರು. ಇವುಗಳಲ್ಲಿ ಒಂದು ಪ್ರಕಾರದ ಮೊಳೆಯನ್ನು ಕಡ್ಲೆ ಮೊಳೆ ಅನ್ನುತ್ತಿದ್ದರು. ಇವು ಕಡಲೆಯಂತೆ ತೋರುತ್ತಿದ್ದುವು.

ಯಕೃತವು ಹಲವಾರು ರೋಗಗಳಿಂದ ಬಳಲುತ್ತದೆ . ಅವುಗಳಲ್ಲಿ ಸಿರ್ಹೋಸಿಸ್ ಎಂಬುದು ಒಂದು. ಇದರಲ್ಲಿ ಯಕೃತ ಜೀವಕಣಗಳು ಕೊಳೆತು ಹೋಗಿ ಅಲ್ಲಿ ನಾರು ಅಂಗಾಂಶ ಹೆಚ್ಚುತ್ತದೆ. ಕಾರಣ ಯಕೃತ ನೋಡಲು ಗಂಟುಗಂಟಾಗಿರುತ್ತದೆ. ಗಂಟುಗಳು ಚಿಕ್ಕವಾಗಿದ್ದಾಗ ಯಕೃತವನ್ನು ಕಡಲೆ ಮೊಳೆ ಯಕೃತ ಎನ್ನುವರು. ಮದ್ಯಪಾನಿಗಳಲ್ಲಿ ಇದು ಕಾಣುವುದು. ಇದು ಕಂಡಮೇಲೆ ರೋಗಿಯ ಕಥೆ ಮುಗಿದಂತೆ.

೧.೯ ಕಾಫೀ ಬೀಜ-ನಬ್ಬೀಜಕ : ಪ್ರತಿ ಜೀವಕಣಕ್ಕೆ ಒಂದು ನಬ್ಬೀಜಕ ಇರುತ್ತದೆ. ಸಾಮಾನ್ಯವಾಗಿ ನಬ್ಬೀಜಕಗಳು ದುಂಡಾಗಿರುತ್ತವೆ. ಆದರೆ ಒಂದು ಪ್ರಕಾರದ ದುರ್ಮಾಂಸದ ಜೀವಕಣಗಳ ನಬ್ಬೀಜಕವು ಒಂದು ಗೆರೆಯನ್ನು ಪಡೆದಿರುತ್ತದೆ. ಕಾರಣ ಈ ನಬ್ಬೀಜಕಗಳನ್ನು ಕಾಫೀ ಬೀಜ ನಬ್ಬೀಜಕ ಎನ್ನುವರು.

೧.೧೦ ಮೀನು ಬಾಯಿ : ಮೀನಿನ ಬಾಯಿ ಅಗಲವಾಗಿದ್ದು ಕೊಳವೆಯಂತೆ ಇರುತ್ತದೆ. ಹೃದಯವು ಹಲವಾರು ತೊಂದರೆಗಳಿಂದ ಬಳಲುವುದು. ರುಮಾಟಿಕ್ ಹೃದಯ ರೋಗ ಎಂಬುದು ಅದರಲ್ಲಿ ಒಂದು. ಈ ರೋಗದಲ್ಲಿ ಹೃದಯ ಕವಾಟುಗಳು ಒಂದಕ್ಕೊಂದು

ಅಂಟಿಕೊಂಡು ಕೊಳವೆ ಆಕಾರ ಮಾಡುತ್ತವೆ. ಕಾರಣವೇ ಇಂಥ ಹೃದಯ ಕವಾಟುಗಳಿಗೆ ಮೀನು ಬಾಯಿ ಕವಾಟ ಎನ್ನುವೆವು.

೧.೧೧ ಗುಂಡಿಯ ಕಾಜು : ನಾವು ತೊಡುವ ಅಂಗಿಗಳಿಗೆ ಗುಂಡಿಗಳು ಇರುವುವು. ಇವನ್ನು ಹಿಡಿದುಕೊಳ್ಳಲು ಅರಿವೆಯಲ್ಲಿ ಕಾಜು ಮಾಡುವರು. ಕಾಜುಗಳ ರಂಧ್ರ ಚಿಕ್ಕದು. ಹೃದಯವು ರುಮ್ಯಾಟಿಕ್ ರೋಗದಿಂದ ಬಳಲುವುದು. ರೋಗದಿಂದ ಹೃದಯ ಕವಾಟುಗಳು ಒಂದ ಕ್ಕೊಂದು ಅಂಟಿಕೊಳ್ಳು ವವು. ಇದು ಕ್ರಮೇಣ ಆಕುಂಚನವಾಗುತ್ತ ಹೋಗಿ ಒಂದು ಕಾಜುವಿನಂತೆ ತೋರುವುದು.

೧.೧೨ ಚಮಚಿ ಉಗುರು : ಕೈ ಬೆರಳುಗಳ ಉಗುರು ಸುಂದರವಾಗಿರಬೇಕು. ಅವು ಸುಂದರವಾಗಿರಬೇಕಾದರೆ ವ್ಯಕ್ತಿಯ ಆರೋಗ್ಯ ಒಳ್ಳೆಯದಾಗಿರಬೇಕು. ಅನಾರೋಗ್ಯವು ಉಗುರುಗಳ ಆಕಾರ ಕೆಡಿಸುತ್ತದೆ. ರಕ್ತಕೊರೆ ಒಂದು ರೋಗ. ದೀರ್ಘಕಾಲದವರೆಗೆ ಅದು ಉಳಿದರೆ ಅದು ಉಗುರಿನ ಅಂದವನ್ನು ಹದಗೆಡಿಸುವದು. ಮೊದಲು ಉಗುರು ಚಪ್ಪಟೆಯಾಗುವುದು. ಆದರ ವರ್ಣ ಬೆಳ್ಳ ಗಾಗುವುದು. ಅನಂತರ ಉಗುರಿನ ಮಧ್ಯದಲ್ಲಿ ಕುಳಿ ಬೀಳುವುದು. ಆಗ ಉಗುರು ಚಮಚ ದಂತೆ ತೋರುವುದು. ಇದೇ ಚಮಚಿ ಉಗುರು. ರಕ್ತಕೊರೆ ಸರಿ ಹೋದಂತೆ ಇದು ಮಾಯವಾಗಿ ಸರಿಯಾದ ಆಕಾರ ಬರುವುದು.

೧.೧೩ ಬ್ಯಾರೆಲ್ ಎದೆ : ಬ್ಯಾರಲ್ ಎಂದರೆ ಸಿಲಿಂಡರ್ ಆಕಾರದ ತಗಡಿನ ಡಬ್ಬಿ. ಇದರ ವ್ಯಾಸ ಎಲ್ಲ ಕಡೆಯಿಂದ ಅಷ್ಟೇ ಇರುತ್ತದೆ. ಎರಡನೆಯದಾಗಿ ಇದು ಹಿಗ್ಗುವುದಿಲ್ಲ ಹಾಗೂ ಕುಗ್ಗುವುದಿಲ್ಲ. ಇಂಥ ಎದೆ ನಮಗೆ ಅಸ್ಥಮಾ ರೋಗಿಗಳಲ್ಲಿ ಕಾಣುವುದು.

ಆರೋಗ್ಯವಂತರ ಎದೆ ಚಪ್ಪಟೆಯಾಗಿರು ತ್ತದೆ. ಹಿಂದು-ಮುಂದೆ ಕಡಿಮೆ ವ್ಯಾಸ. ಮಗ್ಗುಲಿಂದ ಮಗ್ಗುಲಿಗೆ ದೊಡ್ಡದಿರುವುದು. ಉಸಿರು ತೆಗೆದುಕೊಂಡರೆ ಹಿಗ್ಗುವುದು. ಉಸಿರು ಬಿಟ್ಟರೆ ಕುಗ್ಗುವುದು.

ಬ್ಯಾರಲ್ ಎದೆ ಅಂದರೆ ರೋಗಿಷ್ಠ. ಕೆಲಸಕ್ಕೆ ಬಾರದ ಎದೆ ಎಂದು ಅರ್ಥ.

೧.೧೪ ಮಂಗೋಲಿ ಮುಖ : ಒಂದೊಂದು ಜನಾಂಗದ ಮುಖ ಒಂದೊಂದು ತರ. ಅಂಥವುಗಳಲ್ಲಿ ಮಂಗೋಲಿಯನ್‌ರ ಮುಖ ಒಂದು ವಿಶೇಷ. ಗುಂಡು ಮುಖ, ಚಪ್ಪಟೆ ಮೂಗು, ಚಿಕ್ಕಕಣ್ಣು, ವಿಶೇಷವಾದ ಕಣ್ಣು ರೆಪ್ಪೆಗಳು.

ಕೆಲವರಿಗೆ ಇದು ಸುಂದರ ಎನಿಸ ಬಹುದು. ಆದರೆ ಇದೊಂದು ಅಪಘಾತ. ಇಂಥ ಮುಖವುಳ್ಳ ಮಗುವಿನಲ್ಲಿ ಒಂದು ಕ್ರೊಮೊ ಸೋಮ ಜಾಸ್ತಿ ಇರುತ್ತದೆ. ಮಗುವಿನ ಬುದ್ಧಿ ಮಂದವಾಗಿರುತ್ತದೆ. ಮೆದುಳು ಸಣ್ಣದಿರು ತ್ತದೆ. ಸರಿಯಾಗಿ ಮಾತು ಬರುವುದಿಲ್ಲ. ಅರ್ಥಮರ್ಥ ಹುಚ್ಚರಾಗಿರುತ್ತಾರೆ. ಮಗು ವಿನ ಮುಖ ಮಂಗೋಲಿ ಇದ್ದರೆ ಇದು ಹುಟ್ಟುದೋಷವೆಂದು ಪರಿಗಣಿಸಬೇಕು.

೧.೧೫ ಬೂಟು ಹೃದಯ : ಸಾಮಾನ್ಯವಾಗಿ ಹೃದಯ ಆಕಾರವು ಕಮಲದ ಮೊಗ್ಗೆಯಂತೆ ಇರುತ್ತದೆ. ಆದರೆ ಒಂದು ರೋಗದಲ್ಲಿ ಅದರ ಆಕಾರವು ಬದಲಾಗುವುದು. ಅಂಥ ರೋಗಿಯ ಎದೆಯ ಎಕ್ಸರೇ ತೆಗೆದರೆ, ಹೃದಯದ ನೆರಳು ಬೂಟಿನ ಆಕಾರವನ್ನು ಪಡೆದಿರುತ್ತದೆ. ಅದು ರೋಗ ಪೀಡಿತ ಹೃದಯ.

೧.೧೬ ಕುದುರೆ ಲಾಳಿನ ಮೂತ್ರ ಪಿಂಡ : ಮನುಷ್ಯರಿಗೆ ಎರಡು ಮೂತ್ರ ಪಿಂಡಗಳಿ ರುತ್ತವೆ. ಒಂದೊಂದು ಸಲ ಮೂತ್ರ ಪಿಂಡ ಗಳು ಬೇರೆಯಾಗಿರದೆ ಕೆಳಭಾಗದಲ್ಲಿ ಅಂಟಿ ಕೊಂಡಿರುತ್ತವೆ. ಇದು ನೋಡಲು ಕುದುರೆ ಲಾಳದಂತೆ ಕಾಣುತ್ತದೆ.

೧.೧೭ ಡಂಬಲ್ ಆಕಾರದ ಬ್ಯಾಕ್ಟೇರಿಯಾ : ಒಂದು ಜಾತಿಯ ಬ್ಯಾಕ್ಟೇರಿಯಾದ ಆಕಾರವು ಡೆಂಬಲ್‌ಗಳಂತೆ ತುದಿಗಳು ದುಂಡಗಾಗಿ ದೊಡ್ಡವಿರುತ್ತವೆ. ಮಧ್ಯಭಾಗವು ತೆಳುವಾಗಿ ರುತ್ತದೆ.

೧.೧೮ ಹುಲಿ ಹೃದಯ : ಸಾಹಿತಿಗಳಿಗೆ ಹುಲಿ ಹೃದಯ ಎಂದರೆ ಶೂರ, ಧೀರ ಎಂಬ ಅರ್ಥ ಕೊಡಬಹುದು. ಆದರೆ ವೈದ್ಯರು ಯಾರದೇ ಹೃದಯವನ್ನು ಹುಲಿ ಹೃದಯ ಎಂದರೆ ಅದು ಅಶಕ್ತ ಹೃದಯ. ರಕ್ತಕೊರೆಯಿಂದ ಬಳಲುತ್ತಿರುವ ಹೃದಯ ಎಂಬ ಅರ್ಥ ಬರುವುದು. ಯಾಕೆಂದರೆ ದೀರ್ಘಕಾಲದ ರಕ್ತ ಕೊರೆಯು ಹೃದಯದಲ್ಲಿ ನೆಣ ಸೇರುವಂತೆ ಮಾಡುತ್ತದೆ. ಒಂದು ಪಟ್ಟಿಯಲ್ಲಿ ನೆಣ ಹಳದಿ ಕಾಣುವುದು. ಮರುಪಟ್ಟಿ ಸಾದಾ ಹೃದಯ ಸ್ನಾಯು ಕಂದು ಇರುತ್ತದೆ. ಹೀಗೆ ಈ ಪಟ್ಟಿಗಳು ಒಂದರ ಮಗ್ಗುಲಿಗೆ ಒಂದು ಹೊಂದಿಕೊಂಡು ಹುಲಿಯ ಚರ್ಮದಂತೆ ತೋರುವುದು. ಅದೇ ಹುಲಿ ಹೃದಯ.

ಈ ಪಟ್ಟಿ ಪಟ್ಟಿ ಕಾಣುವ ಹೃದಯವನ್ನು ಕೆಲವರು ಪಟ್ಟಿ ಪಟ್ಟಿ ತುಪ್ಪಳ ಹೊಂದಿರುವ ಬೆಕ್ಕಿಗೆ ಹೋಲಿಸಿದ್ದಾರೆ. ಮತ್ತೆ ಕೆಲವರು ಇದೇ ಸಂಗತಿಯನ್ನು ಒಂದು ಗುಬ್ಬಿಯ ಎದೆಗೆ ಹೋಲಿಸಿರುವರು. ಈ ಗುಬ್ಬಿಯ ಹೆಸರು ಥ್ರಶ್ ಎಂದು.

ಎರಡನೆಯ ಗುಂಪಿನ ಅಲಂಕಾರಗಳು ತಿನಿಸು ಆಧಾರಿತ. ಯಾಕೋ ಏನೋ ವೈದ್ಯರು ಅನೇಕ ಸ್ಥಳಗಳಲ್ಲಿ ನಾವು ಸೇವಿಸುವ ತಿಂಡಿಗಳನ್ನೇ ಆಲಂಕಾರಿಕವಾಗಿ ಬಳಸಿರುವರು. ಕಾರಣ ಅನೇಕರು ವೈದ್ಯರನ್ನು ತಿಂಡಿಪೋಕರು ಎಂದು ಚುಡಾಯಿಸುವದುಂಟು. ಅವುಗಳ ಸಂಕ್ಷಿಪ್ತ ಮಾಹಿತಿಯನ್ನು ನೋಡೋಣ.

೨.೧ ಅಂಕೋವಿ ಚಟ್ಣಿ : ಅಂಕೋವಿ ಎನ್ನುವುದು ಒಂದು ಜಾತಿಯ ಮೀನು. ಇದರ ಮಾಂಸವು ಕೆಂಪು ಕಂದು ವರ್ಣದ್ದು. ಈ ಮೀನಿನ ಮಾಂಸವನ್ನು ಚೆನ್ನಾಗಿ ಅರೆದು ಹೂರಣದಂತೆ ಮಾಡಿ ತಿನ್ನುತ್ತಾರೆ. ಇದಕ್ಕೆ ಒಂದು ವರ್ಣವಿದೆ.

ಯಕೃತ್ತಿನಲ್ಲಿ ಅಮೀಬಾ ಜೀವಿ ಸೇರಿ ಅದರ ಜೀವಕೋಶಗಳನ್ನು ಕೊಳೆಯುವಂತೆ ಮಾಡುತ್ತದೆ. ಆಗ ಕೊಳೆತ ಯಕೃತ ಹಾಗೂ ದೇಹದ ರಕ್ತಗಳು ಬೆರೆತು ಒಂದು ವರ್ಣ ಬರುತ್ತದೆ. ಇಂಥ ಕೀವು ಅಂಕೋವಿ ಮೀನಿನ ಚಟ್ಣಿಯ ವರ್ಣ ಪಡೆದಿರುತ್ತದೆ. ಕಾರಣ ಆ ಕೀವಿಗೆ ಅಂಕೋವಿ- ಕೀವು ಎಂದು ಹೇಳುವೆವು. ಆ ಬಣ್ಣದ ಕೀವು ಯಕೃತದಿಂದ ಹೊರಬಿದ್ದರೆ ಆ ರೋಗ ಅಮೀಬಾ ರೋಗ ಎಂಬುದು ಖಚಿತ.

೨.೨ ಕರಂಟ ಜೆಲ್ಲಿ: ಇದು ಕೆಂಪು ಬಣ್ಣದ ಹಣ್ಣಿನ ಸೀಕರಣೆ. ಇದೇ ಬಣ್ಣದ ಅದರಂತೆ ಕಾಣುವ ವಸ್ತು ಇದೆ. ರಕ್ತದ ಕರಣೆ. ಅಂಥ ರಕ್ತದ ಕರಣೆಗೆ ಕರಂಟ ಜೆಲ್ಲಿ-ರಕ್ತದ ಕರಣೆ ಎನ್ನುವುದು.

೨.೩ ಕೋಳಿ ಚರಬಿ : ಕೋಳಿ ದೇಹದಲ್ಲಿಯ ನೆಣ ಪದಾರ್ಥ ಸ್ವಲ್ಪ ಪಾರದರ್ಶಕವಿದ್ದು ರಬ್ಬರಿನಂತೆ ಇರುತ್ತದೆ. ದೇಹದ ರಕ್ತನಾಳಗಳಲ್ಲಿಯ ರಕ್ತ ಮರಣದನಂತರ ಇದೇ ರೂಪ ಪಡೆಯಬಹುದು. ಇಂಥ ಬಿಳಿ ರಕ್ತ ಕರಣೆಗೆ ಕೋಳಿ ಚರಬಿ ರಕ್ತ ಕರಣೆ ಎನ್ನುವರು.

೨.೪ ಹಾಲು ಮೂತ್ರ : ಮೂತ್ರವು ಪಾರದರ್ಶಕವಿದ್ದು ಸ್ವಲ್ಪ ಹಳದಿ ಬಣ್ಣದ್ದಿರುವುದು. ಆದರೆ ಕೆಲವು ರೋಗಗಳಲ್ಲಿ ಮೂತ್ರವು ಹಾಲಿನಂತೆ ತೋರುವುದು. ದೇಹದಲ್ಲಿಯ ದುಗ್ಧರಸವಾಹಿಗಳು ಬಿರಿದು ದುಗ್ಧರಸವು ಮೂತ್ರಮಾರ್ಗದಲ್ಲಿ ಸೇರುವುದರಿಂದ ಇಂಥ ತೊಂದರೆ ಕಾಣುವುದು.

೨.೫ ಹಾಲು ತೇಪೆ : ಹಲವಾರು ಸಲ ಅಂಗಾಂಶಗಳ ಮೇಲೆ ಉರಿಯಾತಣೆ ಕಂಡು ಬರುವುದು. ಇದು ಶಮನ ಹೊಂದಿದ ಮೇಲೆ ಅಲ್ಲಿ ಬಿಳಿ ಬಣ್ಣದ ತೇಪೆ ಉಳಿಯುವುದು. ಇದಕ್ಕೆ ಹಾಲು ತೇಪೆ ಎನ್ನುವರು.

೨.೬ ಬ್ರೆಡ್ ಹಾಗೂ ಬೆಣ್ಣೆ : ಎರಡು ಪೊರೆಗಳ ನಡುವೆ ಉರಿಯಾತಣೆ ಕಂಡು ಕ್ರಮೇಣ ಶಮನವಾದಾಗ, ಎರಡರ ನಡುವೆ ಬಿಳಿ ವರ್ಣದ ನಾರಳೆ ಜೀವಕೋಶಗಳು ಬೆಳೆಯುತ್ತವೆ. ನೋಡಲು ಇದು ಎರಡು ಬ್ರೆಡ್ಡಿನ ತುಂಡುಗಳ ನಡುವೆ ಬೆಣ್ಣೆಯನ್ನು ಹಚ್ಚಿದಂತೆ

ಕಾಣುವುದು. ಇದನ್ನು ಬ್ರೆಡ್ ಹಾಗೂ ಬೆಣ್ಣೆ ಎಂದು ಕರೆಯುವರು.

೨.೭ ಗಂಜಿ ಮಲ: ಕಾಲರಾ ಒಂದು ರೋಗ. ಇದರಲ್ಲಿ ವ್ಯಕ್ತಿ ವಾಂತಿ ಭೇದಿಯಿಂದ ಬಳಲುತ್ತಾನೆ. ಕಾಲರಾ ರೋಗಿಯ ಮಲವು ನೋಡಲು ಅಕ್ಕಿ ಗಂಜಿಯಂತೆ ಇರುವುದು. ಕಾರಣ ಕಾಲರಾ ರೋಗಿಯ ಮಲವು ಗಂಜಿ ಮಲವೆಂದು ಕರೆಯಲ್ಪಡುವುದು.

೨.೮ ಪಿಯರ್ ಬೊಜ್ಜು : ಪಿಯರ್ ಅನ್ನುವುದೊಂದು ಹಣ್ಣು. ಈ ಹಣ್ಣಿನ ಮೇಲ್ಭಾಗವು ಸಣ್ಣಗಿದ್ದು ತಳಭಾಗವು ವಿಶಾಲವಾಗಿರುತ್ತದೆ. ವ್ಯಕ್ತಿಗಳಲ್ಲಿ ಬೊಜ್ಜು ಇದೇ ಆಕಾರ ಪಡೆಯಬಹುದು. ವ್ಯಕ್ತಿಯ ಹೊಟ್ಟೆ , ಎದೆ, ಬಾಹುಗಳು ಅಷ್ಟು ಬೊಜ್ಜು ಪಡೆದಿರುವುದಿಲ್ಲ. ಆದರೆ ಅವರ ನಿತಂಬ ಹಾಗೂ ತೊಡೆಗಳು ವಿಪರೀತ ಬೊಜ್ಜು ಪಡೆದಿರಬಹುದು. ಇಂಥ ಬೊಜ್ಜು ಪಡೆದವರು ಹಲವು ವಿಶೇಷ ರೋಗಗಳಿಗೆ ತುತ್ತಾಗುವರು.

೨.೯ ಸೇಬು ಬೊಜ್ಜು : ಇದು ಸಹ ಒಂದು ಪ್ರಕಾರದ ಬೊಜ್ಜು. ಇದರಲ್ಲಿ ಕುತ್ತಿಗೆ, ಬಾಹು, ಎದೆ ಹಾಗೂ ಹೊಟ್ಟೆಗಳು ವಿಪರೀತ ಬೊಜ್ಜು ಪಡೆದಿರುತ್ತವೆ. ಕಾಲು, ತೊಡೆಗಳು ಬೊಜ್ಜಿನಿಂದ ಮುಕ್ತವಾಗಿರುತ್ತವೆ. ಈ ತರದ ಬೊಜ್ಜು ವಿಶಿಷ್ಟವಾದ ಕೆಲವೊಂದು ರೋಗಗಳಿಗೆ ಆಮಂತ್ರಣ ಕೊಡುವುದು.

೨.೧೦ ಈರುಳ್ಳಿ ಸುತ್ತು(ಪೊರೆ) : ಈರುಳ್ಳಿಯನ್ನು ಅಡ್ಡಲಾಗಿ ಕೊಯ್ದಾಗ ಅದರ ಪೊರೆಗಳು ಒಂದನ್ನೊಂದು ಸುತ್ತಿರುತ್ತವೆ. ಹಾಗೆಯೇ ಕೆಲವು ಸಲ ರಕ್ತವಾಹಿನಿಗಳು ಅದೇ ತೆರನಾಗಿ ಸುತ್ತು ಹೊಡೆದಿರುತ್ತವೆ. ಮರಣಾಂತಿಕ ರಕ್ತದ ಒತ್ತಡದಲ್ಲಿ ರಕ್ತ ವಾಹಿನಿಗಳು ಇಂಥ ಆಕಾರ ಪಡೆಯುತ್ತವೆ.

೨.೧೧ ಹಂದಿಯ ಚರಬಿ : ಹಂದಿಯ ಚರ್ಮದ ಕೆಳಗೆ ಬಲು ದಪ್ಪದಾದ ನೆಣವು ಶೇಖರಗೊಂಡಿರುತ್ತದೆ. ಇದನ್ನು ಚರಬಿ ಎನ್ನುವೆವು. ಒಂದು ರೋಗದಲ್ಲಿ ಪ್ಲೀಹವು ನೋಡಲು ಹಂದಿಯ ಚರಬಿಯಂತೆ ತೋರುತ್ತದೆ. ಕಾರಣ ಅಂಥ ಪ್ಲೀಹವನ್ನು ಹಂದಿಯ ಚರಬಿ ಪ್ಲೀಹ ಎನ್ನುವರು.

೨.೧೨ ಕುದಿಸಿದ ತತ್ತಿ : ತತ್ತಿಯನ್ನು ಕುದಿಸಿದಾಗ ಅದರ ಹೊರವಲಯದಲ್ಲಿರುವ ಅಲ್ಬುಮಿನ್ ಗಟ್ಟಿಯಾಗಿ ಬಿಳಿ ವರ್ಣಪಡೆಯುವುದು. ಒಂದು ರೋಗದಲ್ಲಿ ಕೋಶದ ಸುತ್ತಲೂ ಕುದಿಸಿದ ತತ್ತಿಯಂಥ ಪೊರೆ ಇರುತ್ತದೆ.

೨.೧೩ ಅಂಟು ಕೊಳೆತ : ಆಂಗ್ಲ ಭಾಷೆಯಲ್ಲಿ ಇದನ್ನು ಗಮ್ಯಾಟಿಸ್ ನೆಕ್ರೊಸಿಸ್ ಎನ್ನುವರು. ಈ ಕೀವು ಸ್ವಲ್ಪ ಜಿಗುಟಾಗಿರುವುದು.

೨.೧೪ ಸಕ್ಕರೆ ಹೆಪ್ಪು: ನಾವು ಕೇಕುಗಳ ಮೇಲಿನ ಚಿತ್ರಗಳನ್ನು ನೋಡಿರುತ್ತೇವೆ. ಇದು ಹೆಪ್ಪುಗಟ್ಟಿದ ಸಕ್ಕರೆ. ದೇಹದ ಒಳ ಅಂಗಾಂಗಗಳ ಮೇಲೆ ಉರಿಯಾತಣೆ ನಡೆದು ಬಿಳಿ ವರ್ಣದ ಪದಾರ್ಥ ಶೇಖರವಾಗುತ್ತದೆ. ನೋಡಲು ಇದು ಹೆಪ್ಪುಗಟ್ಟಿದ ಸಕ್ಕರೆಯಂತೆ ಕಾಣುವುದು.

೨.೧೫ ಮೊಸರು ಮಲ : ಈಗಾಗಲೇ ನಾವು ಗಂಜಿ ಮಲವನ್ನು ವರ್ಣಿಸಿದ್ದಾಗಿದೆ. ಈಗ ಇನ್ನೊಂದು ವಿಧದ ಮಲ ಇದರ ಹೆಸರು ಮೊಸರು ಮಲ. ಇಲ್ಲಿ ಮಲವು ಒಡ ಒಡಕಾಗಿರುವುದು. ಕರಣೆಗಳ ನಡುವೆ ನೀರು ನಿಂತಿರುತ್ತದೆ. ಇದು ಒಂದು ರೋಗವನ್ನು ಸೂಚಿಸುತ್ತದೆ.

೨.೧೬ ಗಿಣ್ಣ ಕೀವು : ಕೀವು ನೋಡಲು ಗಿಣ್ಣದಂತೆ ತೋರುವುದು. ಇಂಥ ಕೀವು ಕ್ಷಯ ರೋಗದಲ್ಲಿ ಕಾಣುವುದು. ಈ ಕೀವು ಕಂಡ ತತ್‌ಕ್ಷಣ ವೈದ್ಯರು ಆ ಬೇನೆ ಕ್ಷಯ ರೋಗವೆಂದೇ ಪರಿಗಣಿಸುವರು.

೨.೧೭ ಸಾಬುದಾನಿ ಪ್ಲೀಹ: ಅಮೈಲೊಯಿಡ್ ಎಂಬುದು ಒಂದು ಪದಾರ್ಥ. ಕೆಲವು ರೋಗಗಳಲ್ಲಿ ಇದು ದೇಹದ ಅಂಗಾಂಶಗಳಲ್ಲಿ ಪ್ಲೀಹವು ಶೇಖರಗೊಳ್ಳುತ್ತದೆ. ಇದನ್ನು ಶೇಖರಗೊಳಿಸುವ ವಿವಿಧ ಅಂಗಾಂಶಗಳಲ್ಲಿ ಪ್ಲೀಹವೂ ಒಂದು. ಈ ಪ್ಲೀಹವನ್ನು ನೋಡಿ

ದರೆ ಅದರಲ್ಲಿ ಸಾಬುದಾನಿಗಳು ಸೇರಿಕೊಂಡಂತೆ ತೋರುತ್ತದೆ. ಇದೇ ಸಾಬುದಾನಿ ಪ್ಲೀಹ.

೨.೧೮ ಜಾಜಿಕಾಯಿ ಯಕೃತ : ಹಲವಾರು ಕಾರಣಗಳಿಂದ ಹೃದಯದ ಕ್ರಿಯೆ ಸೋಲುತ್ತದೆ. ಹೃದಯ ಸೋತರೆ ಯಕೃತ್ತಿನಲ್ಲಿ ರಕ್ತ ಮಲೆಯುವುದು. ರಕ್ತ ಮಲೆಯುವಿಕೆ ದೀರ್ಘ ಕಾಲದ್ದಾದರೆ ಯಕೃತ್ತು ತನ್ನ ವರ್ಣದಲ್ಲಿ ಬದಲಾವಣೆ ತೋರುವುದು. ಆಗ ನೋಡಲು ಅದು ಕತ್ತರಿಸಿದ ಜಾಜಿಕಾಯಿಯಂತೆ ಕಾಣುವುದು. ಇಂಥ ಯಕೃತ್ತಿಗೆ ಜಾಜಿಕಾಯಿ ಯಕೃತ್ತು ಎನ್ನುವರು.

೨.೧೯ ಹುರಿದ ಕಾಫಿ: ಕೆಲವು ಸಲ ರೋಗಿಯ ಜಠರದಲ್ಲಿ ರಕ್ತ ಸ್ರಾವವಾಗುತ್ತದೆ. ಇಂಥ ರಕ್ತದ ಮೇಲೆ ಜಠರಾಮ್ಲ ಪ್ರಭಾವ ಬೀರಿ ರಕ್ತದ ವರ್ಣ ಕಂದು ಬಣ್ಣದ್ದಾಗುವುದು. ನೋಡಲು ಇದು ಹುರಿದ ಕಾಫಿಯಂತೆ ತೋರುವುದು.

೨.೨೦ ಬಟಾಟೆ ಗಂಟು : ಬಟಾಟೆಗೆ ಒಂದು ವರ್ಣವಿರುತ್ತದೆ. ಅದಕ್ಕೆ ಕೆಲವು ಕುಳಿಗಳಿರುತ್ತವೆ. ಇವು ಅದರ ವೈಶಿಷ್ಟ್ಯ. ತಲೆಯ ಮೇಲೆ ಒಂದು ಪ್ರಕಾರದ ದುರ್ಮಾಂಸ ಬೆಳೆಯುತ್ತದೆ. ನೋಡಲು ಈ ಗಂಟು ಬಟಾಟೆಯಂತೆ ತೋರುವುದು.

೨.೨೧ ದ್ರಾಕ್ಷಾ ಗರ್ಭ: ಇದು ಒಂದು ರೋಗ. ಗರ್ಭದಲ್ಲಿ ಮಗು ಬೆಳೆಯದೆ ದ್ರಾಕ್ಷಿಯಂಥ ನೀರು ಗುಳ್ಳೆಗಳು ಬೆಳೆಯುತ್ತವೆ. ನೋಡಲು ಇವು ದ್ರಾಕ್ಷಿಯ ಗೊಂಚಲುಗಳಂತೆ ತೋರುತ್ತವೆ. ಅಂತೆಯೇ ಇದಕ್ಕೆ ದ್ರಾಕ್ಷಾ ಗರ್ಭ ಎನ್ನುವರು. ಕೆಲವು ಸಲ ಈ ರೋಗ ಕ್ಯಾನ್ಸರ್ ರೂಪ ಪಡೆಯುತ್ತದೆ.

೨.೨೨ ಸ್ವಿಸ್ ಗಿಣ್ಣು : ನಾವೆಲ್ಲ ಗಿಣ್ಣು ಕಂಡಿದ್ದೇವೆ. ಸ್ವಿಝರಲಂಡ್‌ದಲ್ಲಿ ತಯಾರಾಗುವ ಗಿಣ್ಣಿಗೆ ರಂಧ್ರಗಳಿರುವುವು. ತನ್ನ ರುಚಿ ಹಾಗೂ ವಾಸನೆಗಳಿಗೆ ಅದು ಸುಪ್ರಸಿದ್ಧವಾಗಿರುತ್ತದೆ.

ಸ್ತ್ರೀಯರ ಗರ್ಭಕೋಶದ ಒಳಪೊರೆಯು ಕೆಲವು ಬಾರಿ ರೋಗಕ್ಕೆ ಒಳಗಾಗುವುದು. ಆಗ ಅದರಲ್ಲಿಯೂ ರಂಧ್ರಗಳನ್ನು ನೋಡುವೆವು. ಕಾರಣ ಸ್ವಿಸ್ ಗಿಣ್ಣಿನಂಥ ಒಳಪೊರೆ ಎಂದು ವರ್ಣಿಸುವುದು ವಾಡಿಕೆ ಆಗಿದೆ.

ಹೀಗೆ ವೈದ್ಯ ಸಾಹಿತ್ಯದಲ್ಲಿ ಉಪಮಾ ಪದಗಳು ಸಮೃದ್ಧವಾಗಿವೆ.

ಪಿಡಿದಿಹರು ಪದಗಳಲಿ ಅನುಭವದ ಸಾರವನು
ಒಡಲಿನಂಗೋಪಾಂಗ ರಚನೆ, ಬೇನೆಗಳ ಕೈ-
ಪಿಡಿಯನ್ನು -ಸಾಹಿತ್ಯ ಪರಿಭಾಷೆಯಲಿ ಬದುಕು
ಕಡವರದ ಗಣಿ ಪ್ರಯೋಗದ ಮೂಸೆ ಅತ್ರಿಸೂನು

ಕನ್ನಡಿಗರು ಒಟ್ಟಾಗಲು ಇರುವ ಏಕಮಾತ್ರ ಸಾಧನ ಅವರ ನುಡಿ. ಸಾವಿರಾರು ವರ್ಷಗಳಿಂದ ದಷ್ಟಪುಷ್ಟವಾಗಿ ಕಲ್ಪವೃಕ್ಷದಂತೆ ಬೆಳೆದು ಸಕಲ ಇಷ್ಟಾರ್ಥಗಳನ್ನು ಕೊಡಬಲ್ಲ ಅವರ ನುಡಿ. ಆದ್ದರಿಂದ ನಾವು ಮೊದಲು ಕನ್ನಡಿಗರು, ಆನಂತರ ಭಾರತೀಯರು ಎಂದರೆ ಅದು ಸ್ವಾಭಾವಿಕ, ಕಾರ್ಯಸಾಧ್ಯ.

-ಎ.ಆರ್. ಕೃಷ್ಣಶಾಸ್ತ್ರಿ

ವಿಮಾನ ಅಪಹರಣ

ಭಾರತೀ ಭಟ್
೧೬೫, ಡಿ. ಬ್ಲಾಕ್, ೨೨ನೇ ಕ್ರಾಸ್,
೩ನೇ ಹಂತ, ವಿಜಯನಗರ,
ಮೈಸೂರು-೫೭೦೦೧೭

ವಿಮಾನದಲ್ಲಿ ಬಂದೂಕುಧಾರಿಗಳು

ಆಲ್ಜಿರೀಯಾದ ವಿಮಾನ ನಿಲ್ದಾಣದಲ್ಲಿ ಪ್ಯಾರಿಸ್‌ಗೆ ಹೋಗುವ ಏಯುಫ್೧೩೯ ನಂಬರಿನ ಏರ್ ಫ್ರಾನ್ಸ್ ವಿಮಾನದಲ್ಲಿ ೨೯೨ ಮಂದಿ ಪ್ರಯಾಣಿಕರು ಸೀಟನ್ನು ಕಾದಿರಿಸಿದ್ದರು. ವಿಮಾನದ ಮುಖ್ಯ ಪರಿಚಾರಕ ಗೇರಾಲ್ಡ್ ವಿಮಾನದ ಬಳಿ ನಿಂತಿದ್ದ. ನಾವು ಸಿಬ್ಬಂದಿಗಳು ಒಟ್ಟಿಗೆ ೧೨ಮಂದಿ ಇದ್ದೆವು. ವಿಮಾನದಲ್ಲಿ ೮ ಬಾಗಿಲುಗಳಿದ್ದುವು. ಪ್ರತಿಯೊಂದು ಬಾಗಿಲಿನ ಬಳಿಯೂ ನಿಲ್ಲಲು ನಮ್ಮ ಮುಖ್ಯಸ್ಥ ಗೇರಾಲ್ಡ್ ಇದ್ದ. ಇದಲ್ಲದೆ ವಿಮಾನದ ಪೈಲಟ್ ಆಗಿ ಬ್ರುನೊ ಮತ್ತು ಅವನ ಸಹಾಯಕರಾಗಿ ಜಾಕ್ವೆಸ್ ಮತ್ತು ಆಂಡ್ರೇ ಇದ್ದರು.

ಪ್ರಯಾಣಿಕರಿಂದ ತುಂಬಿದ ಒಂದು ಬಸ್ಸು ವಿಮಾನದ ಬಳಿ ಬಂತು. ಪ್ರಯಾಣಿಕರು ಬಸ್ಸಿನಿಂದ ಇಳಿದು ಒಬ್ಬೊಬ್ಬರಾಗಿ ಮೆಟ್ಟಿಲಿನ ಬಳಿ ಬಂದಾಗ ಅಲ್ಲಿ ನಿಂತಿದ್ದ ಆಫೀಸರ್ ಅವರ ವಿಮಾನಕ್ಕೇರುವ ಕಾಗದವನ್ನು ಪರಿಶೀಲಿಸಿ ಅವರನ್ನು ಮೇಲೆ ಹೋಗಲು ಬಿಡುತ್ತಿದ್ದ.

ಅನಂತರ ಎರಡನೇ ಬಸ್ಸು ಬಂದು ಅದರ ಪ್ರಯಾಣಿಕರು ವಿಮಾನಕ್ಕೆ ಹತ್ತತೊಡಗಿದರು. ಆಗ ನನಗೆ ಪೊಲೀಸಿನ ಪೋಷಾಕು ಧರಿಸಿ ಸಬ್‌ಮೆಶಿನ್ ಬಂದೂಕು ಹಿಡಿದುಕೊಂಡು ವಿಮಾನದ ಮುಂಭಾಗದಿಂದ ಬರುವ ಯುವಕನೊಬ್ಬ ಕಾಣಿಸಿದ. ಇತರ ಪ್ರಯಾಣಿಕರನ್ನು ದೂಡುತ್ತಾ ಬಂದು ಆತ ವಿಮಾನವನ್ನೇರಿದ.

ಆತ ಮಧ್ಯಮ ಗಾತ್ರದವನಾಗಿದ್ದು ಕಡುನೀಲಿ ರೈನ್‌ಕೋಟು ತೊಟ್ಟು ಅದರ ಮೇಲೆ ಗುರುತಿನ ಬಿಲ್ಲೆಯೊಂದನ್ನು ಪಿನ್ ಮಾಡಿಕೊಂಡಿದ್ದ. ಬಂದೂಕಿನ ಟ್ರಿಗರ್‌ನ ಮೇಲೆ ಬೆರಳನ್ನಿಟ್ಟುಕೊಂಡಿದ್ದ. ಅವನು ವಿಮಾನದೊಳಗೆ ಬಂದು ಒಮ್ಮೆ ಎಲ್ಲಾ ದಿಕ್ಕಿನಲ್ಲೂ ನೋಡಿದ. ಅನಂತರ ಕಕ್ಕಸ್ಸಿನ ಬಳಿಗೆ ಹೋಗಿ ಅದರ ಬಾಗಿಲನ್ನು ಕಾಲಿನಿಂದ ನೂಕಿ ಒಳಗೆ ನೋಡಿದ.

ಪ್ರಯಾಣಕರಿಗೆ ಸಹಾಯ ಮಾಡುತ್ತಿದ್ದ ಸಿಬ್ಬಂದಿಗಳನ್ನು ನೋಡಿದ. ಆ ಸಮಯದಲ್ಲಿ ಸೋಫಿ ಸೀಟುಗಳ ಮಧ್ಯೆ ಇರುವ ದಾರಿಯಲ್ಲಿ ನಡೆಯುತ್ತಾ ಪ್ರಯಾಣಿಕರಿಗೆ ವರ್ತಮಾನ ಪತ್ರಿಕೆಗಳನ್ನು ಕೊಡುತ್ತಿದ್ದಳು. ಆಕೆ ಕೇರೊಲ್‌ಳನ್ನು ಪ್ರಶ್ನಿಸುವವಳಂತೆ ನೋಡಿದಳು. ಆ ಬಂದೂಕುಧಾರಿ ಪೊಲೀಸಿನವನು ಎಲ್ಲರನ್ನು ಗದರಿಸುವಂತೆ ನೋಡುತ್ತಿದ್ದ.

ಅಷ್ಟರಲ್ಲಿ "ಗುಡ್‌ಮಾರ್ನಿಂಗ್, ಮಹಿಳೆಯರೇ ಮತ್ತು ಮಹನೀಯರೇ, ಇದು ವಿಮಾನದ ಕ್ಯಾಪ್ಟನ್ ಮಾತನಾಡುತ್ತಿರುವುದು. ಪ್ರೆಸಿಡೆಂಟ್‌ನ ಪೊಲೀಸ್ ದಳದವರು ನಿಮ್ಮ ಪಾಸ್‌ಪೋರ್ಟನ್ನು ಪರೀಕ್ಷಿಸುವ ತನಕ ನೀವು ನಿಮ್ಮ ನಿಮ್ಮ ಸೀಟುಗಳಲ್ಲೇ ಕುಳಿತುಕೊಂಡಿರಿ" ಎಂಬುದಾಗಿ ಸ್ಪೀಕರ್‌ನಲ್ಲಿ ಹೇಳುವುದು ಕೇಳಿಸಿತು.

ಇದನ್ನು ಕೇಳಿದ ಗಗನಸಖಿಯರಿಗೆ ಸ್ವಲ್ಪ ಸಮಾಧಾನವಾಯಿತಾದರೂ ಸಂಶಯ ಹೋಗಲಿಲ್ಲ. ವಿಮಾನದೊಳಗೆ ಬಂದೂಕು ದಾರಿಗಳು ಪ್ರವೇಶಮಾಡಿದ್ದಾರೆ, ಅನಾಹುತವೇನೋ ನಡೆಯಲಿದೆ ಎಂದು ಅವರಿಗೆ ಅನಿಸುತ್ತಿತ್ತು.

ವಿಮಾನದ ಬಲಬದಿಯ ದಾರಿಯಲ್ಲಿ ಇನ್ನೊಬ್ಬ ಪೊಲೀಸಿನವ ಬಂದು ನಿಂತ. ಅವನು ಬಹಳ ಎತ್ತರದವನಾಗಿದ್ದ. ಅವನ

ಜನವರಿ ೨೦೦೦ನೇ ರೀಡರ್ಸ್ ಡೈಜೆಸ್ಟ್‌ನಲ್ಲಿ ಕ್ಲಾಡಿ ಬರ್ಟಡ್‌ರ 'ಹೈಜಾಕ್' ಎಂಬ ಲೇಖನದ ಸಂಗ್ರಹಾನುವಾದ

ಭುಜದಲ್ಲಿ ಒಂದು ಎಕೆ-೪೭ ಬಂದೂಕು ತೂಗಾಡುತ್ತಿತ್ತು. ಅವನು ಪ್ರಯಾಣಿಕರ ಪಾಸ್‌ಪೋರ್ಟ್‌ಗಳನ್ನು ಪರೀಕ್ಷಿಸಿ ಅವರು ಕೇಳಿದ ಪ್ರಶ್ನೆಗಳಿಗೆ ಸಾವಧಾನವಾಗಿ ಉತ್ತರ ಕೊಡುತ್ತಿದ್ದ. ಇವನನ್ನು ನಾನು ಬೊಬ್ಬಿ ಎಂದು ಹೆಸರಿಸುತ್ತೇನೆ. ವಿಮಾನದಲ್ಲಿ ಸಾಮಾನು ತುಂಬಿಸುತ್ತಿದ್ದ ಪಿಯರೆ ಬಾಗಿಲಿನ ಗಾಜಿನ ಮೂಲಕ ಹೊರಗೆ ನೋಡಿ ಹೇಳಿದ, ''ಲಗೇಜು ಕೊಡುವುದನ್ನು ನಿಲ್ಲಿಸಿದ್ದಾರೆ''.

ಬೊಬ್ಬಿ ತಕ್ಷಣ ಯುವಕ ಪೊಲೀಸಿನವನ (ಅವನನ್ನು ನಾನು ಬಿಲ್ ಎಂದು ಹೆಸರಿಸುತ್ತೇನೆ) ಬಳಿಗೆ ಹೋಗಿ ಅವನ ಕೈಯಲ್ಲಿದ್ದ ಸಬ್‌ಮೆಶಿನ್‌ಗನ್ ತೆಗೆದುಕೊಂಡು ರಕ್ಷಣೆಗಿರುವ ಅದರ ಮುಚ್ಚಳವನ್ನು ಮುಚ್ಚಿ ಅವನಿಗೆ ಹಿಂದಿರುಗಿಸಿದ. ಅನಂತರ ಅವನು ವಿಮಾನದ ಮುಂಭಾಗಕ್ಕೆ ಹೋದ.

ಬೊಬ್ಬಿಯನ್ನು ನೋಡುತ್ತಿದ್ದಂತೆ ನನಗೆ ಇನ್ನಿಬ್ಬರು ಪೊಲೀಸರು ಕಾಣಿಸಿದರು. ''ಎಷ್ಟು ಮಂದಿ ಇಂತಹವರು ಇಲ್ಲಿ ಇದ್ದಾರಪ್ಪ?'' ಎಂದು ನಾನು ನನ್ನಷ್ಟಕ್ಕೆ ಹೇಳಿಕೊಂಡೆ. ಆ ಮೂವರು ತಮ್ಮೊಳಗೆ ಏನೋ ಮಾತನಾಡಿಕೊಳ್ಳುತ್ತಿದ್ದರು. ಆಗ ಗಗನಸಖಿ ಅನ್ನಾಬೆಲ್ಲೆ ಮುಂಭಾಗದ ಬಾಗಿಲನ್ನು ಹಾಕಿದಳು.

''ಅವರೆಲ್ಲ ಇನ್ನೂ ವಿಮಾನದೊಳಗೇನೇ ಇದ್ದಾರೆ. ಇದು ಬೇಗನೆ ಮುಗಿಯುವ ಹಾಗೆ ಕಾಣಿಸುವುದಿಲ್ಲ'' ಎಂದು ಯಾರೋ ಪಿಸುಮಾತಿನಲ್ಲಿ ಹೇಳಿದರು.

ಭಯ ನಿಜವಾಯಿತು

ಯುವಕ ಬಿಲ್ ಗಿಡುಗನ ಹಾಗೆ ನಮ್ಮನ್ನು ನೋಡುತ್ತಿದ್ದ. ಏನು ನಡೆಯುತ್ತಿದೆಯೆಂದು ನಮಗೆ ತಿಳಿಯದಿದ್ದರೂ ನಾವೆಲ್ಲಾ ಸೆರೆಸಿಕ್ಕಿದ್ದೇವೆಂದು ನಮಗೆ ಭಾಸವಾಗುತ್ತಿತ್ತು. ನಾನು ನನ್ನ ವಾಚನ್ನು ನೋಡಿದೆ. ನಾವು ಅಲ್ಲಿಂದ ಹೊರಡುವ ವೇಳೆ ಕಳೆದಿರುವುದು ತಿಳಿಯಿತು. ಕ್ರಿಸ್‌ಮಸ್ ದಿನ ಊರಿಗೆ ತಲುಪಬೇಕಾದ ನಾವು ಇಲ್ಲಿ ತೊಂದರೆಗೊಳಗಾಗಿದ್ದೆವು.

ಹಾಗಾಗದಿರಲಿ ಎಂದು ನಾನು ಮನಸ್ಸಿನಲ್ಲೇ ಹೇಳಿಕೊಂಡೆ. ನನ್ನ ಇಬ್ಬರು ಮಕ್ಕಳು ರಜಾದಲ್ಲಿ ತಮ್ಮ ತಂದೆಯ ಜತೆ ಹೋಗಿದ್ದರು. ನನ್ನ ಸ್ನೇಹಿತ ನಾವಿಕ ಜೀನ್-ಪೈರೆ, ಮನೆಯಲ್ಲಿರಲಿಲ್ಲ. ಅವನ ಹಡಗು ಹವ್ರೆ ಎಂಬಲ್ಲಿತ್ತು.

ಬೊಬ್ಬಿ ಪ್ರಯಾಣಿಕರ ಬಳಿ ಬಂದು ಕೆಲವು ಜನರನ್ನು ಕರೆದು ಬೇರೆ ಸೀಟುಗಳಿಗೆ ಹೋಗಿ ಕುಳಿತುಕೊಳ್ಳಲು ಹೇಳಿದ. ಮತ್ತು ಮುಂದಿನ ೨ ಸಾಲುಗಳಲ್ಲಿರುವ ಸೀಟುಗಳನ್ನು ಖಾಲಿಯಿರುವಂತೆ ಮಾಡಿದ. ಅನಂತರ ಬೊಬ್ಬಿ ನಮ್ಮ ಬಳಿ ಬಂದು ನಮ್ಮನ್ನೆಲ್ಲ ಅಲ್ಲಿ ಕುಳಿತುಕೊಳ್ಳಲು ಹೇಳಿದ.

ಬಿಲ್‌ನ ಹಾಗೆ ಪೊಲೀಸ್ ಉಡುಪು ಧರಿಸಿ ಟೈ ಕಟ್ಟಿಕೊಂಡಿದ್ದ ಇನ್ನೊಬ್ಬ ಮುಂದೆ ಬಂದ. ಅವನು ಮಧ್ಯಮ ಗಾತ್ರದವನಾಗಿದ್ದು ಅವನ ತಲೆ ಬೋಳಾಗಿತ್ತು. ಅವನು ಕೂಡ ಬಿಲ್ಲೆ ಧರಿಸಿದ್ದ. ಆದರೆ ಅವನ ಬಳಿ ಬಂದೂಕು ಇರಲಿಲ್ಲ. ಆತ ತುಂಬಾ ಉತ್ಸಾಹದಲ್ಲಿದ್ದ. ಸ್ವಲ್ಪ ಕುಂಟನಂತೆ ನಡೆಯುತ್ತಿದ್ದ. ಅವನು ಅಬ್ಬರಿಸಿದಂತೆ ಮಾತನಾಡತೊಡಗಿದ. ಅವನನ್ನು ನಾನು ನಟ್‌ಕೇಸ್ ಎಂದು ಹೆಸರಿಸುತ್ತೇನೆ. ಅವನ ಮಾತು ಕೇಳಿ ನನಗೆ ಭಯವಾಯಿತು. ''ನಾವು ಮುಜಾಹೆದಿನ್‌ನವರು'' ಎಂದು ಅವನು ಬೊಬ್ಬಿಟ್ಟ.

ಹಾಗಿದ್ದರೆ ಇವರೆಲ್ಲಾ ಜಿಹಾದ್‌ನ ಯೋಧರು-- ಯುದ್ಧದಲ್ಲಿ ಹೋರಾಡುವವರು. ಒಂದೇ ಒಂದು ಸೆಕೆಂಡಿನಲ್ಲಿ ಇಲ್ಲಿಯ ಸ್ಥಿತಿ ಬದಲಾಯಿತು. ಯಾರೊಬ್ಬರೂ ಕಿರುಚಲಿಲ್ಲ, ಅಳಲಿಲ್ಲ. ಯಾಕೆಂದರೆ ಎಲ್ಲರೂ ಭಯದಿಂದ ಮೂಕರಾಗಿದ್ದರು. ಅಲ್ಜೀರಿಯನ್‌ನ ಇಸ್ಲಾಮಿಕ್ ಆರ್ಮಿಗೆ (ಜಿಐಎ) ಸೇರಿದ ಈ ಜನರ ಕೈಕೆಳಗೆ ನಾವು ಸೆರೆಯಾಳಾಗಿದ್ದೆವು. ಭಯದಿಂದಿದ್ದ ನಮ್ಮ ಬಳಿ ಬೋಳು ತಲೆಯವನು (ನಟ್‌ಕೇಸ್) ಬಂದು ನಗುತ್ತಾ ಹೇಳಿದ ''ನೀವೇನೂ ಹೆದರಬೇಕಾಗಿಲ್ಲ''.

ನಾನು ನನ್ನ ವಾಚು ನೋಡಿದೆ. ಗಂಟೆ

೧೨.೧೫ ಆಗಿತ್ತು. ಒಂದು ಗಂಟೆ ಮೊದಲೇ ನಾವು ಇಲ್ಲಿಂದ ಹೊರಡಬೇಕಿತ್ತು.

ತಲೆಗೆ ಗುಂಡು

ಕೈಯಲ್ಲಿ ಗನ್ ಹಿಡಿದುಕೊಂಡಿದ್ದವನು ವಿಮಾನದ ಪೈಲೆಟ್‌ನ ಬಳಿಗೆ ಹೋಗಿ ಹೇಳಿದ ''ಕ್ಯಾಪ್ಟನ್ ಇನ್ನು ನೀನು ವಿಮಾನವನ್ನು ಹೊರಡಿಸು''.

ಆತ ಹೇಳಿದ''ಅದು ಹೇಗೆ ಸಾಧ್ಯ? ಹೊರಗೆ ಹೋಗುವ ಎರಡು ಬಾಗಿಲುಗಳು ತೆರೆದಿವೆ. ಅಲ್ಲದೆ ಲಗ್ಗೇಜ್ ತುಂಬಿಸುವ ಬಾಗಿಲು ತೆರೆದಿದೆ. ಆ ಬಾಗಿಲನ್ನು ಹೊರಗಿನಿಂದಲ್ಲದೆ ಒಳಗಿನಿಂದ ಮುಚ್ಚಲು ಸಾಧ್ಯವಿಲ್ಲ.''

ಅಪಹರಣಕಾರನಿಗೆ ಇದೊಂದು ಹೊಸ ಸಮಾಚಾರವಾಗಿತ್ತು. ಅವನು ಆಂಡ್ರೇಯನ್ನು ಕರೆದು ಹೇಳಿದ ''ನೀನು ಹೋಗಿ ಆ ಬಾಗಿಲು ಹಾಕು. ಇಲ್ಲವಾದರೆ ಈ ವಿಮಾನವನ್ನೇ ನಾಶಮಾಡಿಬಿಡುತ್ತೇನೆ.''

ಹೀಗೆ ಹೇಳಿದ ಅವನು ತನ್ನ ಜೇಕೆಟನ್ನು ಮೇಲಕ್ಕೆತ್ತಿ ಸೊಂಟದಲ್ಲಿ ಕಟ್ಟಿಕೊಂಡ ಬಾಂಬನ್ನು ತೋರಿಸಿದ. ಆಂಡ್ರೇ ಮರುಮಾತನಾಡದೆ ಮೆಟ್ಟಲಿನಿಂದ ಕೆಳಗಿಳಿದು ಲಗ್ಗೇಜ್ ತುಂಬಿಸಲಿರುವ ಬಾಗಿಲನ್ನು ಹಾಕಲು ಹೋದ. ಆಗ ಬಂದೂಕುಧಾರಿಯೊಬ್ಬ ಮೇಲಿನ ಮೆಟ್ಟಲಿನಲ್ಲಿ ನಿಂತು ಗಾಳಿಯಲ್ಲಿ ಕೆಲವು ಗುಂಡುಗಳನ್ನು ಹಾರಿಸಿದ. ಆಂಡ್ರೋ ಬಾಗಿಲುಗಳನ್ನು ಹಾಕಿ ಮೇಲೆ ಬಂದ.

''ಕ್ಯಾಪ್ಟನ್, ಇನ್ನು ವಿಮಾನವನ್ನು ನಡೆಸು.''

''ಕ್ಷಮಿಸಿ, ಈಗಲೂ ಅದು ಸಾಧ್ಯವಾಗದು. ಪ್ರಯಾಣಿಕರಿಗೆ ಹತ್ತಲೆಂದು ಇರಿಸಿರುವ ಮೆಟ್ಟಲುಗಳನ್ನು ನೆಲದಲ್ಲಿ ಕೆಲಸ ಮಾಡುವವರು ಆ ಕಡೆ ತೆಗೆದುಕೊಂಡು ಹೋಗಬೇಕು''.

ಇದೂ ಕೂಡ ಅಪಹರಣಕಾರರಿಗೆ ತಿಳಿದಿರಲಿಲ್ಲ. ಇನ್ನೊಂದು ವಿಷಯವೇನೆಂದರೆ, ವಿಮಾನಕ್ಕೆ ಹಿಂದಕ್ಕೆ ಹೋಗುವ ಗೇರ್ ಇರಲಿಲ್ಲ. ಅದನ್ನು ಒಂದು ವಿಶಿಷ್ಟವಾದ ಲಾರಿಯ ಮೂಲಕ ಸ್ವಲ್ಪ ದೂರ ಎಳೆದು ಮುಂದಕ್ಕೆ ಚಲಿಸಲು ಅದಕ್ಕೆ ದಾರಿ ಮಾಡಿಕೊಡಬೇಕಾಗಿತ್ತು.

''ಹಾಗಿದ್ದರೆ ಕಂಟ್ರೋಲ್ ಟವರಿಗೆ ತಿಳಿಸು, ನಾನು ಅಬ್ದುಲ್ ಅಬ್ದೆಲ್ ಸಲಾಂ ಯಾಯ್ಯಾ. ಇನ್ನು ಮುಂದೆ ಅವರಿಗೆ ನಾನೇ ಅಪ್ಪಣೆ ಕೊಡಲಿದ್ದೇನೆ''.

ಈ ಸಮಾಚಾರವನ್ನು ಎರಡು ಸೀಟಿನ ಮಧ್ಯೆಯಿರುವ ಹೇಂಡ್‌ಸೆಟ್‌ನ ಮೂಲಕ ಹೇಗೆ ತಿಳಿಸಬಹುದೆಂಬುದನ್ನು ಆತನಿಗೆ ಬ್ರುನೊ ತೋರಿಸಿಕೊಟ್ಟ. ಆತ ಈ ಸಮಾಚಾರವನ್ನು ಅರೆಬಿಕ್ ಭಾಷೆಯಲ್ಲಿ ಕಂಟ್ರೋಲ್ ಟವರಿಗೆ ತಿಳಿಸಿದ.

ಈ ಘಟನೆ ನಡೆಯುತ್ತಿದ್ದಾಗ ಬೊಬ್ಬಿ ಪ್ರಯಾಣಿಕರ ಪಾಸ್‌ಪೋರ್ಟನ್ನು ಪರಿಶೀಲಿಸುತ್ತಿದ್ದ. ಒಬ್ಬಾತನ ಪಾಸ್‌ಪೋರ್ಟನ್ನು ನೋಡಿದಾಗ ಆತನಿಗೆ ಸಂಶಯ ಬಂತು. ಆ ಪ್ರಯಾಣಿಕ ಪೊಲೀಸಿನವನಾಗಿದ್ದ. ಪ್ಯಾರೀಸಿಗೆ ಅಸೌಖ್ಯದಲ್ಲಿದ್ದ ತನ್ನ ಮಗಳನ್ನು ಭೇಟಿಯಾಗಲು ಆತ ಹೋಗುತ್ತಿದ್ದ. ಬೊಬ್ಬಿ ತನ್ನ ಮುಖ್ಯಸ್ಥನನ್ನು ಕರೆದುಕೊಂಡು ಬಂದ. ಅವರು ಮೂವರು ಏನೋ ಮಾತನಾಡಿಕೊಂಡರು.

ಪೊಲೀಸ್ ಪ್ರಯಾಣಿಕನ ಹತ್ತಿರ ತನ್ನ ಬ್ಯಾಗ್ ಮತ್ತು ಕೋಟನ್ನು ತೆಗೆದುಕೊಂಡು ವಿಮಾನದಿಂದ ಹೊರಗೆ ಹೋಗಲು ಹೇಳಿದರು. ಯಾಯ್ಯಾ ರೇಮಿಯ ಬಳಿ ಬಂದು ಬಾಗಿಲು ತೆರೆಯಲು ಹೇಳಿದ. ಆದರೆ ಆ ಪ್ರಯಾಣಿಕ ಬಾಗಿಲಿನ ಮೂಲಕ ಹೊರಗೆ ಹೋಗುತ್ತಿದ್ದಂತೆ ಬೊಬ್ಬಿ ಅವನ ಮೇಲೆ ಗುಂಡು ಹಾರಿಸಿದ. ಆತ ಕೆಳಗೆ ಸತ್ತು ಬಿದ್ದುದು ಕಾಣಿಸಿತು. ನಂತರ ಬೊಬ್ಬಿ ರೇಮಿಯ ಹತ್ತಿರ ಬಾಗಿಲು ಹಾಕಲು ಹೇಳಿದ.

ಯಾಯ್ಯಾ ಅನಂತರ ವಿಮಾನದಲ್ಲಿ ಮುಂಭಾಗದ ಸೀಟಿನಲ್ಲಿ ಕುಳಿತ ಚಿಕ್ಕ

ಮಕ್ಕಳಿರುವ ಹೆಂಗಸರನ್ನು, ಗರ್ಭಿಣಿಯರನ್ನು ಮತ್ತು ಅಸೌಖ್ಯದಲ್ಲಿರುವವರನ್ನು ಸೇರಿಸಿ ಒಟ್ಟು ೩೦ ಮಂದಿ ಪ್ರಯಾಣಿಕರನ್ನು ಹೊರಗೆ ಹೋಗಲು ಬಿಟ್ಟ. ಮೂರನೆಯ ಬಸ್ಸಿನಲ್ಲಿ ಬಂದ ೪೦ ಮಂದಿ ಪ್ರಯಾಣಿಕರನ್ನು ನಿಲ್ದಾಣದ ಪೊಲೀಸರು ವಿಮಾನವನ್ನು ಹತ್ತಲು ಬಿಡದಿದ್ದುದರಿಂದ ಅವರು ಸುರಕ್ಷಿತವಾಗಿ ನಿಲ್ದಾಣದಲ್ಲೇ ಉಳಿದಿದ್ದರು.

ಆಶ್ಚರ್ಯವೇನೆಂದರೆ ಆರೋಗ್ಯವಂತರಾಗಿದ್ದು, ದೃಢಕಾಯರಾಗಿದ್ದ ಇನ್ನಿಬ್ಬರನ್ನೂ ಯಾಯ್ಯಾ ಹೊರಗೆ ಹೋಗಲು ಬಿಟ್ಟಿದ್ದ. ಹೊರಗೆ ಹೋಗುತ್ತಿದ್ದಂತೆ ಅವರಲ್ಲೊಬ್ಬ ತನ್ನ ಕೈಬೆರಳಿನಲ್ಲಿದ್ದ ಉಂಗುರವನ್ನು ಯಾಯ್ಯಾನಿಗೆ ಕೊಟ್ಟ. ಇದನ್ನು ನೋಡಿದ ನನಗೆ ಸಂಶಯವಾಯಿತು. ''ತನ್ನನ್ನು ಬಿಟ್ಟುದಕ್ಕೆ ಆತ ಉಂಗುರ ಕೊಟ್ಟಿರಬಹುದೇ ಅಥವಾ ಅವರಿಬ್ಬರೂ ಮೊದಲಿಗೇನೇ ಅವನ ಪರಿಚಯಸ್ಥರಾಗಿರಬಹುದೇ?''

ಅಷ್ಟು ಮಂದಿ ಇಳಿದು ಹೋದಾಗ ವಿಮಾನದಲ್ಲಿ ಅರ್ಧದಷ್ಟು ಸೀಟು ಖಾಲಿಯಾಯಿತು. ಅಪಹರಣಕಾರರು ಬಿಲ್‌ನ ಮೇಲ್ವಿಚಾರಣೆಯಲ್ಲಿ ಉಳಿದ ಪ್ರಯಾಣಿಕರನ್ನು ಮುಂಭಾಗದ ಸೀಟಿನಲ್ಲಿ ಕುಳಿತುಕೊಳ್ಳಲು ಹೇಳಿದರು. ಯಾಯ್ಯಾ, ನಟ್‌ಕೇಸ್ ಮತ್ತು ಬೊಬ್ಬಿ ಆಗಾಗ ಕ್ಯಾಪ್ಟನ್‌ನ ಕೋಣೆಗೆ ಹೋಗಿ ಏನೋ ಮಾತನಾಡಿಕೊಳ್ಳುತ್ತಿದ್ದರು.

ಅನಿರೀಕ್ಷಿತವಾಗಿ ನಮಗೆ ವಿಮಾನದೊಳಗೆ ಯಾರೋ ಅಳುವುದು ಕೇಳಿಸಿತು. ಯುವತಿಯೊಬ್ಬಳು ಅಸ್ತಮಾ ತೊಂದರೆಗೊಳಗಾಗಿದ್ದಳು. ಸೋಫಿ ಆ ಯುವತಿಗೆ ಒಂದು ಆಕ್ಸಿಜನ್ ಬಾಟಲನ್ನು ತಂದು ಕೊಟ್ಟಳು. ಇದರಿಂದಾಗಿ ಆಕೆಗೆ ಸ್ವಲ್ಪಮಟ್ಟಿಗೆ ಆರಾಮವಾಯಿತು. ಆಕೆಗೆ ಇನ್ನೊಮ್ಮೆ ಅಸ್ತಮಾ ತೊಂದರೆಯಾಗಲು ಸಾಧ್ಯವಿರುವುದರಿಂದ ಆಕೆಯನ್ನು ಅಲ್ಲಿಂದ ಕಳುಹಿಸುವುದೇ ಉತ್ತಮವೆಂದು ಸೋಫಿ ಯಾಯ್ಯಾನಿಗೆ ಹೇಳಿದಳು. ಅದಕ್ಕೆ ಅವನು ಒಪ್ಪಿದ. ಈಗ ಒಟ್ಟಿಗೆ ೧೬೦ ಮಂದಿ ವಿಮಾನದಲ್ಲಿ ಉಳಿದಿದ್ದರು.

ಪ್ರಯಾಣಿಕರಿಗೆ ಊಟ ಕೊಡುವ ಸಮಯವಾಯಿತೆಂದು ಕೆರೋಲ್ ಯಾಯ್ಯಾನಿಗೆ ತಿಳಿಸಿದಳು. ಅವನು ಅದಕ್ಕೆ ಸಮ್ಮತಿಸಿದ. ಊಟ ಮಾಡುತ್ತಿದ್ದಂತೆ ನಮಗೆಲ್ಲ ಒಮ್ಮೆ ಭಯದ ವಾತಾವರಣ ಹೋಗಿ ಸ್ವಲ್ಪ ನಿಶ್ಚಿಂತೆಯಾಯಿತು. ಊಟದ ಬಳಿಕ ಕೆಲವರು ಪ್ರಯಾಣಿಕರು ಸಿಗರೇಟು ಸೇದಲು ಅನುಮತಿ ಕೇಳಿದಾಗ ಸಿಗರೇಟು ಸೇದಬಾರದು, ಆಲ್ಕೊಹಾಲ್ ಕುಡಿಯಬಾರದು ಎಂದು ನಟ್‌ಕೇಸ್ ಹೇಳಿದ.

ಅಪಹರಣಕಾರರಲ್ಲಿ ಒಬ್ಬಾತ ಲೋತ್ಫಿ ಎಂಬುವನು ಮುಂದೆ ಬಂದು ವಿಮಾನದ ಪರಿಚಾರಿಕೆಯನ್ನು ನೋಡಿ ''ಹೆಂಗಸರೆಲ್ಲ ತಮ್ಮ ಪತಿಯನ್ನಲ್ಲದೆ ಇತರ ಗಂಡಸರ ಕಾಮುಕ ದೃಷ್ಟಿಗೆ ಬೀಳದಂತೆ ತಮ್ಮ ಮುಖ ಮತ್ತು ತಲೆಯನ್ನು ಬಟ್ಟೆಯಿಂದ ಮುಚ್ಚಿಕೊಳ್ಳತಕ್ಕದ್ದೆಂದು ದೇವರ ಅಪ್ಪಣೆಯಿದೆ. ಹಾಗಾಗಿ ಇಲ್ಲಿರುವ ಹೆಂಗಸರೆಲ್ಲ ತಮ್ಮ ತಲೆಯನ್ನು ಮುಚ್ಚಿಕೊಳ್ಳತಕ್ಕದ್ದು'' ಎಂದು ಹೇಳಿದ. ನಾನು ಅತನ ಮಾತಿಗೆ ಒಪ್ಪದೆ ಎದುರು ವಾದಿಸುವವಳಿದ್ದೆ, ಆದರೆ ಇಲ್ಲಿಯ ಸನ್ನಿವೇಶದಲ್ಲಿ ಅದು ಸಾಧ್ಯವಿರಲಿಲ್ಲ.

ಕಂಟ್ರೋಲ್ ಟವರಿನವರು ಸುಮ್ಮನಿದ್ದುದರಿಂದ ಯಾಯ್ಯಾ ಸೋಫಿಯ ಬಳಿ ಬಂದು ಎರಡನೇ ಬಾಗಿಲನ್ನು ಸ್ವಲ್ಪ ತೆರೆಯಲು ಹೇಳಿದ. ಬೊಬ್ಬಿ ತನ್ನ ಗನ್ ತೆಗೆದುಕೊಂಡು ಬಾಗಿಲ ಸಂದಿನ ಮೂಲಕ ಹೊರಗೆ ಗುಂಡು ಹಾರಿಸಿದ.

ಸ್ವಲ್ಪ ಹೊತ್ತಿನ ನಂತರ ಬೊಬ್ಬಿ ತನ್ನ ಬಳಿಯಿದ್ದ ಎಕೆ-೪೭ ಬಂದೂಕನ್ನು ಸ್ವಚ್ಛ ಮಾಡುತ್ತಿದ್ದಾಗ ೫ ವರ್ಷದ ಹುಡುಗನೊಬ್ಬ ಅದನ್ನು ನೋಡುತ್ತಾ ನಿಂತ. ಬೊಬ್ಬಿ ತ

ಹುಡುಗನ ಕೈಯಲ್ಲಿ ಬಂದೂಕನ್ನು ಕೊಟ್ಟ. ಅನಂತರ ಅವರಿಬ್ಬರು ಸೀಟಿನ ಮಧ್ಯೆ ಇರುವ ದಾರಿಯಲ್ಲಿ ಅತ್ತೂ ಇತ್ತೂ ನಡೆಯತೊಡಗಿದರು. ಈ ದೃಶ್ಯ ಭಯ ತರುವಂತಿತ್ತು. ಬೊಬ್ಬಿ ಆ ಹುಡುಗನನ್ನು ಆತನ ತಾಯಿಯ ಬಳಿ ಬಿಟ್ಟು ಅವರಿಬ್ಬರನ್ನು ವಿಮಾನದಿಂದ ಹೊರಗೆ ಕಳುಹಿಸಿದ.

ವಿಮಾನವನ್ನು ವಶಪಡಿಸಿಕೊಂಡಿರುವ ಈ ಅಪಹರಣಕಾರರ ಮುಖ್ಯ ಉದ್ದೇಶವೇನೆಂಬುದೇ ನನಗಿನ್ನೂ ತಿಳಿದಿರಲಿಲ್ಲ. ವಿಮಾನ ನಿಲ್ದಾಣದವರು ರೇಡಿಯೋ ಮೂಲಕ ಅವರ ಮುಖ್ಯಸ್ಥರನ್ನು ಬೇಕಿದ್ದರೆ ಸಂಪರ್ಕಿಸಬಹುದೆಂದು ಏರ್ಪಾಡು ಮಾಡಿದ್ದರು. ಆದರೆ ಅಪಹರಣಕಾರರು ಸಂಧಾನಕ್ಕೆ ತಯಾರಿರಲಿಲ್ಲ. ಅವರಿಗೆ ವಿಮಾನವನ್ನು ಅಲ್ಲಿಂದ ಬೇರೆ ಕಡೆಗೆ ತೆಗೆದುಕೊಂಡು ಹೋಗಬೇಕಾಗಿತ್ತು. ಆದರೆ ವಿಮಾನವನ್ನು ಬಿಟ್ಟುಕೊಡುವುದಕ್ಕೆ ನಿಲ್ದಾಣದವರು ತಯಾರಿರಲಿಲ್ಲ.

ಅನಂತರ ಯಾಯ್ಯಾ ಇಸ್ಲಾಮಿಕ್ ಆರ್ಮಿಯ ಮುಖ್ಯಸ್ಥನಾದ ಅಬಸ್ಸಿ ಮದಾನಿ, ಅಲಿಬೆಲ್ಹಾದ, ಅವನ ಸಹಾಯಕನೊಬ್ಬ ಮತ್ತು ಅಬ್ದೆಲ್ಲಾಕ್ ಲಯದಾ ಇವರನ್ನು ಸೆರೆಯಿಂದ ಬಿಡಬೇಕೆಂದು ಹೇಳಿದ. ಆದರೆ ಇದಕ್ಕೂ ವಿಮಾನ ನಿಲ್ದಾಣದವರು ತಯಾರಿರಲಿಲ್ಲ. ಯಾವ ಶರ್ತವೂ ಇಲ್ಲದೆ ಅಪಹರಣಕಾರರು ತಮ್ಮ ಆಯುಧಗಳನ್ನು ಕೆಳಗಿಟ್ಟು ಶರಣಾಗತರಾಗಬೇಕೆಂದಿಷ್ಟೇ ಅವರು ಹೇಳುವುದು ವಿಮಾನದ ಲೌಡ್‌ಸ್ಪೀಕರ್‌ನಲ್ಲಿ ಕೇಳಿಸುತ್ತಿತ್ತು. ಸಮಯ ಸರಿಯುತ್ತಿತ್ತು. ಆದರೆ ಒಳಗಿನ ಪರಿಸ್ಥಿತಿ ಹಿಂದಿನಂತೆಯೇ ಇತ್ತು.

ಸಮಾಧಿಯ ಸ್ಥಿತಿಯಲ್ಲಿ

ಎರಡನೆಯ ದಿವಸ ಸಾಯಂಕಾಲ ಅಲ್ಜೀರಿಯಾದ ಅಧ್ಯಕ್ಷ ಲೈಮೈನ್ ಜೆರೊಲ್ ಅಪಹರಣಕಾರರು ಮತ್ತು ವಿಮಾನದ ಸಿಬ್ಬಂದಿಗಳಲ್ಲಿ ಆರು ಮಂದಿ ವಿಮಾನದಲ್ಲಿ ಉಳಿಯಬಹುದು, ಆದರೆ ಇತರ ಪ್ರಯಾಣಿಕರನ್ನೆಲ್ಲ ಹೊರಗೆ ಹೋಗಲು ಬಿಡಬೇಕೆಂದು ಹೇಳಿದ. ಆದರೆ ಪ್ರಯಾಣಿಕರನ್ನು ಬಿಟ್ಟುಬಿಟ್ಟರೆ ತಮಗೆ ಬೇರೆ ರಕ್ಷೆಯಿಲ್ಲವೆಂಬುದನ್ನು ಅರಿತಿರುವ ಅಪಹರಣಕಾರರು ಇದಕ್ಕೆ ಸಮ್ಮತಿಸಲಿಲ್ಲ.

ಸಮಯ ಸರಿದಂತೆ ಪ್ರಯಾಣಿಕರು ಅಸ್ವಸ್ಥರಾಗತೊಡಗಿದರು. ಒಬ್ಬ ಮುದುಕನ ರಕ್ತದೊತ್ತಡ ಬಹಳ ಜಾಸ್ತಿಯಾಗತೊಡಗಿತ್ತು. ಕೇರೊಲ್ ಆತನ ರಕ್ತದೊತ್ತಡವನ್ನು ಒಂದು ಯಂತ್ರದ ಮೂಲಕ ಪರಿಶೀಲಿಸಿ, ಆತನನ್ನು ಹೊರಗೆ ಹೋಗಲು ಬಿಡುವುದೊಳ್ಳೆಯದೆಂದು ಯಾಯ್ಯಾನಿಗೆ ಹೇಳಿದಳು. ಹಾಗಿದ್ದರೆ ಪ್ರಯಾಣಿಕರೆಲ್ಲರ ರಕ್ತದ ಒತ್ತಡವನ್ನೂ ನೋಡಬೇಕು ಮತ್ತು ನನ್ನ ರಕ್ತದೊತ್ತಡವನ್ನೂ ನೋಡಬೇಕು ಎನ್ನುತ್ತ ಬೊಬ್ಬಿ ತನ್ನ ಕೈಯಲ್ಲಿದ್ದ ಎಕೆ-೪೭ನ್ನು ಬದಿಯಲ್ಲಿರಿಸಿ ತನ್ನ ರಕ್ತದ ಒತ್ತಡ ನೋಡಲು ಸಿದ್ಧನಾದ.

ಸ್ವಲ್ಪ ಹೊತ್ತಿನಂತರ ಬ್ರುನೊ ಎಲ್ಲರಿಗೂ ಊಟ ಕೊಡಬೇಕೆಂದು ಅಪ್ಪಣೆ ಕೊಟ್ಟ. ನಮಗೆ ಹೆಚ್ಚು ಕಾಯಬೇಕಾಗಿರಲಿಲ್ಲ. ನಿಲ್ದಾಣದ ಪರಿಚಾರಕರು ನಮ್ಮ ಹೇಳಿಕೆಯಂತೆ ಊಟವನ್ನು ಮೆಟ್ಟಲುಗಳ ಬಳಿ ತಂದಿಟ್ಟರು. ಆದರೆ ಅಲ್ಲಿಂದ ಅದನ್ನು ಮೇಲಕ್ಕೆ ತೆಗೆದುಕೊಂಡು ಬರುವವರು ಯಾರು.? ನನ್ನನ್ನು ಯಾರೂ ಕಳುಹಿಸದಿರಲಿ ಎಂದು ನಾನು ದೇವರನ್ನು ಪ್ರಾರ್ಥಿಸಿದೆ. ಆದರೆ ನನಗೆ ಆ ಭಾಗ್ಯವಿರಲಿಲ್ಲ. ಯಾಯ್ಯಾ ನನ್ನನ್ನೇ ಹೋಗಲು ಹೇಳಿದ.

ಮೆಟ್ಟಲುಗಳ ಪಕ್ಕದಲ್ಲಿರುವ ದೃಶ್ಯವನ್ನು ನೋಡುವ ಎದೆಗಾರಿಕೆ ನನ್ನಲ್ಲಿರಲಿಲ್ಲ. ಪೊಲೀಸಿನವನ ಹೆಣ ಕಾಲುಗಳು ಅಗಲ ಬಿಟ್ಟು ತಲೆ ಮೆಟ್ಟಲುಗಳ ಕೆಳಗೆ ನೇತಾಡುತ್ತಿರುವುದನ್ನು ನೋಡಿದೆ. ಒಂದು ಕಣ್ಣು ತೆರೆದಿದ್ದು ತಲೆಬುರುಡೆ ಒಡೆದಿತ್ತು. ವಾಂತಿ ಬರುವಂತಾದ ನಾನು ಕಷ್ಟಪಟ್ಟು ಮೆಟ್ಟಲುಗಳ

ಮಧ್ಯೆ ದಾರಿಮಾಡಿಕೊಂಡು ಹೋದೆ.

ಭಯದಿಂದ ನಡುಗುತ್ತಿದ್ದ ನಾನು ಊಟದ ಟ್ರೇಗಳನ್ನು ಹಿಡಿದುಕೊಂಡು ಬೇಗನೆ ಮೇಲೆ ಬಂದೆ. ಕೂಡಲೇ ಪ್ರಯಾಣಿಕರಿಗೆ ಊಟಕೊಡಲಾಯಿತು. ವಿಮಾನದಲ್ಲಿದ್ದ ಪ್ರಯಾಣಿಕರಿಗೆಲ್ಲ ಆದಷ್ಟು ಬೇಗನೆ ಫ್ರಾನ್ಸನ್ನು ತಲಪಬೇಕಾಗಿತ್ತು. ಪ್ರಯಾಣಿಕರು ಹತ್ತಲು ಇಟ್ಟ ಮೆಟ್ಟಲುಗಳನ್ನು ಅಲ್ಲಿಂದ ತೆಗೆಯದೆ ವಿಮಾನ ಹೊರಡುವಂತಿರಲಿಲ್ಲ.

ಕರುಣೆಯಿಲ್ಲದವರು

ಬಂದೂಕು ಹಿಡಿದುಕೊಂಡಿದ್ದ ಯಾಯ್ಯಾ ಒಬ್ಬ ಯುವಕನನ್ನು ಕರೆದು ಆ ಮೆಟ್ಟಲುಗಳನ್ನು ವಿಮಾನದಿಂದ ಬೇರ್ಪಡಿಸಲು ಹೇಳಿದ. ಹೈಡ್ರಾಲಿಕ್ ಜೇಕ್ ಹಾಕಿ ಅದು ಮುಂದೆ ಹೋಗದಂತೆ ಮಾಡಿರುವುದರಿಂದ ಅವನಿಗೆ ಅದನ್ನು ಅಲ್ಲಾಡಿಸಲು ಸಾಧ್ಯವಾಗಲಿಲ್ಲ. ಅನಂತರ ಇನ್ನೊಬ್ಬ ಪ್ರಯಾಣಿಕ ತಾನು ಪ್ರಯತ್ನಿಸುತ್ತೇನೆಂದು ಹೊರಟ. ಆತ ಕೆಳಗಿಳಿಯತೊಡಗಿದಾಗ ಯಾಯ್ಯಾ ಅವನ ಬಳಿಯಿದ್ದ ಬ್ಯಾಗನ್ನು ಹಿಂದಕ್ಕೆ ಕೊಡಬೇಕೆಂದು ಹೇಳಿದ. ನಮಗೆಲ್ಲ ಭಯವಾಗತೊಡಗಿತು. ಆತ ಅಲ್ಲಿಂದ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸುತ್ತಿದ್ದಾನೆಂಬುದು ಸ್ಪಷ್ಟವಾಗಿತ್ತು.

ಕೆಳಗಿಳಿದಾತ ತಪ್ಪಿಸಿಕೊಂಡು ಹೋಗಿರುವನೆಂಬ ವಿಷಯವನ್ನು ತಿಳಿದ ಯಾಯ್ಯಾನಿಗೆ ಭಯಂಕರ ಕೋಪ ಬಂತು. ಆದರೆ ಆ ಕ್ಷಣದಲ್ಲಿ ಕಂಟ್ರೋಲ್ ಟವರಿನಿಂದ ಅವನನ್ನು ಯಾರೋ ಕರೆದರು. ಅಪಹರಣಕಾರರ ತಂಡದ ಮುಖ್ಯಸ್ಥನಾದ ಲೈದಾನನ ಸ್ವರ ದೂರವಾಣಿಯ ಮೂಲಕ ಕೇಳಿಸಿತು. ಅವನನ್ನು ವಿಮಾನದ ಬಳಿಗೆ ಕಾರಿನಲ್ಲಿ ಕರೆದುಕೊಂಡು ಬಂದಿದ್ದರು. ಅಪಹರಣಕಾರರು ದೂರವಾಣಿಯ ಮೂಲಕ ಅವನ ಜತೆ ಮಾತನಾಡ ಬಹುದಿತ್ತು.

''ಹೋ ! ನಮಗೆ ಇನ್ನು ಇಲ್ಲಿಂದ ಹೊರಡಬಹುದು. ಅಲ್ಲದೆ ನಮ್ಮ ಮುಖ್ಯಸ್ಥನೂ ನಮ್ಮೊಂದಿಗೆ ಬರಲಿದ್ದಾನೆ'' ಎಂದು ಅವರೆಲ್ಲ ಸಂತೋಷದಿಂದ ಬೊಬ್ಬೆ ಹಾಕಿದರು.

ಆದರೆ ಲೈದಾ ವಿಮಾನದೊಳಗೆ ಬರಲೇ ಇಲ್ಲ. ಸ್ವಲ್ಪ ಹೊತ್ತಿನ ನಂತರ ಲೌಡ್ ಸ್ಪೀಕರಿನಲ್ಲಿ ಪುನಃ ಆತನ ಸ್ವರ ಕೇಳಿಸಿತು. ಅದನ್ನು ಕೇಳಿದಾಗ ಯಾಯ್ಯಾನಿಗೆ ವಿಮಾನ ನಿಲ್ದಾಣದವರು ರೆಕಾರ್ಡ್ ಆಗಿದ್ದ ಲೈದಾನ ಮಾತನ್ನು ತಮಗೆ ಕೇಳಿಸುತ್ತಿದ್ದಾರೆ ಎಂಬ ವಿಷಯ ತಿಳಿಯಿತು. ಅವನು ಹೇಂಡ್‌ಸೆಟ್ ತೆಗೆದುಕೊಂಡು ಹೇಳಿದ ''ನೀವು ನಮ್ಮನ್ನು ಹೋಗಲು ಬಿಡದಿದ್ದರೆ ಇನ್ನು ಮುಂದೆ ನಡೆಯುವ ದುರಂತವು ನಿಮ್ಮಿಂದಾಗಿ ನಡೆಯಿತೆಂದು ತಿಳಿಯಿರಿ. ಸರಿಯಾಗಿ ೯.೩೦ಕ್ಕೆ ನಾವು ಇನ್ನೊಬ್ಬ ಒತ್ತೆಯಾಳನ್ನು ಕೊಲ್ಲುತ್ತೇವೆ.''.

ವಿಮಾನದಲ್ಲಿ ಸಿಬ್ಬಂದಿಗಳು ಮಾತ್ರವಲ್ಲದೆ ಫ್ರೆಂಚ್ ಅಂಬಾಸಡರ್‌ನ ಕಾರ್ಯದರ್ಶಿಯೊಬ್ಬ ಮತ್ತು ಯಾನ್ನಿಕ್ ಎಂಬ ಅಡುಗೆಯವನೊಬ್ಬ-- ಇವರಿಬ್ಬರು ಪ್ರಯಾಣಿಕರೂ ಫ್ರಾನ್ಸಿನವರಾಗಿದ್ದರು. ಯಾಯ್ಯಾ ಯಾನ್ನಿಕ್‌ನನ್ನು ವಿಮಾನದ ಚಾಲಕನಿರುವ ಸ್ಥಳಕ್ಕೆ ಬರಲು ಹೇಳಿ ಅವನ ಕೈಗೆ ಹೇಂಡ್‌ಸೆಟ್ ಕೊಟ್ಟು ಮಾತನಾಡಲು ಹೇಳಿದ''ನನ್ನ ಹೆಸರು ಯಾನ್ನಿಕ್ ಬ್ಯೂಗನೆಟ್. ನಾನು ಎಂಬೆಸಿಯಲ್ಲಿ ಕೆಲಸಮಾಡುತ್ತೇನೆ. ಅವರಿಗೆ ಬೇಕಾದಂತೆ ನೀವು ಮಾಡದಿದ್ದರೆ ಅವರು ನಮ್ಮನ್ನೆಲ್ಲ ಕೊಲ್ಲುತ್ತಾರೆ''.

ಅಧಿಕಾರಿಗಳಿಂದ ಯಾವ ಸಮಾಚಾರವೂ ಬರಲಿಲ್ಲ. ಕೋಪಗೊಂಡ ಲೊತ್ತಿ ಯಾನ್ನಿಕ್‌ನ ಕೈಯಿಂದ ಹೇಂಡ್‌ಸೆಟ್ ತೆಗೆದುಕೊಂಡು ಕಿರುಚಿದ ''ಇದು ನಿಮಗೆ ಕೊನೆಯ ಎಚ್ಚರ. ಇವನು ಈಗ ಸಾಯುತ್ತಾನೆ. ನಮಗೆ ಸಹಾಯಕರಿದ್ದಾರೆ. ಬೇಕಿದ್ದರೆ ಇನ್ನು ಒಂದು ವರ್ಷ ಕೂಡ ನಮಗೆ ಇಲ್ಲಿ ಇರಲು ಸಾಧ್ಯವಿದೆ. ನಮಗೆ ಯಾರ ಭಯವೂ ಇಲ್ಲ. ನಮ್ಮ ಬಳಿ ಸ್ಫೋಟಕ ವಸ್ತುವಿದೆ. ಇದರಿಂದ ನಾವು

ಎಲ್ಲವನ್ನೂ ಧ್ವಂಸಮಾಡಬಲ್ಲೆವು''.

ವಿಮಾನದಲ್ಲಿದ್ದ ಪ್ರಯಾಣಿಕರೆಲ್ಲ ತಮ್ಮನ್ನು ಗೋಂದು ಹಾಕಿ ಸೀಟಿಗೆ ಅಂಟಿಸಿದವರಂತೆ ಚಲಿಸದೆ ಕುಳಿತಿದ್ದರು. ಹೆಂಗಸೊಬ್ಬಳು ಶಬ್ದವಾಗದಂತೆ ಅಳುತ್ತಿದ್ದಳು. ಮುದುಕನೊಬ್ಬ ದೇವರನ್ನು ಪ್ರಾರ್ಥಿಸುವವನಂತೆ ತುಟಿ ಅಲ್ಲಾಡಿಸುತ್ತಿದ್ದ. ನಾನು ಯಾನ್ನಿಕ್‌ನಿಗೆ ಏನಾಯಿತೆಂದು ನೋಡಲು ಫ್ಲೈಟ್ ಡೆಕ್‌ನಲ್ಲಿರುವ ಬ್ರುನೊ ಬಳಿಗೆ ಹೋದೆ. ''ನನಗೆ ಗೊತ್ತಿಲ್ಲ'' ಎಂದು ಅವನು ಹೇಳಿದ. ಆದರೆ ಅವನು ನಿಜ ಹೇಳುತ್ತಿಲ್ಲವೆಂದು ನನಗೆ ಆತನ ಸ್ವರದಿಂದ ತಿಳಿಯಿತು.

ಒಂದನೇ ಬಾಗಿಲು ದಾಟಿ ಬರುವಾಗ ನೆಲದಲ್ಲಿ ಹರಡಿಕೊಂಡು ಮುದ್ದೆಯಾಗಿ ಬಿದ್ದಿರುವ ನ್ಯೂಸ್‌ಪೇಪರ್‌ಗಳನ್ನು ಪ್ರಾರ್ಥನೆ ಮಾಡಲು ಕುಳಿತುಕೊಳ್ಳಲು ಚಾಪೆಯಂತೆ ಅವರು ಉಪಯೋಗಿಸಿದ್ದರು.

ಆಕಾಶದಲ್ಲಿ ಹಾರಿದ್ದು

ಯಾನ್ನಿಕ್ ಕೊಲೆಯಿಂದಾಗಿ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿತು. ಫ್ರೆಂಚ್ ಸರಕಾರದವರು ವಿಮಾನವನ್ನು ಬಿಟ್ಟು ಬಿಡುವಂತೆ ಆಲ್ಜೀರಿಯಾದ ಅಧಿಕಾರಿಗಳನ್ನು ಒತ್ತಾಯಿಸತೊಡಗಿ ದರು. ಕಂಟ್ರೋಲ್ ಟವರ್‌ನಿಂದ ಈ ರೀತಿ ಸಮಾಚಾರ ಬಂದುದಾಗಿ ಬ್ರುನೊ ನಮಗೆ ತಿಳಿಸಿದ. ಅಪಹರಣಕಾರರಿಗೆ ಜಯ ಸಿಕ್ಕಿತ್ತು ಮತ್ತು ಪ್ರಯಾಣಿಕರಿಗೂ ಸಂತೋಷವಾಯಿತು. ಅವರಿಗೂ ಅಲ್ಲಿಂದೊಮ್ಮೆ ಹೊರಟರೆ ಸಾಕಾಗಿತ್ತು.

ಹಾಗಿದ್ದರೂ ಇಲ್ಲಿ ಒಂದು ತೊಂದರೆ ಇತ್ತು. ವಿಮಾನದೊಳಗಿನ ಕರೆಂಟಿಗಾಗಿ ನಾವು ತುಂಬ ಇಂಧನ ಉಪಯೋಗಿಸಿದುದರಿಂದ ಪ್ಯಾರೀಸ್ ತಲುಪುವ ಮೊದಲು ಸಿಗುವ ನಿಲ್ದಾಣದಲ್ಲಿ ಇಂಧನಕ್ಕಾಗಿ ವಿಮಾನವನ್ನು ನಿಲ್ಲಿಸಬೇಕಾಗಿತ್ತು. ಆದ್ದರಿಂದ ಅಪಹರಣಕಾರರು ಮಾರ್ಸಿಲ್ಲೆಯಲ್ಲಿ ಇಳಿಯುವುದಾಗಿ ನಿಶ್ಚಯಿಸಿದರು.

ವಿಮಾನ ನಿಧಾನವಾಗಿ ಚಲಿಸತೊಡಗಿತು. ವಿಮಾನದಲ್ಲಿದ್ದವರೆಲ್ಲ ತೆಪ್ಪಗೆ ಕುಳಿತಿದ್ದರು. ವಿಮಾನ ನೆಲವನ್ನು ಬಿಟ್ಟು ಆಕಾಶದಲ್ಲಿ ಹಾರತೊಡಗಿದಾಗ ನಾನು ಕಿಟಕಿಯ ಮೂಲಕ ಸಮುದ್ರವನ್ನು ನೋಡತೊಡಗಿದೆ. ನನ್ನ ಮಕ್ಕಳು ಈಗ ರಜಾದಲ್ಲಿ ಅವರ ತಂದೆ ಮತ್ತು ಕುಟುಂಬದವರ ಜತೆ ಸಂತಸದಲ್ಲಿ ಕಳೆಯುತ್ತಿರಬಹುದೆಂದು ಆಲೋಚಿಸಿದೆ.

ಫ್ರಾನ್ಸಿನ ಗಡಿ ಹತ್ತಿರವಾಗುತ್ತಿದ್ದಂತೆ ದೂರದಿಂದ ಲೈಟುಗಳು ಕಾಣಿಸತೊಡಗಿದವು. ನನ್ನ ಪಕ್ಕದಲ್ಲಿ ಕುಳಿತಿದ್ದವನು ಪಿಸುಧ್ವನಿಯಲ್ಲಿ ''ಈ ಕ್ರಿಸ್‌ಮಸ್ ದಿನ ಒಳ್ಳೆಯದಾಗಲಿ'' ಎಂದು ಹೇಳಿದ. ಹೀಗೆ ನಾವು ಒಬ್ಬರಿಗೊಬ್ಬರು ಈ ಸಂದೇಶವನ್ನು ತಲುಪಿಸಿದೆವು. ಬೆಳಗಿನ ಝಾವ ೩.೩೦ಗಂಟೆಗೆ ನಾವು ಮಾರ್ಸಿಲ್ಲೆ ವಿಮಾನ ನಿಲ್ದಾಣದಲ್ಲಿ ಬಂದಿಳಿದೆವು.

ಕಂಟ್ರೋಲ್ ಟವರ್ ಮತ್ತು ವಿಮಾನದೊಳಗಿನವರ ಸಂಭಾಷಣೆಯ ಮೂಲಕ ವಿಮಾನಕ್ಕೆ ೯ಟನ್ ಇಂಧನ ಬೇಕಾಗಬಹುದೆಂದು ಮತ್ತು ಅದು ಸಿಗಬಹುದೆಂದು ಹೇಳುತ್ತಿರುವುದು ನಮಗೆ ಕೇಳಿಸಿತು. ಬ್ರುನೊ ಬಳಿ ಬಂದ ಕೆರೋಲ್ ವಿಮಾನದೊಳಗೆ ಸ್ವಚ್ಛ ಮಾಡಲು ವ್ಯಾಕ್ಯೂಮ್ ಕ್ಲೀನರ್ ತರಿಸಬೇಕೆಂದು ಹೇಳಿದಳು.

ವಿಮಾನಕ್ಕೆ ಬೇಕಾದ ಸಾಮಾನುಗಳನ್ನು ತರಲು ವಿಮಾನದ ಬಳಿ ಮೆಟ್ಟಿಲುಗಳನ್ನು ಜೋಡಿಸಲಾಯಿತು. ಇಸಬೆಲ್ಲೆ ವ್ಯಾಕ್ಯೂಮ್ ಕ್ಲೀನರನ್ನು ಪ್ಲಗ್ಗಿಗೆ ಜೋಡಿಸಿದಳು. ನಾವೆಲ್ಲಾ ಸೇರಿ ವಿಮಾನದೊಳಗೆ ಸ್ವಚ್ಛಮಾಡುತ್ತಿದ್ದಾಗ ಅಪಹರಣಕಾರರು ಬಾಗಿಲಿನ ಮೂಲಕ ಹೊರಗೆ ಗುಂಡುಹಾರಿಸಿದ ಸದ್ದು ಕೇಳಿಸಿತು. ನಮಗೆಲ್ಲ ಎಚ್ಚರ ಸೂಚಿಸಲು ಈ ರೀತಿ ಮಾಡಿರಬಹುದಲ್ಲವೆ?

ಮುಂದುವರಿದ ಭಯ

ಇಂಧನ ಕೊಡುವ ಕೆಲಸಗಾರರು ವಿಮಾನದ ಬಳಿಗೆ ಬರಲು ತಯಾರಿರಲಿಲ್ಲ.

ಪ್ರಯಾಣಿಕರನ್ನು ಮೊದಲು ಬಿಟ್ಟು ಬಿಡಬೇಕೆಂದು ಅವರು ಹೇಳಿದರು. ''ಇವರೆಲ್ಲಾ ಹೇಡಿಗಳು'' ಎಂದು ಯಾಯ್ಯಾ ಕಿರುಚಿದ. ಅಶಾಂತಿಗೊಂಡಂತಿದ್ದ ಅವನು ಈಗ ಒಂದು ಕಪ್ಪು ಫ್ರೇಮಿನ ಚೌಕಾಕಾರದ ಕನ್ನಡಕವನ್ನು ಧರಿಸಿದ್ದ. ಒಬ್ಬ ವಯಸ್ಸಾದ ಹೆಂಗಸು ಅಸೌಖ್ಯದಿಂದ ಇನ್ನೊಬ್ಬ ಹೆಂಗಸಿನ ಮೇಲೆ ಬಿದ್ದಳು. ಇದನ್ನು ನೋಡಿದ ಯಾಯ್ಯಾ ಆಕೆಯನ್ನು ಆಕೆಯ ಪತಿಯ ಜತೆ ಹೊರಗೆ ಹೋಗಲು ಬಿಟ್ಟ.

ನಾವೆಲ್ಲ ಆಯಾಸದಿಂದ ಬಳಲುತ್ತಿದ್ದೆವು. ಆದರೆ ಯಾಯ್ಯಾ ಇನ್ನೂ ತನ್ನ ಹಟ ಸಾಧಿಸುತ್ತಿದ್ದ. ಇಂಧನ ತುಂಬಿಸಲಿಕ್ಕಾಗಿ ಚಾಲಕನಿಗೆ ವಿಮಾನವನ್ನು ಚಲಿಸಲು ಅಪಹರಣಕಾರರು ಹೇಳಿದರು. ವಿಮಾನ ಮೆಲ್ಲಗೆ ಕಂಟ್ರೋಲ್ ಟವರಿನ ಬಳಿ ಬಂದು ನಿಂತಿತು. ''ಈಗ ನಿಮಗೆ ಏನು ಹೇಳಬೇಕಾಗಿದೆ?'' ಎಂದು ಯಾಯ್ಯಾ ಕೇಳಿದ. ಕಂಟ್ರೋಲ್ ಟವರಿನಿಂದ ಯಾರ ಸ್ವರವೂ ಕೇಳಿಸಲಿಲ್ಲ. ''ನೀವು ಇಂಧನ ಕೊಡದಿದ್ದರೆ ೫ ಗಂಟೆಗೆ ನಾವು ಇನ್ನೊಬ್ಬನನ್ನು ಕೊಲ್ಲುತ್ತೇವೆ''.

ಅವಧಿ ಮುಗಿಯುತ್ತಾ ಬಂತು. ಎರಡನೇ ಬಾಗಿಲ ಬಳಿ ಮೀಟಿಂಗ್ ನಡೆಯಿತು. ಬೊಬ್ಬಿ ತನ್ನ ಎಕೆ-೪೭ ಬಂದೂಕಿನ ತುದಿಗೆ ಕಾರ್ಟ್ರಿಜ್ ಇಟ್ಟು ಜೋಡಿಸಿದ. ಒಬ್ಬ ಮನುಷ್ಯನನ್ನು ಕೊಲ್ಲಲು ಇಷ್ಟೊಂದು ಬುಲೆಟ್‌ಗಳು ಯಾಕೆ? ಎಂದು ನಾನು ಹೇಳಿಕೊಂಡೆ. ನಾಲ್ಕು ಮಂದಿ ಅಪಹರಣಕಾರರೂ ಒಟ್ಟಾಗಿ ವಿಮಾನದ ಹಿಂದಿನ ಬಾಗಿಲಿನ ಬಳಿಗೆ ಬಂದರು. ಆ ಬಾಗಿಲಿನ ಮೂಲಕ ಹೊರಗೆ ಗುಂಡು ಹಾರಿಸಿದ ಸದ್ದು ಕೇಳಿಸಿತು. ಆದರೆ ಅಲ್ಲಿ ಹೊರಗೆ ಯಾರೂ ಇದ್ದ ಹಾಗೆ ಕಾಣಿಸಲಿಲ್ಲ. ಯಾರ ಮೇಲೆ ಗುಂಡು ಹಾರಿಸಿರಬಹುದು ? ಅನಂತರ ಇನ್ನೊಬ್ಬ ಒಂದನೆಯ ಬಾಗಿಲಿನ ಬಳಿ ಬಂದು ಗುಂಡು ಹಾರಿಸಿದ. ಪುನಃ ಆತ ವಿಮಾನದ ಹಿಂಭಾಗಕ್ಕೆ ಬಂದ. ಇದನ್ನು ನೋಡಿದ ನನ್ನ ಎದೆ ಹೊಡೆದುಕೊಳ್ಳುತ್ತಿತ್ತು.

ಯಾಯ್ಯಾ ವಿಮಾನದ ಚಾಲಕನ ಜಾಗಕ್ಕೆ ಹೋದ. ಬೊಬ್ಬಿ ಮತ್ತು ಲೊತ್ಫಿ ಅವನನ್ನು ಹಿಂಬಾಲಿಸಿದರು. ಅಲ್ಲಿಯ ಕಿಟಕಿಯನ್ನು ತೆರೆದು ಅದರ ಬದಿಯಲ್ಲಿ ನಿಲ್ಲಲು ಆತ ಜಾಕ್ವೀಸ್‌ಗೆ ಹೇಳಿದ. ಕಂಟ್ರೋಲ್ ಟವರಿನ ಕಡೆಗೆ ಎರಡು ಗುಂಡು ಹಾರಿಸಿದ. ಆಗ ವಿಮಾನದ ಹೊರಗಿನಿಂದ ಸದ್ದು ಕೇಳಿಸಿತು.

ಭಯಂಕರ ವಧೆ

ಒಂದು ಟ್ರಕ್ ಜನರಿಗೆ ಹತ್ತಲಿರುವ ಮೆಟ್ಟಿಲುಗಳನ್ನು ದೂಡುತ್ತಾ ವಿಮಾನದ ಬಳಿ ವೇಗವಾಗಿ ಬಂದು ನಿಂತಿತು. ಅದರಲ್ಲಿ ಕಪ್ಪು ಬಟ್ಟೆ ಧರಿಸಿ ತಲೆಯ ಮೇಲೆ ಹೆಲ್ಮೆಟ್ ಇಟ್ಟುಕೊಂಡವರಿದ್ದರು. ''ಎಲ್ಲರೂ ಸೀಟಿನ ಕೆಳಗೆ ಮಲಗಿರಿ'' ಎಂದು ಬೊಬ್ಬಿಟ್ಟ.

ಗುಂಡಿನ ಸುರಿಮಳೆ ಕೇಳತೊಡಗಿತು. ಒಬ್ಬ ಹೆಂಗಸಿನ ನರಳುವಿಕೆ ಕೇಳಿಸಿತು. ಆಕೆ ತಲೆಯನ್ನು ಕೂಡಲೇ ತಗ್ಗಿಸದಿದ್ದುದರಿಂದ ಅವಳ ಮೇಲೆ ಗುಂಡು ಬಿದ್ದಿತ್ತು. ''ಸುಮ್ಮನಿರಿ, ಅಲ್ಲಾಡದೆ ಇರಿ, ಮಾತನಾಡಬೇಡಿ. ಅಪಹರಣಕಾರರು ಉದ್ರೇಕಗೊಳ್ಳುವಂತೆ ಮಾಡಬೇಡಿ'' ಎಂಬುದಾಗಿ ನನಗೆ ಅಪರಿಚಿತವಾಗಿರುವ ಒಂದು ಸ್ವರ ಹೇಳುವುದು ಕೇಳಿಸಿತು.

ನಾನು ಸೀಟಿನ ಮಧ್ಯೆ ಅಡಗಿ ಕುಳಿತೆ. ಆದರೆ ನನ್ನ ಕಾಲುಗಳು ಸೀಟುಗಳ ಮಧ್ಯೆ ಇರುವ ದಾರಿಯಲ್ಲಿ ಸ್ವಲ್ಪ ಹೊರಗೆ ಚಾಚಿದ್ದುವೆಂದು ನನಗೆ ತಿಳಿದಿರಲಿಲ್ಲ. ಕಾಲಿಗೆ ಏನೋ ತಗುಲಿದಂತಾಗಿ ನೋಯತೊಡಗಿತು. ಇದೊಂದು ಭೀಕರ ಸ್ವಪ್ನದಂತಾಗಿತ್ತು. ಕೈಬಾಂಬಿನ ಸದ್ದು, ಗುಂಡಿನ, ಮೆಶಿನ್ ಗನ್‌ಗಳ ಸದ್ದು ವಿಮಾನದ ಮೆಟ್ಟಿಲಿಗೆ ಬೀಳುತ್ತಿರುವ ಗುಂಡಿನ ಹೊಡೆತಗಳ ಸದ್ದು ಕೇಳಿಸುತ್ತಿತ್ತು. ಅಲ್ಲದೆ ಗನ್‌ಪೌಡರಿನ ವಾಸನೆ ಮತ್ತು ಧೂಳು-ಹೊಗೆ ತುಂಬಿದುದರಿಂದಾಗಿ ನಮಗೆ ಉಸಿರುಕಟ್ಟಿದಂತಾಗುತ್ತಿತ್ತು. ಕಾದಾಟ ಶುರುವಾದೊಡನೆ ವಿಮಾನದೊಳಗೆ

ಉರಿಯುತ್ತಿದ್ದ ಬಲ್ಬುಗಳು ನಂದಿ ಹೋಗಿದ್ದುವು. ಈಗ ವಿಮಾನದೊಳಗೆ ಕೆಂಪು ಲೈಟಿನ ಬೆಳಕು ಅತ್ತೂ ಇತ್ತೂ ರಭಸದಿಂದ ಚಲಿಸುವುದು ಕಾಣಿಸುತ್ತಿತ್ತು.

ಇನ್ನೊಂದು ಕೈಬಾಂಬು ಸ್ಫೋಟವಾಯಿತು. ಬಾಂಬು ಬಿದ್ದರೆ ವಿಮಾನವೇ ಸ್ಫೋಟಗೊಳ್ಳುತ್ತದೆ. ಹಾಗಾದರೆ ನಾವೆಲ್ಲಾ ಸತ್ತಂತೆಯೇ ಎಂಬುದಾಗಿ ಭಯಗೊಂಡು ನಾನು ಶಕ್ತಿಯಿಲ್ಲದವಳಂತಾದೆ. ''ಬೇಗ, ತೆವಳಿಕೊಂಡು ಹೋಗು, ಮೇಲೇಳಬೇಡ'' ಎಂಬುದಾಗಿ ಯಾರೋ ಹೇಳಿದ್ದು ಕೇಳಿಸಿತು.

ದಾರಿ ಮಧ್ಯೆ ಒಬ್ಬ ಮಲಗಿದಂತೆ ಕಾಣಿಸಿತು. ಇನ್ನೊಬ್ಬನ ಶವವಾಗಿರಬಹುದೆ? ಕಪ್ಪು ಬಟ್ಟೆ ಧರಿಸಿದವನೊಬ್ಬ ಆ ಶರೀರವನ್ನು ದಾಟಿ ಎರಡನೆಯ ಬಾಗಿಲ ಬಳಿ ಹೋದ. ಆ ಬಾಗಿಲಿನ ಮೂಲಕ ಸ್ವಲ್ಪ ಬೆಳಕು ಕಾಣಿಸತೊಡಗಿತು. ಗಾಯಗೊಂಡ ಒಬ್ಬ ಹೆಂಗಸು ತೆವಳುತ್ತ ಆ ತೆರೆದ ಬಾಗಿಲಿನ ಹತ್ತಿರ ಬಂದಳು. ಅವಳು ಕೆಳಕ್ಕೆ ಜಾರಿದಾಗ ನಾನೂ ತೆವಳುತ್ತಾ ಅಲ್ಲಿಗೆ ಹೋಗಿ ಕೆಳಕ್ಕೆ ಜಾರಿದೆ. ಕೆಳಗೆ ಬೀಳುತ್ತಿದ್ದ ನನ್ನನ್ನು ಫ್ರೆಂಚ್ ಪೋಲೀಸಿನವನೊಬ್ಬ ಹಿಡಿದುಕೊಂಡ. ಹೀಗೆ ಪ್ರಯಾಣಿಕರೆಲ್ಲಾ ವಿಮಾನದಿಂದ ಕೆಳಗೆ ಬರತೊಡಗಿದರು.

''ಅಲ್ಲಿಗೆ ಹೋಗಿ, ಓಡಿ, ಕೆಳಗೆ ಬನ್ನಿ, ಮುಂದೆ ಹೋಗಿ, ತಲೆ ಬಗ್ಗಿಸಿ ಚಲಿಸಿ'' ಇತ್ಯಾದಿಯಾಗಿ ಅಪ್ಪಣೆ ಕೊಡುವುದು ಎಲ್ಲಾ ದಿಕ್ಕಿನಿಂದಲೂ ಕೇಳಿಸುತ್ತಿತ್ತು.

ವಿಮಾನದೊಳಗಿನಿಂದ ಇನ್ನೂ ಕಾದಾಟ ಕೇಳಿಸುತ್ತಿತ್ತು. ನಾವೆಲ್ಲ ರಕ್ಷಣಾಧಿಕಾರಿಗಳ ಸಹಾಯದಿಂದ ಹೊರಗೆ ಬಂದೆವು. ನಮ್ಮ ಮತ್ತು ವಿಮಾನದ ಮಧ್ಯೆ ಇರುವ ಜಾಗದಲ್ಲಿ ಪೋಲೀಸ್ ಕಾರುಗಳು, ಫಯರ್ ಇಂಜಿನುಗಳು, ಅಂಬ್ಯುಲೆನ್ಸ್‌ಗಳು ಮತ್ತು ಬಸ್ಸುಗಳು ನಿಂತಿದ್ದುವು.

ನಾನು ಒಬ್ಬ ಆಫೀಸರನ ಬಳಿ ಬಂದು ''ನಾನು ವಿಮಾನದ ಪರಿಚಾರಿಕೆ, ನನಗೆ ಅವರು ಬಾಂಬ್ ಇಟ್ಟಿರುವ ಸ್ಥಳ ತಿಳಿದಿದೆ, ಅಪಹರಣಕಾರರು ನಾಲ್ಕು ಮಂದಿ ಇದ್ದಾರೆ ಮತ್ತು ಆ ನಾಲ್ಕು ಮಂದಿಯೂ ವಿಮಾನದಲ್ಲಿ ಮುಂಭಾಗದಲ್ಲಿದ್ದಾರೆ'' ಎಂಬುದಾಗಿ ತಿಳಿಸಿದೆ.

ಸ್ವಲ್ಪ ಹೊತ್ತಿನಲ್ಲಿ ವಿಮಾನ ನಿಶ್ಶಬ್ದವಾಯಿತು. ಬೆಳಗಾಗತೊಡಗಿತ್ತು. ನಾನು ವಿಮಾನದಿಂದ ಹೊರಗೆ ಬಂದವರನ್ನು ಲೆಕ್ಕ ಮಾಡತೊಡಗಿದೆ. ನಮ್ಮಲ್ಲಿ ಎಷ್ಟು ಮಂದಿ ಕಾಣೆಯಾಗಿರಬಹುದು ? ಥಕ್ಕನೆ ನಮ್ಮೆದುರು ಬ್ರುನೊ ಬಂದು ನಿಂತಿದ್ದ. ಅವನು ಸತ್ತಿರಲಿಲ್ಲ. ನನ್ನ ಕಣ್ಣನ್ನು ನನಗೆ ನಂಬಲಾಗಲಿಲ್ಲ. ಅವನ ಶರ್ಟಿನ ಮೇಲೆ ರಕ್ತದ ಕಲೆಯಿತ್ತು . ಆದರೆ ಅವನಿಗೆ ಹೆಚ್ಚಿನ ಗಾಯಗಳಾಗಿರಲಿಲ್ಲ. ಅವನ ಹಿಂದೆಯೇ ಆಂಡ್ರೇ ನಿಂತಿದ್ದ.

ಬ್ರುನೊನನ್ನು ಅಂಬ್ಯುಲೆನ್ಸ್‌ನಲ್ಲಿ ಕರೆದುಕೊಂಡು ಹೋದರು. ಆಂಡ್ರೇ ನಮ್ಮ ಜತೆಯಲ್ಲೇ ಉಳಿದ. ಜಾಕ್ವೆಸ್ ಎಲ್ಲಿದ್ದಾನೆ? ಆತನ ಸಮಾಚಾರ ಕೇಳಲು ನನಗೆ ಧೈರ್ಯ ಬರಲಿಲ್ಲ. ಚಾಲಕನ ಕೋಣೆಯಲ್ಲಿ ಅಪಹರಣಕಾರರು ೪ ಮಂದಿ ಇದ್ದರು, ಅವರೆಲ್ಲ ಸತ್ತರು ಎಂದು ಆಂಡ್ರೇ ಹೇಳಿದ. ನಾವು ಬಸ್ಸಿಗೆ ಹತ್ತಿ ಹೋದೆವು. ಟರ್ಮಿನಲ್‌ನ ಬಳಿ ಇಳಿದಾಗ ಅಲ್ಲಿನ ದೃಶ್ಯ ನೋಡಿ ನಾವು ಮೂಕರಾದೆವು. ಅಲ್ಲಿ ತುಂಬಾ ಜನರು ಗುಂಪು ಕೂಡಿದ್ದರು.

ಬ್ರುನೊನನ್ನು ನೆಲದಲ್ಲಿ ಮಲಗಿಸಿದ್ದರು. ತುರ್ತು ಚಿಕಿತ್ಸೆ ನೀಡುವವರು ಆತನಿಗೆ ಚಿಕಿತ್ಸೆ ನೀಡುತ್ತಿದ್ದರು. ಅವನ ಬಳಿಯಲ್ಲಿ ಜಾಕ್ವೆಸ್ ಕುಳಿತಿದ್ದ. ನಾವು ಅವನ ಸುತ್ತಲೂ ನಿಂತೆವು. ಅವನು ವಿಮಾನದ ಚಾಲಕನ ಕೋಣೆಯಲ್ಲಿರುವ ಚಿಕ್ಕ ಕಿಟಕಿಯ ಮೂಲಕ ಹೊರಗೆ ಬಂದಿದ್ದ. ಆ ಕಿಟಕಿಯ ಮೂಲಕ ಫ್ರೆಂಚ್ ಮಿಲಿಟರಿಯವರಿಗೆ ಒಳಗಿನ ದೃಶ್ಯ ಚೆನ್ನಾಗಿ ಕಾಣಿಸಿದುದರಿಂದ ಅವರ ಕೆಲಸ ಸುಲಭವಾಯಿತು. ಆ ಕಿಟಕಿಯ ಮೂಲಕ ಒಳಗೆ ಬಂದ ಗುಂಡಿನಿಂದ ಅಪಹರಣಕಾರರಲ್ಲಿ

ಇಬ್ಬರು ಕೊಲ್ಲಲ್ಪಟ್ಟರು. ಕೆಳಗೆ ಬಿದ್ದ ಅವರಿಬ್ಬರ ದೇಹ ವಿಮಾನ ಚಾಲಕನ ಕೋಣೆಯ ಅಗಲ ಕಿರಿದಾದ ನೆಲದಲ್ಲಿ ತಡೆ ಗೋಡೆಯಂತಾದುದರಿಂದ ಅಲ್ಲಿದ್ದ ಬ್ರುನೊ ಮತ್ತು ಆಂಡ್ರೇ ಬದುಕಿ ಉಳಿದಿದ್ದರು.

ಬದುಕಿ ಉಳಿದವರ ಜೀವನ

ನಮ್ಮನ್ನು ಪ್ಯಾರೀಸ್‌ಗೆ ಕೊಂಡೊಯ್ಯುವ ವಿಮಾನ ಗುಂಡಿನ ಹೊಡೆತಕ್ಕೊಳಗಾಗಿತ್ತು. ಕಾದಾಟ ಆರಂಭವಾಗುವ ಮೊದಲು ಒಂದನೇ ಬಾಗಿಲಿನ ಮೂಲಕ ಅಪಹರಣಕಾರರು ಗುಂಡು ಹಾರಿಸಲು ತೊಡಗಿದ್ದರು ಎಂದು ನನಗೆ ಅನಂತರ ತಿಳಿಯಿತು.

ನಾವು ಮಾರ್ಸೆಯನ್ನು ಬಿಟ್ಟು ಅಲ್ಲಿಂದ ಪ್ಯಾರಿಸ್‌ಗೆ ಹೊರಡುವಾಗ ಡಿಸೆಂಬರ್ ೨೭ನೇ ತಾರೀಕು ಬೆಳಗಿನ ಝಾವ ೨ ಗಂಟೆಯಾಗಿತ್ತು. ನಾನು ನನ್ನ ಮನೆಯನ್ನು ತಲುಪಿದಾಗ ಮೂರು ದಿವಸದ ಹಿಂದೆ ಮನೆಯನ್ನು ಬಿಟ್ಟು ಹೊರಟಾಗ ಇದ್ದಂತೆಯೇ ಇತ್ತು. ಇನ್ನೊಮ್ಮೆ ಇಂತಹ ದುರಂತ ನಡೆಯದಿರಲಿ ಎಂದು ನಾನು ಹೇಳಿಕೊಂಡೆ.

ಕೆಲವು ದಿವಸಗಳ ವಿಶ್ರಾಂತಿಯ ಬಳಿಕ ನನಗೆ ಕೆಲಸಕ್ಕೆ ಹಿಂದಿರುಗಲು ಸಾಧ್ಯವಾಯಿತು. ಆದರೆ ನಾನು ಅಲ್ಲಿ ಪರೀಕ್ಷೆಗೆ ಒಳಗಾದಾಗ ಅವರು ನಾನು ಆ ಕೆಲಸಕ್ಕೆ ಅರ್ಹಳಲ್ಲವೆಂದು ನನ್ನನ್ನು ತಿರಸ್ಕರಿಸಿದರು. ವಿಮಾನ ಅಪಹರಣಕಾರರಿಂದಾಗಿ ನಾನು ನನ್ನ ೪೫ನೇ ವರ್ಷದಲ್ಲೇ ಕೆಲಸವನ್ನು ಕಳೆದು ಕೊಂಡೆ.

ಹೊರಗಿನಿಂದ ಬಂದು ನಮ್ಮನ್ನು ತುಳಿದವರನ್ನು ಮತ್ತು ತುಳಿಯುತ್ತಿರುವವರನ್ನು ಪೂಜಿಸಿ ಪಾಪಿಗಳಾಗಿದ್ದೇವೆ. ಈಗ ಕ್ಲೈಬ್ಯವನ್ನು ದೂರ ಮಾಡಬೇಕಾದ ಕಾಲ. ನಮ್ಮ ಆಲಸ್ಯವೇ ನಮ್ಮ ಮೃತ್ಯು. ಕನ್ನಡಿಗರು ಮೂಲೆ ಮೂಲೆಗಳಲ್ಲಿ ಉಗ್ರ ಚಳುವಳಿಯನ್ನು ಕೈಗೊಳ್ಳಬೇಕು. ಸಾಹಿತ್ಯ, ಸಂಗೀತ, ರಾಜಕಾರಣ, ಔದ್ಯೋಗ, ಸಮಾಜ ಯಾವ ಹೆಸರಿನಲ್ಲಿ ಪರಾಕ್ರಮಣ ಕಂಡುಬಂದರೂ ಕನ್ನಡಿಗರು ಎದುರಿಸಬೇಕು.

ಅ.ನ.ಕೃ.

ಹೊತ್ತಿತೋ ಹೊತ್ತಿತು
ಕನ್ನಡದ ದೀಪ
ಮುಗಿಯಿತೋ ಮುಗಿಯಿತು
ಶತಮಾನಗಲತಾಪ

-ಕಾವ್ಯಾನಂದ (ಸಿದ್ದಯ್ಯ ಪುರಾಣಿಕ)

ಚಾವಟಿ ಏಟು

ಎಚ್.ಆರ್. ಚಂದ್ರವದನ ರಾವ್
ಪ್ರಾಂಶುಪಾಲರು(ನಿ)
೨೮೭೭/೧೦, ಚಾಮುಂಡಿಪುರಂ
ಮೈಸೂರು-೫೭೦ ೦೦೪

ಪ್ರೀತಿ ಮೃತ್ಯುವಿಗಿಂತ ಶಕ್ತಿಯುತವಾದದ್ದು; ಆದ್ದರಿಂದಲೇ ಅದರಿಂದ ವಿಪತ್ತು. ಸ್ಟಾಕ್ ವಹಿವಾಟುವಿನಲ್ಲಿ ಏಟು ತಿಂದು ಅದನ್ನು ತೊರೆದು ಬಂದ ಆ ಯುವಕ ನೋಡಲು ತಕ್ಕಮಟ್ಟಿಗೆ ಚೆನ್ನಾಗಿಯೇ ಇದ್ದ. ಒದಗಿದ ಕಷ್ಟ ನಷ್ಟಗಳನ್ನು ದೂರ ಸರಿಸಿ ಬೇರೆ ವಿಷಯಗಳಲ್ಲಿ ಮಗ್ನನಾಗಲು ಅವನು ವಿಯನ್ನಾದಲ್ಲಿರುವ 'ಯೂನಿವರ್ಸಲ್ ಎಕ್ಸಿಬಿಷನ್'ಗೆ ಆಗಾಗ ಹೋಗಿ, ಅಲ್ಲಿದ್ದ ಮನಮೋಹಕ ದೃಶ್ಯಗಳನ್ನು ಮತ್ತು ಚಿತ್ತಾಕರ್ಷಕ ವಸ್ತುಗಳನ್ನು ವೀಕ್ಷಿಸುವುದರಲ್ಲಿ ಕಾಲ ಕಳೆಯುತ್ತಿದ್ದ.

ಒಂದು ದಿನ ವಸ್ತು ಪ್ರದರ್ಶನದ ರಷ್ಯನ್ ವಿಭಾಗದಲ್ಲಿ ಹೊಸದಾಗಿ ಮದುವೆಯಾದ ಒಂದು ಜೋಡಿಯನ್ನು ನೋಡಿದ. ಕುಲೀನ ಮನೆತನದವರಾದರೂ ಶ್ರೀಮಂತರಲ್ಲದ ಅವರೊಡನೆ ಸಲುಗೆ ವಹಿಸಬಹುದೆಂದೆನಿಸಿತು. ಆ ಸ್ಟಾಕ್ ದಳ್ಳಾಳಿಗೆ, ಗುಟ್ಟಾಗಿ ಅವಳಲ್ಲಿ ಪ್ರೀತಿ ತೋರಿಸಿದ. ಅವನ ನಡವಳಿಕೆ ವಿಯನ್ನಾದ ನಟಿಯರಿಗೆ ಸಂತಸ ತರುತ್ತಿದ್ದಿತೇನೋ. ಆದರೆ ಕುಲೀನ ಸ್ತ್ರೀಯರಿಗೆ ಅದು ಹೀನಾಯ ಅನಿಸುತ್ತಿತ್ತು.

ಆಕೆಗೆ ಅವನ ಬಗ್ಗೆ ದ್ವೇಷ, ಕೋಪ. ಅವನಿಗೆ ಸರಿಯಾಗಿ ಬುದ್ಧಿ ಕಲಿಸಿ ಸೇಡು ತೀರಿಸಿಕೊಳ್ಳಬೇಕೆಂಬ ಇಚ್ಛೆ ಅವಳ ಚಿಕ್ಕ ಸುಂದರವಾದ ತಲೆಯಲ್ಲಿ ಅಂಕುರಿಸಿತು.

ಅವಳನ್ನು ಹೇಗಾದರೂ ಒಲಿಸಿಕೊಳ್ಳಬೇಕೆಂಬ ಹಂಬಲ ಅವನಿಗೆ. ಒಂದು ಸಂಜೆ ಆಕೆ ರಷ್ಯನ್ ಫರ್ ಕೋಟ್ ಇಟ್ಟಿದ್ದ ಶೋಕೇಸ್ ಬಳಿ ನಿಂತು ನೋಡುತ್ತಿದ್ದಳು. ದುಬಾರಿ ಬೆಲೆ. ದುಂದು ವೆಚ್ಚ ಆಗುವುದನ್ನು ತಪ್ಪಿಸಬೇಕೆಂದು ಗಂಡ ಹೆಂಡತಿಯನ್ನು ಬಿಟ್ಟು ಮುಂದೆ ಹೋಗಿದ್ದ. 'ಎಷ್ಟು ಚೆನ್ನಾಗಿದೆ! ನನಗೆ ಅದು ಬೇಕಿತ್ತು', ಎಂದು ಕೊಂಡಳು ಆಕೆ. ಅದರ ಬೆಲೆ ಚೀಟಿ ನೋಡಿ, 'ನಾಲ್ಕು ಸಾವಿರ ರೂಬಲ್ಸ್, ಅಂದರೆ ಆರು ಸಾವಿರ ಫ್ಲಾರಿನ್ಸ್!

ಹತ್ತಿರದಲ್ಲೇ ಇದ್ದ ನಮ್ಮ ಸ್ತ್ರೀ ಪರಾಯಣ-
''ನಿಜ, ಆದರೆ ಏನು? ನಿಮ್ಮಂಥ ರೂಪವತಿಯರು ಹಣದ ಬಗ್ಗೆ ಮಾತಾಡ ಬಾರದು''.
''ಆದರೆ ನನ್ನ ಪತಿಗೆ ಇಂದಿನ ಸ್ಥಿತಿಯಲ್ಲಿ...''
''ಯೋಚಿಸ ಬೇಡಿ. ನನ್ನ ಬಗ್ಗೆ ಕಠಿಣವಾಗಿ ವರ್ತಿಸಬೇಡಿ. ನಾನು ಅದನ್ನು ನಿಮ್ಮ ಪಾದಾರವಿಂದದಲ್ಲಿ ಇಡಲು ಇಚ್ಛಿಸುತ್ತೇನೆ.''
''ನೀವು ತಮಾಷೆ ಮಾಡುತ್ತಿದ್ದೀರಾ?''
''ಇಲ್ಲ, ನಾನೇನೂ ತಮಾಷೆಗೆ ಹೇಳುತ್ತಿಲ್ಲ''.
''ನನಗೆ ಅವಮಾನ ಮಾಡುತ್ತಿಲ್ಲ ಅಂದರೆ ತಮಾಷೆಗೆ ಹೇಳುತ್ತಿದ್ದೀರಿ''.
'' ದೊರೆಸಾನಿ, ನಾನು ನಿಮ್ಮನ್ನು ಅವಮಾನ ಮಾಡುತ್ತಿಲ್ಲ ಅಥವಾ ತಮಾಷೇನೂ ಅಲ್ಲ. ನಾನು ನಿಮ್ಮಲ್ಲಿ ಅನುರಕ್ತನಾಗಿದ್ದೇನೆ''.
''ನನಗೆ ಕೋಪ ಬರುವಂತೆ ಮಾಡಬೇಡಿ,'' ಎನ್ನುತ್ತಾ ತನ್ನ ಮಾತನ್ನು ಮುಂದುವರೆಸಿದಳು.

ನಿಮ್ಮ ನಡವಳಿಕೆ ತುಂಬಾ ಹೀನಾಯ. 'ವೀನಸ್ ಇನ್ ದಿ ಫರ್' ಕಾದಂಬರಿಯಲ್ಲಿ ಅವಳು ತನ್ನ ಸೇವಕಿಗೆ ಚಡಿ ಏಟು ಕೊಡುತ್ತಾಳಲ್ಲಾ ಹಾಗೆ ನಾನು ಕೊಡಬಲ್ಲೆ.''

''ನಾನು ನಿಮ್ಮ ಗುಲಾಮನಾಗುತ್ತೇನೆ. ಕಥೆಯಲ್ಲಿನ ನಾಯಕಿಯಂತೆ ನೀವು ಶ್ಯಾಮಲವರ್ಣದ ಉಡುಗೆ ತೊಟ್ಟು ಕೈಯಲ್ಲಿ ಚಾವಟಿ ಹಿಡಿದುಕೊಳ್ಳುವುದನ್ನು ನಾನು ಕಲ್ಪಿಸಿಕೊಳ್ಳಬಲ್ಲೆ''.

ಅವಳು ಕ್ಷಣಕಾಲ ಅವನನ್ನು ವೀಕ್ಷಿಸಿ ನಂತರ ವಿಚಿತ್ರವಾಗಿ ನಕ್ಕಳು.
''ನಾನು ಹೇಳಿದಂತೆ ನೀವು ನನ್ನಿಂದ ಚಾವಟಿ

ಮೂಲ: ಮೊಪಾಸಾನ 'ಲಾಸ್ಟ್' ಕಥೆ

ಏಟು ತಿನ್ನುತ್ತೀರಾ ?''
''ಸಂತೋಷವಾಗಿ''
''ಚಾವಟಿಯಿಂದ ಇಪ್ಪತ್ತನಾಲ್ಕು ಏಟು ಬಾರಿಸುತ್ತೇನೆ ಇಪ್ಪತ್ತೈದರ ನಂತರ ನಾನು ನಿಮ್ಮವಳೆ, ಸರಿಯೇ ?''
''ಸರಿ, ನೀವು ಹೇಳುತ್ತಿರುವುದು ಸತ್ಯವೇ ?''
''ಖಂಡಿತ''.

ಅವನು ಅವಳ ಕೈಯನ್ನು ತೆಗೆದುಕೊಂಡು ಅದಕ್ಕೆ ಮುತ್ತಿಟ್ಟ. ನಂತರ ಕೇಳಿದ -
''ನಾನು ಯಾವಾಗ ಬರಲಿ ?''
''ನಾಳೆ ರಾತ್ರಿ ಎಂಟು ಗಂಟೆಗೆ''.
''ಕಪ್ಪು ಉಡುಪು ಹಾಗೂ ಚಾಟಿ ತರಲೇ''
''ಬೇಡ, ಅದರ ಬಗ್ಗೆ ಚಿಂತೆ ಬೇಡ''.

ಮಾರನೇ ದಿನ ಸಂಜೆ ಅವನು ಅಂದ ಗಾತಿಯ ಮನೆಗೆ ಬಂದಾಗ ದೊರೆಸಾನಿ ಒಬ್ಬಳೇ ಮನೆಯಲ್ಲಿ ಮಂಚದ ಮೇಲೆ ಕುಳಿತಿದ್ದಳು. ಕರಿ ಉಡುಪು ಕೈಯಲ್ಲಿ ಚಾವಟಿ. ಅವನು ಅದಕ್ಕೆ ಮುತ್ತಿಟ್ಟ.
''ನಾವು ಮಾಡಿಕೊಂಡ ಒಪ್ಪಂದ ಜ್ಞಾಪಕವಿದೆಯೇ ?''
''ಹ್ಞೂಂ, ಜ್ಞಾಪಕವಿದೆ, ನಾನು ನಿಮ್ಮಿಂದ ಇಪ್ಪತ್ತೈದು ಚಾವಟಿ ಏಟು ತಿನ್ನಬೇಕು. ಇಪ್ಪತ್ತೈದು ಏಟಿನ ನಂತರ ನಾನು ಹೇಳಿದ ಹಾಗೆ ನೀವು ಕೇಳಬೇಕು''.
''ಹೌದು ಮೊದಲು ನಾನು ನಿಮ್ಮ ಕೈಗಳನ್ನು ಕಟ್ಟುತ್ತೇನೆ''.

ಆ ಪ್ರಣಯಾಸಕ್ತ ದಳ್ವಾಳಿ ತನ್ನ ಕೈಗಳನ್ನು ಹಿಂದಕ್ಕೆ ಕಟ್ಟಿಸಿಕೊಂಡ. ನಂತರ ಅವನು ಆ 'ಡಿಲೈಲಾ' ಕಾಲ ಬಳಿ ಅವಳ ಆಣತಿಯಂತೆ ಮೊಣ ಕಾಲೂರಿ ಕುಳಿತ. ಅವಳು ಎದ್ದು ಅವನಿಗೆ ಚಡಿ ಇಂದ ಒಂದು ಬಿಗಿತ ಬಿಗಿದಳು.
''ತುಂಬ ನೋವು'' ಅವನು ಕಿರುಚಿದ.

''ನೋವಾಗಲಿ ಎಂದೇ'' ಎಂದು ನಕ್ಕು ಅವನಿಗೆ ನಿರ್ದಯವಾಗಿ ಅವಳು ಚಾವಟಿಯಿಂದ ಬಿಗಿಯುತ್ತಾ ಬಂದಳು. ಒಂದೊಂದು ಏಟೂ ಸುಖದ ಹತ್ತಿರಕ್ಕೆ ತರುತ್ತಿದೆ ಎಂದು ಅವನಿಗೆ ಸಮಾಧಾನ.

ಇಪ್ಪತ್ತು ನಾಲ್ಕು ಚಾವಟಿ ಏಟು ಕೊಟ್ಟ ನಂತರ ಅವಳು ಬಾರುಕೋಲನ್ನು ಕೆಳಕ್ಕೆ ಹಾಕಿ ಕೇಕೆ ಹಾಕಿ ನಕ್ಕಳು.
''ಇನ್ನು ಒಂದು ಉಳಿದಿದೆ ಅದಾದನಂತರ...''

''ಅದಾದನಂತರ'' ನಾನು ನಿಮ್ಮಿಷ್ಟಾರ್ಥ ಪೂರೈಸಿಕೊಳ್ಳಲು ಅವಕಾಶ ಕೊಡುತ್ತೇನೆ. ಆದರೆ ನನ್ನಿಂದ ನೀವು ಪಡೆದಿರುವುದು ಇಪ್ಪತ್ತು ನಾಲ್ಕು ಮಾತ್ರ'' ಎಂದಳು. ಆ ಕ್ರೂರಿ ಸಂಪನ್ನೆ.
''ಇದಕ್ಕೆ ಸಾಕ್ಷಿಗಳಿದ್ದಾರೆ.''

ಹೀಗೆ ಹೇಳುತ್ತಾ ಆಕೆ ಬಾಗಿಲಿಗೆ ಹಾಕಿದ ಪರದೆ ಎಳೆದಳು. ಅವಳ ಗಂಡ ಜೊತೆಗೆ ಇಬ್ಬರು ಸಂಭಾವಿತರು ಪಕ್ಕದ ಕೋಣೆಯಿಂದ ಅಲ್ಲಿಗೆ ನಗುತ್ತಾ ಬಂದರು. ಒಂದು ಕ್ಷಣ ಸ್ಪಾಕ್ ದಳ್ವಾಳಿ ಮೌನದಿಂದ ಅವನ 'ಡಿಲೈಲಾ' ಕಾಲ ಬಳಿ ಮಂಡಿಯೂರಿ ಕುಳಿತ. ನಂತರ ನಿಡು ಸುಯ್ದು ಅವನು ಹೇಳಿದ ಅರ್ಥಗರ್ಭಿತ ಪದ
''ನನ್ನ ಕತೆ ಮುಗೀತು''.

ಕನ್ನಡಿಗರೇ ನಾವು ನಮ್ಮ ಆಲಸ್ಯವನ್ನು ತಳ್ಳೋಣ; ಭ್ರಾಮಕ ಕಲ್ಪನೆಗಳನ್ನು ಬಿಟ್ಟು ಬಿಡೋಣ; ಮತ್ತು ಮುಂದಿನ ಮಾರ್ಗಕ್ಕೆ ಹತ್ತೋಣ. ಪಾತಾಳಕ್ಕಿಳಿದ ನಮ್ಮ ಕರ್ನಾಟಕ ಆರ್ಯ ಸಂಸ್ಕೃತಿಯನ್ನು ನಾವು ಉದ್ಧರಿಸದೆ ಇನ್ನಾರು ಉದ್ಧರಿಸುವರು.

- ಆಲೂರು ವೆಂಕಟರಾವ್

ಜನ ಸೇವಕರು

ಗೋಪಾಲ ಆಶ್ರಿತ
ಜವಾಹರ ನಗರ
ರಾಯಚೂರು

ಉದಾರ ಮನಸ್ಸಿನ ವೈದ್ಯ : ಮುಂಬಯಿಯ ರೋಗ ನಿದಾನ ತಜ್ಞ ಅರವಿಂದ ಮುಕುಂದ ಪೈ, ಚೆನ್ನೈಯಲ್ಲಿರುವ ತನ್ನ ಮಗಳ ಭೇಟಿಗೆ ಹೊರಡಲು ನಿಶ್ಚಯಿಸಿದ. ಕೂಡಲೇ ಆ ನಗರದ ಬ್ಲಡ್ ಬ್ಯಾಂಕುಗಳಿಗೆ ಪತ್ರ ಬರೆದು, ತನ್ನನ್ನು ಕಾಣ ಬಯಸುವವರು ಸಂಪರ್ಕಿಸುವಂತೆ ತನ್ನ ಮಗಳ ಮನೆಯ ದೂರವಾಣಿ ಸಂಖ್ಯೆಯನ್ನು ಬರೆದನು. ಹೌದೆಂಬಂತೆ, ಪೈ ಚೆನ್ನೈ ತಲುಪುವಷ್ಟರಲ್ಲಿ ಅಪೊಲ್ಲೊ ಆಸ್ಪತ್ರೆಯವರು ಸಂಪರ್ಕಿಸಿದ್ದರು. ರಕ್ತದ ಕ್ಯಾನ್ಸರಿನಿಂದ ಬಳಲುತ್ತಿದ್ದ ಒಂದು ಮಗುವಿಗೆ ರಕ್ತದ ಅವಶ್ಯಕತೆ ಇತ್ತು. ಆಸ್ಪತ್ರೆಗೆ ಧಾವಿಸಿದ ೬೩ ವರ್ಷದ ಡಾ. ಪೈ ಕೂಡಲೇ ರಕ್ತದಾನಕ್ಕೆ ಮುಂದಾಗಿ, ಸುಮಾರು ೯೦ ನಿಮಿಷಗಳವರೆಗೆ ಆ ವೈದ್ಯಕೀಯ ಕ್ರಿಯೆಯಲ್ಲಿ ಪಾಲ್ಗೊಂಡನು.

೪೦ ವರ್ಷಗಳಿಂದ-ತಾನು ವೈದ್ಯಕೀಯ ವಿದ್ಯಾರ್ಥಿಯಾದಾಗಿನಿಂದಲೇ -ಡಾ. ಪೈ ರಕ್ತದಾನ ಮಾಡುತ್ತಿದ್ದಾನಲ್ಲದೆ, ತನ್ನ ವಿಳಾಸವನ್ನು ಬ್ಲಡ್ ಬ್ಯಾಂಕಿನವರಿಗೆ ಕೊಡಲು ಮರೆಯುವುದಿಲ್ಲ. ''ನನ್ನ ಕೈಲಾದ ಸೇವೆ ಮಾಡಬೇಕೆಂಬುದೇ ನನ್ನ ಆಸೆ.... ನಾನು ಎಲ್ಲಾ ಕಡೆ ಇರುವೆ...'' ಎಂದೆನ್ನುತ್ತಾನೆ ಈ ತಳ್ಳನೆಯ ರೋಗ ನಿದಾನ ತಜ್ಞ.

ಹೌದು, ಹೆಚ್ಚು ಕಡಿಮೆ ಯಾವಾಗಲೂ ಎಲ್ಲಾದರೂ ಇರುತ್ತಾನೆಂದು ಹೇಳಬಹುದು. ಪೈ ನಿತ್ಯವೂ ರಕ್ತದಾನ ಮಾಡುತ್ತಾನಲ್ಲದೆ, ತನ್ನ ಕೆಲವು ಮಿತ್ರರೊಡನೆ ಸೇರಿಕೊಂಡು ಒಂದು ಧರ್ಮಾರ್ಥ ಬ್ಲಡ್ ಬ್ಯಾಂಕ್‌ನ್ನು ಮತ್ತು ಒಂದು ನೇತ್ರದಾನ ಬ್ಯಾಂಕನ್ನೂ ನಡೆಸುತ್ತಿದ್ದಾನೆ. ಇದರಿಂದಾಗಿ, ಹಿಂದೆ ಅಂಧರಾಗಿದ್ದ ೪೧೫೪ ಜನರಿಗೆ ದೃಷ್ಟಿ ಬಂದಿದೆ. ವೃದ್ಧಾಶ್ರಮಕ್ಕೆ ಭೇಟಿ ನೀಡಿ ವೃದ್ಧರಿಗೆ ಸಾಂತ್ವನ ಹೇಳುವಂತೆ ಇತರರಿಗೆ ಪ್ರೇರೇಪಿಸುತ್ತಾನೆ. ಇದಲ್ಲದೆ ಪೈ ಅಲೆಮಾರಿ ಜನಾಂಗದವರು ಮತ್ತು ಪ್ರಕೃತಿಯ ವಿಕೋಪಕ್ಕೊಳಗಾದ ಜನರ ಸಹಾಯಕ್ಕಾಗಿ ಸ್ಥಾಪಿಸಲಾದ ಒಂದು ಸೇವಾ ಸಂಸ್ಥೆಯ ಅಧ್ಯಕ್ಷ ಕೂಡಾ ಆಗಿದ್ದಾನೆ.

ನಿಜ ಸಂಗತಿಯೆಂದರೆ, ಅವನು ತನ್ನ ರೋಗ ನಿದಾನ ಚಿಕಿತ್ಸಾಲಯದಲ್ಲಿಲ್ಲದಾಗಲೆಲ್ಲ, ಪೈ ಜನರಿಗೆ ಸಹಾಯ ಮಾಡುತ್ತಲಿರುತ್ತಾನೆ ಅಥವಾ ಆ ರೀತಿ ಮಾಡುವಂತೆ ಇತರರಿಗೆ ಪ್ರೋತ್ಸಾಹಿಸುತ್ತಿರುತ್ತಾನೆ.

'' ಈ ಮನುಷ್ಯನಿಗೆ ದಣಿವೇನೆಂಬುದು ಗೊತ್ತಿಲ್ಲ'' ಎಂದು ಐ ಬ್ಯಾಂಕ್ ಅಸೋಸಿಯೇಷನ್ ಆಫ್ ಇಂಡಿಯದ ಕಾರ್ಯದರ್ಶಿ ಡಾ. ಪ್ರಕಾಶ್ ತಟಾಕಿಯಾ ಹೇಳಿದ್ದಾನೆ.

ಪೈಗೆ ಇಷ್ಟೆಲ್ಲ ಮಾಡಲು ಹೇಗೆ ಸಾಧ್ಯ ? ಅದಕ್ಕೆ ''ನಮ್ಮನ್ನು ನಾವು ಅರ್ಪಿಸಿಕೊಳ್ಳುವುದೇ ಉದಾತ್ತ ದಾನ'' ಎಂದು ನಗುತ್ತ ಹೇಳುತ್ತಾನೆ ಈ ವೈದ್ಯ- ಬೃಂದಾ ಉಪಾಧ್ಯಾಯ

ಹಟ ಹಿಡಿದ ದೇವತೆ: ಹೋದವರ್ಷ ಅಕ್ಟೋಬರ್ ತಿಂಗಳಿನ ಒಂದು ಗುರುವಾರ, ೧೨ ವರ್ಷದ ಜೆನ್ನಿಫರ್ ಟರ್ನರ ಬಸ್ಸಿನಲ್ಲಿ ಶಾಲೆಗೆ ಹೊರಟಿದ್ದಳು. ಕಿಟಕಿಯ ಹತ್ತಿರ ಕುಳಿತಿದ್ದ ಈ ಬಾಲಕಿಗೆ, ಸೇತುವೆಯ ಕೆಳಗೆ ಒಂದು ಬಿಳಿಯ ಮಿಂಚು ಕಾಣಿಸಿತು. ಅದು ಒಂದು ಟ್ರಕ್ಕಿದ್ದಿರ ಬೇಕೆನಿಸಿತು. ಇದರ ಬಗ್ಗೆ ಬಸ್ ಚಾಲಕನಿಗೆ ಹೇಳಿದಳು. ಅನಂತರ ತನ್ನ ತಾಯಿ ಮತ್ತು ಅಜ್ಜನಿಗೂ ಹೇಳಿದಳು. ಆದರೆ ಅವರೆಲ್ಲರೂ ಅವಳ ಮಾತನ್ನು ಕಡೆಗಣಿಸಿದರು. ಶುಕ್ರವಾರ ಮತ್ತೆ ಆ ಬಿಳಿಮಿಂಚು ಕಂಡಾಗ ಜೆನ್ನಿಫರ ಮತ್ತೆ ತನ್ನ ಆತಂಕ ವ್ಯಕ್ತಪಡಿಸಿದಳು.

ಶನಿವಾರದಂದು, ಕಿರಿಯರ ಫುಟ್ ಬಾಲ್ ಪಂದ್ಯವೊಂದು ಮುಗಿದ ನಂತರ ಮರಳುತ್ತಿದ್ದಂತೆ, ಜೆನಿಫರ ಹಟ ಹಿಡಿದಳು. ತನ್ನ

ನವೆಂಬರ್ ೧೯೯೯ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ''ಹಿರೋಸ್ ಫಾರ್ ಟುಡೇ'' ಎಂಬ ಲೇಖನದ ಸಂಗ್ರಹಾನುವಾದ

ಕುಟುಂಬದವರು ವಾಹನ ನಿಲ್ಲಿಸಿ ಟ್ರಕ್ಕನ್ನು ಹುಡುಕಬೇಕೆಂದು ಒತ್ತಾಯಿಸಿ ಅಳ ಹತ್ತಿದಳು.

''ಆಗಲಿ ಮಗು, ನಾನು ವಾಹನವನ್ನು ಹಿಂದೆ ಒಯ್ಯುವೆ'' ಎಂದು ಅಜ್ಜ ಡಾನ್ ಲಿಗನ್ ಹೇಳಿದ. ವಾಹನವನ್ನು ನಿಲ್ಲಿಸಿದ ನಂತರ, ಜೆನ್ನಿಫರಳ ತಾಯಿ, ಬೆಕ್ಕಿಸ್ಟ್ಯಾಪ, ಬಹಳ ಎಚ್ಚರಿಕೆಯಿಂದ ಆ ಸೇತುವೆಯ ಒಡ್ಡಿನ ಕೆಳಗೆ ಹೊರಟಳು. ಅಲ್ಲಿ ಅವಳಿಗೆ ಒಂದು ಟ್ರಕ್ ಕಾಣಿಸಿತು. ''ಸ್ವಾಮಿ, ನೀವು ಕ್ಷೇಮದಿಂದ ಇದ್ದೀರಾ?'' ಎಂದು ಕೂಗಿದಳು. ಆ ವ್ಯಕ್ತಿ ತನ್ನ ತೋಳನ್ನು ಎತ್ತಿದ.

''ಹೋಗಿ.... ಯಾರನ್ನಾದರೂ ಸಹಾಯಕ್ಕೆ ಕರೆದು ತನ್ನಿರಿ'' ಎಂದು ತನ್ನ ವಾಹನದ ಕಡೆ ಕೂಗಿ ಹೇಳಿದಳು.

ಸಹಾಯಕ್ಕೆ ಬಂದ ಜನರು, ಆ ವ್ಯಕ್ತಿಯನ್ನು ಕಾಲುವೆಯಿಂದ ಎಳೆದು ತಂದರು. ಅವನ ದೇಹದಲ್ಲಿ ಜಲಾಂಶ ಕಡಿಮೆಯಾಗಿದ್ದರಿಂದ ಬಹಳ ಬಳಲಿದ್ದನು. ಮುಖವೆಲ್ಲ ರಕ್ತಮಯವಾಗಿತ್ತು.

ಮೂರು ದಿನಗಳ ಹಿಂದೆ ೫೯ ವರ್ಷದ ಜಾನ್‌ಮುಲ್ಲರ ಮಧ್ಯರಾತ್ರಿ ವಿಮಾನ ನಿಲ್ದಾಣದಿಂದ ತನ್ನ ವಾಹನದಲ್ಲಿ ಹೊರಟಾಗ ತೀವ್ರ ಬೆನ್ನು ನೋವು, ಕಾಲು ಸೆಡತದಿಂದಾಗಿ ಅವನಿಗೆ ತನ್ನ ಮಾರ್ಝ್ವಾ ಟ್ರಕ್ಕಿನ ಮೇಲಿನ ನಿಯಂತ್ರಣ ತಪ್ಪಿ, ಅದು ಸೇತುವೆಯ ಕೆಳಗೆ ಉರುಳಿತ್ತು.

ಎರಡು ದಿನಗಳವರೆಗೆ, ಹಗಲು ರಾತ್ರಿ ಪೋಲೀಸರು ಈ ವನ ರಕ್ಷಕನಿಗಾಗಿ ಹುಡುಕಾಡಿದ್ದರು. ಅವನ ಎರಡು ಗಂಡು ಮಕ್ಕಳು ವಿಮಾನದ ಮೂಲಕ ಬಂದು ತಮ್ಮ ಮಲತಾಯಿ ಮತ್ತು ಮಲತಮ್ಮನ ಜೊತೆ ಹುಡುಕವುದರಲ್ಲಿ ತೊಡಗಿದ್ದರು. ವಿಮಾನ ಕೆಲಸಗಾರರ ತಂಡಗಳು ಹೆದ್ದಾರಿಯಲ್ಲಿ ಸೂಕ್ಷ್ಮ ಪರಿಶೀಲನೆ ನಡೆಸಿದ್ದವು. ಆದರೆ ಶಾಲಾ ಬಸ್ಸಿನಲ್ಲಿ ಕುಳಿತಿದ್ದ ಜೆನ್ನಿಫರಳೊಬ್ಬಳೇ ಆ ಟ್ರಕ್ಕನ್ನು ನೋಡಿದ್ದಳು.

ಅನಂತರ ಆಸ್ಪತ್ರೆಗೆ ಹೋಗಿ ಮುಲ್ಲರನನ್ನು ಕಾಣಬೇಕೆಂದು ಅವಳು ಒತ್ತಾಯಿಸಿದಳು. ಅವನಿಗೆ ಎರಡು ಕಣ್ಣುಗಳಿದ್ದು ತಲೆಯ ಮೇಲೊಂದು 'ಒಳ್ಳೆಯ ಗಂಟು' ಇತ್ತು. ''ಅವನು ನನ್ನ ಕೈಗೆ ಮುದ್ದಿಟ್ಟನಲ್ಲದೆ, ನನ್ನನ್ನು ಸಾಹಸಿ ಬಾಲದೇವತೆ ಎಂದು ಕರೆದ.'' ಎಂದು ಹೇಳಿದಳು.

-ಎರಿಕ್ ಫ್ರೈಲ್ ಅರ್ಕನಾಸ- ಡೆಮೊಕ್ರಾಟ್ ಗೆಝೆಟ್‌ನಲ್ಲಿ

ಕಾವ್ಯದ ಪ್ರಸಾರ:

ನ್ಯೂಯಾರ್ಕಿನ ಕೋಲಂಬಿಯಾ ಯುನಿವರ್ಸಿಟಿಯಲ್ಲಿ ಇಂಗ್ಲೀಷ್ ಸಾಹಿತ್ಯವನ್ನು ಮುಖ್ಯ ವಿಷಯವಾಗಿ ಅಭ್ಯಸಿಸುತ್ತಿದ್ದ ಆ್ಯಂಡ್ರಿವ್ ಕೆರೋಲ್, ಹೆಸರಾಂತ ಕವಿ ಜೊಸೆಫ್ ಬ್ರೊಡಸ್ಕಿಯ ಒಂದು ಭಾಷಣವನ್ನು ಓದಿದ. ಯಾವ ರಾಷ್ಟ್ರದಲ್ಲಿ ಸಾಹಿತ್ಯದ ಬಗ್ಗೆ ಆಸಕ್ತಿ ಇರುವುದಿಲ್ಲವೊ ''ಅದು ಸಾಂಸ್ಕೃತಿಕವಾಗಿ ಅವನತಿ ಹೊಂದುವುದು'' ಎಂದು ಆ ಹಿರಿಯ ಕವಿ ಅಭಿಪ್ರಾಯಪಟ್ಟಿದ್ದ. ಆದ್ದರಿಂದ ಕವನ ಸಂಕಲನಗಳನ್ನು ಸುಪರ್ ಮಾರ್ಕೆಟ್, ಪೆಟ್ರೋಲ್ ಗುಂಡಿಗಳು ಮತ್ತು ಮೋಟೆಲ್‌ಗಳ ಹತ್ತಿರ ಹಂಚಬೇಕೆಂದು ಸೂಚಿಸಿದ್ದನು. ಇದರಿಂದ ಪ್ರೇರಿತನಾದ ಕೆರೋಲ್, ಬ್ರೊಡಸ್ಕಿಗೆ ಪತ್ರ ಬರೆದು ಅವನ ಆಶೆಯನ್ನು ಸಾಕಾರಗೊಳಿಸುವಲ್ಲಿ ತಾನು ಸಹಾಯ ಮಾಡಲು ಮುಂದಾದನು. ಅವರಿಬ್ಬರೂ ಕೂಡಿ ಅಮೆರಿಕನ್ ಕಾವ್ಯ ಮತ್ತು ಸಾಹಿತ್ಯ ಯೋಜನೆಯೊಂದನ್ನು ಪ್ರಾರಂಭಿಸಿದರು.

ಈ ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಹಾಗೂ ಪೂರ್ಣಾವಧಿಯ ಸ್ವಯಂ ಸೇವಕನಾಗಿ ಕೆರೋಲ್, ಎಲ್ಲ ಹೋಟೆಲ್‌ಗಳಿಗೆ ಭೇಟಿ ನೀಡಿ, ಅವರು ಹೋಟೆಲ್ಲಿನ ಕೋಣೆಗಳಲ್ಲಿ ಪುಸ್ತಕಗಳನ್ನಿಡುವಂತೆ ವಿನಂತಿಸಿಕೊಂಡನು. ಹೋಟೆಲ್ಲುಗಳ ಒಂದು ಸಮೂಹ ಒಪ್ಪಿಕೊಂಡಿತು. ಇತರ ಹೋಟೆಲ್ಲುಗಳೂ ಇದನ್ನು ಅನುಸರಿಸಿದವು. ದೂರವಾಣಿ

ಸೂಚಿಗಳನ್ನು ಪ್ರಕಟಿಸುವವರನ್ನು ಕಂಡು ಅವರು ಕೂಡಾ ಜಾಹಿರಾತುಗಳ ಬದಿಯಲ್ಲಿ ಕವಿತೆಗಳನ್ನು ಸೇರಿಸುವಂತೆ ಕೇಳಿಕೊಂಡನು.

ಇಂಥ ಒಂದು ದೂರವಾಣಿ ಸೂಚಿಯಲ್ಲಿನ ಪದ್ಯವೊಂದನ್ನು ಓದಿ ಪ್ರಭಾವಿತಳಾದ ಮಹಿಳೆಯೊಬ್ಬಳು ಬರೆದ ಪತ್ರವನ್ನು ಕೆರೊಲ್ ಜೋಪಾನವಾಗಿಟ್ಟು ಕೊಂಡಿದ್ದಾನೆ. ''ನನ್ನ ಪತಿ ಆರು ತಿಂಗಳ ಜೈಲುವಾಸ ಅನುಭವಿಸುತ್ತಿದ್ದನು. ಆಗ ನಾನೇ ಅವನ ಎಲ್ಲ ವ್ಯವಹಾರ ಮತ್ತು ಕೃಷಿ ಕೆಲಸ ನೋಡಿಕೊಳ್ಳಬೇಕಾಯಿತು. ಜೊತೆಗೆ ವಿರಹ ವೇದನೆ ನನ್ನನ್ನು ಬಾಧಿಸಹತ್ತಿತ್ತು. ಒಂದು ದಿನ, ಕೆಲವು ದೂರವಾಣಿ ಸಂಖ್ಯೆಗಳನ್ನು ಹುಡುಕುತ್ತಿದ್ದಾಗ ನಾನು ಎಮಿಲಿ ಡಿರೆನ್ಸ ಸನ್ನಳ 'ಹೋಪ್' ಎಂಬ ಕವಿತೆಯ ಸಾಲುಗಳನ್ನು ನೋಡಿದೆ. ಕೂಡಲೇ ನನ್ನ ಮುಖದಲ್ಲಿ ಮುಗುಳ್ನಗೆ ಕಾಣಿಸಿಕೊಂಡಿತು. ನನಗೆ ಅವಶ್ಯಕವಾಗಿದ್ದ ಪ್ರೋತ್ಸಾಹ ಮತ್ತು ಪ್ರಯತ್ನವನ್ನು ಮುಂದುವರೆಸಲು ಬೇಕಾಗಿದ್ದ ಶಕ್ತಿಯನ್ನು ಆ ಸಾಲುಗಳಲ್ಲಿ ಕಂಡೆ'' ಎಂದು ಬರೆದಿದ್ದಳು.

Hope is the thing
with feathers
that perches in the
soul,
And sings the tune,
without the words
And never stops at
all....

೧೯೮೩ ರಿಂದ ಕೆರೊಲ್ ೩,೦೦,೦೦೦ ಸಂಪುಟಗಳಿಗಿಂತಲೂ ಹೆಚ್ಚು ಕವನ ಸಂಗ್ರಹಗಳನ್ನು ಜನರಿಗೆ ತಲುಪಿಸಿದ್ದಾನೆ. ಫಿಲೆಡೆಲ್ಫಿಯಾದ ವ್ಹಾಲ್ಟವಿಹ್ಟ್ಮನ್ ಸೇತುವೆಯ ಹತ್ತಿರ ಶುಲ್ಕ ಕೊಡಲು ಬರುವ ಚಾಲಕರಿಗೆ ಅವನು ವ್ಹಾಲ್ಟಿವಿಹ್ಟ್ಮನ್ನನ ಕವನಗಳನ್ನು ಹಂಚಿರುವನು. ಅದರಂತೆ ಆಫ್ರಿಕನ್- ಅಮೆರಿಕನ್ ಕಾವ್ಯವನ್ನು ಲುಯಿಸಿಯಾನಾದ ಜೈಲಿನಲ್ಲಿದ್ದ ಬಂದಿಗಳಿಗೆ ನೀಡಿದ್ದಾನೆ. ಆಟೋಪರೀಕ್ಷಾ ಕೇಂದ್ರಗಳಲ್ಲಿ ಬರುವ ವಾಹನದವರಿಗೆ, ಎಡ್ಗರ ಎಲೆನ್ ಪೋನ ಕವನಗಳನ್ನು ತಲುಪಿಸಿದ್ದಾನೆ.

''ಒಂದು ಪುಸ್ತಕವನ್ನು ಓದುವಂತೆ ಜನರಿಗೆ ಪ್ರೋತ್ಸಾಹಿಸುವುದು ಅವಶ್ಯಕವಾಗಿದೆ. ಒಟ್ಟಾರೆ, ನಾವೆಲ್ಲ ಸಮಾಧಾನದಿಂದ ಓದಿ ಅದರ ಮಹತ್ವವನ್ನರಿಯುವಲ್ಲಿ ಕಾವ್ಯ ಸಹಾಯಕವಾಗಿದೆ'' ಎಂದು ಕೆರೊಲ್ ಹೇಳಿದ್ದಾನೆ.

-ಜೂಲಿ,ಎ.ಮಿಲ್ಲರ್, ಅಮೆರಿಕನ್ ಎಜುಕೇಟರ್ ನಲ್ಲಿ

ಕನ್ನಡ ನಾಡಿಗೆ ಕನ್ನಡವೇ ಗತಿ,
ಅನ್ಯಥಾ ಶರಣಂ ನಾಸ್ತಿ.
ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯಲ್ಲ, ಕನ್ನಡ.
-ಬಿ.ಎಂ.ಶ್ರೀ

ಅಪಜಯಕ್ಕೆ ಅಂಜಬೇಡಿ

ಜಯಂತಿ ಅಮೃತೇಶ್
೪೦, ಕೃತ್ತಿಕಾ, ೭ನೇ ಮೇನ್,
೭ನೇ ಕ್ರಾಸ್, ಸರಸ್ವತಿಪುರಂ,
ಮೈಸೂರು-೫೭೦ ೦೦೯

ಉದ್ಯೋಗದಲ್ಲಿ ಅಡಚಣೆಯುಂಟಾಗಿ ಕೊಳಚೆ ಮಣ್ಣಿನಲ್ಲಿ ಕಾಲು ಹೊತ ಹಾಗೆ ನಿಂತು... ಏತಕ್ಕಾಗಿ ವಿಜಯ ತನ್ನಿಂದ ದೂರ ವಾಗಿಯೇ ನೃತ್ಯಮಾಡುತ್ತಿದೆ; ಅದೂ ಬೆರಳೆಣಿಕೆಯಷ್ಟು ದೂರ... ಎಂದು ಯೋಚಿಸುತ್ತಿರುವೆಯಾ? ಉದ್ಯೋಗ ಪತಿಗಳ ಹಿಂದೇ ನಿನಗೆ ಉತ್ತರ ಕೊಡುತ್ತದೆ. ನೀನಿದಕ್ಕೆ ತಯಾರಾಗಿದ್ದೀಯಾ? ಹೌದು ನೀನಿನ್ನೂ ಸಾಕಷ್ಟು ಸೋಲು ಅನುಭವಿ ಸಿಲ್ಲವಲ್ಲ.

ಅನುಭವಸ್ಥ ಉದ್ಯೋಗಿಗಳು ಸೋಲನ್ನು ಹರಳೆಣ್ಣೆ ಜಯಕ್ಕೆ ಹೋಲಿಸುತ್ತಾರೆ. ನಿನ್ನನ್ನು ಕಷ್ಟ ಕೋಟಲೆಯೊಳಗೆ ತಳ್ಳಿ ಅನಂತರ ನಿನಗೆ ವಿಜಯವನ್ನು ಗಳಿಸಿಕೊಡುವ ಉದ್ದೇಶ ವೇನಲ್ಲ. ಆದರೆ, ಜನರು ಸೋಲನ್ನು ಗುರುತಿಸಿ- ಆ ಸೋಲಿನಿಂದ ಆದ ನಷ್ಟದಿಂದ ಮುಂದಕ್ಕೆ ವಿಜಯಿಗಳಾಗಲು ಪ್ರಯತ್ನಿಸು ತ್ತಾರೆ.

ನೀನು ಕುಸಿಯದಿದ್ದರೆ ಇದಕ್ಕೆ ಗಮನ ಕೊಡದೇ ಇರಬಹುದು. ವಿವಾದ ಮಾಡುವ, ತರ್ಕಮಾಡುವ ತೊಂದರೆಯನ್ನೇ ತೆಗೆದು ಕೊಳ್ಳದೇ ಇರಬಹುದು. ನಿನಗೆ ಶಾಲೆಯಲ್ಲಿ ಅಥವಾ ಪ್ರಣಯದಲ್ಲಿ ಚಿಕ್ಕಪುಟ್ಟ ಎದುರೇಟು ಗಳು ಬಿದ್ದಿರಬಹುದು. ಆದರೆ ನೀನು ಅರ್ಥಪೂರ್ಣವಾಗಿ ಸೋತಿಲ್ಲ. ಸಮಾಜ ಮತ್ತು ಅರ್ಥಶಾಸ್ತ್ರದ ಪ್ರಾಧ್ಯಪಕರಾದ ಅಮಿತಾಮ್ ಏಟ್‌ಜಿಯೋನಿ ಹೇಳುವ ಹಾಗೆ, "ಹೆದರಬೇಡಿ, ಎಲ್ಲರಿಗೂ ಅವಕಾಶ ಬರುತ್ತದೆ. ಯಾರೊಬ್ಬ ರಿಗೂ ಸೋಲಿ ನಿಂದ ದೂರವಾದ ಭದ್ರವಾದ ಜೀವನವನ್ನು ಸಾಗಿಸುವುದು ಸಾಧ್ಯವಿಲ್ಲ".

ಸೋಲನ್ನು ಗುರುತಿಸುವುದು ಸುಲಭ. ಇದು ಸಾಧಾರಣವಾಗಿ ಹಣಕಾಸಿನ, ಆತ್ಮಾಭಿಮಾನದ ಅಥವಾ ಸಮಾಜದಲ್ಲಿ ಗಣ್ಯತೆಯ ನಷ್ಟದಲ್ಲಿ ಕಾಣಿಸಿಕೊಳ್ಳುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ನಮಗೆ ಬೇಕಾದದ್ದು ದಕ್ಕದೇ ಹೋಗುತ್ತದೆ.

ಹಾಗೆಂದ ಮಾತ್ರಕ್ಕೆ ವಿವೇಚನೆಯುಳ್ಳ ಮನುಷ್ಯರು ದುರ್ಘಟನೆಗಾಗಿ ಇಚ್ಛಿಸುತ್ತಾರೆ ಎಂದೇನೂ ಅಲ್ಲ. ಗಾಢವಾದ ಒಂದು ದುರದೃಷ್ಟಕರ ಘಟನೆಯು ಒಂದು ಒಳ್ಳೆಯ ಮಾರ್ಗದರ್ಶನವಾಗಲೂ ಬಹುದು. ಇದರಿಂದ ನಮ್ಮ ಶಕ್ತಿಯ ಪರಿಚಯವೂ ನಮಗಾಗುವು ದಲ್ಲದೇ, ನಮ್ಮ ಮಿತಿ ಮತ್ತು ದೌರ್ಬಲ್ಯಗಳ ಪರಿಚಯ ಮಾಡಿ ಕೊಡುತ್ತದೆ. ಇದು ನಮ್ಮ ವಿಕಾಸದ ಬಹುಮುಖ್ಯವಾದ ಅಂಶ.

ತಮ್ಮ ನಷ್ಟದಲ್ಲಿಯೇ ಲಾಭವನ್ನು ಪಡೆಯುವಂಥ ಕಾಲ್ನಡಿಗೆಯ ಸೈನಿಕ ರನ್ನು ಉದ್ಯೋಗ ಪತಿಗಳು ಬಯಸುತ್ತಾರೆ. ಸದಾ ಕಾಲವೂ ಜಯಶೀಲರಾಗುತ್ತಾ ಬಂದವರಲ್ಲಿ ದುರಹಂಕಾರವೂ ಅಸಂತೃಪ್ತಿಯೂ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಜನರು ಕದನವನ್ನು ಆಹ್ವಾನಿಸಬೇಕು. ಆದರೆ ಸೋಲಿಗೆ ಹೆದರ ಬಾರದು. ಹೀಗಿರುವಾಗ, ಕೆಲವು ನಿಷ್ಕಪಟ ವಾದ, ವಂಚನೆಯಿಲ್ಲದ ತಪ್ಪುಗಳನ್ನು ಮಾಡ ಬೇಕಾಗುತ್ತದೆ. ಜಯಶೀಲರಾದ ಜನರು ತಮಗೆ ಅರಿವಿಲ್ಲದೆಯೇ ಲಾಭವನ್ನು ತರು ವಂಥ ತಪ್ಪುಗಳನ್ನೂ ಮಾಡದೇ ಮುನ್ನಡೆ ಯುತ್ತಾರೆ. ನಾವು ನಮ್ಮ ಸರಿ ಹೊಂದಿದ ಕೃತ್ಯಗಳಿಗಿಂತಲೂ, ತಪ್ಪಾದ ಕೃತ್ಯ ಗಳಿಂದ ಹೆಚ್ಚು ಪಾಠವನ್ನು ಕಲಿಯುತ್ತೇವೆ. ಸೋಲು ಎನ್ನುವುದು ನಾವು ನಮ್ಮ ಹೊಸ ಹೊಸ

೧೯೯೯ರ ಜನವರಿ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ವಾಕ್ ಸೂಸ್‌ಮನ್‌ರ 'ಡೋಂಟ್ ಫಿಯರ್ ಫೈಲ್ಯೂರ್' ಎಂಬ ಲೇಖನದ ಭಾವಾನುವಾದ

ಸಾಧನೆಗಳಿಗಾಗಿ ತೆರುವ ಬೆಲೆ, ಅಷ್ಟೆ. ಸೋಲು ನಮಗೆ ನಿಶ್ಚಯ ಎನ್ನುವುದೇ ಆದರೆ ಇಲ್ಲಿ ಕೆಲವು ಸಲಹೆಗಳಿವೆ :

೧. ಸೋಲು ಎನ್ನುವ ಪದವನ್ನೇ ಉಪಯೋಗಿಸಬೇಡಿ.ಇದೊಂದು ರಸ್ತೆಯ ತಿರುವಿಲ್ಲದ ದಾರಿ ನಡೆದುದ್ದೆಲ್ಲಾ ಒಳ್ಳೆಯದಕ್ಕೇ ಎಂದುಕೊಳ್ಳುತ್ತಾ ಮುನ್ನಡೆಯಿರಿ.

೨. ಸೋಲನ್ನು ತೀರ ಸನಿಹಕ್ಕೆ ಸುಳಿಯಲು ಬಿಡಬೇಡಿ. ಅಂದರೆ, ಇದೊಂದು ಜೀವನದ ಧೋರಣೆ ಮತ್ತು ಫಲಿತಾಂಶ. ಜೀವನವು ಕಹಿಯಾದಾಗ ನಾವು ನಮಗರಿವಿಲ್ಲದೆಯೇ ನಮ್ಮನ್ನು ಸ್ವತಃ ಸೋತೆ ವೆಂದು ಹೇಳಿಕೊಳ್ಳಬಾರದು. ನಮ್ಮನ್ನು ನಾವು ಪದೇ ಪದೇ ನಿರುದ್ಯೋಗಿಗಳು ಎಂದು ಹೇಳಿಕೊಳ್ಳುವುದರಿಂದ ಸಮಾಜದಲ್ಲಿ ನಮಗೆ ಅದೇ ಪಟ್ಟ ಬರುತ್ತದೆ. ಇದಕ್ಕೆ ಬದಲಾಗಿ ನಾವು ಬೇರೇ ಉದ್ಯೋಗವನ್ನು ಮಾಡಲು ಹೊರಟಿದ್ದೇವೆ ಎಂದು ಹೇಳಿಕೊಳ್ಳಬಹುದು. ಹೊಸ ಹೊಸ ಉದ್ಯೋಗಗಳನ್ನು ರೂಪಿಸುವ ಶಾಲೆಗಳಿಗೆ ಸೇರಬಹುದು ಅಥವಾ ಹೊಸತೊಂದು ಉದ್ಯೋಗವನ್ನು ರೂಪಿಸಿ ಕೊಳ್ಳಬಹುದು.

೩. ಸದಾ ಸಿದ್ಧರಾಗಿರಿ : ಸದ್ಯದ ಪರಿಸ್ಥಿತಿಯನ್ನು ತಲೆಕೆಳಗೆ ಮಾಡುವ ಒಂದು ಯೋಜನೆಯನ್ನು ರೂಪಿಸಿಕೊಳ್ಳಿ. ಇದಕ್ಕಿಂತ ಮಿಗಿಲಾದ ದುರಂತ ಅಥವಾ ವಿನಾಶವೇನಿದ್ದೀತು? ಎಂದು ನಿಮ್ಮನ್ನು ನೀವೇ ಪ್ರಶ್ನಿಸಿಕೊಳ್ಳಿ. ಉದ್ಯೋಗದಿಂದ ಚ್ಯುತಿಗೊಂಡಾಗ ಅಥವಾ ಜೀವನ ಸಂಗಾತಿಯನ್ನು ಕಳೆದು ಕೊಂಡಾಗ ಏನು ಬದಲಾವಣೆ ಮಾಡಿಕೊಳ್ಳುತ್ತೇವೆಂದು ಸ್ವತಃ ಪ್ರಶ್ನಿಸಿಕೊಳ್ಳಿ. ಈ ದುರಂತ ಸ್ಥಿತಿಯಿಂದ ಪಾರಾಗಲು ಸಾಕಷ್ಟು ಜೀವವಿಮೆ ಮತ್ತು ಹಣಕಾಸಿನ ಸೌಕರ್ಯಗಳಿವೆಯೇ ಎಂದು ತಿಳಿದುಕೊಳ್ಳಿರಿ. ನಿಮ್ಮ ಮಾಲೀಕ ನಿಮ್ಮನ್ನು ಉದ್ಯೋಗದಿಂದ ಚ್ಯುತಿ ಮಾಡಿದಾಗ ಇಂಥ ದುರಂತದಿಂದ ಪಾರಾಗಲು ನಿಮಗೇನಾದರೂ ವಿಶೇಷ ಬುದ್ಧಿಶಕ್ತಿ ಇದ್ದರೆ ಆದರಿಂದ ಏನು ವರಮಾನ ಬರಲು ಸಾಧ್ಯ ಎಂದು ಖಚಿತಪಡಿಸಿಕೊಳ್ಳಿ. ಚೀನಾದೇಶದವರ 'ಭಾವಲಿಪಿ' ಯಲ್ಲಿ ವಸ್ತುವಿನ ಹೆಸರನ್ನು ವ್ಯಕ್ತ ಪಡಿಸದೆ ಕೇವಲ ಭಾವವನ್ನು ಮಾತ್ರ ಸಂಕೇತವಾಗಿ ಬಳಸುತ್ತಾರೆ. ಇಲ್ಲಿ ''ವಿಪತ್ತು'' ಅಥವಾ ''ಆಪತ್ತು'' ಎನ್ನುವುದಕ್ಕೆ ಎರಡು ಭಾವಾರ್ಥವಿದೆ. ಒಂದು ಅಪಾಯ ಎರಡನೆಯದು 'ಅವಕಾಶ' ಇದನ್ನು ನಾವು ಸದಾ ನೆನಪಿನಲ್ಲಿಡಬೇಕು.

ಮುಖ್ಯವಾಗಿ ಇಕ್ಕೆಲಗಳಲ್ಲಿರುವ ನಮ್ಮ ಆಸರೆಗಳನ್ನು ಬಲಪಡಿಸಿಕೊಳ್ಳಬೇಕು. ಸಂಸಾರ, ಸ್ನೇಹಿತರು ಮತ್ತು ಪ್ರವೃತ್ತಿಗಳ ಸಮತೋಲನವನ್ನು ಕಾಪಾಡಿಕೊಳ್ಳ ಬೇಕು. ಯಾವುದೇ ಒಂದೇ ಉದ್ಯೋಗವೂ ಮತ್ತು ಒಮ್ಮೆ ಮಾಡುವ ಪ್ರಯತ್ನವೂ ನಿಮ್ಮ ಪೂರ್ಣಜೀವನದ ಭದ್ರತೆಯನ್ನು ಕೊಡಲಾರವು. ಯಾವುದೋ ಒಂದೇ ಬಗೆಯ ಪರಿಸರಕ್ಕೆ ನಾವು ಒಗ್ಗಿಬಿಟ್ಟರೆ ಹೂತು ಹೋದ ಪಳಿಯುಳಿಕೆಗಳಾಗಿ ಬಿಡುತ್ತೇವೆ; ಅಷ್ಟೇ. ಉನ್ನತ ಹುದ್ದೆಯಲ್ಲಿದ್ದವನೊಬ್ಬನು ತನ್ನ ಉದ್ಯೋಗವನ್ನು ಕಳೆದು ಕೊಂಡಾಗ, ಅವನನ್ನು ನಿನ್ನ ಮುಂದಿನ ಯೋಜನೆ ಏನೆಂದು ಕೇಳಿದರೆ ಅವನು ''ಏನೂ ಇಲ್ಲ'' ಎಂದು ಹೇಳಿದ್ದೇ ಆದರೆ ಆತನು ಖಂಡಿತ ವಿಪತ್ತಿನಲ್ಲಿದ್ದಾನೆ ಎಂದರ್ಥ.

ಜಾಣತನದಿಂದ ಸೋಲುವುದನ್ನು ಕಲಿ: ಇದು ಹಾಸ್ಯಾಸ್ಪದವಾಗಿ ಕಾಣಬಹುದು. ಸೋಲಿನೊಂದಿಗೆ ನವೀನತೆಯನ್ನು ಕಂಡುಕೊಳ್ಳಬೇಕು. ಅಪಜಯ ವನ್ನಲ್ಲ. ಆಗ ಏನನ್ನು ಬೇಕಾದರೂ ಸಾಧಿಸಲು ಸ್ವತಂತ್ರರಾಗಬಹುದು.

ಸೋಲುವುದರಲ್ಲಿ ಎರಡು ವಿಧಾನ ಗಳಿವೆ. ಒಂದು ನಿಧಾನ ಮತ್ತು ತಾಮಸದಿಂದ ಕೂಡಿದ ಮೂರ್ಖ ಸೋಲು. ಇದು ಎಷ್ಟು ದೀರ್ಘ

ವಾದದ್ದೆಂದರೆ ಕೊನೆಯಲ್ಲಿ ನಾವು ಹತಾಶರಾಗಿ ಪ್ರಯತ್ನ ಶೂನ್ಯರೂ ಆಗಿಬಿಡುತ್ತೇವೆ. ವಿವೇಕದನದ ಕೂಡಿದ ಶೀಘ್ರ ಸೋಲು ಎಂದರೆ ಅನೇಕ ಪ್ರಯತ್ನಗಳನ್ನು ಒಂದೇ ಸಲ ಮಾಡುವುದು ತಿಳುವಳಿಕೆ ಇಲ್ಲದಿರುವ ವಿಷಯುಗಳನ್ನು ವ್ಯವಸ್ಥೆ ಮಾಡುವುದು. ಸುಲಭವಾದ ಶೀಘ್ರ ಸೋಲಿಗೆ ದಾರಿ. ನಮ್ಮ ಪ್ರಯೋಗಗಳನ್ನು ಅತಿ ಅಲ್ಪ ಸಮಯಕ್ಕೆ ಸೀಮಿತಗೊಳಿಬೇಕು.

ಮರಣ ಎನ್ನುವುದು ಬೇಡ : ಒಬ್ಬ ವ್ಯಕ್ತಿಯು ತನ್ನ ಕಟ್ಟಡದ ನಿರ್ಮಾಣದ ಉದ್ಯೋಗದಲ್ಲಿ ನಷ್ಟವಾದಾಗ 'ಪಾಪರ್' ಆಗಿದ್ದೇನೆ ಎನ್ನುವ ಬದಲಾಗಿ, ಆತನು ಆ ಮನೆಯ ಮೇಲೆಯೇ ಸಾಲವನ್ನು ತೆಗೆದ. ತನ್ನ ಇತರ ನಿರ್ಮಾಣಗಳ ಕೆಲಸಗಳನ್ನೂ ಹಾಗೆಯೇ ಮುಂದುವರಿಸಿದ. ಈ ರೀತಿ ಮತ್ತೂ ಮತ್ತೂ ಸಾಲತೆಗೆದು, ಜಾಗರೂಕತೆಯಿಂದ ತನ್ನದೇ ಆದ ಒಂದು ಸ್ವಂತ ಉದ್ದಮೆಯನ್ನೂ ಪ್ರಾರಂಭಿಸಿ, ಅದರಲ್ಲಿ ಜಯಶೀಲನೂ ಆದ. ಈ ರೀತಿ ಮಾಡುವಾಗ ಉದ್ಯೋಗ ಪತಿಯಾಗುವುದರ ಬಗ್ಗೆ ತರಬೇತಿಯನ್ನೂ ಪಡೆದ. ಆತ ಇಷ್ಟಕ್ಕೇ ಸಮಾಧಾನ ಪಡೆಯಲಿಲ್ಲ. ತನ್ನ ಗತಕಾಲದ ಕಷ್ಟದ ಕ್ಷಣಗಳು ಅವನನ್ನು ಕಾಡಿಸುತ್ತಲೇ ಇದ್ದುವು. ''ವಿಜಯದ ಬಗ್ಗೆ ನಾನು ದುರಹಂಕಾರಪಡುವುದಿಲ್ಲ. ಯಾವಾಗಲೂ ನನ್ನ ಉದ್ದಿಮೆಯನ್ನು ಉತ್ತಮಗೊಳಿಸಲು ಪ್ರಯತ್ನಿಸುತ್ತಿರುತ್ತೇನೆ.'' ಎನ್ನುತ್ತಾನೆ.

ರೀತಿಯ ಧೋರಣೆ ಇದ್ದಲ್ಲಿ ನಾವು ಯಾವಾಗಲೂ ಮೇಲ್ಮಟ್ಟದಲ್ಲಿ ಇರಬಲ್ಲವು.



ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ ;
ಹಸಿಗೋಡೆಯ ಹರಳಿನಂತೆ
ಹುಸಿ ಹೋಗದ ಕನ್ನಡ.

- ಚೆನ್ನವೀರ ಕಣವಿ

ಹೆದ್ದಾರಿ : ಜನರನು ನುಂಗುವ ಹೆಮ್ಮಾರಿ

ಎ.ಪಿ. ಚಂದ್ರಶೇಖರ
'ಇಂದ್ರಪ್ರಸ್ಥ' ಜೀವಧಾರಕ ಸಸ್ಯವಾಟಿ,
ಕಳಲವಾಡಿ ಗ್ರಾಮ, ಉದ್ಬೂರು ಅಂಚೆ,
ಮೈಸೂರು-೫೭೦ ೦೦೮

ಬೆಂಗಳೂರು -ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಬೇಕೇ ಬೇಡವೇ? ಪಾರಿಸಾರಿಕವಾಗಿ ಸಾಧಕ ಬಾಧಕಗಳೇನು ? ಎಂಬ ಕುರಿತು ಜನಾಭಿಪ್ರಾಯ ಸಂಗ್ರಹಿಸುವ ನಾಟಕವೊಂದನ್ನು ಇತ್ತೀಚೆಗೆ ಬೆಂಗಳೂರು, ಮಂಡ್ಯ, ಮೈಸೂರು ಪೇಟೆಗಳಲ್ಲಿ ನಡೆಸಲಾಯಿತು. ಈ ಯೋಜನೆ ಪೂರ್ವ ನಿರ್ಧಾರಿತ ದೃಢ ನಿಶ್ಚಿತ. ಜನಾಭಿಪ್ರಾಯದ ಆಧಾರದ ಮೇಲೆ ನಿಂತಿಲ್ಲ ಎಂದೇ ಇದೊಂದು ನಾಟಕ. ಆದರೆ ಈ ನಾಟಕವಾಡುವಷ್ಟಾದರೂ ಅನಿವಾರ್ಯತೆ ಸರಕಾರದ ಮೇಲೆ ಕಂಪೆನಿಗಳ ಮೇಲೆ ಬಿದ್ದಿರುವುದು ಪ್ರಜಾತಂತ್ರದ ಹಾಗೂ ಪರಿಸರವಾದದ ವಿಜಯ. ಈ ವಿಜಯಕ್ಕೆ ಈ ಬಾರಿ ಹೆಚ್ಚಿನ ಗರಿಮೂಡಿದೆ. ಈ ನಾಟಕವನ್ನಾಡಲು ಮೇಲಿನ ಮೂರು ನಗರಗಳಲ್ಲಿ ಪ್ರಜ್ಞಾವಂತ ಜನರು ಅಂಕಿ ಅಂಶಗಳನ್ನು ಸಾರ್ವಜನಿಕರಿಂದ ಬಚ್ಚಿಟ್ಟು ಅಭಿಪ್ರಾಯ ಕೇಳಿದರೆ ಹೇಳಲಾಗದೆಂಬ ದೃಢತೆಯನ್ನು ಸಾರ್ವಜನಿಕರು ಪ್ರದರ್ಶಿಸಿದರು.

ಕನ್ನಡದ ನೆಲ, ಆಸ್ತಿಪಾಸ್ತಿ ಕಳಕೊಳ್ಳುವವರು ಕನ್ನಡಿಗರು. ಹಾಗಾಗಿ ವಿವರಗಳು ಕನ್ನಡದಲ್ಲಿ ಲಭ್ಯವಾಗಬೇಕೆಂದು ಜನ ಆಗ್ರಹಿಸಿದರು. ಇದೀಗ ಜನಾಭಿಪ್ರಾಯ ಸಭೆ ಮುಂದಕ್ಕೆ ಹೋಗಿದೆ. ಮುಂದೊಂದು ದಿನ ಇಂಥ ಸಭೆ ಮತ್ತೆ ನಡೆಯಲಿಕ್ಕಿದೆ. ಸಾರ್ವಜನಿಕರು ಸಾವಿರೆ ಸಾವಿರ ಸಂಖ್ಯೆಯಲ್ಲಿ ಸೇರಬೇಕು.

ಬರೇ ಸೇರುವುದಲ್ಲ. ನಮ್ಮ ಅಭಿವೃದ್ಧಿಯ ರೂವಾರಿಗಳು ನಾವೇ ಆಗಿ ಬರಬೇಕು. ನಮಗೆಂಥ ಅಭಿವೃದ್ಧಿ ಬೇಕೆಂದು ನಾವೇ ನಿರ್ಧರಿಸಿ ಹೇಳುವಂತಾಗಬೇಕು. ಲಾಭಬಡುಕ ಕಂಪೆನಿಗಳ ತಂತ್ರಗಳನ್ನು ಮಣ್ಣು ಮುಕ್ಕಿಸಬೇಕು. ಅಂಥ ಸರ್ಕಾರಕ್ಕೆ ದೃಷ್ಟಿ ಕೊಡಬೇಕು.

ಜನಾಭಿಪ್ರಾಯ ಸಭೆಗೆ ಪೂರ್ವಭಾವಿಯಾಗಿ ನಮಗೆ ಮಾಹಿತಿಗಳು ಕನ್ನಡವಲ್ಲಿಬೇಕು ಎಂದು ವಾದಿಸಿ ಜಯಗಳಿಸಿದ ಜನ ಕನ್ನಡಕ್ಕಿಂತ ಹೆಚ್ಚಾಗಿ ಇಂಗ್ಲಿಷ್ ಬಲ್ಲವರು, ಪೇಟೆಯ ಮಂದಿಗಳು ಎಂಬ ಅಂಶ ಬಹಳ ಮಹತ್ತರವಾದದ್ದು.

ನಮ್ಮ ಅಭಿವೃದ್ಧಿ ಇಂಗ್ಲಿಷ್‌ನಿಂದಾಗುತ್ತದೆ, ಇಂಗ್ಲಿಷಿರದ್ದಾದ ಭೋಗ ಚಿಂತನೆಯಿಂದಾಗುತ್ತದೆ. ಕೈಗಾರಿಕೀಕರಣದಿಂದಾಗುತ್ತದೆ. ಪೇಟೆಗಳಿಂದಾಗುತ್ತದೆ ಎಂದು ಒಂದು ಕಾಲಕ್ಕೆ ನಂಬಿ ಅಂಥಾ ವಿದ್ಯೆ ಕಲಿತ ಜನ ಅಂಥಾ ಉದ್ಯೋಗ ಮಾಡುವ(ಮಾಡಿದ) ಜನ (ನನ್ನನ್ನೂ ಸೇರಿ) ಇಲ್ಲಿಯ ನೀರಿಗೆ, ಇಲ್ಲಿಯ ಮಣ್ಣಿಗೆ, ಇಲ್ಲಿಯ ಜೀವ ಜಗತ್ತಿಗೆ ಸ್ಪಂದಿಸುವಂಥಾ ಸ್ಥಿತಿ ಬಂದದ್ದು ನಮ್ಮೆಲ್ಲರ ಸೌಭಾಗ್ಯ.

ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಕಳೆದು ಹೋಗುವ ಹಳ್ಳಿಗರ ಇಪ್ಪತ್ತು ಸಾವಿರ ಎಕರೆ ಜಮೀನಿನ ಕುರಿತು ತಮಗೆ ಯಾವುದೇ ಸಂಬಂಧವಿರದ ಪೇಟೆಯ ಮಂದಿ, ಅಪೇಕ್ಷೆಪಟ್ಟರೆ ಈ ಯೋಜನೆಯ ಲಾಭವನ್ನು ಪಡೆಯಲು ಸ್ವಯಂ ಸಾಮರ್ಥ್ಯವಿರುವ ಮಂದಿ ಇಂದು ಸಾರ್ವಕಾಲಿಕ ಜೀವಧಾರಕ ಚಿಂತನೆಯುಳ್ಳವರಾಗಿ ಸಕ್ರಿಯರಾದದ್ದು ನಮ್ಮ ಭವಿಷ್ಯದ ಭರವಸೆ. ಇಂಥಾ ಸಂದರ್ಭದಲ್ಲಿ ನೇರವಾಗಿ ಈ ಯೋಜನೆಯಿಂದ ಕಳಕೊಳ್ಳುವವರು, ಪರ್ಯಾಯವಾಗಿ ಸ್ವಾಭಿಮಾನವನ್ನೂ ಸ್ವಾತಂತ್ರ್ಯವನ್ನೂ ಕಳಕೊಳ್ಳಲಿರುವ ಸಮಸ್ತರೂ ಇಂಥ ಯೋಜನೆಗಳ ಹಿಂದಿರುವ ರಾಕ್ಷಸತ್ವವನ್ನು (ಬಹುರಾಷ್ಟ್ರೀಯತ್ವವನ್ನು) ಅರ್ಥವಿಸಿಕೊಂಡು ವಿರೋಧಿಸಲು ದೃಢಸಂಕಲ್ಪರಾಗಿ ಮುಂದಿನ ಸಭೆಗೆ ಬರಬೇಕು.

ಇಪ್ಪತ್ತು ಸಾವಿರ ಎಕರೆ ಭೂಮಿ ಹಾಳಾಗುತ್ತದೆ!

ಅಯ್ಯೋ ಇದರಲ್ಲೇನಿದೆ. ಭಾರತ ವಿಶಾಲವಾಗಿದೆ. ಲಕ್ಷಾಂತರ ಜನರ ಅನುಕೂಲಕ್ಕಾಗಿ, ದೇಶದ ಪ್ರಗತಿಗಾಗಿ ಒಂದಿಷ್ಟು ತ್ಯಾಗ ಮಾಡಲೇ ಬೇಕಾಗುತ್ತದೆ ಎಂದು ವಾದಿಸುವ ಮಂದಿಗಳಿಗೆ ಸೊಪ್ಪು ಹಾಕಲಾಗದು. . (ತ್ಯಾಗ ಏಕ ಮುಖಿ ಅಲ್ಲ). ಕೃಷಿ ಭೂಮಿ ಎಷ್ಟೊಂದು ಮೌಲ್ಯಯುತವಾದದ್ದು ಎಂದು ನಮ್ಮ ಸರ್ಕಾರಕ್ಕೂ ಗೊತ್ತು. ಹಾಗಾಗಿ ಕೃಷಿಭೂಮಿ ಕುರಿತಂತೆ ಸರ್ಕಾರದ ಬಳಿ ಭಾರೀ ಕಾನೂನುಗಳಿವೆ.

ರೈತ ತನ್ನ ಜಮೀನಿನಲ್ಲಿ ತನ್ನ ವಾಸಕ್ಕಾಗಿ ನಾಲ್ಕು ಮರಗಳ ಮಧ್ಯದ ಜಾಗದಲ್ಲಿ ಮನೆ ಕಟ್ಟುವುದು ಸರ್ಕಾರದ ದೃಷ್ಟಿಯಲ್ಲಿ ಅಪರಾಧ. ನಮ್ಮದು ಸರ್ವ ಸ್ವತಂತ್ರ ಪ್ರಜಾಸತ್ತಾತ್ಮಕ ದೇಶ. ಇಲ್ಲಿ ಮನೆ ಕಟ್ಟಿ ಜೀವನ ಮಾಡುವುದು ಪ್ರತಿಯೊಬ್ಬ ಪ್ರಜೆಯ ಮೂಲಭೂತ ಹಕ್ಕು. ಆದರೆ ರೈತ ತನ್ನ ಹಕ್ಕನ್ನು ಸ್ವತಂತ್ರವಾಗಿ ಚಲಾಯಿಸುವ ಹಾಗಿಲ್ಲ. ತನ್ನ ಜಮೀನಿನಲ್ಲಿ ತನ್ನ ವಾಸದ ಮನೆ ಕಟ್ಟಬೇಕಾದರೆ ಸರ್ಕಾರದ ಪರವಾನಿಗೆ ಬೇಕು. ಏಕೆಂದರೆ ಕೃಷಿ ಭೂಮಿ ಅಷ್ಟೊಂದು ಪವಿತ್ರವಾದದ್ದು. ದೇಶದ ಹೊಟ್ಟೆ ತುಂಬಿಸುವಂಥಾದ್ದು. ಇಷ್ಟೊಂದು ಮೌಲ್ಯಯುತವಾದ ಭೂಮಿ, ಸ್ವಯಂ ರೈತನಿಗೇ ಮನೆ ಕಟ್ಟಲು ಅಷ್ಟೊಂದು ಸುಲಭವಾಗಿ ಸಿಕ್ಕಲಾರದ ಭೂಮಿ ಐಶಾರಾಮದ ಕಾರುಗಳಲ್ಲಿ ಓಡಾಡುವ ವಿಲಾಸಿಗಳಿಗೆ ಸಿಗಲು ಇರುವ ಕಾರಣಗಳಾದರೂ ಏನು ?

ರೈತ ತನ್ನ ಜಮೀನುಗಳಲ್ಲಿ ಅಪ್ಪಣೆ ಇಲ್ಲದೆ ಶಾಶ್ವತವಾದ ಮನೆಗಳನ್ನು ಕಟ್ಟಲಾಗದು (ಆರ್.ಸಿ.ಸಿ.) . ಇದು ಅಪರಾಧ. ನಿಜ ! ಅಸಂಗ್ರಹ ತತ್ವದ ಪಾರಮ್ಯದಲ್ಲಿ ಯಾರೂ ಯಾವುದನ್ನೂ ಶಾಶ್ವತವಾಗಿ ಮಾಡಕೂಡದು. ಇದು ಪರಿಸರದ ಮೇಲೆ ದುಷ್ಟ ಪರಿಣಾಮಗಳನ್ನೊಡ್ಡುವುದು. ಯಾಕೆಂದರೆ ಯಾರೂ ಶಾಶ್ವತರಲ್ಲ. ಹೀಗಿರಲು, ರೈತ ಮಾಡಬಾರದ್ದನ್ನು, ಶಾಶ್ವತವಾದ ಕಾಂಕ್ರೀಟ್ ರಸ್ತೆಯೊಂದನ್ನು (ನಮ್ಮ ಕಂಟ್ರ್ಯಾಕ್ಟರ್‌ಗಳು-ಇಂಜಿನಿಯರ್‌ಗಳು ಖರ್ಚಾದ ಹಣಕ್ಕೆ ಸರಿಯಾದ ಕೆಲಸ ಮಾಡುತ್ತಾರೆಂಬ ಭರವಸೆ ಏನೂ ಇಲ್ಲ. ಈ ಬಗ್ಗೆ ಬೆಂಗಳೂರು ಸಿಟಿ ಬಸ್ ನಿಲ್ದಾಣವೇ ಮೊದಲ್ಗೊಂಡು ಎಲ್ಲೆಲ್ಲೂ ನಿದರ್ಶನಗಳು ಸಿಕ್ಕುತ್ತವೆ) ನೂರಾರು ಪಾರಿವಾರಿಕ, ಸಾಮಾಜಿಕ, ಸಾಂಸ್ಕೃತಿಕ ಆಘಾತಗಳಿಗೆ ಕಾರಣವಾಗುವ ಯೋಜನೆಯೊಂದನ್ನು ಹಮ್ಮಿಕೊಳ್ಳಲು ಸರಕಾರಕ್ಕೆ ಯಾವ ನೈತಿಕತೆ ಇದೆ?

ರೈತನಿಗೆ ಸ್ವಂತ ಜಮೀನಿನಲ್ಲಿ ಸ್ವಂತ ಮನೆಕಟ್ಟಲು ಪರವಾನಿಗೆ ಸಿಕ್ಕಿದೆ ಎಂದೇ ಇಟ್ಟುಕೊಳ್ಳಿ. ಆ ಮನೆಗೆ ಬೇಕಾದ ಮರಮುಟ್ಟುಗಳನ್ನು ಸ್ವಂತ ಜಮೀನಿನಿಂದ ಸಂಗ್ರಹಿಸಲು ಇದು ಸಾಲದು. ತನ್ನ ಜಮೀನಿನಲ್ಲಿ ತಾನೇ ಬೆಳಸಿದ ಮರವನ್ನು ತನ್ನ ಮನೆಗಾಗಿ ಕತ್ತರಿಸಲು ಒಮ್ಮೆ ಇಲಾಖೆಯ ಮುಂದೆ ತಲೆ ತಗ್ಗಿಸಬೇಕು. ಕತ್ತರಿಸಿದ ಮರವನ್ನು ಸಿಗಿಯಲು (ಮಿಲ್ಲಿಂಗ್) ಮತ್ತೊಮ್ಮೆ ಇಲಾಖೆಯ ಮುಂದೆ ತಲೆ ಬಗ್ಗಿಸಬೇಕು. ನಿಜ! ಪ್ರಕೃತಿಯ ವರಪ್ರಸಾದವಾದ ಹಸುರಿನ ಮುಂದೆ, ಮರಗಳ ಮುಂದೆ ನಾವೆಲ್ಲ ಅತ್ಯಂತ ಕನಿಷ್ಠರೇ. ಅವನ್ನು ಗೌರವಿಸಬೇಕಾದದ್ದು ಕರ್ತವ್ಯ. ಆದರೆ ಈ ಕರ್ತವ್ಯ ರೈತನಿಗೆ ಮಾತ್ರ ಸಂಬಂಧಿಸಿದ್ದೇ ? ರೈತ ಮಾತ್ರ ಸದಾ ತ್ಯಾಗ ಮಾಡುತ್ತಲೇ ಇರಬೇಕೇ? ಶಾಶ್ವತವಾದ ರಸ್ತೆಯೊಂದನ್ನು ಮಾಡುವಾಗ, ಶಾಶ್ವತವಾಗಿ ಹಲವು ರೈತರು ತಲೆ ಎತ್ತದಂತೆ ಆಗುವಾಗ, ಶಾಶ್ವತವಾಗಿ ವಿದೇಶೀಯರಂತೆ ನಮ್ಮನ್ನು ಆಳುವ ಸಂದರ್ಭ ಸೃಷ್ಟಿಯಾಗುವಾಗ ಕತ್ತರಿಸಲ್ಪಡುವ ಮರಗಳು ನಮ್ಮ ಸರ್ಕಾರಕ್ಕೆ, ಮರಗಳ ನೈಸರ್ಗಿಕ ಬೆಲೆಯನ್ನೂ, ಮಹತ್ವವನ್ನೂ ಅರಿತ ಸರ್ಕಾರಕ್ಕೆ ಅಷ್ಟೊಂದು ನಿಕೃಷ್ಟವಾಗಿ ಹೋಯಿತೇ ?

ಹೊಸ ರಸ್ತೆಯ ತೊಂಭತ್ತು ಮೀಟರ್ ಅಗಲದಲ್ಲಿ, ಇಪ್ಪತ್ತು ಸಾವಿರ ಎಕ್ರೆಯಲ್ಲಿ ನಾಶವಾಗುವ ಮರಗಳಷ್ಟೇ ಅಲ್ಲ, ಇದೊಂದು

ಶಾಶ್ವತ ನಾಶದ ಕ್ರಿಯೆ. ಈ ಯೋಜನೆಗೆ ಖರ್ಚಾಗುತ್ತಿರುವ ಎರಡು ಸಾವಿರ ಕೋಟಿ ಹಣ ಪುಕ್ಕಟೆ ಬರುವುದಿಲ್ಲ. ಇದರ ಹಿನ್ನೆಲೆಯಲ್ಲಿ ಭೀಕರವಾದ ಪರಿಸರ ನಾಶವಿರುತ್ತದೆ. ಹಾಗಲ್ಲದೆ ಈ ರಸ್ತೆಯಲ್ಲಿ ಓಡಾಡುವವರು ಹೊಸತಾಗಿ ನಿರ್ಮಾಣವಾಗುವ ನಗರಗಳಲ್ಲಿ ವಾಸಿಸುವವರು ಪರಿಸರ ನಾಶದ ಸಾಮರ್ಥ್ಯ ಉಳ್ಳವರು. ಈ ರಸ್ತೆಯ ಉದ್ದಕ್ಕೂ ಕೋಟಿ ಕೋಟಿ ಮೌಲ್ಯಗಳ ದುಬಾರಿ ಆಹಾರಗಳು, ವಿಹಾರಗಳು, ವಿಚಾರಗಳು ಚಲಾವಣೆಗೊಳ್ಳುವುವು. ನಾವೆಲ್ಲ ಇನ್ನೂ ಅರ್ಥವಿಸದಿರುವ ಅಂಶವೆಂದರೆ, ಒಂದೊಂದು ಐಷಾರಾಮದ ವಸ್ತುವೂ ಗಂಭೀರ ಪರಿಸರ ನಾಶದಿಂದಲೇ ತಯಾರಾಗುತ್ತದೆ.

ಈ ದೇಶದಲ್ಲಿ ರೈತನೆಂಬುವನು ಕೈಗಾರಿಕಾ ಮಂದಿಗಳ ಊಳಿಗಕ್ಕಿರುವವನೆಂಬ ನೀತಿ ಅದೆಷ್ಟು ಗಾಢವಾಗಿ ಊರಿಹೋಗಿದೆ ಎಂಬುದನ್ನು ಹೆಜ್ಜೆ ಹೆಜ್ಜೆಗಳಲ್ಲಿ ಗಮನಿಸಬಹುದು. ತಯಾರಾಗಲಿರುವ ಮಹಾರಸ್ತೆಯ ಪಕ್ಕದಲ್ಲಿ ಉದ್ಭವಿಸಲಿರುವ ಹೊಸ ನಗರಗಳಿಗೆ ಮೈಸೂರು ನಗರದ ನಾಲ್ಕು ಪಟ್ಟು ಅಧಿಕ ನೀರನ್ನೂ, ವಿದ್ಯುತ್ ಶಕ್ತಿಯನ್ನೂ ಒದಗಿಸಲಾಗುವುದಂತೆ, ಪರಿಸರನಾಶಮಾಡಿ ದೇಶದ ಸಂಪತ್ತನ್ನು ಹೆಚ್ಚಿಸುವ ಮಂದಿಗಳಿಗೆ ಏನೂ ತೊಂದರೆ ಆಗಬಾರದಂತೆ! ದೇಶದ ಆಹಾರ ಉತ್ಪಾದಿಸುವ ರೈತನಿಗೆ ನೀರು ಸಿಗದಿದ್ದರೂ, ವಿದ್ಯುತ್ ಇಲ್ಲದಿದ್ದರೂ ತೊಂದರೆ ಇಲ್ಲವಂತೆ!

ಸ್ವಾಭಾವಿಕವಾದ ನೀರಿನ ದಂಡೆಗಳಲ್ಲಿ, ನದೀ ತಟಗಳಲ್ಲಿ, ಸಮೃದ್ಧವಾದ ಭೂಮಿಯಲ್ಲಿ ನಾಗರೀಕತೆ ಬೆಳೆಯುತ್ತಾ ಬಂತು. ಹಳ್ಳಿಗಳು ರೂಪುಗೊಂಡುವು. ಇಂಥ ಹಳ್ಳಿಜನ, ಪರಂಪರೆಯಿಂದ ನದೀದಡದಲ್ಲಿ ಬೆಳೆದು ಬಂದ ಜನ, ಇಂದಿನ ಸ್ಥಿತಿಯಲ್ಲಿ ಅನಿವಾರ್ಯವಾಗಿ, ಕೃಷಿಗಾಗಿ ಪಂಪುಗಳಲ್ಲಿ ನೀರೆತ್ತಬೇಕಾದರೆ ಸರ್ಕಾರದ ಒಪ್ಪಿಗೆಬೇಕು. ಯಾಕೆಂದರೆ ನೀರು ಅಮೂಲ್ಯ ಸಂಪತ್ತು. ಇಂಥ ನೀರನ್ನು ರೈತ ಉಪಯೋಗಿಸಿಬಿಟ್ಟರೆ ಪೇಟೆಗೆ ಸಾಲದೆಂಬ ಸಂಕಟ ಸರ್ಕಾರದ್ದು.

ಆಧುನಿಕತೆಯ ಆವಸರದಲ್ಲಿ, ದೇಶವನ್ನು ಅಭಿವೃದ್ಧಿಗೊಳಿಸುವ ಭ್ರಮೆಯಲ್ಲಿ, ಬೆಳೆದ ಪೇಟೆಗಳ ಸನ್ನಿವೇಶದಲ್ಲಿ, ಕೈಗಾರಿಕೀಕರಣದ ತೀವ್ರತೆಯಲ್ಲಿ, ಇಂದು ನೀರಿನ ಸ್ಥಿತಿ, ಎಲ್ಲೆಲ್ಲೂ ಇರಬೇಕಾದ ಕುಡಿಯುವ ನೀರಿನ ಸ್ಥಿತಿ ಏನಾಗಿದೆ ಎಂಬುದನ್ನಾದರೂ ಗಮನಿಸಿ.

ಇಂದು ಎಲ್ಲೆಲ್ಲೂ ನೀರಿದೆ. ಆದರೆ ಅದೆಲ್ಲ ಕೊಳಕು ನೀರು. ಸಕಲ ರೋಗಗಳ ತವರು. ಕುಡಿಯುವ ನೀರು, ಕೆರೆ ಕಟ್ಟೆಗಳ ನೀರು, ತೊರೆ, ನದಿಗಳ ನೀರು ಅಂತರ್ಧಾನವಾಗಿ ಬಿಟ್ಟಿವೆ. ತೂತುಬಾವಿ ಸೇರಿವೆ. ಪಾತಾಳಕ್ಕಿಳಿದಿದೆ. ಸಾವಿರ ಅಡಿಗಿಂತ ಕೆಳಗೆ ಹೋಗಿದೆ. ನೀರು ವ್ಯಾಪಾರದ ವಸ್ತುವಾಗಿದೆ. ಉಚಿತವಾಗಿ ಸಿಗುತ್ತಿದ್ದ ನೀರು, ಸಿಗಬೇಕಾದ ನೀರು ಸರಬರಾಜು ಸರ್ಕಾರದ ಜವಾಬ್ದಾರಿಯಾಗುತ್ತಿದೆ.(ಲಯನ್ಸ್ ಕ್ಲಬ್ ಈ ವರ್ಷ ೨೦೦೦, ಮೈಸೂರಿನಲ್ಲಿ ಉಚಿತ ನೀರು ಮಾರಾಟ ಕೇಂದ್ರಗಳನ್ನು ತೆರೆದಿದೆ!)

ಸಾಮಾನ್ಯರಿಗೆ ಕುಡಿಯುವ ನೀರನ್ನೂ ಕೊಡಲು ಸಾಧ್ಯವಾಗದ ದೀನಸ್ಥಿತಿಗೆ ಹೀನಸ್ಥಿತಿಗೆ ನಮ್ಮ ಪ್ರಗತಿ ಬಂದಿರುವಾಗ, ಹವಾನಿಯಂತ್ರಿತ ಕಾರಿನಲ್ಲಿ ವೇಗವಾಗಿ ಸಾಗಿ ಬಂದು ಸುಸ್ತಾದವರಿಗೆ ಆರಾಮವಾಗಿ ಐಸ್‌ಕ್ರೀಂ ತಿನ್ನಿಸುವ ಜವಾಬ್ದಾರಿ ನಮ್ಮ ಸರ್ಕಾರಕ್ಕೆ ಏಕೆ? ಎಂದು ಕೇಳುವ, ಮಟ್ಟಕ್ಕೆ ನಾವೆಲ್ಲ ಬೆಳೆಯಲೇ ಬೇಕಾಗಿದೆ.

ನಮ್ಮ ಬೆಂಗಳೂರು ಅಮೆರಿಕದ ಮಟ್ಟಕ್ಕೆ ಬೆಳೆದು ಬಿಟ್ಟಿದೆ.:

ಇಲ್ಲೂ ಉಸಿರಾಟದ ಗಾಳಿಗೆ ಕೊರತೆ ಇದೆ. ಹಾಗಾಗಿ ಬೆಂಗಳೂರಲ್ಲೂ ವಿದೇಶೀ ತಂತ್ರ ವಿದ್ಯೆಯಿಂದ ಕಟ್ಟಿದ ಆಮ್ಲಜನಕದ ಬಾರ್ ಸಿದ್ಧಗೊಂಡಿದೆ. ಆಮ್ಲಜನಕದ ಉತ್ಪಾದನೆಗೆ ಇರುವ ಸ್ವದೇಶೀ ತಂತ್ರ ವಿದ್ಯೆಯಾದ ಹಸುರು ಮರಗಳನ್ನು ನಾಶಮಾಡಿ ವಿದೇಶೀ ತಂತ್ರ ವಿದ್ಯೆಯಿಂದ ಆಮ್ಲಜನಕ ಉತ್ಪಾದಿಸಿ ನಮ್ಮ ನೂರು ಕೋಟಿ ಜನರಿಗೆ ಸರಬರಾಜು

ಮಾಡುವ ಜವಾಬ್ದಾರಿಯನ್ನು ಸರ್ಕಾರ ಹೊರುವುದಾದರೆ ಮಾತ್ರ ಇಂಥಾ ಹೆದ್ದಾರಿ ಯೋಜನೆಗಳನ್ನೂ, ಬೃಹತ್ ಕೈಗಾರಿಕೆಗಳನ್ನೂ ಹಮ್ಮಿಕೊಳ್ಳಬೇಕು ಎಂದು ಸ್ಪಷ್ಟವಾಗಿ ಸರ್ಕಾರವನ್ನು ನಿರ್ದೇಶಿಸುವ ಸಾರ್ವಕಾಲಿಕ ಚಿಂತನೆ ಸಾರ್ವಜನಿಕರ ವಿದ್ಯಾಸಂಪನ್ನತೆಯಾಗಬೇಕು. ಜಾಹೀರಾತುಗಳ ಅಭಿವೃದ್ಧಿಯನ್ನು ತಿರಸ್ಕರಿಸಬೇಕು.

ಈ ರಸ್ತೆಗೆ ಬೇಲಿ ಇದೆ: ಈ ಹೆದ್ದಾರಿಯಲ್ಲಿ ಓಡಾಡುವ ಹಕ್ಕು ಸಾಮಾನ್ಯರಿಗಿಲ್ಲ. ರಸ್ತೆಗಾಗಿ ಜಮೀನು ಬಿಟ್ಟವರಿಗೂ ಇಲ್ಲ. ನಿಯಮಿತ ಶುಲ್ಕ ಕೊಟ್ಟವರಿಗೆ ಮಾತ್ರ. ಹಾಗಾಗಿ ಅಕ್ರಮ ಪ್ರವೇಶವನ್ನು ತಡೆಯಲು ಮಾರ್ಗ ಉದ್ದಕ್ಕೂ ಭದ್ರವಾದ ಬೇಲಿಯನ್ನು ನಿರ್ಮಿಸಲಾಗುವುದಂತೆ. ಈ ಬೇಲಿಯನ್ನು ಕಾಂಕ್ರೀಟ್ ಕಂಬ, ಕಬ್ಬಿಣ ತಂತಿ ಎಂದೆಷ್ಟೋ ತಿಳಿಯಲಾಗದು.

ಇದು ಬಡವ ಬಲ್ಲಿದರ ಅಂತರವನ್ನು ಹೆಚ್ಚಿಸುವ ಬೇಲಿ. ಇದು ಹಳ್ಳಿ ಪೇಟೆಗಳನ್ನು ಪ್ರತ್ಯೇಕಿಸುವ ಬೇಲಿ, ಅವಿದ್ಯಾವಂತ , ವಿದ್ಯಾವಂತ ಎಂದು ಭೇದವೆಣಿಸುವ ಬೇಲಿ. ಜಾತಿ ಮತಗಳ ಭೇದ ಭಾವಗಳು ಇಲ್ಲವಾಗುವುದೇ ನಾಗರಿಕತೆಯ ಲಕ್ಷಣವೆಂದು ಪ್ರತಿಪಾದಿಸುವ ಈ ಕಾಲಕ್ಕೆ ಬಡವ ಬಲ್ಲಿದ, ಹಳ್ಳಿ ಪೇಟೆ, ಅವಿದ್ಯಾವಂತ ವಿದ್ಯಾವಂತರ ಭೇದಗಳನ್ನು ವೇಗವಾಗಿ ಹೆಚ್ಚಿಸುವ ಹೆದ್ದಾರಿಗಳು, ಹಿರಿಯೋಜನೆಗಳು ನಮಗೆ ಖಂಡಿತ ಬೇಡ. ಇಂಥ ಯಾವುದೇ ಯೋಜನೆಗಳಲ್ಲಿ ಸ್ವಾರ್ಥಪರ ಆರ್ಥಿಕ ಲೆಕ್ಕಾಚಾರವಿದೆಯೇ ಹೊರತು ಸಮಗ್ರ ಚಿಂತನೆ ಇಲ್ಲ.

ಹೆದ್ದಾರಿಯಿದು ವೇಗ ಹೆಚ್ಚಿಸುವುದಂತೆ!

ವಾಹನಗಳ ವೇಗ ಹೆಚ್ಚಿದಷ್ಟೂ ಪ್ರಗತಿಯ ವೇಗ ಹೆಚ್ಚುತ್ತದೆಂಬ ಹುಚ್ಚು ತರ್ಕ ನಮ್ಮ ಯೋಜಕರದ್ದಾಗಿದೆ. ಅಪಘಾತಕ್ಕೆ ವೇಗವೇ ಕಾರಣ ಎಂಬ ಪ್ರಕೃತಿಯ ಮೂಲಭೂತ ವಿಜ್ಞಾನ ನಮಗೆಲ್ಲ ಅರ್ಥವಾಗಲು ಇನ್ನೆಷ್ಟು ಕಾಲಬೇಕು? ಈ ರಸ್ತೆಯಲ್ಲಿ ಕಾರಿಗೆ ಕಾರು ಡಿಕ್ಕಿ ಹೊಡೆಯದಿರಬಹುದು . ಆದರೆ ಈ ರಸ್ತೆಯ ನಿರ್ಮಾಣಕ್ಕೆ ಮೊದಲೇ ಆಗುವ ಎಷ್ಟೊಂದು ನಷ್ಟಗಳನ್ನು, ನಾಶಗಳನ್ನು , ಅಪಘಾತಗಳೆಂದು, ಆಘಾತಗಳೆಂದು ತಿಳಿಯುವ ದೂರದೃಷ್ಟಿ ಇಲ್ಲದವರು ನಮ್ಮನ್ನು ನಿಯಂತ್ರಿಸಲು ಇನ್ನೆಷ್ಟು ದಿನ ಬಿಡಬೇಕು ?

ಇಂಥ ವೇಗದ ಅಗತ್ಯವಾದರೂ ಏನಿದೆ? ಬೆಂಗಳೂರಿನಿಂದ ಮೈಸೂರಿಗೆ ಅರ್ಧಗಂಟೆ ಮೊದಲು ತಲುಪಿ ಮಾಡುವುದಾದರೂ ಏನಿದೆ? ನಮ್ಮ ಸಂಪಾದನೆ ಹೆಚ್ಚಾಗುವುದೇ ? ಅಷ್ಟೊಂದು ಸಂಪಾದನೆಯ ತುರ್ತೇ? ಹಾಗಾದರೆ ನಾವು ತಪ್ಪುದಾರಿಯಲ್ಲಿದ್ದೇವೆಂದೇ ಅರ್ಥವಲ್ಲವೇ? ಎಲ್ಲ ಪ್ರಾಣಿಗಳಿಗೂ , ಮನುಷ್ಯರಿಗೂ ಜೀವನ ನಿರ್ವಹಣೆಗೆ ಬೇಕಾದುದನ್ನು ಸಂಪಾದಿಸಲು ಗಂಟೆಗಳು ಸಾಕಾಗುವಾಗ, ಆನಂದವಾಗಿ ಕಳೆಯಲು , ನಿದ್ರೆಮಾಡಲು ಗಂಟೆಗಳು ಉಳಿಯುವಾಗ ಒಂದಿಷ್ಟು ಜನರಿಗೆ ಮಾತ್ರ ಅದು ಸಾಲದಿದ್ದರೆ ಅದು ಅವರ ಪ್ರಾರಬ್ಧ . ಅಂಥವರನ್ನು ರಕ್ಷಿಸಲು ಇಡಿಯಾಗಿ ಪ್ರಕೃತಿಯನ್ನು ನಾಶಗೊಳಿಸುವಂಥ ಯಾವತ್ತೂ ಯೋಜನೆಗಳನ್ನು ವಿರೋಧಿಸುವ ಮೂಲಕ ನಾವಿಂದು ನಿಜ ಪೌರರಾಗಬೇಕಾಗಿದೆ.

ಪ್ರತಿ ವರ್ಷವೂ ಯುಗಾದಿ ಹಬ್ಬ ಬರುತ್ತದೆ :

ಈ ಯುಗಾದಿ ಸಂದರ್ಭ ಬೇವು ಬೆಲ್ಲ ತಿನ್ನುವುದು ಸಂಪ್ರದಾಯ . ಇದು ಇಂದು ಕೇವಲ ಸಂಪ್ರದಾಯ ಆದರೆ ಅದರ ಹಿಂದೆ ಬಹಳ ಅದ್ಭುತವಾದ ವಿಜ್ಞಾನವಿದೆ, ತತ್ವಜ್ಞಾನವಿದೆ, ಆರೋಗ್ಯ ಸೂತ್ರವಿದೆ. ಈ ಕುರಿತು ಸೂಕ್ಷ್ಮವಾಗಿ ವಿಚಾರಿಸೋಣ. ಬೇವುಬೆಲ್ಲ ಕಹಿ, ಸಿಹಿಗಳ ಸಂಕೇತ. ಜೀವನದಲ್ಲಿ ಕಹಿ, ಸಿಹಿಗಳನ್ನು ಸಮಾನವಾಗಿ ಸ್ವೀಕರಿಸಬೇಕೆಂಬ ಸಂದೇಶವನ್ನೂ ಎಲ್ಲರೂ ಕೊಡುತ್ತಾರೆ. ಆದರೆ ನಾವು ಇದಕ್ಕಿಂತಲೂ ಮುಂದೆ ಹೋಗಿ ವಿಚಾರ ಮಾಡಬೇಕಾದ ಅನಿವಾರ್ಯತೆ ಬಂದು ಬಿಟ್ಟರೆ, ಬೇವು ಬೆಲ್ಲ ಪದ ಪುಂಜ ಕೇವಲ ಪ್ರಾಸಕ್ಕಾಗಿ

ಬಂದದ್ದಲ್ಲ. ಬೇವು ಮೊದಲು ಆಮೇಲೆ ಬೆಲ್ಲ. ಯಾರು ಕಹಿಯನ್ನು ತಿನ್ನಲು ಸಾಧ್ಯವೋ, ಕಷ್ಟಪಡಲು ಸಾಧ್ಯವೋ ಆತ ಮಾತ್ರ ಸಿಹಿ ತಿನ್ನಬಲ್ಲ. ಕಷ್ಟಪಡದೆ ಹಣಮಾಡುವ, ಪ್ರಕೃತಿ ವಿರೋಧವಾಗಿ ಹಣಮಾಡುವ, ಜನ ಸಾಮಾನ್ಯರ ಕಷ್ಟದ ಹಣವನ್ನು ದೋಚುವ ತಂತ್ರಗಳು ಹೆದ್ದಾರಿಯಂಥಾ ಹಿರಿ ಯೋಜನೆಗಳಲ್ಲಿ ಇದೆ. ಹಾಗಾಗಿ ನಾವೆಲ್ಲ ಇವನ್ನು ವಿರೋಧಿಸಬೇಕು. ಜನರ ವಿಚಾರ ಶಕ್ತಿಯ ಪ್ರದರ್ಶನವಾಗಬೇಕು.

ಪ್ರಕೃತಿಯಲ್ಲಿ ಬೇವಿನ ಮರವೂ ಮುಖ್ಯ. ಬೆಲ್ಲವನ್ನು ಕೊಡುವ ಕಬ್ಬಿನಷ್ಟೇ ಬೇವು ಕೂಡ ಮುಖ್ಯ ಎಂದು ಯುಗಾದಿ ಸಾರಿ ಹೇಳುತ್ತದೆ. ನಮ್ಮ ಯೋಜನೆಗಳು, ಚಿಂತನೆಗಳು ಇಂದು ಹೇಗಿವೆ ಎಂದರೆ, ಬೇವಿನ ಮರವನ್ನು ನಾಶ ಮಾಡಿ, ಅಲ್ಲಿ ನೀರಾವರಿ ಯೋಜನೆ ಮಾಡಿ ಕಬ್ಬುಬೆಳೆಸುವುದು. ಆದರೆ ಕಬ್ಬಿನ ರೋಗಗಳಿಗೆ ಔಷಧಿಯಾಗುವ ಬೇವನ್ನು ನಾಶಮಾಡಿ, ಬರಡು ಭೂಮಿಯನ್ನು ಹಸನುಗೊಳಿಸುವ ಬೇವನ್ನು ನಾಶಮಾಡಿ ನಾವು ಅಭಿವೃದ್ಧಿ ಹೊಂದುವುದು ಎಂದೂ ಸಾಧ್ಯವಿಲ್ಲ. ಎಂತಲೇ ಇಂದು ಅಳಿದುಳಿದ ಬೇವಿಗೂ ಗಂಭೀರವಾದ ರೋಗ ಬಂದಿದೆ. ಕಬ್ಬಂತೂ ವಿಪರೀತ ಸಮಸ್ಯೆಗಳಿಂದ ತುಂಬಿಹೋಗಿದೆ. ನಮ್ಮ ಒಂದೊಂದು ಆಹಾರವೂ ವಿಷಮಯವಾಗಿದೆ. ಕೃತಕವಾಗಿದೆ. ಇಂಥಾ ವಿಷವನ್ನು ಮತ್ತೆ ಮತ್ತೆ ಹೆಚ್ಚಿಸುವ ಯೋಜನೆಗಳು (ಹಿನ್ನೆಲೆಯಲ್ಲಿರುವ ವಿಷಯುಕ್ತ ಮನಸ್ಸುಗಳು) ನಮ್ಮನ್ನು ಅಭಿವೃದ್ಧಿ ಪಡಿಸುತ್ತವೆಂಬ ಭ್ರಮೆಯಲ್ಲಿ ನಾವಿನ್ನೂ ಇರಬೇಕೇ?

ಪ್ರಕೃತಿಯ ಒಂದು ಮುಖ ಬೇವು. ಅದೇ ಪ್ರಕೃತಿಯ ಇನ್ನೊಂದು ಮುಖ ಬೆಲ್ಲ. ಎರಡು ಮುಖಗಳನ್ನೂ ನಾವು ಗೌರವಿಸಲೇಬೇಕು. ಅಂತೆಯೇ ಪ್ರಕೃತಿಯನ್ನು ಅರ್ಥವಿಸುವ ಪ್ರಕ್ರಿಯೆಯಾಗಿರುವ ವಿಜ್ಞಾನದಲ್ಲಿ ಕೂಡ, ವಿಜ್ಞಾನದ ಒಂದು ಮುಖ ಹೆದ್ದಾರಿ, ಹಿರಿ ಯೋಜನೆಗಳು, ಕೈಗಾರಿಕೆಗಳು,- ಅಭಿವೃದ್ಧಿಯ ಕನಸುಗಳು. ಅದೇ ವಿಜ್ಞಾನದ ಇನ್ನೊಂದು ಮುಖ ಪರಿಸರ, ಪ್ರಕೃತಿ, ಸಂಸ್ಕೃತಿ ಇತ್ಯಾದಿಗಳು.

ಪರಿಸರವಾದದ ಮುಖವನ್ನು ಬಿಟ್ಟು ಕೈಗಾರಿಕೀಕರಣದ ಒಂದು ಮುಖವನ್ನು ಮಾತ್ರ ಸ್ವೀಕರಿಸಿದರೆ ನಾವು ಇನ್ನು ಹೆಚ್ಚು ಯುಗಾದಿಗಳನ್ನು ಕಾಣುವ ಸಂಭವ ಇಲ್ಲ.

ಒತ್ತೆ ಇಟ್ಟು ಪರಭಾಷೆಗೆ ಮನವ
ಪಡೆದಿಹವೇ ಸೊಗಬಾಳ್ವೆಯ ಋಣವ
ಕನ್ನಡದೀ ಜನಕಿಲ್ಲವೆ ಕಲಿತನ
ಆಳಾದವರರಸಾಗುವ ಜತನ

-ಪುತಿನ.

ಜೋಕೆ! ಇವರು ನಿಮ್ಮ ಮಕ್ಕಳು

ಸತ್ಯವತಿ
w/o ಡಾ|| ಹರಿಕೃಷ್ಣ
ಸರ್ಜನ್ ಡೆಂಟಿಸ್ಟ್
ಸುರತ್ಕಲ್-೫೭೪೧೫೮

ತಮ್ಮ ಮಕ್ಕಳಿಂದ ಘಟಿಸಬಹುದಾದ ತಪ್ಪುಗಳು ಇಡೀ ಜೀವನಪರ್ಯಂತವಾಗಿ ಉಳಿಯಬಹುದು, ಅಥವಾ ಒಂದು ಜೀವಿತ ಅವಧಿಯನ್ನೇ ಕುಂಠಿತಗೊಳಿಸಬಹುದೆಂದು ರೂತ್ ಆನ್ ಮತ್ತು ರಾಬರ್ಟ್ ಲಿಪಿಕ್ ಬಲ್ಲವರಾಗಿದ್ದರು.

ತಾರುಣ್ಯಕ್ಕೆ ಪದಾರ್ಪಣಗೈಯ್ಯುತ್ತಿರುವ ತಮ್ಮ ಮೂವರು ಕಂದಮ್ಮಗಳು ಮಾದಕ ದ್ರವ್ಯಗಳು ಮತ್ತು ಮದ್ಯಗಳಿಂದ ಎದುರಿಸಬಹುದಾದಂಥ ಕಂಟಕಗಳಿಗೆ ಕಡಿವಾಣ ಹಾಕಲು ಬಯಸಿದ ಈ ದಂಪತಿಗಳು, ಹಲವಾರು ಬಾರಿ, ತಮ್ಮ ಮಕ್ಕಳಲ್ಲಿ ಒಬ್ಬನು ಹೊರಹೊರಡಲು, ಮಾತಾಪಿತೃಗಳಲ್ಲಿ ಒಬ್ಬರು ಆತನನ್ನು ಹಿಂಬಾಲಿಸುತ್ತಿದ್ದರು. ಹಾಗೂ ಮಕ್ಕಳು ಇಲ್ಲದಿರುವ ಸಮಯದಲ್ಲಿ ಅವರ ಕೋಣೆ ಹಾಗೂ ಕಪಾಟಿನ ಒಳಗೆಲ್ಲಾ ತಪಾಸಿಸುತ್ತಿದ್ದರು.

ಇದನ್ನು ತಪ್ಪೆಂದು ಆ ದಂಪತಿಗಳು ಬಗೆದಿರಲಿಲ್ಲ. ಕುಡಿದು ವಾಹನವನ್ನು ಚಲಾಯಿಸುವುದನ್ನು ವಿರೋಧಿಸುವಂಥಾ 'ಮಾತೆಯರ ಸಂಘ'ದ ಪೂರ್ವಾಧ್ಯಕ್ಷೆಯಾಗಿದ್ದ ರೂತ್ ಅನ್‌ಗೆ, ಯೌವನ, ಮದ್ಯ ಮತ್ತು ಕಾರುಗಳ ಅಪಾಯಕಾರೀಮೇಳನದ ಬಗ್ಗೆ ಒಳ್ಳೆಯ ಅರಿವಿತ್ತು. ಎರಡು ದಶಕಗಳನ್ನು ದಾಟಿರುವ ತನ್ನ ಮೂವರು ಮಗಂದಿರ ವಿಷಯದಲ್ಲಿ ಆಕೆ ''ನಮಗೆ ಅವರ ಬಗ್ಗೆ ಹೆಮ್ಮೆ ಎನ್ನಿಸುತ್ತದೆ'' ಎನ್ನುತ್ತಾಳೆ.

ಕೇವಲ ಲಿಪಿಕ್ ದಂಪತಿಗಳು ಮಾತ್ರವಲ್ಲ; ಇತ್ತೀಚಿನ ವರುಷಗಳಲ್ಲಿ, ಬಹಳಷ್ಟು ಜನ ಮಾತಾಪಿತೃಗಳು ತಮ್ಮ ಮಕ್ಕಳನ್ನು ಗಮನಿಸುವ ಸಲುವಾಗಿ , ಪತ್ತೆದಾರಿಕೆಗೆ ಇಳಿಯುವುದೇ ಯುಕ್ತಮಾರ್ಗವೆಂದು ಪರಿಗಣಿಸಿದ್ದಾರೆ. ತಂದೆ-ತಾಯಿಯರ ಆತಂಕಕ್ಕೆ ಸ್ಪಷ್ಟ ಕಾರಣಗಳಿವೆ. ೧೯೯೯ನೇ ಇಸವಿಯಲ್ಲಿ ಅಮೆರಿಕಾದಲ್ಲಿ ನಡೆಸಿದ ಅಧ್ಯಯನವೊಂದು, ಅಂತಿಮ ತರಗತಿಯ ಶಾಲಾವಿದ್ಯಾರ್ಥಿಗಳಲ್ಲಿ ಶೇಕಡ ಅರವತ್ತೆರಡರಷ್ಟು ಮಂದಿ ಮದ್ಯವ್ಯಸನಿಗಳೆಂದು ತೋರಿಸಿಕೊಟ್ಟಿತು. ಹಾಗೆಯೇ ಕಳೆದ ವರುಷ ಶೇಕಡ ನಲವತ್ತೆರಡು ಮಂದಿ ಮಾದಕ ದ್ರವ್ಯಗಳನ್ನು ಸೇವಿಸಿದ್ದವರಾಗಿದ್ದರೆಂದೂ ಅಧ್ಯಯನದ ವರದಿಯಿಂದ ತಿಳಿದು ಬರುತ್ತದೆ.

ಇನ್ನೊಂದು ಅಧ್ಯಯನದಿಂದ ತಿಳಿದು ಬಂದ ಅಂಶವೆಂದರೆ, ಸಾಧಾರಣವಾಗಿ ನೂರರಲ್ಲಿ ಐವತ್ತು ಮಂದಿ ಪ್ರೌಢಶಾಲಾ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಲೈಂಗಿಕಕ್ರಿಯೆಯಲ್ಲಿ ತೊಡಗಿದ್ದರೆಂಬುದು. ಇದು ಸಾಲದೆಂಬಂತೆ, ಇಂಟರ್‌ನೆಟ್ ಜಾಲದ ಮೂಲಕ 'ಸಂಭಾಷಣಾ ಕೊಠಡಿ'ಗಳಲ್ಲಿ ತೂರಿಕೊಂಡು, ಅಪಾಯಕರಾದ ಹದಿಹರೆಯದವರನ್ನು ಕುಕೃತ್ಯಗಳೆಡೆಗೆ ಸೆಳೆಯುವ ದುಷ್ಕರ್ಮಿಗಳ ಹಾಗೂ ಮುಕ್ತ ಲೈಂಗಿಕತೆಯೆಡೆಗೆ ಸೆಳೆಯುವ ತಲೆಹಿಡುಕರ ಕಾಟ ಇನ್ನೊಂದೆಡೆ.

ಪತ್ತೆದಾರಿಕೆಯಲ್ಲಿ ಹೆತ್ತವರ ಔಚಿತ್ಯದ ಬಗ್ಗೆ ಸ್ಪಷ್ಟವಾಗಿ ಹೇಳಲಾಗುವುದಿಲ್ಲ. ಮಕ್ಕಳ ದಿನಚರಿಯನ್ನು ಓದುವುದು ಸರಿಯೆ? ಅವರ ಕೋಣೆಯನ್ನು ತಪಾಸಣೆ ಮಾಡುವುದು ಸರಿಯೆ? ಅವರು ಇರುವೆಡೆಯಲ್ಲೆಲ್ಲಾ ಅವರನ್ನು ಹಿಂಬಾಲಿಸಿ ಹೋಗುವುದು ಸರಿಯೆ? ಇದರ ಪರಿಣಾಮ ಏನು? ಮುಂತಾಗಿ ವಿಚಾರ ಮಾಡುವಾಗ, ಜವಾಬ್ದಾರಿಯುತ ಮಾತಾಪಿತೃ

ಸೆಪ್ಟೆಂಬರ್ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ರಾಸ್ ವೆರ್ಲ್ಯಾಂಡ್‌ರ 'ಶುಡ್ ಯು ಸ್ಪೈ ಆನ್ ಯುವರ್ ಟೀನ್' ಲೇಖನದ ಭಾವಾನುವಾದ

ಗಳು ಉಭಯ ಪಕ್ಷಗಳನ್ನೂ ಸಮರ್ಥಿಸುವುದುಂಟು.

ಒಂದು ಪಕ್ಷದವರು, ತರುಣರ ಏಕಾಂತತೆಯ ಭಗ್ನತೆಗಿಂತಲೂ ಅವರ ರಕ್ಷಣೆಯೇ ಮುಖ್ಯವೆಂದು ನಂಬಿರುವವರು. (ಈಗ ಯು.ಎಸ್.ನ ಪೌರತ್ವ ಪಡೆದ) ಬೆಲಿಜ್‌ನಿಂದ ವಲಸೆ ಬಂದ ಫೋನ್ನೆ ವೆಬ್‌ಸ್ಟರ್ ಎಂಬ, ಹನ್ನೊಂದರಿಂದ ಇಪ್ಪತ್ತನಾಲ್ಕರ ಪ್ರಾಯದ ನಾಲ್ಕು ಗಂಡು ಮಕ್ಕಳ ತಾಯಿ, 'ಬಂಡುಕೋರರ ತಂಡ ಸ್ಥಳೀಯ ಪ್ರೌಢಶಾಲೆಯಲ್ಲಿ ನುಸುಳುತ್ತಿವೆ' ಎಂಬ ಗಾಳಿ ಸುದ್ದಿ ಕೇಳಿ ಚಿಂತಿತಳಾದಳು. ತನ್ನ ಹಿರಿಯ ಮಕ್ಕಳು ತಾನು ತಿಳಿಯಬೇಕೆಂದಿದ್ದ ವಿಷಯದ ಬಗ್ಗೆ ಸಂಪೂರ್ಣ ಮಾಹಿತಿ ನೀಡುತ್ತಿಲ್ಲವೆಂದು ಭಾವಿಸಿ, ಶಾಲೆಯಲ್ಲಿ ಏನು ನಡೆಯುತ್ತಿದೆ ಎಂಬುದನ್ನರಿಯಲು ಆಕೆ ಮಕ್ಕಳ ಗೆಳೆಯರ ಸಂಗಡ ಮಾತನಾಡಿದಳು. ''ನಾನು ತುಂಬಾ ಹೆದರಿದ್ದೆ. ಅವರು ವಿದ್ಯಾರ್ಥಿಗಳೊಂದಿಗೆ ಕೂಗಾಡುತ್ತಾ ಸ್ಪರ್ಧೆಗಿಳಿಯುತ್ತಿದ್ದರು. ಆದರೆ ವಿಷಯ ಬರೀ ಅಷ್ಟೇ ಆಗಿತ್ತು'', ಎಂದಾಕೆ ಮತ್ತೆ ತಿಳಿಸಿದಳು.

ಆಕೆ ತನ್ನ ಕುಮಾರರ ಕೋಣೆಗಳನ್ನೂ, ಅವರ ಕಿಸೆಗಳನ್ನೂ ಹುಡುಕಿ ನೋಡಿದಳು. ಆದರೆ ಸಮಸ್ಯೆ ಉಂಟೆಂದು ಸೂಚಿಸುವ ಪುರಾವೆಗಳೇನೂ ದೊರೆಯಲಿಲ್ಲ.

ಪತ್ತೇದಾರಿಕೆಯು ದೋಷಯುಕ್ತವೆಂದು ಆಕೆಯ ವಿಷಯದಲ್ಲಿ ಪ್ರತಿಪಾದಿತವಾದರೂ ಸಣ್ಣ ಮಕ್ಕಳ ವಿಷಯದಲ್ಲಿ ಆಕೆಗೆ ಇದರ ಅಗತ್ಯ ಬೀಳಲಿಲ್ಲ. ''ಚಿಣ್ಣರು ಅಮೂಲ್ಯ! ನಾವೆಲ್ಲರೂ ಅವರಿಗೆ ಆದರಣೀಯವಾಗಿ ಇರಬೇಕು. ಆದರೆ ಒಮ್ಮೆ ಅವರು ಪ್ರೌಢ ಶಾಲೆಯನ್ನು ಪ್ರವೇಶಿಸಿದರೆಂದರೆ, ಮತ್ತೆ ಅವರ ಮೇಲೆ ಪ್ರಭಾವ ಬೀರುವ ಸಮಸ್ಯೆಗಳಿಂದ ಅವರನ್ನು ರಕ್ಷಿಸುವ ಕುರಿತು ಮಾರ್ಗೋಪಾಯಗಳನ್ನು ನಾವು ಕಂಡು ಹಿಡಿಯಬೇಕಾಗುತ್ತದೆ. ಪತ್ತೇದಾರಿಕೆಯೇ ಸರಿಯಾದ ಮಾರ್ಗವೆಂದಾದರೆ, ಖಂಡಿತವಾಗಿಯೂ ನಾನದನ್ನು ಮಾಡುತ್ತೇನೆ'' ಎನ್ನುತ್ತಾಳೆ ಫೋನ್ನೆ ವೆಬ್‌ಸ್ಟರ್.

ಆಕೆಯಂಥವರು ಇನ್ನೂ ಬೇಕಾದಷ್ಟು ಮಂದಿ ಇದ್ದಾರೆ. ಚಿಕಾಗೋದ 'ದ ಸ್ಪೈ ಶಾಪ್, ಇನ್‌ಕ್'ನ ಮಾಲೀಕರ ಪ್ರಕಾರ 'ದರ್ಶಕಗಳ ಮೂಲಕ ಗಮನವಿಡುವ ಸಲಕರಣೆ'ಯನ್ನು (ವೀಡಿಯೋ-ಮಾನಿಟರಿಂಗ್ ಎಕ್ವಿಪ್‌ಮೆಂಟ್-ಅನ್ನು) ಕೊಳ್ಳುವವರಲ್ಲಿ ಶೇಕಡ ಇಪ್ಪತ್ತರಷ್ಟು ವ್ಯಾಪಾರಿಗಳು, ಮಕ್ಕಳ ಮೇಲೆ ಪತ್ತೇದಾರಿಕೆ ಮಾಡುವ ಹೆತ್ತವರನ್ನೂ ಒಳಗೊಂಡಂಥ ಕುಟುಂಬಿಗರು.

ಏಕಪ್ರಕಾರವಾಗಿ ಬೆಳೆಯುತ್ತಿರುವ ವ್ಯಾಪಾರೋದ್ಯಮದಲ್ಲಿ ಮತ್ತೊಂದೆಂದರೆ, 'ಮನೆಯಲ್ಲಿಯೇ ಮಾದಕ ದ್ರವ್ಯದ ಶೋಧನೆ' ಮಾಡುವುದು. ಅಮೆರಿಕಾದ ಒಂದು 'ಮಾದಕ ದ್ರವ್ಯ ಪರಿಶೋಧಕ' ಸಂಸ್ಥೆಯ ಉತ್ಪಾದಕರ ಪರವಾಗಿ, ಅದರ ವ್ಯಾಪಾರ ನಿಯಮಾಧಿಕಾರಿ ಹೇಳುವುದೇನೆಂದರೆ, ಹೆತ್ತವರ ಅಪ್ಪಣೆಯ ಮೇರೆಗೆ ಅವರ ಸಂಸ್ಥೆ ಹಲವಾರು ವರ್ಷಗಳ ಹಿಂದಿನಿಂದಲೇ ಗೃಹೋಪಯೋಗೀ ಸಲಕರಣೆಗಳನ್ನು ಒದಗಿಸಲು ಪ್ರಾರಂಭಿಸಿತು ಎಂದು. ಆ ಸಲಕರಣೆಗೆ ಬೇಕಾದ್ದು, ವಿಭಜಿಸಿ ಪರೀಕ್ಷಿಸಲೋಸುಗ ತನ್ನ ಸಂಸ್ಥೆಗೆ ಕಳುಹಿಸಲು ಒಂದಿಷ್ಟು 'ಕತ್ತರಿಸಿದ ಕೂದಲು'! ಒಂದು ವಾರದ ಒಳಗೆ ಅದರ ಫಲಿತಾಂಶ ಲಭ್ಯವಾಗುವುದು.

ಚಿಕಾಗೋ ಮೂಲದ 'ಮಕ್ಕಳ ವಿಕಸನ ಸಂಸ್ಥೆ'ಯ ಕಾರ್ಯಕ್ರಮ ಸಂಯೋಜನಾಧಿಕಾರಿಯಾದ ಫ್ರಾನ್ ಸ್ಟಾಟ್, ಈ ಪತ್ತೇದಾರಿಕೆಯು ಹೆತ್ತವರ ಮತ್ತು ಮಕ್ಕಳ ಬಾಂಧವ್ಯಕ್ಕೆ ಮಾರಕವಾಗಬಹುದೆಂದು ಎಚ್ಚರಿಸುತ್ತಾರೆ. ''ಪತ್ತೇದಾರಿಕೆ ಪ್ರತಿಕೂಲಕಾರಿ'' ಎಂದು ವರ್ಣಿಸುವ ಆಕೆ, ಈ ಒಳಸಂಚಿನಿಂದ ಹೆತ್ತವರ ಹಾಗೂ ಪ್ರಾಯಕ್ಕೆ ಬರುತ್ತಿರುವ ಮಕ್ಕಳ ನಡುವೆ ಬೆಳೆಯಬೇಕಾದ ಪರಸ್ಪರ ನಂಬಿಕೆ- ವಿಶ್ವಾಸಗಳು ಪತನವಾಗಬಹುದೆಂದು ಎಚ್ಚರಿಸುತ್ತಾರೆ.

''ಹೆತ್ತವರಾಗಿ, ನಮ್ಮ ಮಕ್ಕಳಿಂದ ಯಾವ ತಪ್ಪೂ ಘಟಿಸದಂತೆ ಎಚ್ಚರ ವಹಿಸಲು ಹೋಗಿ, ನಮ್ಮ ಅತಿಯಾದ ಆತಂಕದಿಂದ ಸಮಸ್ಯೆಗಳನ್ನು ಹುಟ್ಟುಹಾಕುತ್ತೇವೆಯೇ ಹೊರತು ಅಳಿಸಿ ಹಾಕುವುದಿಲ್ಲ. ಹಾಗೆಂದ ಮಾತ್ರಕ್ಕೆ ಈ ತರುಣರ ವಿಷಯದಲ್ಲಿ ನಾವು ಗಂಭೀರವಾಗಿ ಪರಿಗಣಿಸಬೇಕಾದ ಕ್ಷಣಗಳೇ ಬರುವುದಿಲ್ಲ ಎಂದು ಅರ್ಥವಲ್ಲ. ಅವರು ಮಾದಕ ದ್ರವ್ಯಗಳ ಸೇವನೆಯಲ್ಲಿ ತೊಡಗಿರುವುದಕ್ಕೆ ಪುರಾವೆಗಳು ದೊರೆತಾಗ, ಭೋಜನಾದಿಗಳಲ್ಲಿ ಅವ್ಯವಸ್ಥೆ ಕಂಡುಬಂದಾಗ, ಅಥವಾ ಮದ್ಯದ ದಾಸರಾಗುತ್ತಿರುವ ಲಕ್ಷಣಗಳು ತಲೆದೋರಿದಾಗ, ಅದನ್ನು ಸರಿಪಡಿಸುವುದು ತಂದೆ-ತಾಯಿಗಳಾದ ನಮ್ಮ ಕರ್ತವ್ಯ. ನಾನು ಖುದ್ದಾಗಿ ಮಾಡಬೇಕಾದಲ್ಲಿ, ಇದನ್ನು ಇನ್ನೂ ನೇರವಾದ ಸರಳ ಪ್ರಾಮಾಣಿಕ ರೀತಿಯಲ್ಲಿ ಮಾಡುತ್ತೇನೆ'' ಎನ್ನುತ್ತಾರೆ ಸ್ಪಾಟ್.

''ಹೊಸ ಗೆಳೆಯರ ಸಹವಾಸ ಅಥವಾ ತೀವ್ರವಾದ ಮಾನಸಿಕ ಪರಿತಾಪದಿಂದ, ಮನಃಸ್ಥಿತಿಯಲ್ಲಿ ಉಂಟಾಗುವ ಪ್ರಬಲ ವ್ಯತ್ಯಾಸಗಳು ಮತ್ತು ಏರಿಳಿತಗಳು, ಸ್ಪಷ್ಟವಾಗಿಯೇ ವ್ಯಕ್ತವಾಗುವುದರಿಂದ ಇವುಗಳಿಗೆ ಗೂಢಚಾರಿಕೆಯ ಅಗತ್ಯ ಬರುವುದಿಲ್ಲ. ಪ್ರೀತಿಯಿಂದಲೇ, ಆದರೆ ದೃಢವಾಗಿ ಎದುರಿಸುವುದು, ಗೂಢಚರ್ಯೆಗಿಂತ ಉತ್ತಮ ವಿಧಾನ, ತೀವ್ರತರವಾದ ಸಮಸ್ಯೆಗಳು ಕಂಡುಬಂದಲ್ಲಿ ಮಾತಾಪಿತೃಗಳು ವೃತ್ತಿಪರರನ್ನಾಶ್ರಯಿಸುವುದೊಳಿತು. ನಿಮ್ಮ ಗುರಿ ನಿಮ್ಮ ಕೋಪವನ್ನು ಹೊರಹಾಕುವುದಲ್ಲ ; ನಿಮ್ಮ ಗುರಿ ನಿಮ್ಮ ಮಗುವಿಗೆ ಸಹಾಯ ಮಾಡುವುದು'', ಎಂದು ಸ್ಪಾಟ್ ವಿವರಿಸುತ್ತಾರೆ.

ತರುಣರು ಈಕೆಯ ಮಾತನ್ನು ಅನುಮೋದಿಸುತ್ತಾರೆ. ''ತರುಣರು ತಾವೇ ಸ್ವತಃ ಅನುಭವ ಮಾಡಿಕೊಳ್ಳಬೇಕಾದಂಥ ವಿಷಯಗಳು ಇರುತ್ತವೆ. ಇದು ಶೀಘ್ರವಾಗಿ ಪ್ರೌಢತೆಯನ್ನು ಪಡೆಯಲು ಸಹಕರಿಸುತ್ತದೆ'' ಎನ್ನುವ ಹದಿನೇಳು ವರ್ಷದ ಯುವತಿ ಬ್ರಿಟ್ನಿ ಕೇಬಲ್ ತನ್ನ ತಂದೆತಾಯಿಯರ ವಿಷಯದಲ್ಲಿ ಹೀಗೆ ನುಡಿಯುತ್ತಾಳೆ; ''ಅವರಿಗೇನಾದರೂ ತಿಳಿಯಬೇಕಾಗಿದ್ದರೆ, ಅವರು ನನ್ನನ್ನು ಕೇಳಿದರೆ ಸಾಕು ; ನಾನೇ ಅವರಿಗೆ ತಿಳಿಸುತ್ತೇನೆ''.

ಮನೆಯಲ್ಲಿಯೇ 'ಮಾದಕ ದ್ರವ್ಯ ಪರಿಶೋಧಕ'ವನ್ನು ಬಳಸುವುದರ ಬಗ್ಗೆ ಹೇಳುವಾಗ, ಮಿಸಾಟ್ ಕೂಡಾ ಅಂಥ ಗೂಢಚರ್ಯೆಯನ್ನು ದೂರಮಾಡುವುದೇ ಒಳ್ಳೆಯದೆಂದು ಸೂಚಿಸುತ್ತಾರೆ. ''ನೀವು ನೇರವಾಗಿ ನಿಮ್ಮ ಮಗುವಿನೊಂದಿಗೆ ಮಾತನಾಡಿ, ಆತನ ಬಗ್ಗೆ ಸಂಗ್ರಹಿಸಿದ ಮಾಹಿತಿಗಳನ್ನು ಆತನಿಗೆ ತೋರಿಸಿದಲ್ಲಿ, ಅದರಲ್ಲಿನ ಒಂದು ವಸ್ತುವನ್ನು ಆತನ ಹಲಗೆಯ ಮೇಲೆ ಇಟ್ಟಲ್ಲಿ, ಆತ ನಿಜವಾಗಿ ಹೆದರುತ್ತಾನೆ'', ಎನ್ನುತ್ತಾರವರು.

ಹದಿನಾಲ್ಕರಿಂದ ಇಪ್ಪತ್ತು ವರ್ಷ ಪ್ರಾಯದ ಐದು ಮಕ್ಕಳ ತಾಯಿಯಾದ ಕ್ಯಾರೊಲಿನ್ ಸೇಮರ್, ಎಲ್ಲವೂ ಸರಿಯಾಗಿಯೇ ಉಂಟೆಂದು ನಿಶ್ಚಯವಾಗುವವರೆಗೆ ಮಕ್ಕಳ ದೂರವಾಣಿ ಕರೆಗಳನ್ನು ಕದ್ದಾಲಿಕೆ ಮಾಡುವುದೇ ಮುಂತಾದವೃದು ಗೂಢಚರ್ಯೆಯಲ್ಲಿ ಹೆಚ್ಚಾಗಿ ತತ್ಪರಳಾಗಿರುತ್ತಾಳೆ. ಮಕ್ಕಳ ಶಾಲೆಗೆ ಭೇಟಿ ಇತ್ತಾಗ, ಇಡೀ ಹದಿಹರೆಯ ಮಕ್ಕಳೆಲ್ಲರ ಸಂಸ್ಕೃತಿಯ ಬಗ್ಗೆ ಅಗತ್ಯದ ಮಾಹಿತಿಗಳೆಲ್ಲಾ ದೊರೆಯುವುದರಿಂದ, ಇಚ್ಛೆ ಬಂದಾಗಲೆಲ್ಲಾ ಶಾಲೆಗೆ ಹೋಗಿ ವಿಷಯ ಸಂಗ್ರಹಿಸುವುದು ಎಲ್ಲಕ್ಕಿಂತಲೂ ಉತ್ತಮ ವಿಧಾನವೆಂದು ಆಕೆಯ ಅಭಿಪ್ರಾಯ.

ಗೂಢಚರ್ಯೆಯು ಧರ್ಮವೋ, ಅಧರ್ಮವೋ ಎಂಬ ವಿಚಾರಕ್ಕಿಂತಲೂ ಮಗುವಿನ ರಕ್ಷಣೆಗೆ ಅತ್ಯಂತ ಮಹತ್ವದ್ದು ಎಂದು 'ಸಮಸ್ಯಾತ್ಮಕ ಮಕ್ಕಳ' ಶಾಲೆಯಲ್ಲಿ ದುಡಿಯುವ ಸಮಾಜಸೇವಕ ಡೇವ್ ಕ್ಲಿಂಟನ್

ಅಭಿಪ್ರಾಯಪಡುತ್ತಾರೆ. ಆದರೆ ನ್ಯಾಯವಾದ ನಿಖರ ಕಾರಣಗಳಿದ್ದಾಗ ಮಾತ್ರ ಇದು ಹೆತ್ತವರಿಗೆ ಸಂಬಂಧಪಟ್ಟಿದ್ದಾಗಿರುತ್ತದೆ.

''ಮಕ್ಕಳ ಕಪಾಟಿನೊಳಗೆ ಏನಿರಬಹುದು? ದಿನಚರಿ ಪುಸ್ತಕದೊಳಗೆ ಏನಿರಬಹುದು? ಎಂದು ನೀವು ಕುತೂಹಲಿಗಳಾಗಿರಬಹುದು. ಆದರೆ ಅದರ ಒಳಹೊಕ್ಕು ಕದ್ದು ನೋಡುವುದು ಒಳ್ಳೆಯ ಆಲೋಚನೆ ಅಲ್ಲ. ಸ್ಪಷ್ಟವಾಗಿ ನೀವು ಕೇಣಕಲ್ಪಟ್ಟ ಹೊರತು ಹಾಗೆ ಮಾಡುವುದು ತಪ್ಪಾಗುತ್ತದೆ. ನನಗೆ ಕಾಳಜಿ ಇದೆ. ಆದರೂ ನಾನು ಇದರಲ್ಲಿ ಮೂಗು ತೂರಿಸುವುದಿಲ್ಲ. ಮಕ್ಕಳಿಗೆ ನ್ಯಾಯ ಅರ್ಥವಾಗುತ್ತದೆ, ಮೂಗು ತೂರಿಕೆ ಅಲ್ಲ'' ಎನ್ನುತ್ತಾರೆ ಕ್ಲಿಂಟನ್.

ಈ ಭಾವನೆಗಳು ಲಾರಾ ಸ್ಸಿಂಗರ್ ಎಂಬ ರೇಡಿಯೋ ಸಲಹಗಾರ್ತಿಯ ಅಭಿಪ್ರಾಯಗಳನ್ನೇ ಪ್ರತಿಧ್ವನಿಸುತ್ತವೆ.

''ಮಕ್ಕಳ ಗಂಟು-ಮೂಟೆಗಳ ಶೇಖರಣೆಯನ್ನು ಹೆತ್ತವರು ಗೌರವದಿಂದಲೇ ಕಾಣಬೇಕು. ಆದರೆ ನಿಜವಾಗಿಯೂ ಮಾದಕ ವಸ್ತುಗಳ ವಿಷಯದಲ್ಲಾಗಲೀ, ಲೈಂಗಿಕ ವಿಷಯದಲ್ಲಿಯೇ ಆಗಲಿ, ಅಥವಾ ಇನ್ಯಾವುದೇ ಅಕೃತ್ಯವಾಗಲೀ, ಹಾಗೊಂದು ಸಮಸ್ಯೆ ಉದ್ಭವಾಗಿದೆಯೆಂದು ನಂಬಲು ಬೇಕಾದಷ್ಟು ಕಾರಣಗಳಿರುವಾಗ, ತನ್ನ ಮಗುವನ್ನು ರಕ್ಷಿಸಲು ಯೋಗ್ಯ ಮಾರ್ಗವನ್ನು ಆಯುವಲ್ಲಿ ಅವರಿಗೆ ಸಂಪೂರ್ಣ ಹಕ್ಕುಂಟು. ದಾರಿತಪ್ಪಿ ನಡೆಯುತ್ತಿರುವ ಮಕ್ಕಳು ಮೂರ್ಖತೆಯಿಂದ, ನಾಚಿಕೆಯಿಂದ, ತಪ್ಪಿತಸ್ಥ ಭಾವನೆಯಿಂದ ಹಾಗೂ ಭಾವೋದ್ವೇಗವೇ ಮೊದಲಾದ ಕಾರಣಗಳಿಂದಾಗಿ, ಸಾಮಾನ್ಯವಾಗಿ ಹೆತ್ತವರೊಂದಿಗೆ ಮುಕ್ತವಾಗಿ ಮನಬಿಚ್ಚಿ ಮಾತನಾಡುವುದಿಲ್ಲ'' ಎನ್ನುತ್ತಾರೆ ಆಕೆ.

ಲಿಪಿಕ್ ದಂಪತಿಗಳ ದೃಷ್ಟಿಯಲ್ಲಿ, ಮಕ್ಕಳಿಗೆ ಹುಟ್ಟಿನಿಂದ ಬರುವ ಗುಣವಲ್ಲ ವಿಶ್ವಾಸಾರ್ಹತೆ, ಕ್ರಮೇಣ ಪರಿಸರದಿಂದ ಗಳಿಸಿ ಕೊಳ್ಳುವ ಗುಣವಿದು. ಅವರು ತಮ್ಮ ಮಕ್ಕಳ ಮೇಲೆ ಗೂಢಚರ್ಯೆ ನಡೆಸಿದ್ದರು, ''ಅವರು ನಮ್ಮಲ್ಲಿ ನಂಬಿಕೆಯನ್ನು ಬೆಳೆಸಲು ಸಮರ್ಥ ರಾದರು, ಇದರಿಂದ ನಮಗೆ ತುಂಬಾ ಸಮಾಧಾನವಾಯಿತು'' ಎಂದು ರಾಬರ್ಟ್ ಲಿಪಿಕ್ ವಿವರಿಸುತ್ತಾರೆ. ಒಮ್ಮೆ ಈ ಹುಡುಗರು ತಾವು ವಿಶ್ವಾಸಾರ್ಹರು ಎಂದು ತೋರಿಸಿಕೊಟ್ಟ ನಂತರ, ಆ ಅರ್ಹತೆ ಅವರಿಗೆ ನಿರಂತರವಾಗಿ ದೊರಕಿತು. ಕುಟುಂಬ ಪತ್ತೇದಾರಿಕೆಯ ವಿಷಯದಲ್ಲಿ ಹಿಂಜರಿಯುವ ಕೋಮಲ ಹೃದಯಿಗಳಾಗಲೀ ಗೂಢಚರ್ಯೆಗೇ ಜೋತುಬಿದ್ದವರಾಗಲೀ, ಇವರೆಲ್ಲರೂ ಈ ಕೆಳಗಿನ ಎಚ್ಚರಿಕೆಯ ವಾಕ್ಯವನ್ನು ಮಾತ್ರ ನಿಶ್ಚಯವಾಗಿಯೂ ಅನುಮೋದಿಸುತ್ತಾರೆ:- ''ಜೋಕೆ ! ಇವರು ನಿಮ್ಮ ಮಕ್ಕಳು !'' ''ಎಚ್ಚರವಿರಬೇಕು ಈಶನ ನೆಚ್ಚಿಸುವಂತಿರಬೇಕು'' ಎಂಬ ದಾಸವಾಣಿಯಲ್ಲಿ 'ಈಶ' ಎಂದರೆ ಜೀವನ ಮೌಲ್ಯ ಎಂದರ್ಥ.

ಬುಕಾರೆಸ್ಟ್‌ನ ಗಾರುಡಿಗ

ಅಳುವ ಕಡಲಿನಲಿ ತೇಲಿ ಬರುತಲಿದೆ ನಗೆಯಹಾಯಿ ದೋಣಿ

ಸರೋಜ ಆರ್. ಆಚಾರ್ಯ
''ಭಾಗ್ಯಶ್ರೀ''
೧-೨-೫೦ ಬಿ, ಕುಂಜಿ ಬೆಟ್ಟು
ಉಡುಪಿ-೫೭೬೧೦೨

ಅವನಿಗೆ ಹನ್ನೆರಡು ವರ್ಷ ಪ್ರಾಯವಿರಬಹುದು. ಕಡ್ಡಿಕಾಷ್ಠದಂತೆ ಸಣಕಲಾಗಿದ್ದ. ಮೈಯಲ್ಲಿ ಪೂರ್ತಿ ಕೊಳೆ ಮೆತ್ತಿತ್ತು, ಬುಕಾರೆಸ್ಟ್‌ನ ಉಪದಾರಿಯ ಪಾರ್ಶ್ವದಲ್ಲಿ ಭಿಕ್ಷೆಯನ್ನರಸುತ್ತ ನಡೆಯುತ್ತಿದ್ದ. ಕೈಯಲ್ಲೊಂದು ಕಿತ್ತಳೆ ಹಣ್ಣು, ಇನ್ನೊಂದು ಕೈಯಲ್ಲಿದ್ದ ಪ್ಲಾಸ್ಟಿಕ್ ಚೀಲದಲ್ಲಿ, 'ಆರೋಲ್ಯಾಕ್' ಎಂಬ ಒಂದು ರೀತಿಯ ಅಂಟಿನ ಮುದ್ದೆ ತುಂಬಿತ್ತು. ಉದ್ಯಮಗಳಲ್ಲಿ ಉಪಯೋಗವಾಗುವ ಈ 'ಆರೋಲ್ಯಾಕ್ ಗ್ಲೂ' ಮೂಸುತ್ತಲೇ ಮಿದುಳನ್ನು ನಿಷ್ಕ್ರಿಯಗೊಳಿಸಿ, ಮೈಗೆ ಬಿಸಿ, ಕಣ್ಣುಗಳಿಗೆ ತೀವ್ರತೆಯನ್ನು ನೀಡಬಲ್ಲ ಮಾದಕ ವಸ್ತು!

'ಬವಣೆ ಪಡುವ ಮಕ್ಕಳೆಲ್ಲ ಬಂದು ಸೇರುವುದು ಇಲ್ಲಿಗೇ' ಎಂಬಂತೆ ಏನನ್ನೋ ಗುಣುಗುಣಿಸುತ್ತ, 'ಗ್ಲೂ'ವಿನ ಚೀಲ ಮೂಸುತ್ತ ನಡೆದಿದ್ದ. ಇದು ಅವನ ದಿನಚರಿ.

ಆದರೆ ೧೯೯೨ರ ಅದೊಂದು ಸುದಿನ ಅವನ ಬಳಿಯಿದ್ದ ಕಿತ್ತಳೆಯನ್ನು ಕೊಂಡುಕೊಂಡ ಒಬ್ಬ ಆಗಂತುಕ, ಕಿತ್ತಳೆಯ ಬೆಲೆಯಾದ ಒಂದು ನಾಣ್ಯವನ್ನು ಅವನಿಗೆ ಕೊಡುವ ಬದಲು ತನ್ನ ಜೋಳಿಗೆಯಿಂದ ಎರಡು ಸೇಬುಗಳನ್ನು ಹೊರತೆಗೆದ. ದೊಡ್ಡ ಕೆಂಪು ಬಣ್ಣದ ಕೋಡಂಗಿ ಮೂಗನ್ನು ಮುಖಕ್ಕೆ ಅಂಟಿಸಿ ಕೊಂಡಕೂಡಲೇ ಆ ಹಣ್ಣುಗಳನ್ನು ಸರಸರನೆ ಹಾರಿಸಿ ಹಿಡಿಯಲು ತೊಡಗಿದ- ಅದೂ ವೇಗದಲ್ಲಿ! ಆ ಹುಡುಗ ಅವನ ಹೆಸರು ಮಾರಿಯನ್ - ಬೆರಗಾಗಿ ನೋಡುತ್ತ ನಿಂತ.

''ನನ್ನ ಹೆಸರು ಮಿಲೌಡ್; ಈ ಕೈಚಳಕದ ವಿದ್ಯೆಯಲ್ಲಿ ನನಗೊಬ್ಬ ಸಹಾಯಕ ಬೇಕಾಗಿದ್ದಾನೆ'' ಎಂದು ಆ ಆಗಂತುಕ ಹೇಳಿದಾಗ ಮಾರಿಯನ್ ಪೆಚ್ಚಾದ. ''ನನಗೆ ಯಾವುದೇ ವಿದ್ಯೆಯೂ ಬರುದಿಲ್ಲವಲ್ಲ''.

''ಆದರೇನು? ನಾನು ಹೇಳಿ ಕೊಡುತ್ತೇನಲ್ಲ'' ಎಂದು ಆಶ್ವಾಸನೆ ನೀಡಿದ ಮಿಲೌಡ್, ಹುಡುಗನ ಕಳಾಹೀನವಾದ ಕಣ್ಣುಗಳಲ್ಲಿ ಒಂದು ಸಣ್ಣ ಬೆಳಕು ಇಣುಕಿತು. ಮರುದಿನ 'ಗಾರಾ ಡಿ ನಾಡೇ' ರೈಲ್ವೆ ಸ್ಟೇಷನ್ ಪಕ್ಕದ ಉದ್ಯಾನದಲ್ಲಿ ಮತ್ತೆ ಸಂಧಿಸುವ ನಿರ್ಧಾರದೊಂದಿಗೆ ಅವರಿಬ್ಬರೂ ಅಗಲಿದರು.

ಮೂಲತಃ ಪ್ಯಾರಿಸ್‌ನವನಾದ ಮಿಲೌಡ ಓಕಿಲಿ ಒಬ್ಬ ನುರಿತ ಸರ್ಕಸ್ ಕಲಾವಿದ. ಜನರನ್ನು ನಗಿಸುವ ಕಲೆ ಆವನ ರಕ್ತದಲ್ಲೇ ಸೇರಿಹೋಗಿತ್ತು. ಡಿಸೆಂಬರ್ ೧೯೮೯ರಲ್ಲಿ ರುಮೇನಿಯಾದ ನಿರಂಕುಶ ಸರ್ವಾಧಿಕಾರಿ ನಿಕೋಲೇ ಸೀನೆಸ್ಕ್ಯುನ ಪದಚ್ಯುತಿಯೊಂದಿಗೆ ಆ ಇಡೀ ದೇಶವೇ ಧೂಳೀಪಟವಾಗಿ ತತ್ತರಿಸುವುದನ್ನು, ದುಃಖತಪ್ತರಾದ ನಿರ್ಗತಿಕರನ್ನು ರುಮೇನಿಯಾ ಟೆಲಿವಿಷನ್‌ನಲ್ಲಿ ನೋಡಿದ ಓಕಿಲಿ ತುಂಬ ಪ್ರಭಾವಿತನಾದ. 'ಈ ಜನರ ದುಃಖದ ಉಪಶಮನಕ್ಕಾಗಿ ನಾನು ಏನಾದರೂ ಮಾಡಲು ಸಾಧ್ಯವೇ?' ಎಂದು ಚಿಂತಿತನಾದ.

ಹಾಗೆ ನೋಡಿದರೆ ಈ ವಿಚಾರದಲ್ಲಿ ಹುರುಳೇ ಇರಲಿಲ್ಲ. ಏಕೆಂದರೆ ಅವನ ಬಳಿ ಹಣವೂ ಇರಲಿಲ್ಲ, ರುಮೇನಿಯಾದ ಭಾಷೆಯೂ ಗೊತ್ತಿಲ್ಲ. ಆದರೂ ಅಂತರಂಗದ ಕೂಗಿಗೆ ಓಗೊಟ್ಟು, ಪ್ಯಾರಿಸ್‌ನ ತನ್ನ ಪುಟ್ಟ ಮನೆಯನ್ನು ತ್ಯಜಿಸಿ ಬುಕಾರೆಸ್ಟ್‌ಗೆ ಹೊರಟೇ ಬಿಟ್ಟ, ಓಕಿಲಿ. ಆಗಿನ್ನೂ ಬರೀ ಇಪ್ಪತ್ತು ವರ್ಷ ಅವನಿಗೆ.

ಈಗೆ ರಸ್ತೆ ಬದಿಯ ಈ ಸಣಕಲನೊಂದಿಗೆ ಮಾತಾಡುತ್ತಿರುವಂತೆಯೇ ಅವನ ಕಲ್ಪನೆ ಮೆಲ್ಲ ಮೆಲ್ಲನೆ ಒಂದು ನಿರ್ದಿಷ್ಟವಾದ ಆಕಾರ ಪಡೆಯಲು ತೊಡಗಿತು. ಮರುದಿನ ಉದ್ಯಾನದಲ್ಲಿ ಓಕಿಲಿ ಮಾರಿಯನ್‌ಗೆ ಚೆಂಡುಗಳ ವಿದ್ಯೆಯನ್ನು ನಿಧಾನವಾಗಿ ಮಾಡಿ ತೋರಿಸಿದ.

ಆಗಸ್ಟ್ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಕ್ರಿಸ್ಟೋಫರ್ ಮ್ಯಾಥ್ಯೂಸ್ ರವರ 'ಪೈಡ್ ಪೈಪರ್ ಆಫ್ ಬುಕಾರೆಸ್ಟ್' ಲೇಖನದ ಭಾವಾನುವಾದ

ಬಲಗೈಯ ಚೆಂಡನ್ನು ಮೇಲಕ್ಕೆಸೆದು , ಅದು ಅತ್ಯಂತ ಎತ್ತರದಲ್ಲಿರುವಾಗ ಎಡಗೈ ಚೆಂಡನ್ನು ಎಸೆಯಬೇಕು. ಆ ಕೂಡಲೆ ಬಲಗೈ ಚೆಂಡನ್ನು ಎಡಗೈ, ಮತ್ತು ಎಡಗೈ ಚೆಂಡನ್ನು ಬಲಗೈ ಹಿಡಿಯಬೇಕು.

ಆರಂಭದಲ್ಲಿ ಮಾರಿಯನ್‌ನ ಚೆಂಡುಗಳು ನೆಲಕ್ಕೇ ಬೀಳುತ್ತಿದ್ದರೂ ಓಕಿಲಿ ಅವನಿಗೆ ಮತ್ತೆ ಮತ್ತೆ ಹುರಿದುಂಬಿಸುತ್ತಿದ್ದ.

''ನಾನು ಸಹ ಪ್ರಯತ್ನ ಮಾಡಲೇ '' ಎಂಬ ಸಣ್ಣ ಧ್ವನಿಗೆ ತಿರುಗಿ ನೋಡಿದ ಓಕಿಲಿ ನಸುನಕ್ಕ. ಇನ್ನೊಂದು ಅನಾಥ ಮಗೂ-ಹೆಸರು ಲೂಸಿಕ , ಹನ್ನೊಂದು ವರ್ಷವಿರಬಹುದು.

ಮುಂದಿನ ದಿನಗಳು, ವಾರಗಳುರುಳುತ್ತಿದ್ದಂತೆ ಅವರಿಬ್ಬರಿಗೂ ಎರಡು ಚೆಂಡುಗಳ ವಿದ್ಯೆ ಕರಗತವಾಗಿತ್ತು. ಇನ್ನು ಮೂರು ಚೆಂಡುಗಳಿಂದ ಎರಡು ಚೆಂಡುಗಳು ಬಲಗೈಯಲ್ಲಿ, ಮೂರನೆಯದು ಎಡಗೈಯಲ್ಲಿ, ಮತ್ತೆ ಇದೇ ಚಕ್ರಗತಿ ೧,೨,೩., ಬಾಯಲ್ಲಿ ಹೇಳಿದಷ್ಟು ಸುಲಭವಲ್ಲ. ಕಾರ್ಯಕ್ಕಿಳಿದಾಗಲೇ ಗೊತ್ತು ಅದರ ಕಷ್ಟ! ''ಯಾವುದೂ ಅಸಂಭವವಲ್ಲ, ಅಭ್ಯಾಸ ಮಾಡಬೇಕು, ಅಷ್ಟೆ!'' ಎಂದು ಪದೇ ಪದೇ ಹೇಳುತ್ತಿದ್ದ ಓಕಿಲಿ.

ಕೆಲವು ರಾತ್ರಿಗಳಲ್ಲಿ ಸಣ್ಣ ಬೆಂಕಿಮಾಡಿ ಚಳಿ ಕಾಯಿಸುತ್ತಿರುವಾಗ ಆ ಮಕ್ಕಳು ತಮ್ಮ ಕಠಿಣವಾದ ಜೀವನದ ವೃತ್ತಾಂತವನ್ನು ಹೇಳುತ್ತಿರಲು ದುಃಖಿತನಾಗಿ ಆಲಿಸುತ್ತಿದ್ದ ಓಕಿಲಿ.

ಮಾರಿಯನ್‌ನ ಕುಡುಕ ತಂದೆ ದಿನಾಲೂ ಮಗನನ್ನು ಹೊಡೆಯುತ್ತಿದ್ದ. ಕೊನೆಗೊಮ್ಮೆ ಮನೆಬಿಟ್ಟು ಓಡಿ ಬಂದ ಮಾರಿಯನ್ ನಾಲ್ಕಾರು ಬೀದಿ ಹುಡುಗರೊಂದಿಗೆ ಸೇರಿಕೊಂಡ. ಅಯಸ್ಕಾಂತವನ್ನು ಬಳಸಿ ಫೋನ್ ಪೆಟ್ಟಿಗೆಯ ನಾಣ್ಯಗಳನ್ನು ಕದಿಯುವುದು ಮುಂತಾಗಿ ಹಣ ಸಂಪಾದನೆಯ ಹಲವಾರು ಕೆಟ್ಟ ಮಾರ್ಗಗಳನ್ನು ಕಲಿತು ಕೊಂಡು. ಚಳಿಯನ್ನು, ಭಯವನ್ನು ಓಡಿಸಲು ಅರೋಲ್ಯಾಕ್ ಅಂಟನ್ನು ಮೂಸಲು ತೊಡಗಿದ.

ಇನ್ನು ಲೂಸಿಕಳ ವೃತ್ತಾಂತ ಇನ್ನೂ ದಾರುಣ. ಅವಳ ತಾಯಿ ತನ್ನ ಪತಿಯಿಂದ ಬೇರೆಯಾದಾಗ ಅವಳ ಮಗ ತನ್ನ ತಂದೆಯೊಂದಿಗೆ ಹೋಗಿ ಬಿಟ್ಟಿದ್ದ.ಮಗನ ಮೇಲೆ ತುಂಬಾ ಪ್ರೀತಿಯಿಟ್ಟಿದ್ದ ಆ ತಾಯಿ ತನ್ನ ನಿರಾಶೆಯನ್ನೆಲ್ಲ ಪುಟ್ಟ ಲೂಸಿಕಳನ್ನು ಹೊಡೆಯುವುದರಿಂದ ನೀಗಿಸಿಕೊಳ್ಳುತ್ತಿದ್ದಳು. ಒಂದು ರಾತ್ರಿ ಸಿಟ್ಟಿನ ಭರದಲ್ಲಿ ಮಗಳ ಮೂಳೆ ಮೂಳೆಗಳನ್ನು ಪುಡಿ ಮಾಡಿದ ಅವಳು ಮತ್ತೆ ಅದೇ ಮಗಳನ್ನು ತನಗೆ ಸಿಗರೇಟ್ ತಂದು ಕೊಡಲು ಆದೇಶಿಸಿ ಹೊರಗಟ್ಟಿದ್ದಳು. ಅವಳನ್ನು ಕಂಡ ಪೊಲೀಸರು ಆಸ್ಪತ್ರೆಗೆ ಸೇರಿಸಿದ್ದರು. ಮೂರು ವಾರಗಳ ಅನಂತರ ತನ್ನ ಗ್ರಾಮದಿಂದ ಬುಕಾರೆಸ್ಟ್‌ಗೆ ಓಡಿ ಬಂದ ಲೂಸಿಕ ಮಾರಿಯನ್‌ನ ಗುಂಪಿನೊಂದಿಗೆ ಸೇರಿಕೊಂಡಿದ್ದಳು.''ನನ್ನ ಶ್ರೀಮಂತ ತಂದೆ ನನ್ನನ್ನು ಪ್ರೀತಿಸುತ್ತಾರೆ, ಬೇಗನೆ ಬಂದು ನನ್ನನ್ನು ಕರೆದುಕೊಂಡು ಹೋಗುವರು'' ಎಂದು ಹೇಳುತ್ತಿದ್ದಳು. ಒಬ್ಬೊಬ್ಬರದು ಒಂದೊಂದು ಕತೆ.

ದಿನಗಳೆದಂತೆ ಗುಂಪಿನ ಇತರ ಮಕ್ಕಳೂ 'ಅರೋಲ್ಯಾಕ್' ಮೂಸುವುದನ್ನು ಬದಿಗಿರಿಸಿ ಉದ್ಯಾನಕ್ಕೆ ಬರತೊಡಗಿದರು. ಎಲ್ಲರನ್ನೂ ಸ್ವಾಗತಿಸಿದ ಓಕಿಲಿ. 'ಇಂದ್ರಜಾಲ ವಿದ್ಯೆ ಏಕಾಗ್ರತೆಯನ್ನು ಹೆಚ್ಚಿಸುತ್ತದೆ. ಸದಾ ಮಾದಕವಸ್ತುಗಳ ಗುಂಗಿನಲ್ಲಿರುವವರಿಗೆ ಈ ಕಲೆ ಸಿದ್ಧಿಸದು'' ಎಂದು ಮಕ್ಕಳಿಗೆ ಯಾವಾಗಲೂ ಮನವರಿಕೆ ಮಾಡುತ್ತಿದ್ದ. ''ಜೀವನ ಒಂದು ಸರ್ಕಸ್ ಇದ್ದಂತೆ. ಸುಖ, ದುಃಖ ಎರಡು ಇದರಲ್ಲಿದೆ''.

ಹಾಗೆ ನೋಡಿದರೆ ಓಕಿಲಿಯ ಗತ ಜೀವನವಾದರೂ ಶಾಂತಿಮಯವಾಗಿರಲಿಲ್ಲ. ಅಲ್ಜೀರಿಯನ್ ತಂದೆ ಮತ್ತು ಫ್ರೆಂಚ್ ತಾಯಿಗೆ ಹುಟ್ಟಿದ್ದ ಓಕಿಲಿ ಇಬ್ಬರಿಂದಲೂ ಧಂಡಿಯಾಗಿ ಹೊಡೆತ ತಿನ್ನುತ್ತಿದ್ದ. ಆದರೆ ಇತರರನ್ನು ನಗಿಸುವ ಕಲೆ ಅವನಲ್ಲಿತ್ತಾಗಿ ಶಾಲೆಯಲ್ಲಿ ಸಹ ಗೂಂಡಾಗಳನ್ನೂ ಮೆತ್ತಗಾಗಿಸಿ ಬಿಡುತ್ತಿದ್ದ. ಆದಿತ್ಯವಾರಗಳಲ್ಲಿ ತಾಯಿಯೊಂದಿಗೆ ಸರ್ಕಸ್‌ಗೆ

ಹೋಗುತ್ತಿದ್ದ ಓಕಿಲಿ ತನ್ನ ಜೀವನವೂ ಇತರರನ್ನು ನಗಿಸಲಿಕ್ಕೇ ಮುಡಿಪು' ಎಂದು ತೀರ್ಮಾನಿಸಿ ಬಿಟ್ಟಿದ್ದ. ಅದರಲ್ಲೂ, ಗಾಲಿ ಕುರ್ಚಿಗಳಲ್ಲೇ ದಿನ ಕಳೆಯುವವರು, ಉಗ್ಗುವವರು-ಹೀಗೆ ಜೀವನದಲ್ಲಿ ನ್ಯೂನತೆಗಳೊಂದಿಗೆ ಬದುಕುತ್ತಿರುವ ಮಕ್ಕಳೊಂದಿಗೇ ಅವನು ಗೆಳೆತನ ಮಾಡುತ್ತಿದ್ದ.

ಶಾಲಾ ದಿನಗಳ ನಂತರ ಓಕಿಲಿ ರೂಪದರ್ಶಿಯಾಗಿ ಒಂದು ನೌಕರಿ ಹಿಡಿದನಾದರೂ, ಒಳಗೊಳಗೇ ಏನೋ ಅವ್ಯಕ್ತ ಅಸಮಾಧಾನ ಕಾಡುತ್ತಿರಲು ಪ್ಯಾರಿಸ್‌ನಲ್ಲಿ ಸರ್ಕಸ್ ಕಲಾವಿದರ ತರಬೇತಿ ಶಾಲೆಯಲ್ಲಿ ಪುನಃ ಸೇರಿಕೊಂಡ. ಅಲ್ಲಿ ಅವನು ಕಲಿತ ವಿದ್ಯೆಯನ್ನು ಸಾರ್ವಜನಿಕರೆದುರು ಪ್ರದರ್ಶಿಸಬೇಕೆಂದಿದ್ದರೂ ಅಲ್ಲಿಯ ವ್ಯಾಪಾರಿಗಳಿಗೆ ಅವನು ಸಾಮರ್ಥ್ಯದ ಮೇಲೆ ಅಷ್ಟೇನೂ ನಂಬಿಕೆಯಿರಲಿಲ್ಲವಾಗಿ ಅವನಿಗೆ ಅನುಮತಿ ನಿರಾಕರಿಸಿದ್ದರು. ಆದರೆ ಅವನ ಜನಪ್ರಿಯತೆಯನ್ನು ಕಂಡು ತಮ್ಮ ಮನಸ್ಸನ್ನು ಬದಲಾಯಿಸಿಕೊಂಡನು. ಆ ಒಂದು ವಾರದಲ್ಲಿ ಐದು ನೂರು ಡಾಲರ್ ಸಂಪಾದಿಸಿದ್ದ ಓಕಿಲಿ. ಈ ಹಿಂದೆ ರೂಪದರ್ಶಿಯಾಗಿ ಸಂಪಾದಿಸಿದುದಕ್ಕಿಂತ ಈ ಸಂಪಾದನೆ ತುಂಬಾ ಕಡಿಮೆ ಹೌದಾದರೂ, ಅವನು ತೃಪ್ತನಾಗಿದ್ದ.

ಬುಕಾರೆಸ್ಟ್‌ನಲ್ಲಿ ಓಕಿಲಿಯಂತೆಯೇ ವಿಚಾರಧಾರೆಯನ್ನು ಹೊಂದಿದ್ದ ಒಬ್ಬ ಡಾಕ್ಟರ್ ಇದ್ದರು. ಹೀಗೇ ಬೀದಿಪಾಲಾಗಿ ಹೋದ ಜನರನ್ನು ಸಂಘಟಿಸಿ, ಅವರಿಗಾಗಿ ಒಂದು ಸಂಸ್ಥೆಯನ್ನು ರೂಪಿಸುವ ಉದ್ದೇಶದಿಂದ ಕೆಲಸಮಾಡುತ್ತಿದ್ದರು. ಅವರ ದೃಷ್ಟಿ ಒಂದು ದಿನ ಓಕಿಲಿ ಮತ್ತು ಅವನ ಬಳಗದವರ ಮೇಲೆ ಬಿತ್ತು. ಅವರು ಓಕಿಲಿಯಲ್ಲಿ ವಿನಂತಿಸಿಕೊಂಡಂತೆ, ಆ ಸಂಸ್ಥೆಯ ಶೈಕ್ಷಣಿಕ, ಕಲಾಕುಶಲತೆಗಳ ಮತ್ತು ಆಟೋಟಗಳ ಚಟುವಟಿಕೆಗಳಲ್ಲಿ-ಸರ್ಕಸ್ ವಿದ್ಯೆಯೂ ಸೇರಿದಂತೆ- ಭಾಗವಹಿಸಲು ಓಕಿಲಿ ಮತ್ತು ಮಕ್ಕಳು ಆ ಸಂಸ್ಥೆಯನ್ನು ಸೇರಿಕೊಂಡರು. ಹಗಲಿನ ಊಟವೂ ಅಲ್ಲಿಯೇ ದೊರೆಯುತ್ತಿತ್ತು.ಆದರೆ ರಾತ್ರಿ ಹೊತ್ತು ಮಾತ್ರ ಅವರು ತಮ್ಮ ಹಳೆ ತಂಗುದಾಣಗಳಲ್ಲೇ ವಾಸಿಸುತ್ತಿದ್ದರು.

ಅತ್ಯಂತ ಶೀತಲವಾದ ಒಂದು ನವೆಂಬರ್ ಸಂಜೆಯಲ್ಲಿ ಬೆಂಕಿಯ ಬಳಿ ಚಳಿ ಕಾಯಿಸಿಕೊಳ್ಳುತ್ತಿದ್ದಾಗ ಥಕ್ಕನೆ ಕೇಳಿದಳು ಮಿಯಾ, "ಹೌದು, ನೀವು ಯಾವಾಗ ನಮ್ಮನ್ನೆಲ್ಲ ಬಿಟ್ಟು ಹೋಗಲಿದ್ದೀರಿ ?" ಸ್ವತಃ ಅನಾಥೆಯಾದ ಹದಿನಾಲ್ಕು ವರ್ಷದ ಮಿಯಾ ಆಗಲೆ ತಾಯಿಯಾಗಿ ತನ್ನ ಮಗುವನ್ನೂ ಒಂದು ಅನಾಥಾಶ್ರಮದಲ್ಲಿ ಬಿಟ್ಟಿದ್ದಳು.

ಮಿಯಾಳ ಪ್ರಶ್ನೆಗೆ ಮೃದುವಾಗಿ ಉತ್ತರಿಸಿದ ಓಕಿಲಿ.

"ಇಲ್ಲ, ನಾನು ಹೋಗುವುದಿಲ್ಲ. ಇನ್ನೂ ತುಂಬಾ ದಿವಸ !"

ಅವನು ಬುಕಾರೆಸ್ಟ್‌ಗೆ ಬಂದು ಆಗಲೇ ತುಂಬಾ ದಿವಸಗಳಾಗಿ ಬಿಟ್ಟಿದ್ದವು, ನಿಜ. ಆದರೆ ಈ ಮಕ್ಕಳು ಮತ್ತೊಮ್ಮೆ ಅನಾಥರಾಗುವುದು ಅವನಿಗೆ ಸರಿಕಾಣಿಸಲಿಲ್ಲ. ಅವನ ಉತ್ತರದಿಂದ ಭರವಸೆ ಹೊಂದಿದ ಮಿಯಾ ತನ್ನ ಕೈಗಳಲ್ಲಿ ಅವನ ಕೈಗಳನ್ನು ಎತ್ತಿಕೊಂಡವಳು ಅವನನ್ನು ಪಕ್ಕದಲ್ಲಿದ್ದ ಮುಚ್ಚಳವಿಲ್ಲದ ಮ್ಯಾನ್ ಹೋಲ್' ಗೆ ಕರೆದುಕೊಂಡು ಹೋದಳು. "ಇಲ್ಲೇ ನಮ್ಮ ವಾಸ್ತವ್ಯ!" ಅವರ ವಾಸಸ್ಥಾನವನ್ನು ಓಕಿಲಿ ನೋಡುವುದು ಇದೇ ಮೊದಲ ಸಲವಾಗಿತ್ತು. ಮೆಲ್ಲಗೆ ಅದರೊಳಗಿನ ಮೆಟ್ಟಿಲುಗಳನ್ನು ಇಳಿದ ಓಕಿಲಿ ಒಂದು ಕಾಂಕ್ರೀಟ್ ಕೋಣೆ ಸೇರಿದ. ಅಲ್ಲಿರುವ ಹತ್ತು, ಹನ್ನೆರಡು ಮಕ್ಕಳು ಚರ್ಚುಗಳಿಂದ ಕದ್ದು ತಂದಿದ್ದ ಕ್ಯಾಂಡಲ್‌ಗಳ ಮಂದ ಪ್ರಕಾಶ, ನೆಲದಲ್ಲಿ ಚೆಲ್ಲಾಡಿದ್ದ ಚಿಂದಿಬಟ್ಟೆಗಳು, ಹಳೇ ಕೋಟುಗಳು -ಅವೇ ಅವರ ಹಾಸಿಗೆ, ಹೊದಿಕೆಗಳು! ಪಸರಿಸಿದ್ದ ದುರ್ಗಂಧ ಅಸಹನೀಯವಾದರೂ ಇಂದಿನ ರಾತ್ರಿಯ ಮಟ್ಟಿಗಾದರೂ ಇವರ ಆಮಂತ್ರಣವನ್ನು ಸ್ವೀಕರಿಸಲೇಬೇಕು ಎಂದು ತೀರ್ಮಾನಿಸಿದ ಓಕಿಲಿ.

ಸಂಸ್ಥೆಯಲ್ಲಿ ಓಕಿಲಿಯ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತಾ ಮುವತ್ತನ್ನೂ ದಾಟಿತು. ತಿಂಗಳುಗಳುರುಳುತ್ತಿದ್ದಂತೆ ಮಕ್ಕಳೂ ಪರಿಣತರಾಗಿರಲು "ಬುಕಾರೆಸ್ಟ್"ನಲ್ಲಿ ನಡೆಯಲಿರುವ

'ಅಂತರರಾಷ್ಟ್ರೀಯ ಮಕ್ಕಳ ದಿನಾಚರಣೆ ೧೯೯೪ರಲ್ಲಿ ಒಂದು ಪ್ರದರ್ಶನ ನೀಡುವಂತೆ ಅವರಿಗೆ ಆಹ್ವಾನ ಬಂತು.

ಪ್ರದರ್ಶನದ ದಿವಸ ತಮ್ಮ ಹದಿನೈದು ನಿಮಿಷಗಳ ಕಾರ್ಯಕ್ರಮಕ್ಕೆ ದೊರೆತ ಕಿವಿಗಡಚಿಕ್ಕುವ ಚಪ್ಪಾಳೆಯನ್ನು ಕೇಳಿದ ಮಕ್ಕಳು ಆನಂದಾತಿರೇಕದಿಂದ ಮೂಕವಿಸ್ಮಿತರಾದರು.

'ಜೀವನವೆಂದರೆ ಸರ್ಕಸ್: ಸರ್ಕಸ್ ಎಂದರೆ ಜೀವನ' ಓಕಿಲಿ ನಸುನಗುತ್ತಿದ್ದ.

ಅವನದಾದರೂ ಜೀವನ ಈಗ ಸಂಪೂರ್ಣ ಬದಲಾಗಿತ್ತು. ಈ ಮಧ್ಯೆ ಅವನೊಮ್ಮೆ ಪ್ಯಾರೀಸಿಗೆ ಹೋಗಿದ್ದಾಗ ಸಿಕ್ಕಿದ್ದ ಛಾಯಾಚಿತ್ರಕಾರ 'ಹೆರ್ಮಿನ್ ಬಿರ್ಗೇಡಿಯರ್' ಓಕಿಲಿಯ ವಿಚಾರಗಳಿಗೆ ಸ್ಪಂದಿಸಿ ತಾನೂ ಬುಕಾರೆಸ್ಟ್‌ಗೇ ಬಂದುಬಿಟ್ಟಿದ್ದ.

ಓಕಿಲಿಯ ಶಿಷ್ಯರ ಚೊಚ್ಚಲ ಪ್ರದರ್ಶನದ ಅನಂತರ ಅವರಿಗೆ ಆಹ್ವಾನಗಳ ಸುರಿಮಳೆಯೇ ಶುರುವಾಗಲು ಅವನು ಅವರನ್ನು ಮೂರು ತಂಡಗಳನ್ನಾಗಿ ವಿಂಗಡಿಸಬೇಕಾಯಿತು. ಒಮ್ಮೊಮ್ಮೆ ಮಾರಿಯನ್ ಮತ್ತು ಲೂಸಿಕಳನ್ನು ವೇದಿಕೆಯಲ್ಲಿ ವೀಕ್ಷಿಸುವಾಗ ಓಕಿಲಿಗೆ ಗತದಿನಗಳ ನೆನಪಾಗುತ್ತಿತ್ತು, 'ಎಲ್ಲಿದ್ದ ಮಕ್ಕಳು ಈಗ ಎಲ್ಲಿದ್ದಾರೆ?' 'ಆರೋಲ್ಯಾಕ್'ನ ಚೀಲದಿಂದ ಮುಖವನ್ನು ಹೊರತೆಗೆಯದಷ್ಟು ದುರ್ವ್ಯಸನಿಯಾಗಿದ್ದ ಮಾರಿಯನ್ ಈಗ ಇಷ್ಟು ದೊಡ್ಡ ಜನಸ್ತೋಮವನ್ನು ಆಕರ್ಷಿಸುತ್ತಿದ್ದಾನೆ. ಮತ್ತೆ ಈ ಲೂಸಿಕ! ಮೂವರು ಸಹವರ್ತಿಗಳು ರಭಸದಿಂದ ಎಸೆಯುವ ಕೋಲು, ಚೆಂಡುಗಳನ್ನು ಲೀಲಾಜಾಲವಾಗಿ ನಿಭಾಯಿಸಿ ಅಷ್ಟೇ ತ್ವರಿತಗತಿಯಲ್ಲಿ ತಿರುಗಿಸಬಲ್ಲವಳಾಗಿದ್ದಳು. ಮಿಗಿಲಾಗಿ, ಜನರ ಗಮನ ಸೆಳೆದಿಟ್ಟುಕೊಳ್ಳಲು ತನ್ನ ಮುಖವನ್ನು ಹೇಗೆಲ್ಲಾ ಬಳಸಿಕೊಳ್ಳಬಹುದೆಂಬ ತಿಳುವಳಿಕೆಯಿತ್ತು ಅವಳಲ್ಲಿ.

ಈಗೀಗ ಪ್ರತಿ ತಿಂಗಳೂ ತುಂಬಾ ಮಕ್ಕಳು ಕಲಿಯಲು ಬರುತ್ತಿದ್ದರು. ಆದರೆ ಈ ವಿದ್ಯೆಯನ್ನು ವೃತ್ತಿರೂಪದಲ್ಲಿ ನಿರ್ವಹಿಸುವ ಅರ್ಹತೆ ಅಥವಾ ಅಭಿಲಾಷೆ ಬರೀ ಕೆಲವರಲ್ಲಿ ಮಾತ್ರವಿತ್ತು. ಈ ಎಲ್ಲಾ ಮಕ್ಕಳಿಗೂ ಇತರ ಶಿಕ್ಷಣದ ಅಗತ್ಯವಿತ್ತು. ಊಟ, ವಸತಿ, ವೈದ್ಯಕೀಯ ಸೌಲಭ್ಯಗಳ ಅಗತ್ಯವಿತ್ತು. ಅದಕ್ಕಾಗಿ ಓಕಿಲಿ ಗೆಳೆಯರಿಂದ, ಸಂಸ್ಥೆಗಳಿಂದ ಮತ್ತು ಸಮಾಜದ ಮೇಲ್ವರ್ಗದವರಿಂದ ದಾನ, ದೇಣಿಗೆ ಪಡೆಯಲು ನಿರ್ಧರಿಸಿದ. ಅವನೂ ಅವನ ಮಕ್ಕಳೂ ಊರೂರುಗಳ ಮೂಲೆ ಮೂಲೆಗಳಲ್ಲಿ ತಮ್ಮ ಪ್ರದರ್ಶನಗಳನ್ನು ನಡೆಸಿದರು. ಈ ಪರಿಶ್ರಮ ಫಲಕೊಟ್ಟಿತ್ತು.

ಫೆಬ್ರವರಿ ೧೯೯೬ರಲ್ಲಿ ಓಕಿಲಿ ಬುಕಾರೆಸ್ಟ್‌ನ ಅನಾಥಮಕ್ಕಳಿಗೆಂದೇ ಒಂದು ಸಂಸ್ಥೆಯನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದ. ಸರ್ಕಸ್‌ನ ಪ್ರಾರಂಭದಲ್ಲಿ ಅದರ ಎಲ್ಲ ಕಲಾವಿದರೂ ಪರೇಡ್ ನಡೆಸುವ ಸಂಪ್ರದಾಯದ ಸ್ಮೃತಿಯಲ್ಲಿ ತನ್ನ ಈ ಸಂಸ್ಥೆಗೆ ಓಕಿಲಿ 'ಪರೇಡಾ' ಎಂಬ ಹೆಸರಿಟ್ಟ. ಸೈನಿಕರ ಒಂದು ಹಳೆ ಡೇರೆ ಪರೇಡಾದವರಿಗೆ ತರಬೇತಿ ಮತ್ತು ಅಭ್ಯಾಸ ಸ್ಥಾನವಾಯಿತು. ಇಲ್ಲಿ ಸರ್ಕಸ್ ಕಸರತ್ತುಗಳು ಮಾತ್ರವಲ್ಲದೆ ಬಣ್ಣದ ಕಲೆ ಮತ್ತು 'ಸೂಪ್' ತಯಾರಿಸುವುದು ಮುಖ್ಯ ಚಟುವಟಿಕೆಗಳಾಗಿದ್ದುವು. ಶಾಲೆ ಕಂಡರಿಯದ ಪರೇಡಾದ ಮಕ್ಕಳನ್ನು ಓಕಿಲಿ ಶಾಲೆಗಳಿಗೆ, ವೃತ್ತಿ ತರಬೇತಿ ಕೇಂದ್ರಗಳಿಗೆ ಸೇರಿಸಿದ. ಮತ್ತು ಈ ಚುರುಕು ಮಕ್ಕಳಿಗಾಗಿ ನಾಲ್ಕಾರು ಮನೆಗಳನ್ನೂ ಬಾಡಿಗೆಗೆ ಹಿಡಿದ.

ಪರೇಡಾದಲ್ಲಿ ೧೩ಜನ ಶಿಕ್ಷಕರ, ಆಡಳಿತಕಾರರ ಒಂದು ತಂಡ ರೂಪಿಸಲ್ಪಟ್ಟಿತು. ಬುಕಾರೆಸ್ಟ್‌ನಲ್ಲಿದ್ದ ಫ್ರೆಂಚ್ ರಾಯಭಾರ ಕಚೇರಿ 'ಪರೇಡಾ'ಗೆ ೨೦,೦೦೦ ಡಾಲರ್‌ಗಳ ದೊಡ್ಡ ಕೊಡುಗೆ ನೀಡಿತು. ಅದರಲ್ಲಿ ಒಂದು ದೊಡ್ಡ 'ಟ್ರಕ್' ಅನ್ನು ಖರೀದಿಸಿದ ಓಕಿಲಿ ಅದರ ಮೂಲಕ ಬೀದಿವಾಸಿಗಳಾದ ಬಡವರಿಗೆ ಎರಡು ದಿನಕ್ಕೊಮ್ಮೆ ಸೂಪ್ ವಿತರಣೆ, ಪ್ರತಿ ರಾತ್ರಿಯೂ ಸುಮಾರು ೬೦ ಮಕ್ಕಳಿಗೆ ವೈದ್ಯಕೀಯ ಶುಶ್ರೂಷೆ ಎಂದು ಸೇವೆಗಳನ್ನು ಹಮ್ಮಿಕೊಂಡ. ನಗರದ

ಆಸ್ಪತ್ರೆಗಳಲ್ಲಿದ್ದ ಮಕ್ಕಳಿಗಾಗಿ, ಅನಾಥಾಶ್ರಮ ವಾಸಿಗಳಿಗಾಗಿ, ವೃದ್ಧಾಶ್ರಮದ ಹಿರಿಯರಿಗಾಗಿ ವಾರಕ್ಕೆರಡು ಪ್ರದರ್ಶನಗಳನ್ನು ಉಚಿತವಾಗಿ ನಡೆಸಿ ಕೊಡುತ್ತಿದ್ದ.

ಫೆಬ್ರವರಿ೧೬,೧೯೯೯. ಜಗತ್ಪ್ರಸಿದ್ಧವಾದ 'ವೆನಿಸ್ ಕಾರ್ನಿವಲ್' ಉತ್ಸವ !''ಇದೀಗ ಉತ್ಸವದ ಅತ್ಯುನ್ನತ ಕಾರ್ಯಕ್ರಮ! ರುಮೇನಿಯಾದ ಬುಕಾರೆಸ್ಟ್‌ನಿಂದ! ನಡೆಸಿ ಕೊಡುವವರು 'ಪರೇಡಾ'ದ ಹುಡುಗ, ಹುಡುಗಿಯರು! ''ನಿರ್ವಾಹಕರ ಈ ಘೋಷಣೆ ಮುಗಿಯುತ್ತಿದ್ದಂತೆಯೇ ಸಾಲಾಗಿ ರಂಗ ಪ್ರವೇಶ ಮಾಡಿದರು ಮಕ್ಕಳು ; ಕೋಲುಗಳು, ಹೂಪ್‌ಗಳು, ಸೇಬುಗಳು, ಕಿತ್ತಳೆಗಳು- ಎಲ್ಲವೂ ಅವರ ಕೈಗಳಲ್ಲಿ ಗಿರಗಿರ ತಿರುಗುತ್ತಿದ್ದವು. ಮಾರಿಯನ್ ತನ್ನ ಬಣ್ಣ ಹಚ್ಚಿದ ಬಾಯಿಂದ ಒಂದು ಸೀಟಿ ಊದುತ್ತಲೇ ಅವರೆಲ್ಲ ವೇದಿಕೆಯನ್ನು ಅವನಿಗೆ ತೆರವು ಮಾಡಿಕೊಟ್ಟರು. ನಡುವೇದಿಕೆಯಲ್ಲಿ ನಿಂತ ಮಾರಿಯನ್‌ನ ಬಾಯಿಂದ ಪಿಂಗ್‌ಪಾಂಗ್ ಚೆಂಡುಗಳು ಅವಿರತವಾಗಿ ಉದುರತೊಡಗುತ್ತಲೊ ಪ್ರೇಕ್ಷಕರ ನಗು ಮುಗಿಲು ಮುಟ್ಟಿತು. ''ಮ್ಯಾಜಿಕ್'' ಎಂದು ಅರಚುತ್ತ ಒಕಿಲಿ ಸಭಿಕರಲ್ಲೊಬ್ಬಳನ್ನು ವೇದಿಕೆಗೆ ಕರೆತರಲು ಮಾರಿಯನ್ ಅವಳ ಖಾಲಿ ಕೈಗಳಿಂದ ಹಣ್ಣುಗಳನ್ನು ಹೊರ ತೆಗೆದು ರಾಶಿ ಹಾಕಿದ . ಇತರ ಕಲಾವಿದರೂ ಈಗ ಡೊಂಬರಾಟ ಮಾಡುತ್ತ ಮತ್ತೆ ವೇದಿಕೆ ಸೇರಿದರು. ಮಿಯಾ ಬಳುಕಿ, ಬಾಗಿ, ಸೆಟೆದು , ಜಗಿದು ತನ್ನ ಮೈಯನ್ನು ದುಡಿಸಿದರೆ, ಲೂಸಿಕ ಬೆಂಕಿಯನ್ನು ನುಂಗಿ ತೋರಿಸಿದಳು. ಮಾರಿಯನ್ ಗಾಳಿಯಿಂದ ರಂಗು ರಂಗಿನ ಕರವಸ್ತ್ರಗಳನ್ನು ಸೃಷ್ಟಿ ಮಾಡಿದ. ೩೫ ನಿಮಿಷಗಳ ಕಾಲ ಉಸಿರು ಬಿಗಿ ಹಿಡಿದು ನೋಡುತ್ತಿದ್ದ ಜನಸ್ತೋಮ, ಮುಕ್ತಾಯದ ಗೀತೆ ಶುರುವಾಗುತ್ತಲೂ ಮೆಚ್ಚುಗೆಯಿಂದ ಹರ್ಷೋದ್ಗಾರ ಮಾಡಿತು.

ಮಕ್ಕಳ ಮುಖದಲ್ಲಿ ಹೆಮ್ಮೆಯ, ಸಂತೃಪ್ತಿಯ ತಿಳಿನಗು ಲಾಸ್ಯಮಾಡುತ್ತಿದ್ದರೂ, ಭಾವೋದ್ವೇಗದಿಂದ ಸುರಿದ ಕಣ್ಣೀರಿನಿಂದ ಅವರ ಮೇಕಪ್ ಕಲೆಸಿ ಹೋಗುತ್ತಿತ್ತು. 'ಇದೇ ಸರ್ಕಸ್' ಕಣ್ಣುಗಳು ಹೊಳೆಯುತ್ತಿರಲು ಮಕ್ಕಳನ್ನು ಅಪ್ಪಿಕೊಂಡ ಒಕಿಲಿ ಮೆಲ್ಲಗೆ ಉಸುರಿದ, ''ಇದುವೇ ಜೀವನ''!

ಮಿಲೌಡ್ ಒಕಿಲಿಯ ಸಂಸ್ಥೆ ಬುಕಾರೆಸ್ಟ್‌ನ ೬೦೦ ಬೀದಿಬಾಲಕರಿಗೆ ನೆರವು ನೀಡಿದೆ . ಇವರಲ್ಲಿ ೧೨೦ ಮಕ್ಕಳು ಸರ್ಕಸ್ ಕಲೆಯಲ್ಲಿ, ೫೦ ಮಕ್ಕಳು ಬೇರೆ ಉದ್ಯೋಗಗಳಲ್ಲಿ ಸಂಪಾದಿಸುತ್ತಿದ್ದಾರೆ. ಇನ್ನೂ ಹಲವರು ತಮ್ಮ ಕುಟುಂಬದವರೊಂದಿಗೆ ಮತ್ತೆ ಸೇರಿದ್ದಾರೆ. ಇಂದು ಮಾರಿಯನ್ 'ಪರೇಡಾ'ದ ಸರ್ಕಸ್ ಶಿಕ್ಷಕರಲ್ಲೊಬ್ಬನು, ''ಎಲ್ಲಕ್ಕಿಂತ ಮಿಗಿಲಾಗಿ ಮಿಲೌಡ್ ನಮ್ಮಲ್ಲಿ ಆತ್ಮವಿಶ್ವಾಸವನ್ನುಂಟು ಮಾಡಿದರು. ಅವರು ನನ್ನಲ್ಲಿ, ನಮ್ಮಲ್ಲಿ ಅಪಾರ ನಂಬಿಕೆ ಇಟ್ಟಿದ್ದರು. ಆ ನಂಬಿಕೆಯಿಂದ ಉಳಿದೆಲ್ಲವೂ ಸಾಧ್ಯವಾಯಿತು'' ಎನ್ನುತ್ತಾನೆ ಮಾರಿಯನ್.

ಲೂಸಿಕ ವಿಶ್ವವಿದ್ಯಾಲಯಕ್ಕೆ ಸೇರಿ ಕಲಿತು ಸಮಾಜ ಸೇವಕಿಯಾಗುವ ಭರವಸೆ ಹೊಂದಿದ್ದಾಳೆ. ಮಿಯಾ ತನ್ನದೇ ಆದ ಒಂದು ಪುಟ್ಟ ಮನೆಯಲ್ಲಿ ಮಗನೊಂದಿಗೆ ಬಾಳುವ ಕನಸು ಕಾಣುತ್ತಿದ್ದಾಳೆ.

ಒಕಿಲಿಗಾದರೂ ಒಂದಲ್ಲ ಒಂದು ದಿನ ಪ್ಯಾರಿಸ್‌ಗೆ ಮರಳಿ ಅಲ್ಲಿಯ ತನ್ನ ಉದ್ಯೋಗವನ್ನು ಮುಂದುವರಿಸುವ ಕನಸೇನೋ ಇದೆ. ಆದರೆ, ''ಬುಕಾರೆಸ್ಟ್‌ನ ಬೀದಿಗಳಲ್ಲಿ ಒಂದೇ ಒಂದು ನಿರ್ಗತಿಕ ಮಗು ಉಳಿದಿದ್ದರೂ, ನನ್ನಿಂದ ಪ್ಯಾರಿಸ್‌ಗೆ ಮರಳಲು ಸಾಧ್ಯವಾಗದೆಂಬ ಅರಿವು ನನಗಿದೆ'' ಎನ್ನುವುದೇ ಅವನ ಹೇಳಿಕೆಯಾಗಿದೆ.

ಸಬೂಬು , ಸಬೂಬು, ಸಬೂಬು,

ಡಿ.ವಿ.ಶಾಮಣ್ಣ
ನಂ.೧೯೯೧,'ಆರಭಿ',೧ನೇ ಮೇನ್,
೩ನೇ ಕ್ರಾಸ್, ಶ್ರೀರಾಂಪುರ ೨ನೇ ಹಂತ
ಮೈಸೂರು-೫೭೦ ೦೨೩

ನಿಲ್ಲಿಸು ಸಬೂಬು ನೀಡುವ ವ್ಯರ್ಥ ಚಾಳಿಯನು
ಒಲ್ಲದಾ ಕೆಲಸದಲಿ ಒಲುಮೆ ತಳೆ, ಮೇರಗಿರಿ
ಹುಲ್ಲಿನೆಸಳಾಗುವುದು, ಮನದೊಳದೆ ಸಂತೃಪ್ತಿ
ಸ್ಪರ್ಧೆ ಪರನಿಂದೆ ಸೋಲಿಂಗೆ ಅತ್ರಿಸೂನು

ಒಮ್ಮೆ, ಬಿರುಸಾದ ವಾಹನ ಸಂಚಾರದ ವೇಳೆ, ನಾನು ಕಾರ್ ಓಡಿಸುತ್ತಿದ್ದಾಗ, ನನ್ನ ಮುಂದಿದ್ದ ಕಾರಿನವನು ಯಾವ ಮುನ್ಸೂಚನೆಯನ್ನೂ ನೀಡದೆ ಇದ್ದಕ್ಕಿದಂತೆ ಬಿರಿ ಒತ್ತಿ ಕಾರನ್ನು ನಿಲ್ಲಿಸಿದ. ನನ್ನ ಕಾರು ಅದಕ್ಕೆ ಢಿಕ್ಕಿ ಹೊಡೆದಿದೆಯೆಂದು ನನಗೆ ಗೊತ್ತಾದದ್ದು ನನ್ನ ಕಾರಿನ ಮುಂದಿನ ಭಾಗದಿಂದ ತಗಡಿನ ಚೂರೊಂದು ಹಾರಿ ಬಂದಾಗಲೆ.

ಮುಂದಿನ ಕಾರಿಗೆ ಏನೂ ಜಖಂ ಆಗಿರಲಿಲ್ಲ. ಆದರೆ ನನ್ನ ಕಾರಿಗೆ ಮಾತ್ರ ಸುಮಾರು ಸಾವಿರ ರೂಪಾಯಿಯಷ್ಟು ಹಾನಿಯಾಗಿತ್ತು. ಸ್ಟಿಯರಿಂಗ್ ಚಕ್ರದ ಮುಂದಿನ ಗಾಜಿನ ಮೇಲಿರುವ ಬಿಸಿಲು ಮರೆಯಿಂದ ರಟ್ಟಿನ ಚೂರೊಂದು ಕಣ್ಣಿನ ಮೇಲೆ ಬಿದ್ದಿದ್ದರಿಂದ ಈ ಅಪಘಾತವಾಯಿತೆಂದು ನಾನು ಎಲ್ಲರಿಗೂ ಹೇಳಿದೆ.

ಅಪಘಾತಕ್ಕೆ ರಟ್ಟಿನ ಚೂರು ಕಾರಣವಲ್ಲವೆಂಬುದರ ಜ್ಞಾನೋದಯವಾಗಲು ನನಗೆ ಹಲವು ತಿಂಗಳುಗಳೇ ಬೇಕಾಯಿತು. ಕಾರನ್ನು ಓಡಿಸುವಾಗ ನಾನು ಮುಂದೆ ಗಮನವಿಡದೆ ಬೇರೆಲ್ಲೋ ನೋಡುತ್ತಿದ್ದೆ. ನನ್ನ ಕಾರು ಬಹುಶಃ ಮುಂದಿದ್ದ ಕಾರಿಗೆ ತೀರ ಸಮೀಪದಲ್ಲಿತ್ತು. ನನ್ನ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿಯಿಂದ ಆದ ಅಪಘಾತಕ್ಕೆ ನಿರ್ಜೀವ ವಸ್ತುವೊಂದನ್ನು ಹೊಣೆಮಾಡಿದ್ದೆ!

ಕಛೇರಿಗೆ ತಡವಾಗಿ ಬಂದಾಗಲೆಲ್ಲಾ, ''ನಾನು ಮುಂಚೆಯೇ ಮನೆಯನ್ನು ಬಿಡಬೇಕಿತ್ತು'' ಎಂದು ಯೋಚಿಸುವ ಬದಲು, ವಾಹನ ಸಂಚಾರದ ಇರುಕಿನಲ್ಲಿ ಸಿಕ್ಕಿಹಾಕಿಕೊಂಡದ್ದೇ ತಡವಾಗುವುದಕ್ಕೆ ಕಾರಣವೆಂದು ನಿರ್ಧರಿಸಿದ್ದು ನೆನಪಿಗೆ ಬಂದಿತು. ಜೀವನದುದ್ದಕ್ಕೂ ನನ್ನೆಲ್ಲ ತಪ್ಪುಗಳಿಗೆ, ತೊಂದರೆಗಳಿಗೆ ನನ್ನನ್ನು ಬಿಟ್ಟು ಮಿಕ್ಕೆಲ್ಲರನ್ನೂ, ಮಿಕ್ಕೆಲ್ಲ ವಸ್ತುಗಳನ್ನೂ ಹೇಗೆ ಹೊಣೆ ಮಾಡಿದ್ದೆ ಎಂಬುದನ್ನು ಗ್ರಹಿಸಿದೆ. ನಾನೊಬ್ಬ ಮಾತ್ರ ಹೀಗಲ್ಲ-ಎಂಬುದನ್ನೂ ಬಲ್ಲೆ. ಬೇರೆಯವರ ತಪ್ಪಿನಿಂದಲ್ಲದೆ ಸಭೆ ಸಮಾರಂಭಗಳಿಗೆ ತಡವಾಗಿ ಬಂದ ಒಬ್ಬರನ್ನೂ ನಾನು ಕಾಣೆ!

'ಹೊಣೆ-ವರ್ಗಾವಣೆ ಅಥವಾ ನುಣುಚಿಕೆ, ಎಷ್ಟು ವ್ಯಾಪಕವಾಗಿದೆ ಎಂಬುದನ್ನು ತಿಳಿಯುತ್ತಿದ್ದಂತೆಯೇ, ಇದು ಸಮಾಜದಲ್ಲಿ ಹೇಗೆ ಹಾಸುಹೊಕ್ಕಿದೆ ಎಂದು ಗ್ರಹಿಸಿದೆ: ಕುಡುಕರು ಬರೇ ಕುಡುಕರಲ್ಲ, ಮದ್ಯಪಾನ ರೋಗದ ಬಲಿಪಶುಗಳು ; ಅಪರಾಧಿಗಳು ಕಳ್ಳ ಖದೀಮರಲ್ಲ, ಸಮಾಜದ ಅನಾಹುತಗಳು; ಹಾಗೆಯೇ ಮಾದಕ ವಸ್ತುಗಳ ಚಟಕ್ಕೆ ಬಿದ್ದ ಮಕ್ಕಳು ಅವ್ಯವಸ್ಥಿತ ಕುಟುಂಬದಲ್ಲಿ ಸಿಕ್ಕಿಹಾಕಿಕೊಂಡವರು; ಬದುಕಿನಲ್ಲಿ ಸೋಲನನ್ನುಭವಿಸುವವರು ಪಾಪದವರು, ಅದು ಅವರ ಹಣೆಯಲ್ಲಿ ಬರೆದುಬಿಟ್ಟಿರುತ್ತದೆ!

ರಾಜಕಾರಣದಲ್ಲಂತೂ ತಪ್ಪೆಲ್ಲ ಯಾವಾಗಲೂ ಬೇರೆಯವರದ್ದೇ. ಪ್ರತಿಬಾರಿ ಹೊಸ

ಮಾರ್ಚ್ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಲಿಡ್ಡಿ ಲ್ಯೂಕಾಸ್‌ರ 'ಯಕ್ಸ್‌ಕ್ಯೂಸ್, ಯಕ್ಸ್‌ಕ್ಯೂಸ್' ಎಂಬ ಲೇಖನದ ಕನ್ನಡಾನುವಾದ

ಸರ್ಕಾರ ಚುನಾಯಿತವಾದಾಗಲೆಲ್ಲ, ಚುನಾವಣಾ ಆಶ್ವಾಸನೆಗಳನ್ನು ಈಡೇರಿಸದಿರಲು ಹಿಂದಿನ ಆಡಳಿತದಲ್ಲಿದ್ದ ಅವ್ಯವಸ್ಥೆಯೇ ಕಾರಣವೆಂಬುದನ್ನು ಗಮನಿಸಿದ್ದೀರಾ? ಹಿಂದಿನ ಸರ್ಕಾರ ನೈಜ ಹಣಕಾಸಿನ ಪರಿಸ್ಥಿತಿಯನ್ನು ಮುಚ್ಚಿಟ್ಟಿತ್ತು. 'ತಪ್ಪು ನಮ್ಮದಲ್ಲ'. ಈಚಿನ ದಿನಗಳಲ್ಲಿ ಯಾವುದಕ್ಕೂ ಯಾರೂ ಹೊಣೆಯಲ್ಲವೇನೋ ಎನ್ನಿಸುತ್ತದೆ. ತಪ್ಪು ಯಾವಾಗಲೂ ಇತರರದ್ದೆ. ನಮ್ಮ ಪ್ರತಿಯೊಂದು ತಪ್ಪಿಗೂ ಒಂದಲ್ಲಾ ಒಂದು **ಸಬೂಬೂ** ಇದ್ದೇ ಇರುತ್ತದೆ. ಅಷ್ಟೇ ಅಲ್ಲ, ಯಾರಿಗಾದರೂ ಅನ್ಯಾಯವಾದಾಗ ಅದನ್ನು ಸರಿಪಡಿಸಿ ಅನಂತರ ಮರೆತು ಬಿಡುವುದರ ಬದಲು, ಅದರ ಬಗ್ಗೆ ಪದೇ ಪದೇ ಆಡಿ, ಯೋಚಿಸಿ, ಆತ್ಮಾನುಕಂಪವನ್ನು ವ್ಯಕ್ತಪಡಿಸುವವರೇ ಹೆಚ್ಚು. ''ಹೊಣೆ ಇಲ್ಲೆ ನಿಲ್ಲುತ್ತದೆ, ನನ್ನಿಂದ ವರ್ಗಾವಣೆಯಾಗದು'', ಎಂದು ಅಮೆರಿಕದ ರಾಷ್ಟ್ರಪತಿಯಾಗಿದ್ದ ಹ್ಯಾರಿ ಟ್ರೂಮನ್ ಹೇಳಿದ್ದು ಯಾರಿಗೂ ನೆನಪೇ ಇಲ್ಲವೆ?

ಡಾ. ಲಾರಾ ಲೆಸ್ಲಿಂಗರ್ 'ಸಬೂಬು ವಿರೋಧಿ' ಗುಂಪಿಗೆ ಸೇರಿದವರು. ಸುಮಾರು ಎರಡು ಕೋಟಿ ಶ್ರೋತೃಗಳನ್ನು ಹೊಂದಿರುವ ರೇಡಿಯೋ ಭಾಷಣಕಾರ್ತಿ ಲೆಸ್ಸಿಂಗರ್ ನೈತಿಕತೆ ಮತ್ತು ಉತ್ತಮ ನಡತೆಗೆ ಆದ್ಯ ಸ್ಥಾನ ನೀಡುತ್ತಾರೆ. ನಿಮ್ಮ ನೋವನ್ನು ಹಂಚಿಕೊಳ್ಳುವುದರಲ್ಲಾಗಲೀ, ನಿಮ್ಮ ಕುಂದಿದ ಆತ್ಮಗೌರವಕ್ಕೆ ಕಾರಣವೇನೆಂಬುದನ್ನು ಕೇಳುವುದರಲ್ಲಾಗಲೀ ಆಕೆಗೆ ಆಸಕ್ತಿಯಿಲ್ಲ. ಯೌವ್ವನದಲ್ಲಿಯ ಕೆಟ್ಟ ನಡತೆಗೆ ಬಾಲ್ಯದಲ್ಲಿ ಅನುಭವಿಸಿದ ನೋವೇ ಕಾರಣವೆಂಬ ವಾದವನ್ನು ಆಕೆ ಒಪ್ಪುವುದಿಲ್ಲ. ''ನಾನು ಬುದ್ಧಿವಾದವನ್ನು ಹೇಳುವುದಿಲ್ಲ. ಪಾಠಹೇಳುತ್ತೇನೆ, ಬೋಧನೆ ಮಾಡುತ್ತೇನೆ, ಮೂದಲಿಸುತ್ತೇನೆ'' ಎಂದು ಲೆಸ್ಸಿಂಗರ್ ಹೇಳುತ್ತಾರೆ. ಶ್ರೋತೃಗಳಿಗೆ ಆಕೆಯ ಸಂದೇಶ : ಗೋಳುಗರೆಯುವುದನ್ನು ಬಿಡಿ, ಸ್ವಾರ್ಥವನ್ನು ಕಡಿಮೆ ಮಾಡಿಕೊಳ್ಳಿ, ನಾನು ಅಗೋಚರ ಶಕ್ತಿಗಳಿಗೆ 'ಬಲಿಪಶು' ಎಂದುಕೊಳ್ಳುವುದನ್ನು ನಿಲ್ಲಿಸಿ.

ರಾನ್ ರಸೆಲ್ ಟೊರಂಟೊ ಪಟ್ಟಣದ ಪುಂಡ ಕೊಳಚೆ ಪ್ರದೇಶದಲ್ಲಿ ಕೆಲಸಮಾಡುತ್ತಿರುವ ಶಿಕ್ಷಕ. ಇಲ್ಲಿ ಮಕ್ಕಳ ಗುಂಪುಗಳು ಆಗಾಗ ಹಿಂಸಾತ್ಮಕ ಜಗಳಗಳಲ್ಲಿ ತೊಡಗುವುದುಂಟು. ''ಈ ಮಕ್ಕಳು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಾರೆ. ಕುಡುಕ ಕುಟುಂಬ, ಸರಿಯಾಗಿ ಮನೆಗೇ ಬಾರದ ತಂದೆ, ಜಗಳ ಮಾಡುವ ತಂದೆತಾಯಂದಿರು, ವಿವಾಹ ವಿಚ್ಛೇದನ ಎಂಥ ಭೀಕರ ವಾತಾವರಣ! ಅನೇಕ ಮಕ್ಕಳಿಗೆ ಜೀವನದಲ್ಲಿ ಮುಂದುವರಿಯದಿರುವುದಕ್ಕಿದು ಸಬೂಬಾಗುತ್ತದೆ. ಆದರೆ ಇದೇ ವಾತಾವರಣದಲ್ಲಿ ಬೆಳೆದ ಹಲವು ಮಕ್ಕಳು ಈ ವ್ಯವಸ್ಥೆಯಿಂದ ಹೊರಬಂದು, ಒಳ್ಳೆಯ ಶಿಕ್ಷಣ ದೊರಕಿಸಿಕೊಳ್ಳುವುದರಲ್ಲಿ ಸಫಲರಾಗಿ, ಸಮಾಜದಲ್ಲಿ ಅರಳುತ್ತಾರೆ. ಈ ಮಕ್ಕಳು ತಮ್ಮ ಬಾಲ್ಯದ ವಾತಾವರಣವನ್ನು ಜೀವನದಲ್ಲಿ ಮುಂದೆ ಬಾರದಿರುವುದಕ್ಕೆ ಸಬೂಬಾಗಿ ಉಪಯೋಗಿಸುವುದಿಲ್ಲ.'', ಎಂದು ರಸೆಲ್ ಹೇಳುತ್ತಾರೆ.

ಮುಂದುವರಿಯುತ್ತ ರಸೆಲ್, '' ಅನೇಕ ವೇಳೆ ತಂದೆತಾಯಂದಿರು ಮಕ್ಕಳ ರಕ್ಷಣೆಗೆ ಬರುತ್ತಾರೆ. ತಪ್ಪು ಮಾಡಿದಾಗಲೆಲ್ಲ ಹೀಗೆ ರಕ್ಷಣೆಗೆ ಬರುತ್ತಿದ್ದರೆ ಮಕ್ಕಳು ಜವಾಬ್ದಾರಿಯನ್ನು ಕಲಿಯುವುದಾದರೂ ಹೇಗೆ?'' ಎನ್ನುತ್ತಾರೆ. ಈ ಮಾತನ್ನು ಒಪ್ಪುತ್ತಾ, ''ಮಕ್ಕಳು ತರಗತಿಗೆ ತಪ್ಪಿಸಿಕೊಂಡಾಗ, ಮನೆಗೆಲಸ ಮಾಡದಿದ್ದಾಗ ಪೋಷಕರು ಸುಳ್ಳು ಕಾರಣಗಳನ್ನು ಕೊಡುವುದುಂಟು. ಅಷ್ಟೇ ಅಲ್ಲ ಮಕ್ಕಳ ಮನೆಗೆಲಸವನ್ನು ತಾವೇ ಮಾಡಿಕೊಟ್ಟಿದ್ದನ್ನು ಸಹ ಹಲವು ಪೋಷಕರು ಒಪ್ಪಿಕೊಂಡಿದ್ದಾರೆ ಎಂದು ಶಿಕ್ಷಕಿಯಾಗಿರುವ ರಸೆಲ್‌ನ ಪತ್ನಿ ಲೀ ಆ್ಯನ್ ಹೇಳುತ್ತಾರೆ.

ಹಾಗಾದರೆ ನಮ್ಮ ಕೃತ್ಯಗಳಿಗೆ ನಾವೇ ಜವಾಬ್ದಾರರಾಗುವುದನ್ನು ಕಲಿಯುವುದು ಹೇಗೆ ಮತ್ತು ಯಾವಾಗ?''ಮಕ್ಕಳು ಚಿಕ್ಕವರಿದ್ದಾಗಲೇ ತಮಗೇನು ಬೇಕೆಂಬುದನ್ನು ನಿರ್ಣಯಿಸಲು ಅವರಿಗೆ ಅವಕಾಶ ಕೊಡಿ. ಆದರೆ ಒಮ್ಮೆ ಮಾಡಿದ ಆಯ್ಕೆಯನ್ನು ಸುಲಭವಾಗಿ ಬದಲಾಯಿಸುವುದಕ್ಕೆ ಬಿಡಬೇಡಿ. ಮಾಡಿದ ಆಯ್ಕೆಗಳ ಪರಿಣಾಮಗಳನ್ನು ಎದುರಿಸಿ, ಅವಕ್ಕನುಗುಣವಾಗಿ ಜೀವನವನ್ನು ರೂಪಿಸಿಕೊಳ್ಳಲು ಚಿಕ್ಕ ವಯಸ್ಸಿನಿಂದಲೇ ಸಿದ್ಧರಾಗಿರಬೇಕು. ''ನಾವು ಮಾಡುವ ತಪ್ಪುಗಳಿಂದ ಪಾಠ ಕಲಿತು, ಮುಂದೆ ಹೆಚ್ಚು ಉತ್ತಮ ಆಯ್ಕೆಗಳನ್ನು ಮಾಡಲು ಇದು ಬಹಳ ಪರಿಣಾಮಕಾರಿಯಾಗುತ್ತದೆ'', ಎಂದು ಲೀ ಆ್ಯನೆ ರಸೆಲ್ ಅಭಿಪ್ರಾಯ ಪಡುತ್ತಾರೆ.

ಮಕ್ಕಳು ಏನು ಮಾಡಬೇಕು , ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಹೆಚ್ಚಿನವೇಳೆ ತಂದೆತಾಯಂದಿರೇ ತೀರ್ಮಾನಿಸುತ್ತಾರೆ. ಇದರ ಪರಿಣಾಮವಾಗಿ ಮಕ್ಕಳು ಪ್ರಾಯಕ್ಕೆ ಬಂದಮೇಲೂ ತಾವೇನು ಮಾಡಬೇಕೆಂಬುದನ್ನು ದೊಡ್ಡವರೇ ಹೇಳಬೇಕೆಂದು ನಿರೀಕ್ಷಿಸುತ್ತಿರುತ್ತಾರೆ. ಸ್ವತಂತ್ರವಾಗಿ ಯೋಚಿಸುವುದನ್ನಾಗಲೀ, ಜವಾಬ್ದಾರಿಯನ್ನು ತೆಗೆದುಕೊಳ್ಳುವುದನ್ನಾಗಲೀ ಅವರು ಕಲಿಯುವುದೇ ಇಲ್ಲ.

ಎಂದಮಾತ್ರಕ್ಕೆ ಕೇವಲ ತಪ್ಪುಗಳ ಪರಿಜ್ಞಾನದಿಂದ ಜೀವನ ಹಠಾತ್ತನೆ ಬದಲಾಗದು . ಕೆನಡಾದ ಮನಃಶಾಸ್ತ್ರಜ್ಞ ಡಾ.ಶೆಲ್ಡನ್ ಶೆಲ್ ಹೇಳುವಂತೆ, ''ಸೂಕ್ಷ್ಮ ಗ್ರಹಣಶಕ್ತಿಯಾಗಲೀ, ತಪ್ಪುಗಳ ಪರಿವೆಯಾಗಲೀ ತನ್ನಷ್ಟಕ್ಕೆ ತಾನೆ ಬದಲಾವಣೆಯನ್ನು ತರಲಾರವು. ಆದರೆ ಇವು ನಾವು ನಮ್ಮ ಕೃತ್ಯಗಳಿಗೆ ವೈಯಕ್ತಿಕ ಜವಾಬ್ದಾರಿಯನ್ನು ತೆಗೆದುಕೊಳ್ಳಲಾರಂಭಿಸುವುದಕ್ಕೆ ಸಹಾಯ ಮಾಡುತ್ತವೆ.ಇದರಿಂದ ನಡತೆಯು ಬದಲಾವಣೆಯಾಗಬಹುದು, ಜನರು ಬದಲಾಯಿಸಬಹುದು''.

ನನ್ನ ಮಗಳ ವಿಚಾರವನ್ನೇ ತೆಗೆದುಕೊಳ್ಳಿ ಇತ್ತೀಚಿನವರೆಗೂ ಅವಳು ತನ್ನ ಕೆಟ್ಟ ನಡವಳಿಕೆಗೆ ಕುಂದಿದ ಆತ್ಮವಿಶ್ವಾಸವನ್ನು ಹೊಣೆ ಮಾಡುತ್ತಿದ್ದಳು. ಅನಂತರ ಕುತೂಹಲ ಕಾರಿ ಘಟನೆಯೊಂದು ನಡೆಯಿತು. ಸ್ಥಳೀಯ ಅಂಗವಿಕಲರ ಪುನರ್ವಸತಿ ಕೇಂದ್ರವೊಂದರಲ್ಲಿ ಅವಳು ಸ್ವಯಂ ಸೇವೆಯನ್ನು ಮಾಡಲಾರಂಭಿಸಿದಳು. ಕೈಕಾಲಿಲ್ಲದವರಿಗೆ ವಾರಕ್ಕೊಮ್ಮೆ ಆಹಾರದ ಪೊಟ್ಟಣಗಳನ್ನು ಬಿಚ್ಚಿಕೊಡುವುದು, ಊಟಕ್ಕೆ ಅಣಿಮಾಡಿಕೊಡುವುದು ಇಂಥ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಾಳೆ. ಈಗವಳು ಸಂತೋಷದಿಂದಿರುತ್ತಾಳೆ. ತನ್ನ ಸ್ನೇಹಸ್ವಭಾವ ಮತ್ತು ಉಪಕಾರಶೀಲ ಮನೋವೃತ್ತಿಯಿಂದ ಪುನರ್ವಸತಿ ಕೇಂದ್ರದವರೆಲ್ಲರ ಅಚ್ಚುಮೆಚ್ಚಿನ ಗೆಳತಿಯಾಗಿದ್ದಾಳೆ.

ಆತ್ಮವಿಶ್ವಾಸ ಕಡಿಮೆಯಾಗಿರುವ ಬಗ್ಗೆ ಈಗವಳು ಗೋಳಾಡುವುದಿಲ್ಲ- ಅದನ್ನು ಗಳಿಸಿದ್ದಾಳೆ.ಅವಳ ಉದಾಹರಣೆಯು ನಮ್ಮೆಲ್ಲರಿಗೂ ಪಾಠವೊಂದನ್ನು ತೋರಿಸಿ ಕೊಟ್ಟಂತಾಗಿದೆ: ಆರೋಗ್ಯಕರ ಆತ್ಮವಿಶ್ವಾಸ ಜನ್ಮಸಿದ್ಧ ಹಕ್ಕಲ್ಲ ಅದನ್ನು ಸಂಪಾದಿಸಬೇಕು. ಆತ್ಮವಿಶ್ವಾಸವೇನಾದರೂ ಕಡಿಮೆಯಿದ್ದಲ್ಲಿ, ಅದಕ್ಕೆ ಸಂಪೂರ್ಣ ಜವಾಬ್ದಾರಿಯನ್ನು ನಾವೇ ವಹಿಸಿಕೊಂಡು, ಅದನ್ನು ಗಳಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡೋಣ. ದಮ್ಮಯ್ಯ! ಸಬೂಬು ಕೊಡುವುದನ್ನು ನಿಲ್ಲಿಸೋಣ.

ಮೊನ್ನೆ ನಾನು ಎಡವಿಬಿದ್ದು ಮಂಡಿಯನ್ನು

ತರಚಿಕೊಂಡೆ. ನಾನು ತೊಟ್ಟಿದ್ದ ಎತ್ತರದ ಹಿಮ್ಮಡಿ ಚಪ್ಪಲಿ ಒದ್ದೆಯಾದ ನೆಲದ ಮೇಲೆ ಜಾರಿತ್ತು. ಮನೆಗೆ ಹಿಂದುರಿಗಿದ ಮೇಲೆ ''ತಥ್, ಎಂಥಾ ಚಪ್ಪಲಿಯಪ್ಪಾ'' ಎಂದು ಹೇಳಿಕೊಳ್ಳದಿರಲು ನನ್ನೆಲ್ಲ ಸಂಯಮ ಶಕ್ತಿಯನ್ನು ಉಪಯೋಗಿಸಬೇಕಾಯಿತು. ಅಂಥ ಚಪ್ಪಲಿಯನ್ನು ತೊಟ್ಟ ದಡ್ಡತನ ನನ್ನದು! ತಪ್ಪು ಚಪ್ಪಲಿಯದಲ್ಲ ಹೀಗೆ ತಪ್ಪುಗಳಿಂದ ಪಾಠವನ್ನು ಕಲಿತು ನಾವು ಪ್ರಾಯಶಃ ಬೆಳೆಯಲೂ ಬಹುದೇನೋ.

''ಈ ತಪ್ಪಿಗೆ, ಈ ಅಪಘಾತಕ್ಕೆ, ಈ ಅನಾಹುತಕ್ಕೆ, ಈ ಪ್ರಮಾದಕ್ಕೆ ನಾನೇ, ನನ್ನ ದಡ್ಡತನವೇ ಕಾರಣ''-ಎಂದು ಹೆಚ್ಚು ಹೆಚ್ಚು ಹೇಳಿಕೊಳ್ಳಲು 'ಹೊಣೆ-ವರ್ಗಾವಣೆ' ಚಾಳಿಗೆ ಬಿದ್ದಿರುವ ನಮಗೆ ಇದು ಸೂಕ್ತ ಸಮಯ. ಗೋಪಾಲ ಕೃಷ್ಣ ಅಡಿಗರು ಹಾಡಿರುವಂತೆ-

ನಿನಗೆ ನೀನೇ, ಗೆಳೆಯ, ನಿನಗೆ ನೀನೇ!
ಅವರಿವರ ನಂಬುಗೆಯ ಮಳಲ ರಾಶಿಯಮೇಲೆ
ಬಾಳ ಮನೆಯನು ಮುಗಿಲಿಗೆತ್ತರಿಸಲಿಹೆಯಾ?
ನಿನಗೆ ನೀನೇ, ಗೆಳೆಯ, ನಿನಗೆ ನೀನೇ!



ಹೊರಗಿನಿಂದ ಬಂದು ನಮ್ಮನ್ನು ತುಳಿದವರನ್ನು ಮತ್ತು ತುಳಿಯುತ್ತಿರುವವರನ್ನು ಪೂಜಿಸಿ ಪಾಪಿಗಳಾಗಿದ್ದೇವೆ. ಈಗ ಕ್ಲೈಬ್ಯವನ್ನು ದೂರ ಮಾಡಬೇಕಾದ ಕಾಲ. ನಮ್ಮ ಆಲಸ್ಯವೇ ನಮ್ಮ ಮೃತ್ಯು. ಕನ್ನಡಿಗರು ಮೂಲೆ ಮೂಲೆಗಳಲ್ಲಿ ಉಗ್ರ ಚಳುವಳಿಯನ್ನು ಕೈ ಗೊಳ್ಳಬೇಕು. ಸಾಹಿತ್ಯ, ಸಂಗೀತ, ರಾಜಕಾರಣ, ಉದ್ಯೋಗ, ಸಮಾಜ ಯಾವ ಹೆಸರಿನಲ್ಲಿ ಪರಾಕ್ರಮಣ ಕಂಡುಬಂದರೂ ಕನ್ನಡಿಗರು ಎದುರಿಸಬೇಕು.

-ಅ.ನ.ಕೃ.

ಅರಣ್ಯ ಮತ್ತು ಪರಿಸರ

ಡಾ. ಕೋ. ಅ. ಕುಶಾಲಪ್ಪ,
೬೬೬ ಮೂರನೆಯ ಅಡ್ಡರಸ್ತೆ
೧ನೇ ಬ್ಲಾಕ್, ರಾಮಕೃಷ್ಣನಗರ
ಮೈಸೂರು ೫೭೦ ೦೨೩.

ನಮ್ಮ ಸೌರವ್ಯೂಹದಲ್ಲಿ ಒಂಬತ್ತು ಗ್ರಹಗಳಿವೆ. ಇವುಗಳ ಪೈಕಿ ನಮ್ಮ ಭೂಮಿಯಲ್ಲಿ ಮಾತ್ರ ಜೀವಿಗಳು, ಮತ್ತು ಜೈವಿಕ ಅಂಶಗಳಿರುವುದಾಗಿದೆ. ಇತರ ಗ್ರಹಗಳಲ್ಲಿ ಜೈವಿಕ ಅಂಶಗಳು ಇದ್ದಿರಬಹುದು. ಕಾರಣಾಂತರದಿಂದ ನಾಶವಾಗಿರಲೂಬಹುದು. ಭೂಮಿಯಲ್ಲಿರುವ ನೈಸರ್ಗಿಕ ಸಂಪತ್ತು ದಿನೇ ದಿನೇ ಕುಂದುತ್ತಾ ಬರುತ್ತಿದೆ. ಇತರ ಗ್ರಹಗಳಂತೆ ಇಲ್ಲಿಯೂ ಜೈವಿಕ ಅಂಶ ನಾಶವಾಗಬಾರದು. ಮನುಷ್ಯ ಅತಿ ಬುದ್ಧಿವಂತ ಜೀವಿ ಎಂದು ಹೆಸರು ಪಡೆದಿದ್ದರೂ, ಅಷ್ಟೇ ಭಯಂಕರ ಜೀವಿ ಎಂದು ಕುಖ್ಯಾತಿ ಕೂಡ ಪಡೆದಿದ್ದು, ಆತನ ಮುಷ್ಟಿಯಲ್ಲೇ ಇತರ ಎಲ್ಲಾ ಜೀವಿಗಳ ಬದುಕು ಇದೆ. ನಿಸರ್ಗದಲ್ಲಿ ಈ ಎಲ್ಲಾ ಜೀವಿಗಳು, ಸಸ್ಯ, ಪ್ರಾಣಿ, ನೀರು, ಮಣ್ಣು, ಗಾಳಿ ಎಲ್ಲಾ ಒಂದೊಂದು ನಿಸರ್ಗವೆಂಬ ಸರಪಳಿಯ ಕೊಂಡಿಯಂತೆ. ಇವರಲ್ಲಿ ಒಂದು ಕೊಂಡಿ ಕಡಿದರೆ ಆ ಸರಪಳಿಯೇ ಬಲಹೀನವಾಗಿ ನಾಶಹೊಂದುತ್ತದೆ. ಆದ್ದರಿಂದ ನಾವು ನಮ್ಮ ಪರಿಸರದ ಬಗ್ಗೆ ಎಚ್ಚರವಹಿಸಬೇಕಾಗಿದೆ.

ಭೂಮಿ ಸೃಷ್ಟಿಯಾದದ್ದು ಸುಮಾರು ೫೦೦ಕೋಟಿ ವರ್ಷಗಳ ಹಿಂದೆ. ಸಸ್ಯಮೂಲಗಳು ಕಾಣಿಸಿಕೊಂಡಿದ್ದು ಸಾಧಾರಣ ೨೦೦ ಕೋಟಿ ವರ್ಷಗಳ ಹಿಂದೆ. ಈಗಿನ ಸಸ್ಯಗಳು ಸುಮಾರು ೪೦ಕೋಟಿ ವರ್ಷಗಳ ಹಿಂದೆ ಕಾಣಿಸಿಕೊಂಡಿರಬೇಕು. ಅವನ್ನು ಅನುಸರಿಸಿಯೇ ಪ್ರಾಣಿಗಳ ಜನನ ಮತ್ತು ಜೀವನ. ಸಸ್ಯಗಳು ಬೆಳೆದು ಬಂದಿದ್ದರಿಂದ ವಾತಾವರಣದಲ್ಲಿ ಆಮ್ಲಜನಕ, ಉತ್ಪತ್ತಿಯಾಯಿತು. ಸಸ್ಯಗಳೇ ಈ ಭೂಮಿಯಲ್ಲಿ ನಮಗೆ ಬೇಕಾದ ಆಮ್ಲಜನಕ, ಆಹಾರ ಎಲ್ಲಾ ಒದಗಿಸುತ್ತವೆ. ಅಂಗಾರಾಮ್ಲವನ್ನು ಹೀರಿಕೊಂಡು, ನಮಗೆ ಬೇಕಾದ ಆಹಾರವನ್ನು ಉತ್ಪತ್ತಿ ಮಾಡುತ್ತವೆ. ಸಸ್ಯಗಳಿಲ್ಲದೆ ನಾವು ಬದುಕಲಾರೆವು. ಸಸ್ಯಗಳು ಭೂಮಿಯಲ್ಲಿ ಎದ್ದು ನಿಂತಿರುವುದರಿಂದ, ಮಳೆ ನೀರು ಸರಾಗವಾಗಿ ಭೂಮಿಯೊಳಗೆ ಇಂಗಿ, ಅಂತರ್ ಜಲವನ್ನು ಅಭಿವೃದ್ಧಿಗೊಳಿಸುತ್ತವೆ. ಅವು ಇಲ್ಲವಾದರೆ, ನೀರು ಭೂಮಿಯ ಮೇಲೆ ಸರಾಗವಾಗಿ ಹರಿದು, ನದಿ ಕೊಳ್ಳಗಳಲ್ಲಿ ನೆರೆ ಮತ್ತು ಮಣ್ಣು ಕೊಚ್ಚಿ ಬಂದು ಭೂಮಿಯ ಸವಕಳಿಗೆ ಕಾರಣವಾಗುತ್ತದೆ. ಹಿತಕರ ವಾತಾವರಣವೂ ಸಸ್ಯಗಳ ಕೊಡುಗೆ.

ನಾವು ವಾಸಿಸುವ ಸುತ್ತುಮುತ್ತಲ ಆವರಣವೇ ನಮ್ಮ ಪರಿಸರ. ಭೂಗ್ರಹದ ಎಲ್ಲಾ ಭಾಗಗಳಲ್ಲಿ ಜೀವಿ-ನಿರ್ಜೀವಿ ವಸ್ತುಗಳ ನಡುವೆ ಜೈವಿಕ ವಸ್ತುಗಳ ವಿನಿಮಯವಾಗಿ, ಅವುಗಳ ಪರಸ್ಪರ ಪ್ರಭಾವದಿಂದ ಪ್ರಾಕೃತಿಕವಾಗಿ ಅಸ್ತಿತ್ವದಲ್ಲಿರುವ ಜೀವದ ಆವರಣವನ್ನು ಪರಿಸರವ್ಯೂಹವೆಂದು ಕರೆಯುತ್ತೇವೆ. ಇಡೀ ವಿಶ್ವವೇ ಒಂದು ಬೃಹತ್ ಪರಿಸರವ್ಯೂಹ. ನಾವು ಮನೆಯನ್ನು ಮಾತ್ರ ಶುಚಿಯಾಗಿರಿಸುತ್ತೇವೆ. ಕಸವನ್ನು ಬೀದಿಗೆ ಎಸೆಯುತ್ತೇವೆ. ಈ ಭೂಗ್ರಹವೇ ನಾವು ವಾಸಿಸುವ ಒಂದು ದೊಡ್ಡ ಮನೆಯೆಂದು ತಿಳಿಯಬೇಕು, ಮತ್ತು ಈ ದೊಡ್ಡ ಮನೆಯೊಳಗಿನ ಪರಿಸರವನ್ನೇ ಶುಚಿಯಾಗಿಡಬೇಕು. ಇದರಿಂದ ಮಾತ್ರ ನಮ್ಮ ಬಾಳು ಸುಗಮ ಹಾಗೂ ಉತ್ತಮವಾಗುತ್ತದೆ. ಈ ಪರಿಸರ ವ್ಯೂಹದಲ್ಲಿರುವ ನಾಲ್ಕು ಮೂಲಭೂತ ಪರಿಸರ ಅಂಗಗಳೆಂದರೆ ೧. ನಿರ್ಜೀವ ವಸ್ತುಗಳು ೨. ಉತ್ಪಾದಕ ಸಸ್ಯಗಳು, ೩. ಭೋಕ್ತ ಪ್ರಾಣಿಗಳು ಮತ್ತು ೪. ವಿಭಜನಕಾರಿ ಸೂಕ್ಷ್ಮ ಜೀವಗಳು. ಈ ನಾಲ್ಕು ಮಹತ್ವ ಪೂರ್ಣ

ಅಂಗಗಳಲ್ಲಿ ಏನಾದರೂ ಏರುಪೇರಾದರೆ ಇಡೀ ಪರಿಸರವ್ಯೂಹಕ್ಕೆ ಧಕ್ಕೆಯಾಗಿ, ನಮ್ಮ ಬಾಳೇ ನಿರ್ನಾಮವಾಗಬಹುದು. ಇದರ ಸಮತೋಲನದ ಬಗ್ಗೆಯೂ ನಾವು ಎಚ್ಚರ ವಹಿಸಬೇಕಾಗಿದೆ. ಇವುಗಳ ಸಂಯುಕ್ತ ಕ್ರಿಯೆಗಳಿಂದಲೇ ಜೀವಚಕ್ರ ಮುಂದುವರಿದು ಪರಿಸರದಲ್ಲಿ ಸಮತೋಲನ ಉಂಟಾಗುತ್ತದೆ.

ಸಸ್ಯಗಳ ಸಮೂಹವೇ ಅರಣ್ಯ. ಈ ಸಸ್ಯ ಅಥವಾ ಅರಣ್ಯಗಳಿಂದಲೇ ಭೂಮಿಯಲ್ಲಿ ನೀರಿನ ಶೇಖರಣೆ ಸಾಧ್ಯ. ವಾಯುಮಂಡಲದಲ್ಲಿ ಪರಿಶುದ್ಧ ಗಾಳಿಗೆ ಅವಕಾಶ. ಅಲ್ಲದೆ ಭೂಮಿಯ ಫಲವತ್ತತೆಗೆ ಅರಣ್ಯಗಳ ಪಾತ್ರ ನಮ್ಮ ವ್ಯವಸಾಯ ವೃತ್ತಿಗೆ ಮತ್ತು ಅದರ ಅಭಿವೃದ್ಧಿಗೂ ಅಕ್ಕಪಕ್ಕದಲ್ಲಿರುವ ಅರಣ್ಯಗಳ ಪಾತ್ರ ಬಹು ಮುಖ್ಯ. ಅರಣ್ಯಗಳೇ ವ್ಯವಸಾಯದ ಸಾಕುತಾಯಿ ಎಂದಿದ್ದಾರೆ. ಗಿಡ ಮರಗಳು ತಮ್ಮ ಎಲೆಗಳನ್ನು ಭೂಮಿಗೆ ಉದುರಿಸಿ, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತವೆ. ಸಸ್ಯಗಳು ಬೇರಿನ ಸಹಾಯದಿಂದ ಭೂಮಿಯೊಳಗೆ ಅಡಗಿರುವ ಸಾರವನ್ನು ಹೀರಿ, ಎಲೆಗಳ ಮೂಲಕ ಭೂಮಿಯ ಮೇಲ್ಭಾಗಕ್ಕೆ ಬರುವಂತೆ ಮಾಡುವುದರಿಂದ ಇತರ ಭೂಮಿಯ ಮೇಲಿರುವ ಸಣ್ಣ ಸಸ್ಯಗಳಿಗೆ ಹೀರಲು ಅನುಕೂಲ ಮಾಡಿಕೊಡುತ್ತದೆ. ನೀರನ್ನು ಸಹ ಹೀರಿ, ಎಲೆಗಳ ಮೂಲಕ ವಾತಾವರಣಕ್ಕೆ ಬಿಟ್ಟು ಕೊಟ್ಟು ಈ ಪರಿಸರದಲ್ಲಿ ನಾವು ಜೀವಿಸಲು ಅನುಕೂಲವಾಗುವ ತಂಪನ್ನು ಮಾಡಿಕೊಡುತ್ತವೆ. ಅರಣ್ಯ ನಾಶದಿಂದ ನಮ್ಮ ಜೀವನಕ್ಕೆ ಧಕ್ಕೆಯು ಖಾತ್ರಿ.

ನಮ್ಮ ರಾಷ್ಟ್ರದ ಅರಣ್ಯ ನೀತಿ (೧೯೮೮) ಪ್ರಕಾರ, ದೇಶದಲ್ಲಿ ಶೇ.೩೩ರಷ್ಟು ಪ್ರದೇಶದಲ್ಲಿ ಅರಣ್ಯವಿರಬೇಕೆಂದು ನಿಗದಿಪಡಿಸಿದ್ದಾರೆ. ಆದರೆ ಈಗ ಇರುವುದು ಬರೀ ಶೇಕಡ ೨೦ರಷ್ಟು, ಅದರಲ್ಲಿ ಉತ್ತಮ ಅರಣ್ಯವಿರುವ ಪ್ರದೇಶ ಅದರ ಸುಮಾರು ಅರ್ಧದಷ್ಟು ಮಾತ್ರ ಅಂದರೆ ಶೇ.೧೧.೫. ನಮ್ಮ ಕರ್ನಾಟಕದಲ್ಲಿ ಅರಣ್ಯ ಪ್ರದೇಶ ಶೇ. ೨೦ರಷ್ಟು. ಸುಮಾರೆಲ್ಲಾ ಬರಡಾಗಿದೆ. ಅರಣ್ಯ ನೀತಿ ಪ್ರಕಾರ ಕಾಡು ಬೆಳೆಸಲು ಈಗ ಜಾಗ ಸಿಗುವುದು ಅಸಾಧ್ಯ. ಈಗ ಕಾಡು ಅಥವಾ ಅರಣ್ಯವಿರುವ ಪ್ರದೇಶ ಶೇ. ೧೬.೫ ಇದರಲ್ಲಿ ಶೇ. ೪ರಷ್ಟು ಮಾತ್ರ ರಾಷ್ಟ್ರೀಯ ಉದ್ಯಾನವನ ಹಾಗೂ ವನ್ಯಜೀವಿಗಳಿಗೆ ಮೀಸಲಾಗಿದೆ. ಜನಸಂಖ್ಯೆ ಮತ್ತು ದನಗಳ ಸಂಖ್ಯೆಯ ಏರುವಿಕೆಯಿಂದ ಅರಣ್ಯೇತರ ಪ್ರದೇಶಗಳಲ್ಲೂ ಅರಣ್ಯ ಪ್ರದೇಶಗಳಲೂ ಒತ್ತುವರಿ, ದನಗಳ ಅನಿಯಂತ್ರಿತ ಮೇವಿನಿಂದ ಕಾಡುಗಳ ಸಾಂಧ್ರತೆಯ ಕುಸಿತ, ಉತ್ತಮ ಸಸಿಗಳ ನಾಶ ದಿನೇ ದಿನೇ ಹೆಚ್ಚುತ್ತಿವೆ. ನಮ್ಮ ರಾಜ್ಯದ ಜನಸಂಖ್ಯೆ ಸುಮಾರು ೫ ಕೋಟಿ, ದನಕರುಗಳ ಸಂಖ್ಯೆ ೨.೫ಕೋಟಿ ಅಂದರೆ ನಮ್ಮ ಜನಸಂಖ್ಯೆಯ ಅರ್ಧದಷ್ಟು. ಅವುಗಳಲ್ಲಿ ಸುಮಾರು ಶೇ.೫೦ರಷ್ಟು ಅರಣ್ಯಗಳಲ್ಲೇ ಮೇಯಬೇಕು. ಇವುಗಳ ನಿಯಂತ್ರಣಕ್ಕೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಸಣ್ಣ ಸಣ್ಣ ಖಾಲಿ ಪ್ರದೇಶಗಳಲ್ಲಿ ಕಾಲ್ದಾರಿ ರಸ್ತೆ ಮತ್ತು ರೈಲು ಹಳಿಗಳ ಇಕ್ಕೆಡೆಗಳಲ್ಲಿ, ವ್ಯವಸಾಯದ ಭೂಮಿಯ ಬದುಗಳಲ್ಲಿ, ಶಾಲಾ ಕಾಲೇಜುಗಳ ಆವರಣಗಳಲ್ಲಿ, ಮನೆಮಠಗಳ ಸುತ್ತ ಗಿಡಮರಗಳನ್ನು ಬೆಳೆಸಿ, ಅರಣ್ಯವನ್ನು ಕಾಪಾಡಬೇಕಾಗಿದೆ. ಕರ್ನಾಟಕ ಸುತ್ತೋಲೆ ಪ್ರಕಾರ ಪ್ರತಿ ೪೦×೬೦ ಚದರ ಅಡಿ ನಿವೇಶನದಲ್ಲಿ ಎರಡು ಗಿಡಗಳನ್ನೂ ೫೦×೮೦ ಚದರ ಅಡಿ ನಿವೇಶನದಲ್ಲಿ ೪ ಗಿಡಗಳನ್ನು, ಒಂದು ಹೆಕ್ಟೇರಿನಲ್ಲಿ ೪೦ಗಿಡಗಳನ್ನೂ ಕಡ್ಡಾಯವಾಗಿ ಬೆಳೆಸಬೇಕಾಗಿದೆ. ಆದರೆ ಮನೆ ಸುತ್ತಲೂ ಸಿಮೆಂಟ್ ಹಾಕಿ ಗಿಡ ಬೆಳೆಸದೆ ನೀರನ್ನು ಒಳಚರಂಡಿಗೆ ಬಿಡುತ್ತಾರೆ. ಅಲ್ಲದೇ ಕರ್ನಾಟಕ ಮರ ಸಂರಕ್ಷಣೆ ಕಾಯಿದೆ ಪ್ರಕಾರ ಒಂದು ಮರ ಕಡಿದಲ್ಲಿ ಎರಡು ಗಿಡಗಳನ್ನು

ಬೆಳೆಸ ಬೇಕಾಗಿದೆ. ಅರಣ್ಯಗಳ ಬೆಳವಣಿಗೆ, ಮತ್ತು ಸಂರಕ್ಷಣೆಯಲ್ಲಿ ಜನರ ಪಾತ್ರ ಮುಖ್ಯ. ಆದ್ದರಿಂದಲೇ ಗ್ರಾಮಗಳ ಪಕ್ಕದಲ್ಲಿ ಆವೃತವಾಗಿರುವ ಅರಣ್ಯ ಪ್ರದೇಶಗಳಲ್ಲಿ ೧೯೯೩ರಿಂದ ಜಂಟಿ ಅರಣ್ಯ ಆಡಳಿತವನ್ನು ಜಾರಿಗೆ ತಂದಿದ್ದಾರೆ. ಈ ರೀತಿಯ ಆಡಳಿತವನ್ನು ಉತ್ತರಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ಯಶಸ್ವಿಗೊಳಿಸಿದ್ದಾರೆ. ಇದನ್ನು ಇತರ ಜಿಲ್ಲೆಗಳಲ್ಲಿ ಈ ವರ್ಷದಿಂದ ಜಾರಿಗೆ ತರಲು ಅನುಮಾಡಿಕೊಟ್ಟಿದ್ದಾರೆ. ರಸ್ತೆಯ ಬದಿಗಳಲ್ಲಿರುವ ಮರಗಳನ್ನು ಕಾಪಾಡಲು ಮತ್ತು ಹೊಸ ಮರಗಳನ್ನು ಬೆಳೆಸಲು 'ಪಟ್ಟಾ ಪದ್ಧತಿ' ಯನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದ್ದಾರೆ. ಆದರಂತೆ, ಮರಗಳನ್ನು , ರಸ್ತೆ ಬದಿಯಲ್ಲಿರುವ ಗ್ರಾಮಸ್ಥರಿಗೇ ಎರವಲು ಕೊಟ್ಟು ಕಾಪಾಡಲು ಆದೇಶಿಸಿ, ಅದರಲ್ಲಿ ಸಿಗುವ ಕಿರುಉತ್ಪನ್ನಗಳಾದ ಎಲೆ , ಹೂ, ಹಣ್ಣು, ಕಟ್ಟಿಗೆಗಳನ್ನು ಅವರೇ ಉಪಯೋಗಿಸಿಕೊಳ್ಳಬಹುದಾಗಿದೆ. ಕೊನೆಯಲ್ಲಿ ಸತ್ತಾಗ, ಅಥವಾ ಕಡಿದಾಗ ಅದರ ಉತ್ಪತ್ತಿಯ ಅರ್ಧಭಾಗವನ್ನು, ಅದನ್ನು ಕಾಪಾಡಿದ ಗ್ರಾಮಸ್ಥರಿಗೆ ಸಿಗುವಂತೆ ಆದೇಶಿಸಲಾಗಿದೆ.

ಪರಿಸರದ ಬಗ್ಗೆ ಮೊತ್ತ ಮೊದಲು ಎಚ್ಚರಿಸಿದವರು ನಮ್ಮ ಪ್ರಧಾನ ಮಂತ್ರಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು. ೧೯೭೨ರಲ್ಲಿ ಸ್ಟಾಲ್ಕ್‌ಹೋಂನಲ್ಲಿ ನಡೆದ ಶೃಂಗಸಭೆಯಲ್ಲಿ, ಭೂಗ್ರಹದ ಪರಿಸರ ಹದಗೆಡುತ್ತಿದೆ, ಅಭಿವೃದ್ಧಿ ದೇಶಗಳು ಪರಿಸರವನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಿ ಹಾಳು ಮಾಡುತ್ತಿದ್ದಾರೆ ಎಂದು ಪ್ರತಿಪಾದಿಸಿದರು. ಅನಂತರ ೨೦ ವರ್ಷ ಕಳೆದು ೧೯೯೨ರಲ್ಲಿ ಬ್ರೆಸಿಲ್‌ನ ರಾಯೋಡಿಜನರೋದಲ್ಲಿ ಪರಿಸರದ ಬಗ್ಗೆ ಇನ್ನಷ್ಟು ಚರ್ಚೆನಡೆದು, ಜಾಗತಿಕ ಪರಿಸರ ದಿನದ ಆಚರಣೆಗೆ ಇನ್ನಷ್ಟು ಬೆಂಬಲ ಸಿಕ್ಕಿತ್ತು. ಅಭಿವೃದ್ಧಿ ರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಪರಿಸರ ಕಾಪಾಡಲು ಬೇಕಾದ ಆರ್ಥಿಕ ನೆರವಿಗೆ ಮುಂದೆ ಬಂದರು. ಇದರಂತೆ ನಮ್ಮ ರಾಷ್ಟ್ರದ ೭ ಹುಲಿಯೋಜನೆ ಹಾಗೂ ರಾಷ್ಟ್ರೀಯ ಉದ್ಯಾನ ವನಕ್ಕೂ "ಭೂ ಪರಿಸರ ನಿಧಿಯಿಂದ ೨೮೮ ಕೋಟಿ ರೂ ಹಣದ ಸಹಾಯ ಬಂದಿದೆ. ಅದರಲ್ಲಿ ನಾಗರಹೊಳೆ ರಾಷ್ಟ್ರೀಯ ಉದ್ಯಾನ ವನವೂ ಒಂದು. ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಸುತ್ತ ಇರುವ ಹಳ್ಳಿಗರು ಅಥವಾ ಗ್ರಾಮಸ್ಥರು ತಮ್ಮ ಅರಣ್ಯ ಉತ್ಪನ್ನ ಬೇಡಿಕೆಗಳನ್ನು ಪೂರೈಸಲು ನಾಗರಹೊಳೆ ಕಾಡಿಗೆ ಹೋಗದಂತಿರಲು, ಪರಿಸರ ಅಭಿವೃದ್ಧಿ ಯೋಜನೆಯನ್ನು ಕೈಗೊಂಡಿದ್ದಾರೆ. ಇದರಂತೆ, ನಾಗರ ಹೊಳೆ ಉದ್ಯಾನವನದ ಸುತ್ತ ಇರುವ 2000 ಕುಟುಂಬಗಳಿಗೆ ಶೇ.೭೫ರಷ್ಟು ರಿಯಾಯಿತಿ ದರದಲ್ಲಿ ಎಲ್ ಪಿ ಗ್ಯಾಸ್ , ಕುಕ್ಕರು, ಗೋಬರ್ ಗ್ಯಾಸ್, ಅಸ್ತ್ರ ಒಲೆಗಳನ್ನು ಕರ್ನಾಟಕ ಅರಣ್ಯ ಇಲಾಖೆಯವರು ಒದಗಿಸಿದ್ದಾರೆ. ಉತ್ತಮ ಹಾಗೂ ಉಪಯುಕ್ತ ಸಸಿಗಳನ್ನು ಜಮೀನಿನ ಬದುಗಳಲ್ಲೂ ಅವುಗಳೊಳಗೆ ಅಂತರವಿಟ್ಟು ಕೃಷಿವನವಾಗಿ ಬೆಳೆಸಲು ಉಚಿತವಾಗಿ ಹಂಚಿದ್ದಾರೆ. ಇದರಿಂದ ಸಾಧಾರಣ ಒಂದು ಹಳ್ಳಿಯಲ್ಲಿ ವರ್ಷಕ್ಕೆ ೫೦೦೦ ಟನ್ ಕಟ್ಟಿಗೆ ಉಳಿತಾಯವಾಗುವ ಅಂದಾಜು ಮಾಡಲಾಗಿದೆ. ಮತ್ತು ನಾಗರಹೊಳೆ ಅರಣ್ಯಗಳು ಅಭಿವೃದ್ಧಿಯಾಗುವುವೆಂದು ನೀರಿಕ್ಷಿಸಲಾಗಿದೆ. ಅಲ್ಲದೆ ದನಕರುಗಳು ಕಾಡಿನೊಳಕ್ಕೆ , ಆನೆ, ಜಿಂಕೆ ಮೊದಲಾದವು ಹಳ್ಳಿಗೆ ಬರದಂತೆ ತಡೆಯಲು ಸೌರಶಕ್ತಿಯ ಬೇಲಿ ಹಾಕಿ, ಆನೆಕಂದಕಗಳನ್ನು ಕಾಡು ಹಾಗೂ ಅರಣ್ಯಗಳ ಮಧ್ಯೆ ತೋಡಿ ಗ್ರಾಮಸ್ಥರಿಗೆ ಬೇಕಾದ ಬೆಳೆ ಬೆಳೆಸಲು ಅನುಕೂಲ ಮಾಡಿಕೊಟ್ಟಿದ್ದಾರೆ. ಈ ರೀತಿ ಗ್ರಾಮಸ್ಥರೆಲ್ಲಾ ಪರಿಸರ ಅಭಿವೃದ್ಧಿ ಸಮಿತಿಯನ್ನು ಪ್ರತಿ ಹಳ್ಳಿಯಲ್ಲೂ ಸ್ಥಾಪಿಸಿ ಪರಿಸರ ಅಭಿವೃದ್ಧಿಯ

ಬಗ್ಗೆ ಕಾಳಜಿ ಹಾಗೂ ಆಡಳಿತವನ್ನು ಕೈಗೆತ್ತಿಕೊಂಡಿದ್ದಾರೆ.

ಗಿಡಮರಗಳು ಹಾಗೂ ಪ್ರಾಣಿಗಳು ಅತಿ ಸೂಕ್ಷ್ಮ ಜೀವಗಳು. ಪರಿಸರ ಕೆಟ್ಟಲ್ಲಿ ಕಾಡು ಪ್ರಾಣಿಗಳು ಸುಮಾರಾಗಿ ವಲಸೆಹೋಗಬಹುದು. ಆದರೆ ನಿಂತಲ್ಲೇ ನಿಂತಿರುವ ಮರಗಿಡಗಳು ಕೊರಗಿ ಸಾಯಬೇಕಾಗುತ್ತದೆ. ಇದರಿಂದ ನಮ್ಮ ಪರಿಸರಕ್ಕೆ ಹಾಗೂ ನಮಗೂ ಹಾಳು. ಡಾ. ದಾಸ್ ಎಂಬವರು ಈ ಮರಗಳು ಮಾಡುವ ಪರೋಕ್ಷ ಉಪಯೋಗಗಳನ್ನು ಕೂಲಂಕಷವಾಗಿ ಪರಿಶೀಲಿಸಿ. ೫೦ ವರ್ಷದ ಒಂದು ಮರ ತನ್ನ ಜೀವಿತಾವಧಿಯಲ್ಲಿ ಸುಮಾರು ೧೬.೭೫ಲಕ್ಷ ರೂಪಾಯಿಯಷ್ಟು ಬೆಲೆಯ ಉಪಯೋಗವನ್ನು ನಮಗೆ ಕೊಡುತ್ತದೆ ಎಂದು ಹೇಳಿದ್ದಾರೆ. ಅಂದರೆ ಸಾಧಾರಣ ಒಂದು ಮರ ಒಂದು ದಿನಕ್ಕೆ ರೂ. ೧೦೦ರಷ್ಟು ಬೆಲೆ ಬಾಳುವ ಉಪಯುಕ್ತ ಕೆಲಸ ಕಾರ್ಯ ಮಾಡುತ್ತವೆ ಎಂದಿದ್ದಾರೆ. ಆದರೆ ಅದನ್ನು ಕಡಿದು ಮಾರಿದರೆ ಪ್ರತ್ಯಕ್ಷವಾಗಿ ಬರುವ ಬೆಲೆ ಸುಮಾರು ೨೫೦೦೦ ಮಾತ್ರ. ಕಡಿದುದರಿಂದ ಇತರ ಎಲ್ಲ ಪರೋಕ್ಷ ಉಪಯೋಗಗಳು ಒಮ್ಮೇಲೆ ನಾಶ. ಅಲ್ಲದೆ ಇದರಿಂದ ತನಗೆ ಅಲ್ಲದೆ ಇತರ ಅಕ್ಕಪಕ್ಕದವರಿಗೂ ಸಿಗುವ ಉಪಯೋಗವೂ ಅಂತ್ಯ. ರೂ. ೨೫೦೦೦ ಹಣ ಕಳುವಾದರೆ ಭಾರಿಗದ್ದಲ ಅವನಿಗೆ ಭಾರಿ ನಷ್ಟವೆಂದು ಮನಸ್ಸಿಗೆ ತಾಪ. ಆದರೆ ನಮ್ಮ ಮೈಸೂರು ನಗರದಲ್ಲಿ ೫೦ವರ್ಷದ ಒಂದು ಮರವನ್ನು ಕಡಿದು ಬೀಳಿಸಿದರೆ ಜನರಿಗೆ ಆದ ನಷ್ಟ ಸುಮಾರು ೧೬ಲಕ್ಷ. ಆದರೂ ಅದರ ಗೋಜಿಗೆ ಹೋಗುವವರು, ಅದರ ಬಗ್ಗೆ ಕಾಳಜಿ ವಹಿಸುವವರು ಬಹಳ ಕಡಿಮೆ. ಅವಿವೇಕದಿಂದಲೂ, ಮೂಢತನದಿಂದಲೇ ನಮ್ಮ ಪರಿಸರ ಹದಗೆಡುತ್ತ ಇದೆ. ಇದರ ಬಗ್ಗೆ ಎಲ್ಲರೂ ಹೆಚ್ಚಿನ ಕಾಳಜಿ ವಹಿಸಿ, ಇತರರಿಗೆ ಮರಗಳ ಉಪಯೋಗಗಳನ್ನು ಒತ್ತಿ ಒತ್ತಿ, ಸಿಕ್ಕ ಸಿಕ್ಕ ಸಂದರ್ಭಗಳಲ್ಲಿ ಮನವರಿಕೆ ಮಾಡಿಕೊಡಬೇಕಾಗಿದೆ.

ನೀವು ವೈಯಕ್ತಿಕವಾಗಿ ಪರಿಸರ ಕಾಪಾಡಲು ಹಲವು ಕಾರ್ಯಕ್ರಮಗಳನ್ನು ಹೊಂದಾಣಿಸಿಕೊಳ್ಳಬಹುದು. ನಿಮ್ಮ ಮನೆಯಲ್ಲೇ ಉಪಯೋಗಕ್ಕೆ ಬರುವ ಗಿಡಮರಗಳಿಗೆ ಜಾಗ ಇಟ್ಟು ಬೆಳೆಸಿ. ಮನೆಯ ಪಕ್ಕ ರಸ್ತೆಯಲ್ಲೂ ಒಂದೆರಡು ಗಿಡಗಳು ನೆಟ್ಟು ಬೆಳೆಸಿ, ಉದ್ಯಾನಗಳಲ್ಲಿ ಮರಬೆಳಸಲು ಆಸಕ್ತಿ ತೋರಿಸಿ. ಕಟ್ಟಿಗೆ ಉಪಯೋಗ ಕಡಿಮೆ ಮಾಡಿ, ಕಾಗದವನ್ನು ಮಿತವಾಗಿ ಬಳಸಿ. ಮಳೆ ನೀರು ಎಲ್ಲಿ ಬೀಳುತ್ತೋ ಅಲ್ಲೇ ಭೂಮಿಯಲ್ಲೆ ಇಂಗುವಂತೆ ಮಾಡಿ ಅಂತರ್‌ಜಲ ಅಭಿವೃದ್ಧಿ ಪಡಿಸಿ ನೀರನ್ನು ಅನವಶ್ಯ ಪೋಲು ಮಾಡಬೇಡಿ. ಈ ನಿಮ್ಮ ಕಾರ್ಯಗಳಿಂದ ಗಿಡಮರ ಗಳು ಬೆಳೆದು ಪರಿಸರ ಇನ್ನಷ್ಟು ಪರಿಶುದ್ಧವಾಗುವುದು ಸಾಧ್ಯವಿದೆ.

ಪ್ರಕೃತಿಯನವರತ ಮನುಜನ ತಿದ್ದುತಿರುವಂತೆ
ವಿಕೃತಿಗೊಳಿಸುವನವನುಮಾಕೆಯಂಗಗಳ
ಭೂಕೃಷಿಕ ರಸತಂತ್ರಿ ಶಿಲ್ಪಿವಾಹನಯಂತ್ರಿ
ವ್ಯಾಕೃತಿಸರೇನವಳ ಮಂಕುತಿಮ್ಮ

ವಿಕಾಸವೇ ಬದುಕು. ಸಂಕೋಚವೇ ಮರಣ, ಪ್ರೇಮವೆಲ್ಲಾ ವಿಕಾಸ.
ಸ್ವಾರ್ಥವೆಲ್ಲ ಸಂಕೋಚ. ಆದ್ದರಿಂದ ಪ್ರೇಮವೇ ಬದುಕಿನ ಧರ್ಮ.

-ಸ್ವಾಮಿವಿವೇಕಾನಂದ

ಪುಸ್ತಕ ಪರಿಚಯ

ಜ್ಞ (ಹನಿಗವನ ಸಂಕಲನ) : ಬೆಮೆಲ್ ಕಂಪಲಪ್ಪ ;ತನುಮನ ಪ್ರಕಾಶನ, ೪೨, 'ಜೆ' ಬ್ಲಾಕ್, ೩ನೇ ತಿರುವು, ರಾಮಕೃಷ್ಣನಗರ, ಮೈಸೂರು-೨೩, ಪ್ರಥಮ ಮುದ್ರಣ : ೧೯೯೯, ಬೆಲೆ : ೨೫/-

ಇತ್ತೀಚಿನ ದಿನಗಳಲ್ಲಿ ಕನ್ನಡದಲ್ಲಿ ಕವಿತೆ ಬರೆಯದವರೇ ಇಲ್ಲ ಎಂದರೆ ಅದೊಂದು ಅತಿಶಯೋಕ್ತಿಯ ವಿಷಯವೇ ಅಲ್ಲ. ನಾಲ್ಕು ಸಾಲಿನ, ಕಡೆಯ ಪಕ್ಷ ಎರಡು ಸಾಲಿನ ಒಂದು ತುಣುಕನ್ನಾದರೂ ಬರೆದು 'ಕವಿ' ಎನಿಸಿಕೊಳ್ಳ ಬೇಕೆಂಬ ಬಯಕೆಯ ಜನರ ಸಂಖ್ಯೆ ವಿಪರೀತವಾಗಿದೆ. ಬರೆದದ್ದೆಲ್ಲ ಅಚ್ಚುಕಾಣುವ ದುರಂತ ಸ್ಥಿತಿಯನ್ನೂ ತಲುಪಿಬಿಟ್ಟಿರುವುದು ಇನ್ನೂ ಅಚ್ಚರಿ ಮೂಡಿಸುತ್ತದೆ. ಇಂಥ ಹೊತ್ತಿನಲ್ಲಿಯೂ ಅಲ್ಲೊಬ್ಬರು ಇಲ್ಲೊಬ್ಬರು ಕವಿತೆಯನ್ನು, ಕವಿತಾ ರಚನೆಯನ್ನು ಗಂಭೀರ ವಾಗಿ ಪರಿಗಣಿಸುವವರಿದ್ದಾರೆ ಎಂಬುದು ಸಮಾಧಾನ ತರುವ ಸಂಗತಿಯಾಗಿದೆ. ಆದರೆ ಅಂಥವರ ಸಂಖ್ಯೆ ಬೆರಳೆಣಿಕೆಯದು. ಚುಟುಕ, ಹನಿಗವನ, ಮಿನಿಗವನಗಳ ಮಹಾ ಪೂರವೇ ಈಗ ಕನ್ನಡದಲ್ಲಿ ಹೆದ್ದೊರೆ ಯೋಪಾದಿಯಲ್ಲಿ ನುಗ್ಗಿ ಬರುತ್ತಿದೆ. ಎಷ್ಟೋ ವೇಳೆ ಇಲ್ಲಿ ಕಾವ್ಯಾಂಶ ಹಿಂದಾಗಿ, ಹೇಳಿಕೆಯೇ ಮುಂದಾಗುವ ಅಪಾಯವಿದೆ. ಅಲ್ಲದೆ, ಹನಿಗವನಕ್ಕಿರುವ ಮಿತಿಯೇ ಆ ಕಾವ್ಯದ ಸಾಧ್ಯತೆಯನ್ನೂ ಮಿತಿಗೆ ಒಳಪಡಿಸಿಬಿಡುತ್ತದೆ. ಇಂಥ ಮಿತಿಯೊಳಗೆ ಕಾವ್ಯವನ್ನು ಅರಳಿ ಸುವವನನ್ನು ನಾವು ಹನಿಗವನಕವಿ ಎಂದು ಕರೆಯಬಹುದು. ಕೆಲವು 'ಮಿನಿಗವಿ'ಗಳಾ ದರೂ ಇಂಥ ಮಿತಿಯ ನಡುವೆ ಕಾವ್ಯದ ಮಿಂಚನ್ನು ಕಾಣಿಸಲು ಪ್ರಯತ್ನಿಸಿದ್ದಾರೆ. ಅಂಥವರಲ್ಲಿ ಬೆಮಲ್ ಕಂಪಲಪ್ಪನವರ ಹೆಸರನ್ನು ಉಲ್ಲೇಖಿಸಬಹುದು.

'ಜ್ಞ'-ಕಂಪಲಪ್ಪನವರ ಚೊಚ್ಚಲ ಹನಿಗವನ ಸಂಕಲನ. ಈ ಸಂಕಲನದಲ್ಲಿ ೧೫೪ ಹನಿಗವನ ಗಳಿವೆ, ಭಾಷೆಯನ್ನು ಕಾವ್ಯಸ್ಪರ್ಶದಲ್ಲಿ ಮಿಂಚಿಸುವ ಪ್ರಯತ್ನ ಕೆಲವು ಹನಿಗವನ ಗಳಲ್ಲಿ ಕಂಡುಬರುತ್ತದೆ. ಇಲ್ಲಿನ ಹನಿಗವನ ಗಳನ್ನು ಓದಿದಾಗ ಕೆಲವೊಮ್ಮೆ 'ಆಹ್' ಅನ್ನಿಸು ವುದುಂಟು. ಅದಕ್ಕಿಂತ ಹೆಚ್ಚಿನದನ್ನು ನಾವು ಅಪೇಕ್ಷಿಸುವಂತಿಲ್ಲ. ಹಾಗಾದರೆ ಈ ಹನಿಗವನ ಗಳಿಗೆ ಇರುವ ಉದ್ದೇಶವಾದರೂ ಏನು ಎಂಬ ಪ್ರಶ್ನೆ ನಮ್ಮಲ್ಲಿ ಮಿಂಚಿಮರೆಯಾಗಬಹುದು. ಆ ಉದ್ದೇಶ ಮಾತ್ರ ಅತ್ಯಂತ ಸಾಧಾರಣ ವಾದದ್ದು. ನಾನೂ ಬರೆಯುತ್ತಿದ್ದೇನೆ, ನೋಡಿ, ಗಮನಿಸಿ-ಎಂಬ ವಿಫಲತೆಯ ಭಾವವುಳ್ಳದ್ದು. ಈ ಭಾವನೆಯ ಮಿತಿಯನ್ನು ಮೀರಿ ಈ ಹನಿಗವನಗಳು ಹೆಚ್ಚು ದೂರ ಹೋಗಲಾರವು. ಆದರೆ ಈ ಹನಿಗವನಗಳನ್ನು ಬರೆಯುತ್ತಿರುವ ಕವಿಗೆ ಎತ್ತರಕ್ಕೆ ಏರುವ ಕಾವ್ಯ ರಚನೆ ಸಾಧ್ಯವಿದೆ ಎಂಬ ಅಂಶವನ್ನು ಕಾಣಿಸುವಂತೆ ಕೆಲವು ಹನಿಗವನಗಳಲ್ಲಿ ಕಾವ್ಯದ 'ಮಿಂಚು' ಮಿಂಚಿ ಮರೆಯಾಗುತ್ತದೆ. ಅದು ಸೊಡರಾಗ ಬೇಕಾದರೆ ಈ ಕವಿಯೂ ಕಾಯಬೇಕು, ಜೊತೆಗೆ ಕಾವ್ಯ ರಸಿಕರೂ ಕಾಯಬೇಕು.

ಇಲ್ಲಿನ ನೂರೈವತ್ತನಾಲ್ಕು ಹನಿಗವನ ಪ್ರಯತ್ನಗಳಲ್ಲಿ ಕೆಲವು ನಮ್ಮ ಚಿತ್ತವನ್ನು ಹೊಯ್ದಾಡಿಸುತ್ತವೆ. ಅಂಥ ೧೦-೧೫ Honey ಕವನಗಳು ಈ ಸಂಕಲನದಲ್ಲಿ ದೊರೆಯುತ್ತವೆ. ಒಂದೆರಡು ಹನಿಗವನಗಳನ್ನು ಗಮನಿಸಬಹುದು:

ಊಸರವಳ್ಳಿ

ಹೆಂಡತಿಯನ್ನೇ ಬೇಡವೆಂದ
ಗಂಡ
'ಹೆಂಡ ಅತಿ' ಯಾದಾಗ
ಹೆಂಡತಿ ಬೇಕೆಂದ
-ಇದು ಕುಡಿತಕ್ಕೆ ದಾಸನಾದವನೊಬ್ಬನ ಅನಿಸಿಕೆ.

Some ಪದ

ಮುಖ್ಯೋಪಾಧ್ಯಾಯರು ಹೇಳಿದ್ದು
ಕಾಜಗ
ಉಪಾಧ್ಯಾಯರು ಹೇಳಿದ್ದು ಕಾದಗ
ವಿದ್ಯಾರ್ಥಿ ಹೇಳಿದ್ದು
ಕಾಗದ

-ಎಂಬ ಕವಿತೆ ನಮ್ಮ ಶಿಕ್ಷಣರಂಗದ ಅಧೋಗತಿಯನ್ನು ಬಹಳ ಮಾರ್ಮಿಕವಾಗಿ ಚಿತ್ತಲಿಗೊಳಿಸಿದೆ.

ಜಿಪುಣ

ಎಂದೆಂದೂ ಬರದೆ
ಇಂದು ಬಂದಿದ್ದಾನೆ
ನಮ್ಮ ಮನೆಗೊಬ್ಬ
ಅತಿಥಿ
ಏಕೆಂದರೆ
ಇಂದು
ನನ್ನ ತಂದೆಯ
ತಿಥಿ

-ಎಂದು ಹೇಳುವಲ್ಲಿ ಜಿಪುಣತನದ ಪರಾಕಾಷ್ಠತೆಯ ಚಿತ್ರವಿದೆ.

ಹಣದ ಮಹಿಮೆಯನ್ನೂ ವೈದಿಕತೆಯ ನಿಜ ಕಾಳಜಿಯನ್ನೂ ಎತ್ತಿಹೇಳುವ ಕವನ 'ಮಹಿಮೆ' ಹೀಗಿದೆ:

ಬಿನ್ನಹಕೆಂದು
ಕರೆಯಲು ಹೋದಾಗ
ಬರಲೊಲ್ಲದ
ಐನೋರು
ಆಮೇಲೆ
ಬಂದರಂತೆ
ಅಪ್ಪ ಅವರ
ಜೇಬಿನೊಳಗೆ
ಇಟ್ಟಾಗ
ಐನೂರು

ಸಂಸಾರದ ಗುಟ್ಟನ್ನು ಹೇಳುವ 'Some ಸಾರ' ಎಂಬ ಕವಿತೆಯ ಸಾಲುಗಳಿವು:

ನನ್ನೆರಡು ಚಿಕ್ಕಮಕ್ಕಳು
ಮಲಗಿದ ಮೇಲೆ
ಹೆಂಡತಿಯೊಡನೆ
ಸರಸ-ಸಲ್ಲಾಪ
ಅಲ್ಲಿಯವರೆಗೂ
ಇದ್ದೇ ಇರುತ್ತದೆ
ಕಲಹ, ಸಿಡುಕೋಪ.

'ವರದಕ್ಷಿಣೆ' ಎಂಬ ಕವನ ಸಾಮಾಜಿಕ ಕ್ರೌರ್ಯದ ಒಂದು ಮುಖವನ್ನು ಪರಿಚಯಿಸುವ ಬಗೆ ಹೀಗಿದೆ:

ಹುಡುಗನೊಬ್ಬ
ಹೇಗೋ
ಮಾಡಿಕೊಂಡ
ಹುಡುಗಿಯ ಜೊತೆ
ನಿಶ್ಚಿತಾರ್ಥ
ನಂತರ
ಮದುವೆ
ನಿಲ್ಲಿಸಿದ
ಬರಲಿಲ್ಲವೆಂದು
ನಿಶ್ಚಿತ 'ಅರ್ಥ'

ಹೀಗೆ ಇಲ್ಲಿನ ಹನಿಗವನಗಳು ಕಾವ್ಯಾಸಕ್ತರನ್ನು ಸೆಳೆಯಲು ಪ್ರಯತ್ನಿಸುತ್ತಿವೆ; ಆದರೆ ನಮ್ಮನ್ನು ಇವು ಆವರಿಸಿಕೊಳ್ಳುವುದಿಲ್ಲ. ಕವಿತ್ವ ಕಾವ್ಯ ಮತ್ತು ಜೀವನದ ಬಗ್ಗೆ ಗಂಭೀರ ಕಾಳಜಿಯನ್ನು ಹೊಂದಿರುವ ಬೆಮಲ್ ಕಂಪಲಪ್ಪನವರು ಹನಿಗವನದಿಂದ ನುಣುಚಿಕೊಂಡು 'ಬನಿ'ಗವನ ಕೊಡಲಿ, ಆ ದಿಕ್ಕಿನಲ್ಲಿ ಅವರ ಕಾವ್ಯಾಸಕ್ತಿ 'ಹೊರಳಲಿ' ಎಂಬ ನಿಜ ಕಾವ್ಯಾಸಕ್ತರ ಹಾರೈಕೆ ಅರ್ಥಪೂರ್ಣವೆನ್ನಬಹುದು.

ಕೃಷ್ಣಹಾಸನ್
''ಚೈತ್ರ ಪಲ್ಲವಿ''
ನಂ.-೨೬, ಸಿಐಟಿಬಿ ೨ನೇ ಹಂತ
ಕುವೆಂಪುನಗರ,
ಮೈಸೂರು -೫೭೦ ೦೨೩

ವಸಂತಕುಮಾರ್ ಪೆರ್ಲ: ಅಭ್ಯಾಸ, ಸಾಹಿತ್ಯ ಸಂಘ(ರಿ) ಬದಿಯಡ್ಕ ಕಾಸರಗೋಡು, ಕೇರಳ, ೧೯೯೯, VI+128, ಬೆಲೆ ರೂ. ೬೦/-

೧೯೯೯ನೆಯ ಸಾಲಿನ ಕಯ್ಯಾರ ಸಾಹಿತ್ಯ ಪ್ರಶಸ್ತಿಯನ್ನು ಪಡೆದ ಸಂಶೋಧನಾ ಪ್ರಬಂಧಗಳ ಕೃತಿ ಇದು. ಈ ಕೃತಿಯಲ್ಲಿ ಒಟ್ಟು ಹನ್ನೆರಡು ಲೇಖನಗಳಿವೆ. ಪುಸ್ತಕದ ಶೀರ್ಷಿಕೆಗೆ ತಕ್ಕ ಕೃತಿ ಇದು.

ಆಕಾಶವಾಣಿಯಲ್ಲಿ ಅಧಿಕಾರಿಗಳಾಗಿರುವ ಪೆರ್ಲ ಸಂಶೋಧಕರು, ಕವಿ, ಕತೆಗಾರರು ಹಾಗೂ ಉತ್ತಮ ಬರಹಗಾರರು. ಹೊಸ ದಿಗಂತ ಪತ್ರಿಕೆಯ ಅಂಕಣ ಬರಹದ ಮೂಲಕ ಕನ್ನಡ ಓದುಗರಿಗೆ ಹೆಚ್ಚು ಪರಿಚಿತರಾದ ಪೆರ್ಲ ಅಂಕಣ ಬರಹಗಳ 'ಪ್ರಸ್ತಾಪ' ಮತ್ತು 'ವರ್ತಮಾನ' ಎಂಬ ಸಂಗ್ರಹಗಳನ್ನು ಹೊರತಂದಿದ್ದಾರೆ.

ಪ್ರಸ್ತುತ ಕೃತಿಯಲ್ಲಿ ಡಾ. ವಸಂತಕುಮಾರ ಪೆರ್ಲ, ದಕ್ಷಿಣ ಕನ್ನಡ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸದ ಶೋಧನೆ ನಡೆಸಿದ್ದಾರೆ. ಸ್ಥಳ ನಾಮಗಳ ಮೂಲಕ ಜಾತಿ ನಿರ್ದೇಶ, ಶಕ್ತಿಪೂಜೆ ಮತ್ತು ಭೂತಾರಾಧನೆಗಳ ಅಭೇದ, ಅವಳಿ ದೈವಗಳು: ಒಂದು ವಿವೇಚನೆ, ಹನಿಗವನಗಳು: ಒಂದು ಪರಿಶೀಲನೆ, ದಕ್ಷಿಣ ಕನ್ನಡ ಜಿಲ್ಲೆಯ ಅಶಕ್ತ ರಂಗಭೂಮಿ ಒಂದುಹಿನ್ನೋಟ, ದಕ್ಷಿಣ ಕನ್ನಡ ಜಿಲ್ಲೆಯ ಈ ಶತಮಾನದ ವಿಡಂಬನ ಸಾಹಿತ್ಯ, ಹಟ್ಟಿಯಂಗಡಿ ನಾರಾಯಣರಾಯರ ಅನುವಾದ ಕಾರ್ಯ: ಒಂದು ಚಿಂತನೆ, ಆಕಾಶವಾಣಿಯಲ್ಲಿ ಯಕ್ಷಗಾನ, ಪ್ರತಿಭೆಯ ಪರಿಮಳ ಸೂಸಿ ಎಳೆಯ ವಯಸ್ಸಿನಲ್ಲಿ ಕಣ್ಮರೆಯಾದ ಅರಮನಡ್ಕ ಶಂಕರ ಶಾಸ್ತ್ರಿಗಳು, ತುಳು ಕವನ ಮತ್ತು ಕಥಾ ಸಾಹಿತ್ಯ. ಒಂದು ಪರಿಶೀಲನೆ, ಗೌರಿ-ಗಣೇಶದ ಸಾಂಕೇತಿಕತೆ, ಕೆಲವು ಪದ ವಿಚಾರಗಳು-ಇವು ಈ ಸಂಕಲನ ವಿಷಯ ವ್ಯಾಪ್ತಿಯನ್ನು ಹೇಳುತ್ತವೆ.

ಸ್ಥಳನಾಮಗಳ ಮೂಲಕ ಜಾತಿ ನಿರ್ದೇಶ ಎಂಬ ಲೇಖನ ತುಂಬ ಕುತೂಹಲಕಾರಿಯಾದುದು. ಊರಿಗೆ ಇರುವ ಹೆಸರಿಗೆ ಪುರಾಣ-ಐತಿಹ್ಯಗಳು ಇರುತ್ತವೆ ಎಂಬ ಕಾರಣದಿಂದ ಸ್ಥಳ ನಾಮಗಳು ಪೌರಾಣಿಕ ಹಿನ್ನೆಲೆಯನ್ನು ಪಡೆಯುವಂತೆ ಸ್ಥಳನಾಮಗಳು ಹೇಗೆ ಸಾಮಾಜಿಕ ಹಿನ್ನೆಲೆಯನ್ನೂ ಪಡೆಯುತ್ತವೆ ಎಂಬುದನ್ನು ಇಲ್ಲಿ ನೋಡಬಹುದು. ಸ್ಥಳನಾಮಗಳ ಅಧ್ಯಯನ ಈಗೀಗ ಜನಪ್ರಿಯವಾಗುತ್ತಿರುವ ಹಿನ್ನೆಲೆಯಲ್ಲಿ ಈ ಲೇಖನ ಅನೇಕ ಒಳನೋಟಗಳನ್ನು ನೀಡುತ್ತದೆ. ಜಾನಪದೀಯ ದೃಷ್ಟಿಕೋನವನ್ನುಳ್ಳ ಅಧ್ಯಯನ ಶಕ್ತಿಪೂಜೆ ಮತ್ತು ಭೂತಾರಾಧನೆಯನ್ನು ಕುರಿತದ್ದು. ತೌಲನಿಕ ಅಧ್ಯಯನದ ದೃಷ್ಟಿ ಇಲ್ಲಿ ಸ್ಪಷ್ಟವಾಗಿದೆಯಲ್ಲದೆ ಎರಡು ಭಿನ್ನ ಆಚರಣೆಗಳ ಕವಲು ಒಂದೇ ಕಾಂಡದ್ದು ಎಂಬುದನ್ನು ಸಾಧಾರಣವಾಗಿ ಪೆರ್ಲ ಪ್ರತಿಪಾದಿಸುತ್ತಾರೆ. ಅವಳಿ ದೈವಗಳನ್ನು ಕುರಿತ ಲೇಖನ ಕುತೂಹಲಕಾರಿಯಾದುದು. ಸಾಂಸ್ಕೃತಿಕ ನಾಯಕ/ನಾಯಕಿಯರು ದೈವತ್ವಕ್ಕೆ ಏರುವ ಪರಿಗೆ ಐತಿಹಾಸಿಕ ಹಿನ್ನೆಲೆಗಳನ್ನು ಪೆರ್ಲ ಹುಡುಕುತ್ತಾರೆ. ರಂಗಭೂಮಿಗೆ ಸಂಬಂಧಿಸಿದ ಲೇಖನ ಹವ್ಯಾಸಿ ರಂಗಭೂಮಿಯ ಐತಿಹಾಸಿಕ ವಿಶ್ಲೇಷಣೆಯ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯ ರಂಗಭೂಮಿಯ ಸ್ಥಾನ ನಿರ್ದೇಶನವನ್ನು ಮಾಡುತ್ತದೆ. 'ರಂಗಕಲೆಗೆ ಸಂಬಂಧಿಸಿದಂತೆ ಯಕ್ಷಗಾನವು ಜನರ ಆಸೆ-ಅಭೀಷ್ಟಗಳನ್ನು ನೆರವೇರಿಸುತ್ತಿತ್ತಾಗಿ ಇಲ್ಲಿ ನಾಟಕ ಕಲೆ ಬೆಳೆಯಲಿಲ್ಲ'(ಪು-೪೭) ಎಂದು ಪೆರ್ಲ ಸಮಂಜಸವಾಗಿ ತರ್ಕಿಸುತ್ತಾರೆ. ಒಂದು ಅಭಿವ್ಯಕ್ತಿ ಮಾಧ್ಯಮ ಶಕ್ತಿಯುತವಾಗಿದ್ದಾಗ ಇನ್ನೊಂದು ಮಾಧ್ಯಮ ಸಮಾಜದಲ್ಲಿ ನೆಲೆಯೂರುವುದು ಅಷ್ಟು ಸುಲಭವಲ್ಲ. ಈ ಹಿನ್ನೆಲೆಯಲ್ಲಿ ಜನಪದ ರಂಗಭೂಮಿ ಮತ್ತು ಹವ್ಯಾಸಿ ನಾಟಕ ಕಲೆಗೆ ಇರುವ ವೈರುಧ್ಯ ಚರ್ಚಾಹಕವಾಗುತ್ತದೆ. ಈ ದೃಷ್ಟಿಯಿಂದ ಇಲ್ಲಿ

ಪೆರ್ಲರು ಮಾಡಿರುವ ಪ್ರಯತ್ನ ಗಮನಾರ್ಹವಾಗುತ್ತದೆ. ಆಕಾಶವಾಣಿಯಲ್ಲಿ ಯಕ್ಷಗಾನ, ಒಂದು ಕಿರು ಟಿಪ್ಪಣಿಯಾಗಿದೆ. ದೃಶ್ಯ ಮತ್ತು ಶ್ರವ್ಯ ಎರಡೂ ಆಗಿರಬೇಕಾದ ಯಕ್ಷಗಾನ ಕೇವಲ ಶ್ರವ್ಯ ಮಾಧ್ಯಮವಾಗಿ ಯಶಕಾಣುವ ಹಿನ್ನೆಲೆಯ ಚರ್ಚೆ ಇಲ್ಲಿದೆ. ಯಕ್ಷಗಾನದ ಮೂಲ-ಚೂಲ ತಿಳಿದ ಪ್ರಬುದ್ಧ ಶ್ರೋತೃವಷ್ಟೆ ಶ್ರವ್ಯ ಯಕ್ಷಗಾನವನ್ನು ಆಸ್ವಾದಿಸಬಲ್ಲ. ಮೊಟ್ಟ ಮೊದಲ ಬಾರಿಗೆ ಯಕ್ಷಗಾನದ ಬಗ್ಗೆ ತಿಳಿಯುವ ಶ್ರೋತೃವನ್ನು 'ಶ್ರವ್ಯ' ಯಕ್ಷಗಾನ ಪರಿಪೂರ್ಣವಾಗಿ ತಲುಪಬಾರದು. ಇಂಥ ಮಿತಿಯಲ್ಲಿ ಯಕ್ಷಗಾನವನ್ನು ದುಡಿಸಿಕೊಳ್ಳುವ ಬಗೆಗಿನ ನಿಲುವುಗಳು ಇಲ್ಲಿದೆ. ಗೌರಿ-ಗಣೇಶದ ಸಾಂಕೇತಿಕತೆ ಹಬ್ಬದ ಆಶಯವನ್ನು ಜನಪದ ದೃಷ್ಟಿಯಲ್ಲಿ ತೋರಿಸುತ್ತದೆ. ಕೆಲವು ಪದಗಳ ವಿಚಾರ ಲೇಖನವು ಸಾಹಿತ್ಯಕಮತ್ತು ಸ್ಥಳ ಸೂಚೀ ಪದಗಳ ಮೂಲವನ್ನು ಹುಡುಕುತ್ತದೆ. ಇದಕ್ಕೆ ಪೂರಕವಾಗಿ ಪೆರ್ಲರು ಹತ್ತಾರು ದಾಖಲೆಗಳನ್ನು ಇಟ್ಟು, ಬೇರೆ ಬೇರೆ ಕೋನಗಳಿಂದ ವಿವೇಚನೆ ನಡೆಸುತ್ತಾರೆ. 'ಮೂಲೆ ಮುಡುಕು' ಪದದ ಅರ್ಥವನ್ನು ಅವರು ಹಿಡಿಯುವ ವಿಧಾನ ಸ್ವಾರಸ್ಯಕರವಾಗಿದೆ. ಒಂದು ಪದದ ಬಗ್ಗೆ ಒಂದು ಖಚಿತ ತೀರ್ಮಾನಕ್ಕೆ ಬರುವುದು ಸುಲಭದ ಮಾತಲ್ಲ. ಸಾಹಿತ್ಯ, ಭೂಗೋಳ, ಪುರಾಣ ಇತಿಹಾಸ... ಹೀಗೆ ಅನೇಕ ಶಿಸ್ತುಗಳ ಪರಿಜ್ಞಾನ ಇದಕ್ಕೆ ಅಗತ್ಯ. ಪದಗಳ ಮೂಲ ಹುಡುಕುವ ಸಾಹಸವು ಪಾಂಡಿತ್ಯಾಪೇಕ್ಷೆಯ ಹವ್ಯಾಸ. ಈ ಕಾರಣಕ್ಕಾಗಿ ಇದು ಅಪರೂಪವೂ ಹೌದು. ಇಂಥ ಅಪರೂಪ ಕೆಲಸದಲ್ಲಿ ಪೆರ್ಲರ ಆಸಕ್ತಿ ಶಕ್ತವಾಗಿ ಕಾಣಿಸಿಕೊಳ್ಳುತ್ತದೆ. ಸಾಹಿತ್ಯಕವಾದ, ವ್ಯಕ್ತಿಚಿತ್ರಗಳನ್ನು ಕುರಿತ ಅವರ ಇತರ ಐದು ಲೇಖನಗಳು ಕೃತಿಯ ವೈವಿಧ್ಯವನ್ನು ಹೆಚ್ಚಿಸಿವೆ. ಪೆರ್ಲರು ಯಾವುದೇ ವಿಷಯವನ್ನು ಮೇಲು ಮೇಲಾಗಿ ಪ್ರಸ್ತಾಪಿಸುವುದಿಲ್ಲ. ಸಾಕಷ್ಟು ಉಲ್ಲೇಖ, ಪುರಾವೆ, ನಿದರ್ಶನಗಳೊಂದಿಗೇ ಅವರು ಮಾತಾಡುತ್ತಾರೆ. ಸಣ್ಣ ಕೃತಿಯೊಂದರಲ್ಲೇ ಪೆರ್ಲರ ಅಧ್ಯಯನಾಸಕ್ತಿ, ವ್ಯಾಸಂಗದ ಹರಹುಗಳು ಗೊತ್ತಾಗುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಕೃತಿಯನ್ನು ಓದುವ ಪುಸ್ತಕ ಪ್ರೇಮಿ ಗಂಭೀರ ಓದುಗನಾಗಿ ಬದಲಾಗುವುದರಲ್ಲಿ ಸಂಶಯ ಕಾಣುವುದಿಲ್ಲ. ಪೆರ್ಲ ವಸಂತ ಕುಮಾರ್‌ರ 'ಅಭ್ಯಾಸ' ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರಧಾನವಾಗಿ ಗ್ರಹಿಸಿದ್ದರೂ ಒಟ್ಟಾರೆ ಕನ್ನಡ ಜನ-ಸಂಸ್ಕೃತಿಯ ತಲಸ್ಪರ್ಶಿ ಅಧ್ಯಯನದ ಒಂದು ಮಾದರಿಯಾಗಿದೆ. ಡಾ. ಪೆರ್ಲರು ಅಭಿನಂದನೀಯರು.

**

ಭಾಷಾ ವಿಜ್ಞಾನ ವಿಹಾರ : ಡಾ. ಆರ್. ರಾಮಕೃಷ್ಣ. ತೇಜಸ್ವಿ ಪ್ರಕಾಶನ, ಮೈಸೂರು-೧೯೯೯, ಪುಟ-IX + 152 , ಬೆಲೆ-ರೂ ೬೦/-

ಗಂಭೀರ ಓದಿಗೆ ಒತ್ತಾಸೆಯಾಗುವ ಇನ್ನೊಂದು ಕೃತಿ ಡಾ. ಆರ್ ರಾಮಕೃಷ್ಣರ ಭಾಷಾ ವಿಜ್ಞಾನ ವಿಹಾರ. ಸಮಾಜ, ಮಾನವ ಶಾಸ್ತ್ರ, ಜಾನಪದ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಗಣನೀಯವಾಗಿ ಕೆಲಸ ಮಾಡುತ್ತಿರುವ ವಿದ್ವಾಂಸರು ಆರ್. ರಾಮಕೃಷ್ಣ. ಅವರ ಅಧ್ಯಯನದ ಈಚಿನ ಫಲ 'ಭಾಷಾ ವಿಜ್ಞಾನ ವಿಹಾರ'

ಪ್ರಾಣಿ ಸಂವಹನ, ಚಿಂಪಾಂಜಿಗಳಲ್ಲಿ ಭಾಷಾಕಲಿಕೆ, ವಾದ್ಯಗಳ ಮೂಲಕ ಸಂಕೇತ ಮತ್ತು ಸಂಭಾಷಣೆ, ಬಾಲಭಾಷೆ, ಜನಾಂಗ, ಭಾಷೆ ಮತ್ತು ಸಂಸ್ಕೃತಿ, ಸಂಗೀತ ಮತ್ತು ಧ್ವನಿ

ವಿಜ್ಞಾನ, ಜಿಪ್ಸಿ ಜನ ಮತ್ತು ಅವರ ಭಾಷೆ ಬೆಲ್ಜಿಯಮ್ ದೇಶದ ಭಾಷಾ ಸಮಸ್ಯೆ. ಬರ್ಲಿಟ್ಜ್ ಭಾಷಾ ಶಾಲೆಗಳ ಕೊಡುಗೆ ಗತಕಾಲದ ಗುಪ್ತ ನಿಧಿ ಅರಬ್ಬೀ ಮಲಯಾಳ, ಮಾನವ ಭಾಷಾ ವಿಜ್ಞಾನ, ಕೃತಕ ಭಾಷೆಗಳು, ದ್ರಾವಿಡ ಭಾಷಾ ಪರಿವಾರ, ಕನ್ನಡ ಭಾಷಾ ಸ್ವರೂಪ, ಮತ್ತು ಮಾತು-ಇವು ಲೇಖನ ಸಂಗ್ರಹದ ವ್ಯಾಪ್ತಿಯಲ್ಲಿವೆ. ಇಲ್ಲಿನ ಒಂದೊಂದು ಲೇಖನವೂ ಸ್ವಾರಸ್ಯವೂ, ಕುತೂಹಲಕರವೂ ಆಗಿದೆ.

ಭಾಷೆ ಮಾನವನಿಗೆ ಮಾತ್ರ ಸೀಮಿತ ಎಂಬ ಭ್ರಮೆಯನ್ನು ಪ್ರಾಣಿ ಸಂವಹನ ಲೇಖನವು ಹೊಡೆದೋಡಿಸುತ್ತದೆ. ಪಕ್ಷಿವರ್ಗ, ಸ್ತನಿವರ್ಗ, ಡಾಲ್ಫಿನ್, ಕೋತಿ ಮತ್ತು ವಾನರಗಳ ವಿಧಗಳಲ್ಲಿ ಬಳಕೆಯಾಗುವ ಸಂಕೇತಗಳ ದೊಡ್ಡ ಪಟ್ಟಿಯೇ ಇಲ್ಲಿದೆ. ಮಾನವ ಭಾಷೆ-ಸಂಕೇತಗಳನ್ನು ಪ್ರಾಣಿಗಳ ಅನುಕರಣೆಯಿಂದ ಕಲಿತ ಎಂಬ ವಾದಕ್ಕೆ ಇಲ್ಲಿ ಪುಷ್ಟಿದೊರಕುತ್ತದೆ. ಪ್ರಾಣಿ ಸಂಕೇತವಿಜ್ಞಾನ ಒಂದು ಅಧ್ಯಯನ ಶಿಸ್ತಾಗಿ ಬೆಳೆದುದನ್ನು ರಾಮಕೃಷ್ಣ ಗುರುತಿಸುತ್ತಾರೆ. ಈ ಅಧ್ಯಯನ 'ಮಾನವ ಭಾಷೆಗೆ ಪ್ರಾಣಿ ಭಾಷೆಯೇ ಮೂಲ, ಈ ಪ್ರಾಣಿ ಭಾಷೆಯಿಂದಲೇ ಆದಿ ಮಾನವನ ಕೇವಲ ಮುನ್ನೂರು ಪದಗಳ ಭಾಷೆ ಉಗಮಿಸಿತು ಎಂದು ಪ್ರತಿಪಾದಿಸುತ್ತದೆ!

ಬೆಲ್ಜಿಯಮ್ ದೇಶದ ಭಾಷಾ ಸಮಸ್ಯೆ ಎಂಬ ಲೇಖನ ನಮ್ಮ ಪರಿಸ್ಥಿತಿಗೂ ಅನ್ವಯವಾಗುವಂಥದ್ದು. ಬೆಲ್ಜಿಯಂ, ಫ್ಲೆಮಿಕ್ ಮತ್ತು ವ್ಯಾಲೂನರ ನಡುವಿನ ಭಾಷಿಕ ಕಾರಣಕ್ಕಾಗಿ ಒಡೆದು ಹೋಗುವ ಭೀತಿಯಲ್ಲಿದೆ. ರಾಜಕೀಯ ಕಾರಣಗಳು ಭಾಷೆಯನ್ನು ಹೇಗೆ ಬಳಸಿಕೊಂಡು ದೇಶದ ಪರಿಸ್ಥಿತಿ ಉಲ್ಬಣವಾಗಲು ಕಾರಣವಾಗಬಲ್ಲವು ಎಂಬುದನ್ನು ಈ ಲೇಖನ ಸಾಧಾರಣವಾಗಿ ಚಿತ್ರಿಸುತ್ತದೆ.

ಒಂದು ಭಾಷೆಯಿಂದ ಇನ್ನೊಂದು ಭಾಷೆಯನ್ನು ಕಲಿಯುವುದು ಒಂದು ಸಾಹಸ, ಒಂದು ಕಲೆ, ಒಂದು ಸಮಸ್ಯೆ ಕೂಡ. ಇಂಥ ಮಾದರಿಗಳು ಇಂದು ವ್ಯಾಪಾರವಾಗಿವೆ. ಬರ್ಲಿಟ್ಜ್ ಭಾಷಾಶಾಲೆಗಳ ಕೊಡುಗೆ ಎಂಬ ಲೇಖನ ಇಂಥ ಸಮಸ್ಯೆಗೆ ವರದಾನವೆನಿಸುವ ಸೂತ್ರವನ್ನು ತೋರಿಸಿದೆ. ಸಹಜ, ಸರಳ ಸಂಭಾಷಣೆ ಭಾಷೆಯನ್ನು ಸುಲಭವಾಗಿ ಕಲಿಸಬಲ್ಲುದು. ಇದಕ್ಕೆ ವ್ಯಾಕರಣ ಅನಗತ್ಯ. ಅಕ್ಷರ, ಪದ, ಪದಪುಂಜ, ವಾಕ್ಯ, ನುಡಿಗಟ್ಟು ಮುಂತಾದವನ್ನು ಸಮಯಕ್ಕೆ ತಕ್ಕಂತೆ ಬಳಸುವ ವಿಧಾನವನ್ನು ಈ ಶಾಲೆ ಕಲಿಸುತ್ತದೆ. ಬರ್ಲಿಟ್ಜ್‌ನ ಈ ಪ್ರಯತ್ನ ಜಗತ್ತಿನ ಭಾಷಾ ಕಲಿಕೆಗೆ ಹೊಸ ದಿಕ್ಕು ತೋರಿಸಿದೆ.

ಪ್ರಪಂಚದಲ್ಲಿ ಸುಮಾರು ಮೂರು ಸಾವಿರ ಭಾಷೆಗಳಿವೆ ಎಂದು ಭಾಷಾ ವಿಜ್ಞಾನಿಗಳು ಅಂದಾಜಿಸಿದ್ದಾರೆ. ಸಂವಹನದ ಸುಭಗತೆಗೆ ಭಾಷೆಯ ಅರ್ಥ ಅರಿವುದು ಅನಿವಾರ್ಯ. ಒಂದು ಭಾಷೆಯ ವ್ಯಕ್ತಿ ಇನ್ನೊಂದು ಭಾಷೆಯ ವ್ಯಕ್ತಿಯೊಂದಿಗೆ ಸಂವಹನ ನಡೆಸುವ ಸೌಕರ್ಯಕ್ಕೆ ವ್ಯಾವಹಾರಿಕ ಭಾಷೆಗಳು ಹುಟ್ಟಿಕೊಂಡಿವೆ. ಇಂಥ ಭಾಷೆಗಳನ್ನು 'ಪಿಜನ್ ಭಾಷೆಗಳು ಎನ್ನುವರು. ಇಂಥ ಕೃತಕ ಭಾಷೆಗಳು ಇಂದು ಪ್ರಪಂಚದಲ್ಲಿ ಅಸ್ತಿತ್ವ ಪಡೆದಿವೆ. 'ವಿಶ್ವಭಾಷೆ' ಎಂಬುದು ಒಂದಿದ್ದರೆ ವಿಶ್ವ ಭ್ರಾತೃತ್ವ ಸುಲಭವಾಗುತ್ತಿತ್ತು. ವಿಶ್ವ ಸಂಬಂಧ ಸುಧಾರಿಸುತ್ತಿತ್ತು ಎಂಬ ಆಶಯ ಇಲ್ಲಿದೆ, ಇಂಥ ಆಶಯದ ಪ್ರಯತ್ನ, ಬೆಳವಣಿಗೆಗಳು ಅವುಗಳ ಅಧ್ಯಯನ ಸವಿವರವಾಗಿ ಇಲ್ಲಿ ಮೂಡಿ ಬಂದಿದೆ.

ಬಾಲ ಭಾಷೆ, ಜನಾಂಗ, ಭಾಷೆ-ಸಂಸ್ಕೃತಿ ಎಂಬ ಲೇಖನಗಳು ಭಾಷೆಯ ಬಗೆಗೆ

ಒಂದು ಖಚಿತ ಪರಿಕಲ್ಪನೆ, ಸ್ವರೂಪ ಇರುವುದನ್ನು ಒತ್ತಿ ಹೇಳುತ್ತವೆ. ವಾದ್ಯಗಳ ಮೂಲಕ ಸಂಕೇತ, ಸಂಗೀತ ಮತ್ತು ಧ್ವನಿ ವಿಜ್ಞಾನ ಲೇಖನಗಳು ಸಂಶೋಧನೆಗೆ ಹೊಸ ದಿಕ್ಕನ್ನು, ವಸ್ತುವನ್ನು ತೋರಿಸುತ್ತವೆ. ಸ್ವಾರಸ್ಯಕರವಾದ, ಕುತೂಹಲಕರವಾದ ಅಧ್ಯಯನ ವಿವರಗಳು ಇಲ್ಲಿವೆ. ಭಾಷಾ ವಿಜ್ಞಾನದ ವಿದ್ವಾಂಸರಿಗೂ, ವಿದ್ಯಾರ್ಥಿಗಳಿಗೂ ಜನ ಸಾಮಾನ್ಯರಿಗೂ ಹಲವಾರು ದೃಷ್ಟಿಯಿಂದ ಉಪಯುಕ್ತವಾಗುವ ಈ ಕೃತಿಯನ್ನು ರಚಿಸಿರುವ ರಾಮಕೃಷ್ಣ ಅಭಿನಂದನೀಯರು. ಅನೇಕ ಬಾರಿ ಓದಿಸಿಕೊಳ್ಳುವ ಶಕ್ತಿ ಈ ಕೃತಿಗಿದೆ. ಮಾಹಿತಿಗಾಗಿಯೂ, ಹೊಸ ವಿಚಾರದ ಅರಿವಿಗಾಗಿಯೂ ನಮ್ಮ ಅರಿವಿಗಾಗಿಯೂ ಇಂಥ ಕೃತಿಯನ್ನು ಓದುವುದು ಅನಿವಾರ್ಯ ಎನಿಸುತ್ತದೆ. ಓದುಗನ ಸಮಯ ದಂಡವಾಗದ, ತೆರುವ ಬೆಲೆಗೆ ಮೌಲ್ಯ ತರುವ ಇಂಥ ಕೃತಿಗಳು ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆಗಳು.

ಮೇಲಿನ ಎರಡೂ ಪುಸ್ತಕಗಳು ಕನ್ನಡ ಓದುಗರಿಗೆ ಹೊಸ ಚಿಂತನೆ, ಅರಿವು ಲೋಕವನ್ನು ತೆರೆದು ತೋರುತ್ತವೆ. ಈ ಕೃತಿಗಳ ಲೇಖಕರು, ಪ್ರಕಾಶಕರು ಅಭಿನಂದನೀಯರು.

ಡಾ. ಶ್ರೀಪಾದ ಭಟ್. ಉಪನ್ಯಾಸಕ,
ಮಹಾರಾಜ ಕಾಲೇಜು,
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು

ಭಾವತರಂಗ : ಲೇಖಕರು: ಎಚ್.ಆರ್.ಚಂದ್ರವದನರಾವ್, ೨೮೭೭/೧೦,೯ನೇ ಕ್ರಾಸ್, ಚಾಮುಂಡಿಪುರಂ, ಮೈಸೂರು -೨೭೦ ೦೦೪, ಪ್ರಕಟಣೆ ಮಾರ್ಚ್-೨೦೦೦, ಪುಟ-೫೫ ಬೆಲೆ : ೨೫/-

ಹೆಚ್.ಆರ್.ಚಂದ್ರವದನರಾವ್‌ರವರು 'ಭಾವತರಂಗ' ಎಂಬ ಪುಟ್ಟ ಕೃತಿಯಲ್ಲಿ ಸುಮಾರು ೩೦ ಲೇಖನಗಳಿವೆ. ಇಲ್ಲಿ ಲೇಖಕರು ತಾವು ಕಂಡ ಅನುಭವ ಅನಿಸಿಕೆಗಳನ್ನು ಸ್ಪಷ್ಟಪಡಿಸುತ್ತಾ ವಿಶ್ಲೇಷಣೆಗೆ ಒಳಪಡಿಸಿರುವುದನ್ನು ಕಾಣಬಹುದು. ಇಲ್ಲಿರುವ ಲೇಖನಗಳು ಒಂದಲ್ಲ ಒಂದು ರೀತಿಯಲ್ಲಿ ವೈಚಾರಿಕತೆ, ವೈಜ್ಞಾನಿಕ ಮನೋಧರ್ಮ, ಮಾನವೀಯತೆಯ ಅಂಶಗಳನ್ನು ಚೆನ್ನಾಗಿ ಸವಿವರವಾಗಿ ನಿರೂಪಿಸಿದ್ದಾರೆ. ಇವರು ವ್ಯಕ್ತಪಡಿಸಿರುವ ಅನಿಸಿಕೆಗಳು ನಮ್ಮನ್ನು ಚಿಂತನೆಗೊಳಗು ಮಾಡುತ್ತವೆ. ನಮ್ಮ ಅಂಕುಡೊಂಕುಗಳನ್ನು ಸರಿಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತವೆ. ಇನ್ನು ಕೆಲವು ಲೇಖನಗಳಲ್ಲಿ ನವಿರಾದ ಹಾಸ್ಯವಿರುವುದನ್ನು ಕಾಣಬಹುದು.

ಸಾಮಾನ್ಯವಾಗಿ ಎರಡು ಬಗೆಯ ವಿಮರ್ಶೆಯ ಜ್ಞಾನವನ್ನು ಸಾಹಿತ್ಯ ನಮಗೆ ನೀಡುತ್ತದೆ. (೧) ಆತ್ಮ ವಿಮರ್ಶೆ (೨) ಲೋಕ ವಿಮರ್ಶೆ. ಆತ್ಮವಿಮರ್ಶೆ ಎಂದರೆ ತನ್ನ ದೇಹ ಮತ್ತು ಮನಸ್ಸುಗಳಲ್ಲಿರುವ ದೋಷ ದೌರ್ಬಲ್ಯಗಳನ್ನು, ಚೆನ್ನಾಗಿ ಅರಿತುಕೊಂಡು ಅವುಗಳನ್ನು ನಿವಾರಿಸಿಕೊಂಡು ಉತ್ತಮ ವ್ಯಕ್ತಿಯಾಗಿ ಬಾಳುವುದಕ್ಕೆ ಪ್ರಯತ್ನಿಸುವುದು. ಲೋಕ ವಿಮರ್ಶೆ ಎಂದರೆ ನಮ್ಮ ಕಣ್ಣ ಮುಂದಿನ ಜಗತ್ತಿನಲ್ಲಿ ಯಾವುದು ಸರಿ ? ಯಾವುದು ತಪ್ಪು ? ಯಾವುದು ನ್ಯಾಯ ? ಯಾವುದು ಅನ್ಯಾಯಾವುದು ಧರ್ಮ ಯಾವುದು ಅಧರ್ಮ ಎಲ್ಲವನ್ನು ಕೂಲಂಕುಷವಾಗಿ ತಿಳಿಯುವುದು . ಹೀಗೆ ಈ ಎರಡು ಬಗೆಯ ವಿಮರ್ಶಾ ಜ್ಞಾನವನ್ನು ಈ ಕೃತಿ

ನೀಡುವುದರ ಜೊತೆಗೆ ಮಾನವರು ಬೆಳಸಿಕೊಳ್ಳಬೇಕಾದ ಮೌಲ್ಯಯುತ ಗುಣಗಳನ್ನು ಕೂಡ ತಿಳಿಯಪಡಿಸುತ್ತದೆ.

ಈ ಕೃತಿಯ ಮೊದಲ ಲೇಖನ ''ಕಾಯಕವೇ ಕೈಲಾಸ'' ಎಂಬುದರಲ್ಲಿ ಮನುಷ್ಯ ಕಷ್ಟಪಟ್ಟು ದುಡಿಯುವುದಾದರೆ ಯಾವ ಕೆಲಸವು ಹಿರಿಯದಲ್ಲ, ಯಾವುದು ಕಿರಿಯದಲ್ಲ. ಅತ್ಯಂತ ಉನ್ನತ ವ್ಯಕ್ತಿಯಿಂದ ಅತ್ಯಂತ ಕೆಳಮಟ್ಟದ ಜಾಡಮಾಲಿಯ ಕೆಲಸವನ್ನು ಮಾಡುವುದು ಹೊಟ್ಟೆಗಾಗಿ ಎಂಬುದಾಗಿ ಸ್ಪಷ್ಟಪಡಿಸುತ್ತಾ, ರವೀಂದ್ರನಾಥ ಠಾಗೂರರ ''ಲೀವ್ ದಿಸ್ ಚಾಂಟಿಂಗ್ ಅಂಡ್ ಸಿಂಗಿಂಗ್'' ಅನ್ನುವ ಕವಿತೆಯ ಕತೆ ಯನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಈ ಕವಿತೆಯ ವಸ್ತು ಪುರೋಹಿತ-ರೈತ, ಕಲ್ಲು ಕುಟಿಗನಿಗೆ ಹೋಲಿಸಿ ಹೇಳಲಾಗಿದೆ. ಇಲ್ಲಿ ನಮಗೆ ಸ್ಪಷ್ಟವಾಗಿ ಬೆಳಕು ಚೆಲ್ಲುವ ವಿಚಾರವೆಂದರೆ ''ದುಡಿಮೆಯೇ ದೇವರು' ಎಂದು ತಿಳಿದು ತಮ್ಮ ತಮ್ಮ ಕಾರ್ಯವನ್ನು ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ಮಾಡಿದರೆ ದೇಶದ ಪ್ರಗತಿ ಸಾಧ್ಯ ಎಂಬುದು.

'ನಗು' ಎಂಬ ಪ್ರಬಂಧದಲ್ಲಿ 'ನಗು' ಯಾವ ರೀತಿಯದಾಗಿರಬೇಕು ಎಂಬುದನ್ನು ವಿವರಿಸುತ್ತಾ, ವಿವಿಧ ರೀತಿಯ ನಗುವಿನ ಬಗೆಗಳನ್ನು ಮತ್ತು ಅದರ ಪ್ರಯೋಜನಗಳನ್ನು ನವಿರಾದ ಹಾಸ್ಯದಲ್ಲಿ ವ್ಯಕ್ತಪಡಿಸಿದ್ದಾರೆ. 'ಉಡುಗೊರೆ' ಎಂಬ ಲೇಖನದಲ್ಲಿ ಉಡುಗೊರೆ ಕೊಡುವುದರ ಬಗ್ಗೆ, ಉಡುಗೊರೆ ತೆಗೆದು ಕೊಳ್ಳುವುದರ ಬಗ್ಗೆ ತಿಳಿಸುತ್ತಾ ಸಾವುಕಾರ ನಡೆಸುವ ಸಮಾರಂಭ ಮತ್ತು ಬಡವ-ಬಲ್ಲಿದ ನಡೆಸುವ ಸಮಾರಂಭದಲ್ಲಿ ವ್ಯತ್ಯಾಸವನ್ನು ಗುರುತಿಸುತ್ತಾರೆ. ಕೆಲವರು ಅಹಂಪ್ರಜ್ಞೆಯನ್ನು ಮೆರೆದು ಬೀಗುತ್ತಾ ಕೊಡುವುದಕ್ಕಿಂತ ಕೊಡದೇ ಇರುವುದು ಮೇಲು ಎನ್ನುತ್ತಾರೆ.

ಇಂದು ನಮ್ಮ ದೇಶದಲ್ಲಿ ''ಶಿಸ್ತು ಸಮಯ ಪ್ರಜ್ಞೆ, ದುಡಿಮೆ, ಪ್ರಾಮಾಣಿಕತೆ'' ಇಲ್ಲದಿರುವುದೇ ದೇಶದ ಪ್ರಗತಿಗೆ ಅಡಚಣೆ ಎಂದು 'ದೇಶದ ಪ್ರಗತಿ' ಯಲ್ಲಿ ತಿಳಿಸುತ್ತಾರೆ. ಮಕ್ಕಳಿಗೆ ಹೆಸರಿಡುವುದು ಕೂಡ ಸುಲಭದ ಕಾರ್ಯವಲ್ಲ ಎಂಬುದನ್ನು ವಿಶದಪಡಿಸುತ್ತಾ ಕೆಲವರು ಇಡುವ ಹೆಸರುಗಳು ಕೆಲವರಿಗೆ ಅನ್ವಯ ವಾಗುತ್ತವೆ, ಇನ್ನು ಕೆಲವರಿಗೆ ಅನ್ವಯವಾಗುವುದಿಲ್ಲ ಎಂಬುದನ್ನು ತುಂಬಾ ಸೊಗಸಾಗಿ ನಿದರ್ಶನ ಸಹಿತ ವಿವರಿಸಿದ್ದಾರೆ. ಮಹತ್ತರವಾದ ಒಂದು ಉದ್ದೇಶವನ್ನು ಸಫಲಗೊಳಿಸಲು ಅಸಾಧ್ಯ ಎಂದು ತೋರಿದರೂ ಧೈರ್ಯದಿಂದ ಬಿಡದೇ ಮಾಡುವ ಪ್ರಯತ್ನವನ್ನು ''ಭಗೀರಥ'' ಎಂಬ ಪ್ರಬಂಧದಲ್ಲಿ ತುಂಬಾ ಸೊಗಸಾಗಿ ನಿರೂಪಿಸುತ್ತಾ, ಯಾವುದೇ ಕಾರ್ಯವಾಗಲಿ ಅಂಜಬಾರದು, ಧೈರ್ಯದಿಂದ ಕೆಲಸ ಮಾಡಬೇಕು ಎಂದು ಹೇಳುತ್ತಾರೆ. ಓದುವ ಹವ್ಯಾಸ ಎಂಬಲ್ಲಿ ಇಂದು ಕಂಪ್ಯೂಟರ್ ಯುಗವಾಗಿರುವುದರಿಂದ ಬೇಕಾದಷ್ಟು ವಿರಾಮ ನಮಗೆ ಸಿಕ್ಕಿದೆ. ದೊರಕಿದ ವಿರಾಮವನ್ನು ಓದುವ ಹವ್ಯಾಸದ ಮೂಲಕ ಸಾರ್ಥಕಪಡಿಸಿಕೊಳ್ಳಬೇಕು ಎಂದು ಸೂಚಿಸುತ್ತಾರೆ.

ಇಂದು ಸರಿಸುಮಾರು ಜನರು ಅಂತರಂಗದಲ್ಲಿ ಒಂದು, ಬಹಿರಂಗದಲ್ಲಿ ಇನ್ನೊಂದು ಇಟ್ಟುಕೊಂಡು , ಭಾಷಣ ಬಿಗಿಯುತ್ತಾರೆ. ಇದು ವಂಚನೆ. ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ವೇದಿಕೆಮೇಲೆ ಭಾಷಣ ಬಿಗಿಯುವ ನಾಯಕರು, ತಮ್ಮ ಮನೆಯಲ್ಲಿರುವ ಸ್ತ್ರೀಯರಿಗೆ ಸ್ವಾತಂತ್ರ್ಯ ಕೊಟ್ಟಿರುವುದಿಲ್ಲ. ಆಡಿದಂತೆ ಮಾಡಿದಾಗಲೇ ನಮ್ಮ ಮಾತಿಗೆ ತೂಕ, ಬೆಲೆ. ಉಪದೇಶಕ್ಕಿಂತ ಆಚರಣೆ ಮೇಲು; ಹೇಳುವುದಕ್ಕಿಂತ ಹೇಳಿ

ದಂತೆ ಮಾಡುವುದು ಮುಖ್ಯ. ಇದನ್ನು ಪ್ರತಿಯೊಬ್ಬರು ಮೈಗೂಡಿಸಿಕೊಂಡರೆ ಉತ್ತಮ ಮಾನವರಾಗಲಿಕ್ಕೆ ಸಾಧ್ಯವಿದೆ ಎಂಬುದು ಲೇಖಕರ ಆಶೆಯಾಗಿದೆ.

ನಾವೆಲ್ಲರು ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜುಗಳಲ್ಲಿ ಬಹಳ ವಿಷಯಗಳನ್ನು ಹೇಳಿಕೊಡುವುದರ ಜೊತೆಗೆ ಅವರಿಗೆ ಒಳ್ಳೆಯ ನಡವಳಿಕೆ, ಸತ್ಸಂಪ್ರದಾಯ ಹೇಳಿಕೊಡಬೇಕು. ಹೇಳಿಕೊಡದಿದ್ದರೆ ಅವರು ಪಶುವಿನಂತೆ ವರ್ತಿಸುತ್ತಾರೆ. ಆದ್ದರಿಂದ ಎಲ್ಲರೂ ಉತ್ತಮ ಮೌಲ್ಯವನ್ನು ಬೆಳಸಿಕೊಳ್ಳಬೇಕೆಂದು 'ಸಂಪ್ರದಾಯ' ಎಂಬ ಲೇಖನದಲ್ಲಿ ಅಭಿವ್ಯಕ್ತ ಪಡಿಸಿದ್ದಾರೆ. ಒಬ್ಬ ವ್ಯಕ್ತಿ ಕೆಲಸದಿಂದ ನಿವೃತ್ತಿಯಾದಾಗ ಏನೊ ದೊಡ್ಡ ಆಸ್ತಿ ಕಳೆದುಕೊಂಡ ಹಾಗೆ ದುಃಖಗೊಳ್ಳುತ್ತಾನೆ. ಕೆಲಸದಿಂದ ನಿವೃತ್ತಿ ಹೊಂದುವುದು ಸ್ವಾಭಾವಿಕ ಎಂದವರು ತಿಳಿಯಬೇಕು. ಅದಕ್ಕಾಗಿ ನಿವೃತ್ತಿಯಾದ ಮೇಲೆ ಯಾವುದಾದರೂ ಹವ್ಯಾಸವನ್ನು ರೂಢಿಸಿ ಕೊಳ್ಳಬೇಕು. ಹೆಚ್ಚು ಕಾಲ ಓದುವ, ಬರೆ ಯುವ ಪರಿಪಾಠ ಇರಿಸಿಕೊಂಡವರಿಗೆ ವೇಳೆ ಸುಲಭವಾಗಿ ಕಳೆಯುತ್ತದೆ ಎಂಬ ಅವರ ಸಲಹೆ ಉಚಿತವೆನಿಸುತ್ತದೆ.

ಪರಸರದ ಬಗ್ಗೆ ವಿವರಣೆ ಕೊಡುತ್ತಾ ಪರಿಸರ ಮಾಲಿನ್ಯವನ್ನು ಹತೋಟಿಯಲ್ಲಿಟ್ಟು ಕೊಳ್ಳದಿದ್ದರೆ ಮಾನವ ಜನಾಂಗದ ಅಳಿವು ಶೀಘ್ರ ಎಂದು ಹೇಳಿ ಭಾರತ ಮತ್ತು ಸಿಂಗಾಪುರ ಪರಿಸರಗಳ ಬಗೆಗಿನ ವಿಭಿನ್ನತೆಯನ್ನು ಎತ್ತಿ ತೋರಿಸಿದ್ದಾರೆ. 'ಮೃತ್ಯುಭಯ' -ಎನ್ನುವ ಪ್ರಬಂಧದಲ್ಲಿ ಕತ್ತಲನ್ನು ಕಂಡರೆ ಮಕ್ಕಳು ಭಯಪಡುವಂತೆ ವಯಸ್ಸಾದವರಿಗೆ ಯಮನ ಭಯ ಜಾಸ್ತಿ ಎಂದು ಹೇಳುತ್ತಾರೆ. ಆದ್ದರಿಂದ ಅಂತ್ಯ ಬರುವುದರೊಳಗೆ ಏನಾದರೂ ಒಳ್ಳೆಯ ಕಾರ್ಯಮಾಡಬೇಕು. ಕಡೆಯ ಪಕ್ಷ ಒಳ್ಳೆಯದನ್ನು ಮಾಡಲು ಸಾಧ್ಯವಾಗದಿದ್ದರೆ ಇತರರಿಗೆ ತೊಂದರೆಕೊಡಬಾರದು ಎಂಬ ಅವರ ಮಾತು ತುಂಬಾ ಉಚಿತವೆನಿಸುತ್ತದೆ. ಇಂದು ಕೆಲವರಿಗೆ ಇಷ್ಟಪಟ್ಟ ಕೆಲಸ ಸಿಕ್ಕುವುದಿಲ್ಲ, ಬೇರೆ ಕೆಲಸ ಸಿಕ್ಕಿದರೂ ತನಗೆ ಈ ವೃತ್ತಿಯಲ್ಲಿ ತೃಪ್ತಿಇಲ್ಲ ಎಂದು ಗೊಣಗಿಕೊಂಡು ಕೆಲಸ ಮಾಡುತ್ತಾರೆ. ಪಾಲಿಗೆ ಬಂದ ಕೆಲಸವನ್ನು ಮೊದಲು ಪ್ರೀತಿಸಬೇಕು. ಅದರಲ್ಲಿ ಆನಂದ, ಆಸಕ್ತಿ, ಶ್ರದ್ಧೆ ಉತ್ಸಾಹ- ಎಲ್ಲವನ್ನು ಹೊಸ ಕೆಲಸದಲ್ಲಿ ತೋರಿಸಬೇಕು. ಆಗ ನಾವು ಮಾಡುವ ಕೆಲಸದಲ್ಲಿ ತೃಪ್ತಿಯನ್ನು ಕಾಣಬಹುದು ಎನ್ನುವ ತೀರ್ಮಾನ ಸೂಕ್ತವಾದ್ದದೇ.

ನಿಜವಾದ ದೇಶಾಭಿಮಾನಿ ದೇಶಭಕ್ತ ಹೇಗಿರಬೇಕೆಂದರೆ ತನ್ನ ಮಾತೃಭೂಮಿಯನ್ನಲ್ಲದೆ ನೆರೆನಾಡಿನವರನ್ನು ಪ್ರೀತಿಸುವಂತಿರಬೇಕು. ಅವರ ರಾಷ್ಟ್ರಪ್ರೇಮ ವಿಶ್ವ ಪ್ರೇಮಕ್ಕೆ ತಿರುಗಿ ವಿಶ್ವಮಾನವರಾಗಬೇಕು. ಆಗ ಮಾತ್ರ ನಿಜವಾದ ದೇಶಾಭಿಮಾನ ಬೆಳೆಯಲು ಸಾಧ್ಯ ಎಂಬುದನ್ನು ನಿದರ್ಶನ ಸಹಿತ ಸೊಗಸಾಗಿ ನಿರೂಪಿಸುತ್ತಾರೆ. ಆರೋಗ್ಯದ ಬಗ್ಗೆ ಬರೆಯುತ್ತ ದೈಹಿಕ- ಆರೋಗ್ಯಕ್ಕಿಂತ ಮಾನಸಿಕ ಆರೋಗ್ಯ ಅಷ್ಟೇ ಮುಖ್ಯ ಎಂದು ಹೇಳುತ್ತಾರೆ. ಮಾನವರಲ್ಲಿ ಸಣ್ಣಪುಟ್ಟ ಅಸಮಾನತೆಗಳು ಕಂಡು ಬರುತ್ತವೆ. ಒಬ್ಬವ್ಯಕ್ತಿ ರಾಕ್ಷಸನಾಗಬೇಕಾದರೆ ಅಥವಾ ಸಂತನಾಗಬೇಕಾದರೆ ಅವನಲ್ಲಿ ಹರಿಯುವ ವಂಶವಾಹಿನಿ ಗುಣವಲ್ಲ, ಬದಲು ವಿದ್ಯೆ ಹಾಗೂ ಪರಿಸರ ಎಂಬ ಮಾತು ಸತ್ಯವಾದುದಾಗಿದೆ. ಚಿಂತೆಯ ಬಗ್ಗೆ ಹೇಳುತ್ತಾ ಚಿತೆಯನ್ನು ಸುಡಲು ಅಗ್ನಿಬೇಕಾದರೆ ಚಿಂತೆ ಬದುಕಿರುವವರನ್ನೇ ಸುಟ್ಟುಹಾಕುತ್ತದೆ, ಆದ್ದರಂದ ಚಿಂತೆ ಒಳ್ಳೆಯದಲ್ಲ ಎಂದು ಹೇಳುತ್ತಾರೆ. 'ಶಿಕ್ಷೆ' ಕೊಡುವುದರ

ಬಗ್ಗೆ ತಿಳಿಸುತ್ತಾ ನಾಗರಿಕರಾದ ನಾವು ಮಕ್ಕಳನ್ನೇ ಆಗಲಿ ಯಾರನ್ನೇ ಆಗಲಿ ಆತ್ಮಾಭಿಮಾನಕ್ಕೆ ಚ್ಯುತಿಬರುವಂತೆ ನಡೆಸಿಕೊಳ್ಳಬಾರದು.

ಇಂದು ಸರಿಸುಮಾರು ಎಲ್ಲ ಜನರಿಗೂ ಹಣದ ಮೇಲಿರುವ ಆಸೆಗಿಂತ ಹೆಚ್ಚು ಆಸೆ ಬೇರೆ ಇನ್ನಾವುದರ ಮೇಲೂ ಇಲ್ಲ. ಹೆಚ್ಚು ಜನ ಕಡಿಮೆಕಾಲದಲ್ಲಿ ಹೆಚ್ಚು ಹಣ ಸಂಗ್ರಹಿಸುವ ಉದ್ದೇಶ ಇಟ್ಟುಕೊಂಡಿರುತ್ತಾರೆ. ಇದರಿಂದ ಭ್ರಷ್ಟಾಚಾರ, ಲಂಚಗುಳಿತನ ತಾಂಡವಾಡುತ್ತಿವೆಯೆಂಬ ಸತ್ಯವನ್ನು ಲೇಖಕರು 'ಹಣದ ಗಳಿಕೆ' ಎಂಬ ಪ್ರಬಂಧದಲ್ಲಿ ಹೊರಗೆಡವಿದ್ದಾರೆ. ಅದೃಷ್ಟದ ಬಗ್ಗೆ ತಿಳಿಸುತ್ತಾ ಅದೃಷ್ಟವನ್ನು ಯಾವತ್ತು ಕೂಡ ಕಾಯುತ್ತಕೂರದೆ ದುಡಿಮೆ ಮಾಡಿದರೆ ಮಾತ್ರ ಫಲ ಮತ್ತು ಯಶಸ್ಸು ಖಂಡಿತ ದೊರೆಯುತ್ತದೆ ಎಂಬ ಇಲ್ಲಿಯ ಸತ್ಯ ಉಚಿತವಾಗಿದೆ. ಸಿನಿಮಾ ಸಂಗೀತಗಳ ವೈಭವೀಕರಣದಿಂದ ಯುವ ಪೀಳಿಗೆಯ ಮೇಲೆ ಪರೋಕ್ಷವಾಗಿ ಆಗುತ್ತಿರುವ ದುಷ್ಪರಿಣಾಮಗಳನ್ನು ಚೆನ್ನಾಗಿ ನಿರೂಪಿಸಿದ್ದಾರೆ.

ಕೃತಜ್ಞತೆ-ಕೃತಘ್ನತೆ' ಎನ್ನುವ ಪ್ರಬಂಧದಲ್ಲಿ ಇವುಗಳ ಅರ್ಥವನ್ನು ವಿವರಿಸಿ, ಮಹಾತ್ಮರು, ಪ್ರವಾದಿಗಳು, ಧರ್ಮಸಂಸ್ಥಾಪಕರು ಉಪದೇಶಿಸಿರುವ ವಾಣಿಗಳನ್ನು ಎಲ್ಲರು ಜ್ಞಾಪಕದಲ್ಲಿಟ್ಟುಕೊಳ್ಳಬೇಕು ಎಂಬುದಾಗಿ ವಿಶದಪಡಿಸುತ್ತಾರೆ. ದ್ವೇಷದಿಂದ ನಾವು ಏನನ್ನು ಸಾಧಿಸಲಾರೆವು, ನಮ್ಮೆಲ್ಲರ ಮೃಗೀಯಗುಣಗಳು ನಾಶವಾಗಬೇಕು ಎನ್ನುತ್ತಾರೆ. ಹಾಗೆಯೇ ಸಾಮಾಜಿಕ ಅನಿಷ್ಟಗಳಾದ ಅಸ್ಪೃಶ್ಯತೆ, ನಿರಕ್ಷರತೆ, ಭ್ರಷ್ಟಾಚಾರ, ವರದಕ್ಷಿಣೆ ಇವೆಲ್ಲ ಪೂರ್ಣ ತೊಲಗಬೇಕು ಎಂಬ ಅವರ ನಿಲುವು ಸತ್ಯವಾಗಿದೆ.ಇಂದು ಬಹಳಷ್ಟು ಜನ ಸೋಲು-ಗೆಲವುಗಳನ್ನು ಸಮಭಾವನೆಯಿಂದ ನೋಡುವುದಿಲ್ಲ. ನಮ್ಮ ಜನ ಜಯಗಳಿಸಿದಾಗ ಹಿಗ್ಗಿ ಕುಣಿದು ಕುಪ್ಪಳಿಸುತ್ತಾರೆ, ಸೋತಾಗ ಪ್ರಪಂಚದಲ್ಲಿರುವ ದುಃಖವೆಲ್ಲಾ ತಮಗೆ ಬಂದಿರುವಂತೆ ಆಡುತ್ತಾರೆ. ಹೀಗಾಗಬಾರದು ಯಾವುದೇ ಕೆಲಸವನ್ನು ಮಾಡಬೇಕಾದರೆ ಸತತ ಪ್ರಯತ್ನ ಬಹಳ ಮುಖ್ಯ ಎಂದು ಸ್ಪಷ್ಟಪಡಿಸುತ್ತಾ, ಸತತ ಪ್ರಯತ್ನಕ್ಕೆ ಗೆಲವು ಇದ್ದೇ ಇದೆ ಎಂಬ ಅವರ ಅಭಿಪ್ರಾಯ ಸಮ್ಮತವಾದುದಾಗಿದೆ.

ಕೊನೆಯ ಮೂರು ಲೇಖನಗಳಾದ ''ಇನ್ನೊಬ್ಬರಿಗಾಗಿ ಬದುಕು'' ಅಸಮಾನತೆಗೆ ಕಾರಣ'' ''ಸತ್ಯಾಗ್ರಹ''ದಲ್ಲಿ ವ್ಯಕ್ತಿಯ ನೆಲೆ ಬೆಲೆಗಳನ್ನು ವಿಶದಪಡಿಸುತ್ತಾರೆ. ಮನುಷ್ಯ ಹುಟ್ಟಿದ ಮೇಲೆ ಒಂದು ದಿನ ಸಾಯಲೇಬೇಕು. ವ್ಯಕ್ತಿ ಎಷ್ಟು ವರ್ಷ ಬದುಕಿದ ಅನ್ನುವುದು ಮುಖ್ಯವಲ್ಲ; ಎಂತಹ ಜೀವನವನ್ನು ನಡೆಸಿದ ಅನ್ನುವುದು ಮುಖ್ಯ ಎಂಬ ಮಾತು ತುಂಬ ಅರ್ಥಪೂರ್ಣವಾಗಿದೆ. ಅಸಮಾನತೆಗೆ ಕಾರಣವನ್ನು ತಿಳಿಸುತ್ತಾ ಇಂದು ಎಲ್ಲರೂ ಸಮಾನರು ಎಂದು ಹೇಳುತ್ತಿದ್ದರೂ ಕೆಲವರು ಪರಿಶಿಷ್ಟವರ್ಗಕ್ಕೆ ಸೇರಿದ ಜನರನ್ನು, ಹಿಂದುಳಿದ ಜಾತಿಯವರನ್ನೂ, ಹೆಂಗಸರನ್ನು ಧರ್ಮದ ಹೆಸರಿನಲ್ಲಿ , ಜಾತಿಯ. ಹೆಸರಿನಲ್ಲಿ, ಪದ್ಧತಿಯ ಹೆಸರಿನಲ್ಲಿ ತುಳಿಯುತ್ತಾ ಬಂದಿರುವುದನ್ನು ಬಹಳ ಕಟುವಾಗಿ ಟೀಕಿಸಿದ್ದಾರೆ. ''ಸತ್ಯಾಗ್ರಹ'' ಎನ್ನುವ ಪ್ರಬಂಧದಲ್ಲಿ ಮಹಾತ್ಮ ಗಾಂಧಿ ಜಗತ್ತಿಗೆ ಕೊಟ್ಟ ಮಹಾನ್ ಕೊಡುಗೆ ಎಂದರೆ ಸತ್ಯಾಗ್ರಹ. ದೈಹಿಕವಾಗಿ ದುರ್ಬಲವಾಗಿರುವವರು ಕೂಡ ಅನ್ಯಾಯದ ವಿರುದ್ಧ ಸತ್ಯಾಗ್ರಹ ಹೂಡಿ ಜಯಗಳಿಸಬಹುದೆಂದು ತೋರಿಸಿ ಕೊಟ್ಟಿದ್ದಾರೆ ಎಂಬುದನ್ನು ವಿಶದಪಡಿಸುತ್ತಾರೆ. ''ಇಂತಹ ವ್ಯಕ್ತಿ ಜಗತ್ತಿನಲ್ಲಿದ್ದರೇ ಎಂದು ಮುಂದಿನ ತಲೆ ಮಾರು ಅನುಮಾನಿಸಿದರೆ ಆಶ್ಚರ್ಯವಿಲ್ಲ ಎನ್ನುತ್ತಾರೆ'' ಎಂಬ ಐನ್‌ಸ್ಟೀನ್‌ನ ಅಭಿಪ್ರಾಯದೊಡನೆ ಈ ಪ್ರಬಂಧವನ್ನು ಮುಕ್ತಾಯ ಮಾಡುತ್ತಾರೆ.

ಈ ಕೃತಿಯ ಭಾಷೆ ತುಂಬ ಸರಳವಾದ

ಗದ್ಯದಲ್ಲಿದೆ. ಎಲ್ಲಿಯೂ ಓದುಗರಿಗೆ ತೊಡಕಾಗಿದೆ, ಕೃತಿಯಲ್ಲಿ ಬರುವ ಕೆಲವು ಅಂಶಗಳು ಓದುಗರನ್ನು ಚಿಂತೆನೆಗೆ ಒಳಗುಮಾಡಿ ಅವರ ಅಂಕುಡೊಂಕುಗಳನು ಸರಿಮಾಡಿಕೊಳ್ಳಲು ಸಹಾಯ ಮಾಡುವಲ್ಲಿ ಈ ಕೃತಿ ಯಶಸ್ವಿಯಾಗಿದೆ. ಅಲ್ಲಲ್ಲಿ ಆಂಗ್ಲ ಕವಿಗಳಿಂದ ಆರಿಸಿದ ಭಾಗಗಳು, ದಾರ್ಶನಿಕರ ಮಹಾತ್ಮರ ವಾಣಿಗಳು ವಿಶೇಷವಾಗಿ ಬರುವುದರಿಂದ ಲೇಖಕರ ಜ್ಞಾನದ ವಿಸ್ತಾರ ವೇದ್ಯವಾಗುತ್ತದೆ. ಇಲ್ಲಿ ಮುಖ್ಯವಾಗಿ ಒಬ್ಬ ಮನುಷ್ಯ ಪರಿಪೂರ್ಣನಾಗಿ ಬದುಕಲು ಬೇಕಾದ ಎಲ್ಲ ಅಂಶಗಳನ್ನು ಸವಿವರವಾಗಿ ನೀಡಿರುವುದರಿಂದ ನಮ್ಮಲ್ಲಿರುವ ದೋಷ, ದೌರ್ಬಲ್ಯಗಳನ್ನು ಸರಿಪಡಿಸಿಕೊಳ್ಳಲು ಈ ಕೃತಿ ಸಹಾಯ ಮಾಡುತ್ತದೆ. ಈ ದೃಷ್ಟಿಯಿಂದ ಯುವಕರು ಮತ್ತು ವಿದ್ಯಾರ್ಥಿಗಳು ಈ ಕೃತಿಯನ್ನು ಓದಿ, ಮನನ ಮಾಡಿಕೊಳ್ಳುವುದು ಮೇಲು.

ಟಿ.ಕೆ. ಕೆಂಪೇಗೌಡ
ಕನ್ನಡ ಉಪನ್ಯಾಸಕ
ಶ್ರೀ ವಿಶ್ವ ಕವಿ ಕುವೆಂಪು ಪ್ರಥಮ
ದರ್ಜೆಕಾಲೇಜು, ಜಯಲಕ್ಷ್ಮೀಪುರಂ,
ಮೈಸೂರು-೧೨

ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ!
ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೆ!
ನಮ್ಮ ತಪ್ಪನೆನಿತೊ ತಾಳ್ವೆ,
ಅಕ್ಕರೆಯಿಂದೆಮ್ಮ ನಾಳ್ವೆ;
ನೀನೆ ಕಣಾ ನಮ್ಮ ಬಾಳ್ವೆ
ನಿನ್ನ ಮರೆಯಲಮ್ಮೆವು-
ತನು ಕನ್ನಡ, ಮನ ಕನ್ನಡ, ಧನ ಕನ್ನಡವೆಮ್ಮವು.
-ಎಂ. ಗೋವಿಂದ ಪೈ

ಹೊತ್ತಿತೋ ಹೊತ್ತಿತು
ಕನ್ನಡದ ದೀಪ
ಮುಗಿಯಿತೋ ಮುಗಿಯಿತು
ಶತಮಾನಗಳ ತಾಪ
-ಕಾವ್ಯಾನಂದ(ಸಿದ್ದಯ್ಯ ಪುರಾಣಿಕ)

ಕಾರ್ಯಕಾರಿ ಸಮಿತಿ ಸದಸ್ಯರುಗಳು :

ಸರ್ವಶ್ರೀಗಳಾದ :

ಹೆಚ್. ಭಾಸ್ಕರ್, ಅಧ್ಯಕ್ಷರು ಮತ್ತು ಮೈಸೂರು ವಿಭಾಗಾಧಿಕಾರಿಗಳು

ವೈ. ಎನ್. ಶಂಕರೇಗೌಡ, ಖಜಾಂಚಿ

ಎಸ್. ಮಾದೇಗೌಡ

ವೈ. ಎಂ. ಚಂದ್ರು

ಕೆ. ಎಂ. ಚನ್ನೇಗೌಡ

ಮಹದೇವಯ್ಯ

ಆರ್. ಜಯರಾಮು

ಎಚ್. ಎಸ್. ನಂಜಪ್ಪ

ಎಸ್. ಮಂಚಯ್ಯ

ಕೆ.ಜಿ. ಚನ್ನಕೇಶವ

ಶ್ರೀಮತಿ ಕಮಲ ಸಿ. ಹೆಗಡೆ

ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ

ಅಭಿವೃದ್ಧಿ ಕಮೀಷನರ್

ಶ್ರೀರಂಗರಾಜು, ಪ್ರಧಾನ ಕಾರ್ಯದರ್ಶಿ

ಮುದ್ರಣ ಮತ್ತು ಪ್ರಕಟಣೆ : ಕ. ರಾ. ವ. ಶಿ. ಸಮಿತಿ, ಮೈಸೂರು–570 006

ಸಮಿತಿಯ ಪ್ರಕಟಣೆ

ಪುಸ್ತಕ ಪ್ರಪಂಚದಲ್ಲಿ ಪ್ರಕಟಗೊಂಡ ಡಾ|| ದೇಜಗೌ ಅವರ
ಸಂಪಾದಕೀಯ ಲೇಖನಗಳ ಸಂಗ್ರಹ—

ಸಂಪಾದಕೀಯ ಸಂಕಲನ

(ಬೆಲೆ : ರೂ. ೫೦–೦೦)

ನಾಡಿನ ಖ್ಯಾತಕಲಾವಿದರಾದ ದಿ|| ಪಿ. ಆರ್. ತಿಪ್ಪೇಸ್ವಾಮಿ ಅವರ ಆಕರ್ಷಕ ಮುಖಚಿತ್ರದೊಂದಿಗೆ, ಡೆಮಿ ೧/೮, ೧೪೪ ಪುಟಗಳ ಆಫ್ ಸೆಟ್ ಮುದ್ರಣ. ವೈವಿಧ್ಯಮಯ ವಿಚಾರಪೂರಿತ ಚಿಂತನಾರ್ಹ ವಿಷಯಗಳ ಸಾರಸಂಗ್ರಹ.

ಪ್ರತಿಗಳಿಗಾಗಿ ಸಂಪರ್ಕಿಸಿ:

ಪ್ರಧಾನ ಸಂಪಾದಕ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. ೫/೧, ವಿನೋಬಾ ರಸ್ತೆ, ಮಾನಸಗಂಗೋತ್ರಿ ಆವರಣ, ಮೈಸೂರು–೫೭೦ ೦೦೬
ದೂರವಾಣಿ : 511875

Licence No 21, Reg. No. KA/SK/Mys–56
Licenced to Post with payment at Mysore, R. M. S/II



71 ಶ್ರೀ ಚಂದ್ರಶೇಖರ
ನಂ. 1 ಮಹೇಶ್ವರಮ್ಮ
ಗುಡಿರಸ್ತೆ, ಮುನಿರೆಡ್ಡಿ ಪಾಳ್ಯ
ಜೆ. ಸಿ. ನಗರ, ಬೆಂಗಳೂರು–560006

If undelivered please return to:

CHIEF EDITOR
KARNATAKA STATE ADULT EDUCATION COUNCIL
5/1, Vinoba Road, P.B. No. 15
Manasagangothri Campus, Mysore-570 006
Phone: 511875